5ರಿಂದ ವಂಡರ್‌ಲಾ ಪುನರಾರಂಭ

ಬೆಂಗಳೂರು: 'ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿರುವ ಕಾರಣ ಲಾಕ್‌ಡೌನ್‌ನಿಂದ ವಿನಾಯಿತಿ ನೀಡಲಾಗಿದೆ. ಹೀಗಾಗಿ ಜುಲೈ 5ರಿಂದ ಶೇ 50ರಷ್ಟು ಸಾಮರ್ಥ್ಯದೊಂದಿಗೆ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್ ತೆರೆಯಲು ನಿರ್ಧರಿಸಿದ್ದೇವೆ' ಎಂದು ವಂಡರ್‌ಲಾ ಹಾಲಿಡೇಸ್ ತಿಳಿಸಿದೆ.

'ಲಾಕ್‌ಡೌನ್ ಕಾರಣ ಎರಡು ತಿಂಗಳಿಂದ ವಂಡರ್‌ಲಾ ಪಾರ್ಕ್ ಮುಚ್ಚಲಾಗಿತ್ತು. ಸರ್ಕಾರವು ಶೇ 50ರಷ್ಟು ಸಾಮರ್ಥ್ಯದೊಂದಿಗೆ ರೆಸ್ಟೋರೆಂಟ್ ಹಾಗೂ ಅಮ್ಯೂಸ್‌ಮೆಂಟ್ ಪಾರ್ಕ್ ತೆರೆಯಲು ಅವಕಾಶ ನೀಡಿದೆ. ಜನರ ಆರೋಗ್ಯದ ಹಿತದೃಷ್ಟಿಯಿಂದ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಸರ್ಕಾರ ಹೊರಡಿಸಿರುವ ಕೋವಿಡ್ ಮಾರ್ಗಸೂಚಿಗಳನ್ನೂ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ' ಎಂದು ವಂಡರ್‌ಲಾ ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ.ಚಿಟ್ಟಿಲಪಿಳ್ಳಿ ಹೇಳಿದ್ದಾರೆ.

'ಲಾಕ್‌ಡೌನ್ ಘೋಷಣೆಗೂ ಮುನ್ನ ಟಿಕೆಟ್ ಪಡೆದವರಿಗೆ ಶೇ 50 ರಷ್ಟು ರಿಯಾಯಿತಿ ಘೋಷಿಸಿದ್ದೇವೆ. ಈ ಸಮಯದಲ್ಲಿ ಹೆಸರು ನೋಂದಾಯಿಸಿಕೊಂಡವರು ಹಾಗೂ ಟಿಕೆಟ್ ಪಡೆದವರು ಈಗಲೂ ಇದರ ಪ್ರಯೋಜನ ಪಡೆದುಕೊಳ್ಳಬಹುದು' ಎಂದಿದ್ದಾರೆ.

ಕಾರ್ಯಕ್ರಮ ಸರಣಿಗೆ ಮೆಚ್ಚುಗೆ ವ್ಯಕ್ತವಾಗಿದ್ದರೂ ಸಂಯೋಜನಾಧಿಕಾರಿ ಹುದ್ದೆಯಿಂದ ಪ್ರಾಧ್ಯಾಪಕ ಬಿಡುಗಡೆ

ಬೆಂಗಳೂರು ವಿ.ವಿ: ವಿಚಾರ ಕಲರವ 'ಕಲಹ'

• ಗುರು ಪಿ.ಎಸ್.

ಬೆಂಗಳೂರು ವಿಶ್ವವಿದ್ಯಾಲಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 'ವಿಚಾರ ಕಲರವ' ಕಾರ್ಯಕ್ರಮ ಸರಣಿಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸದಸ್ಯರು ಹಾಗೂ ಕಾರ್ಯಕ್ರಮ ನಿರ್ವಹಣೆಯ ಹೊಣೆ ಹೊತ್ತಿದ್ದ ರಾಷ್ಟ್ರೀಯ ಸೇವಾ ಯೋಜನೆಯ (ಎನ್‌ಎಸ್‌ಎಸ್) ಸಂಯೋಜನಾಧಿಕಾರಿ ಡಾ.ಎಸ್. ಸತೀಶ್ ಗೌಡ ಅವರ ನಡುವೆ 'ಕಲಹ' ಏರ್ಪಟ್ಟಿದೆ.

ಈ ಕಾರ್ಯಕ್ರಮ ಸರಣಿ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿದ್ದರೂ, ಸಂಯೋಜನಾಧಿಕಾರಿಯನ್ನು ಹುದ್ದೆಯಿಂದಲೇ ಬಿಡುಗಡೆ ಮಾಡಲಾಗಿದೆ. ಅಷ್ಟಕ್ಕೂ ಸಿಂಡಿಕೇಟ್ ಸದಸ್ಯರ ಆಕ್ಷೇಪ ಇದ್ದಿದ್ದು ಈ ಸರಣಿಯ ಎಲ್ಲ ಕಾರ್ಯಕ್ರಮಗಳಿಗೂ ಕುಲಪತಿಯವರೇ ಅಧ್ಯಕ್ಷತೆ ವಹಿಸುತ್ತಾರೆ ಎಂಬ ಕುರಿತು!

75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ದೇಶದ ವಿಶ್ವವಿದ್ಯಾಲಯಗಳಲ್ಲಿ ಈ 'ವಿಚಾರ ಕಲರವ' ಕಾರ್ಯಕ್ರಮ ನಡೆಯಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದರು. ರಾಜ್ಯ ಸರ್ಕಾರದ ಸೂಚನೆ ಯಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಕಾರ್ಯಕ್ರಮ ಏರ್ಪಡಿಸಲಾಗುತ್ತಿದ್ದು, ಈವರೆಗೆ 34 ಸಂಚಿಕೆಗಳು ಪೂರ್ಣಗೊಂಡಿವೆ. ಆಗಸ್ಟ್ 15ರ ವೇಳೆಗೆ 75ನೇ ಸಂಚಿಕೆ ನಡೆಯಲಿದೆ.

ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆ ಆಯಾ ಕ್ಷೇತ್ರಗಳ ಗಣ್ಯರನ್ನು ಅತಿಥಿಯಾಗಿ ಕರೆಸಿ ಕಾರ್ಯಕ್ರಮ ನಡೆಸಲಾಗುತ್ತಿದ್ದು, ತುಂಬಾ ಉತ್ತಮವಾಗಿ ಕಾರ್ಯಕ್ರಮ ಮೂಡಿ ಬರುತ್ತಿದೆ ಎಂದು ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಕುಲಪತಿಯವರ ಆದೇಶದಂತೆ ಕಾರ್ಯಕ್ರಮ ನಿರ್ವಹಿಸುತ್ತಿದ್ದೆ. ನ್ಯಾಯಮೂರ್ತಿಗಳು, ಹಿರಿಯ ವಕೀಲರು, ವಿಜ್ಞಾನಿಗಳು, ಪರಿಸರ ತಜ್ಞರು ಸೇರಿದಂತೆ ದಿನಕ್ಕೆ ಒಬ್ಬರಂತೆ ಹಲವು ಗಣ್ಯರನ್ನು ಕರೆಸಿ ಭಾಷಣ ಮಾಡಿಸಲಾಗಿತ್ತು. ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರುವ ಕುಲಪತಿಯವರು ಎಲ್ಲ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ್ದರು. ಈಗ ಕುಲಪತಿಯವರ ಆದೇಶದಂತೆಯೇ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಹುದ್ದೆಯಿಂದ ಬಿಡುಗಡೆ ಹೊಂದಿದ್ದೇನೆ' ಎಂದು ಡಾ.ಎಸ್. ಸತೀಶ್ ಗೌಡ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಯಾರು ಅಧ್ಯಕ್ಷತೆ ವಹಿಸುತ್ತಾರೆ, ಯಾರು ವೇದಿಕೆ ಮೇಲಿರುತ್ತಾರೆ ಎಂಬುದಕ್ಕಿಂತ ಅತಿಥಿಗಳು ಮಂಡಿಸುವ ವಿಚಾರ ಮುಖ್ಯ. ಎಲ್ಲ ಗಣ್ಯರು ತುಂಬಾ ಉತ್ತಮವಾದ ಉಪನ್ಯಾಸ ನೀಡಿದ್ದರು. ವಿದ್ಯಾರ್ಥಿಗಳೂ ಕಾರ್ಯಕ್ರಮದಿಂದ ಖುಷಿಯಾಗಿದ್ದರು. ಆದರೆ, ಇಂತಹ ಕಾರ್ಯಕ್ರಮದ ವಿಷಯದಲ್ಲಿಯೂ ವಿಶ್ವವಿದ್ಯಾಲಯವು ವಿವಾದಕ್ಕೆ ಈಡಾಗುವ ರೀತಿಯ ಬೆಳವಣಿಗೆ ನಡೆದಿದ್ದು ಶ್ರೇಯಸ್ಕರವಲ್ಲ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧ್ಯಾಪಕರೊಬ್ಬರು ಬೇಸರ ವ್ಯಕ್ತಪಡಿಸಿದರು.

'ತಮಗೆ ಪ್ರಚಾರ ಸಿಗುತ್ತಿಲ್ಲ ಎಂಬ ಕಾರಣಕ್ಕೆ ಸಿಂಡಿಕೇಟ್ ಸದಸ್ಯರು ಈ ರೀತಿ ನಡೆದುಕೊಂಡಿದ್ದು ಸರಿಯಲ್ಲ' ಎಂದೂ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಎಲ್ಲರನ್ನೂ ಒಳಗೊಳ್ಳಬೇಕು: 'ಕಾರ್ಯಕ್ರಮದ ಬಗ್ಗೆ ನಮ್ಮ ಆಕ್ಷೇಪವಿಲ್ಲ. ಉತ್ತಮವಾಗಿಯೇ ಮೂಡಿ ಬರುತ್ತಿದೆ. ಆದರೆ, ಬೆಂಗಳೂರು ವಿಶ್ವವಿದ್ಯಾಲಯ ಎಂದರೆ ಕುಲಪತಿ ಮತ್ತು ಸತೀಶ್ ಗೌಡ ಅವರು ಮಾತ್ರವಲ್ಲ. ಹಲವು ವಿಭಾಗದ ಡೀನ್‌ಗಳು, ಮುಖ್ಯಸ್ಥರು ಕುಲಪತಿ ಹುದ್ದೆಗೆ ಸಮಾನವಾದ ಸ್ಥಾನದಲ್ಲಿದ್ದಾರೆ. ಎಲ್ಲರನ್ನೂ ಒಳಗೊಂಡು ಕಾರ್ಯಕ್ರಮ ನಡೆಸಬೇಕು ಎಂಬ ಸಲಹೆ ನಮ್ಮದು' ಎಂದು ಸಿಂಡಿಕೇಟ್ ಸದಸ್ಯ [illegible] ಹೇಳಿದರು.

'ಈ ಮಹತ್ತರ ಕಾರ್ಯಕ್ರಮ ನಿರ್ವಹಣೆಗೆ ಒಂದು ಸಮಿತಿ ರಚಿಸಬೇಕು ಎಂದು ಸಿಂಡಿಕೇಟ್ ಸಭೆಯಲ್ಲಿ ಶಿಫಾರಸು ಮಾಡಲಾಗಿತ್ತು. ಅದನ್ನು ಪಾಲಿಸಲಿಲ್ಲ. ಸಿಂಡಿಕೇಟ್ ಸದಸ್ಯರಲ್ಲಿ ಅನೇಕರಿಗೆ ಕಾರ್ಯಕ್ರಮದ ಮಾಹಿತಿಯೇ ಇಲ್ಲ' ಎಂದರು.

'ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ಸತೀಶ್ ಗೌಡ ಅವರು ಇದ್ದಕ್ಕಿದ್ದಂತೆ ಆಕ್ರೋಶ ವ್ಯಕ್ತಪಡಿಸಿದರು. ಸಿಂಡಿಕೇಟ್ ಸದಸ್ಯರ ಬಳಿ ಯಾವ ರೀತಿ ನಡೆದುಕೊಳ್ಳಬೇಕು ಎಂಬುದೂ ಅವರಿಗೆ ತಿಳಿದಿಲ್ಲ' ಎಂದು ಮತ್ತೊಬ್ಬ ಸದಸ್ಯ ಡಾ. ಸುಧಾಕರ್ ಅಸಮಾಧಾನ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಕುಲಪತಿ ಯವರನ್ನು ಸಂಪರ್ಕಿಸಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ಸುದ್ದಿ 2 ನಿಮಿಷ

ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆ ಕಲ್ಪಿಸಲು ನಿರ್ದೇಶನ

ಬೆಂಗಳೂರು: ರಾಜ್ಯದ ಎಲ್ಲಾ ಜಿಲ್ಲಾ ಮತ್ತು ಅಧೀನ ನ್ಯಾಯಾಲಯಗಳಲ್ಲಿ ಉನ್ನತ ತಂತ್ರಜ್ಞಾನ ಆಧಾರಿತ ವಿಡಿಯೊ ಕಾನ್ಫರೆನ್ಸ್ ವಿಚಾರಣಾ ವ್ಯವಸ್ಥೆ ಒದಗಿಸುವ ಅಗತ್ಯ ಇದೆ ಎಂದು ಹೈಕೋರ್ಟ್ ಹೇಳಿದೆ.

ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಹೈಕೋರ್ಟ್ ಆಡಳಿತ ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಡಲೇ ಪರಿಗಣಿಸಬೇಕು' ಎಂದು ಆದೇಶಿಸಿದೆ.

ಕೋವಿಡ್ ಮೂರನೇ ಅಲೆ ಸಾಧ್ಯತೆ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಮೂರನೇ ಅಲೆ ಎದುರಿಸಲು ನ್ಯಾಯಾಂಗ ವ್ಯವಸ್ಥೆ ಕೂಡ ಸಿದ್ಧವಾಗಬೇಕಾಗುತ್ತದೆ. ಹಾಗಾಗಿ, ಸುಸಜ್ಜಿತ ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆ ಕಲ್ಪಿಸಬೇಕಾಗುತ್ತದೆ ಎಂದು ಹೇಳಿತು.

ಎಲ್ಲಾ ನ್ಯಾಯಾಲಯಗಳಿಗೆ ಪರವಾನಗಿ ಪಡೆದ ಜೂಮ್ ಆ್ಯಪ್ ಒದಗಿಸಬೇಕು. ಈ ವ್ಯವಸ್ಥೆ ಹೈಕೋರ್ಟ್ ಪೀಠಗಳಲ್ಲಿ ಈಗ ಯಶಸ್ವಿಯಾಗಿ ಬಳಕೆಯಾಗುತ್ತಿದೆ. ಎಲ್ಲಾ ಜಿಲ್ಲೆಯಲ್ಲೂ ಸುಸಜ್ಜಿತ ವ್ಯವಸ್ಥೆ ಕಲ್ಪಿಸುವ ಸಂಬಂಧ ಪ್ರಸ್ತಾವನೆ ಸಿದ್ಧಪಡಿಸಲು ಹೈಕೋರ್ಟ್‌ನ ಕಂಪ್ಯೂಟರ್ ಸಮಿತಿಗೆ ಪೀಠ ನಿರ್ದೇಶನ ನೀಡಿತು.

'ಎಲ್ಲಾ ನ್ಯಾಯಾಲಯಗಳಿಗೆ ಉತ್ತಮವಾದ ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆ ಕಲ್ಪಿಸಲಾಗಿದೆಯೇ ಎಂಬುದನ್ನು ಸರ್ಕಾರ ಖಚಿತಪಡಿಸಿಕೊಳ್ಳಬೇಕು. ಆ ಮೂಲಕ ರಾಜ್ಯದ ನ್ಯಾಯಾಲಯಗಳು ಇತರ ರಾಜ್ಯಗಳ ನ್ಯಾಯಾಲಯಗಳಿಗೆ ಮಾದರಿಯಾಗಬೇಕು' ಎಂದು ಪೀಠ ಅಭಿಪ್ರಾಯಪಟ್ಟಿತು.

ದಕ್ಷಿಣ ಭಾರತದಲ್ಲಿ ಸುಪ್ರೀಂ ಕೋರ್ಟ್ ಪೀಠ ಸ್ಥಾಪಿಸಿ

ಬೆಂಗಳೂರು: ಸುಪ್ರೀಂ ಕೋರ್ಟ್ ಪೀಠವನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸುವಂತೆ ಕೋರಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ರಾಜ್ಯಪಾಲ ವಜುಭಾಯಿ ವಾಲಾ ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

'ಸಂವಿಧಾನದ ಕಲಂ 32ರ ಪ್ರಕಾರ ನ್ಯಾಯ ಪಡೆಯುವುದು ಪ್ರತಿ ಪ್ರಜೆಯ ಮೂಲಭೂತ ಹಕ್ಕು. ಭಾಷೆ, ಪ್ರಾಂತ್ಯಗಳಿದ್ದುಕೊಂಡೇ ಭೌಗೋಳಿಕವಾಗಿ ವಿಸ್ತಾರವಾದ ವ್ಯಾಪ್ತಿ ಹೊಂದಿರುವ ದೇಶ ಭಾರತ. ಸುಪ್ರೀಂ ಕೋರ್ಟ್ ದೆಹಲಿಯಲ್ಲಿ ಇರುವುದರಿಂದ ಪೂರ್ವ, ಪಶ್ಚಿಮ, ದಕ್ಷಿಣ ಭಾಗದ ಕಕ್ಷಿದಾರರಿಗೆ ಹಾಗೂ ವಕೀಲರಿಗೆ ಆರ್ಥಿಕವಾಗಿ ಸಮಸ್ಯೆ ಆಗುತ್ತಿದೆ.'

'ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ಪ್ರಕರಣಗಳಲ್ಲಿ ಶೇ 40ರಷ್ಟು ದಕ್ಷಿಣ ಭಾರತಕ್ಕೆ ಸಂಬಂಧಿಸಿದವೇ ಆಗಿವೆ. ಶೇ 26ರಷ್ಟು ಪ್ರಕರಣಗಳು ಕರ್ನಾಟಕದವು. ಬೆಂಗಳೂರಿನಲ್ಲಿ ಪೀಠ ಸ್ಥಾಪಿಸಿದರೆ ಕೇರಳ, ತಮಿಳುನಾಡು ಮತ್ತು ಪುದುಚೇರಿಗಳ ಕಕ್ಷಿದಾರರಿಗೂ ಅನುಕೂಲ ಆಗಲಿದೆ' ಎಂದು ಪರಿಷತ್ತು ಮನವಿಯಲ್ಲಿ ತಿಳಿಸಿದ್ದಾರೆ.

'ದಕ್ಷಿಣ ಭಾರತದಲ್ಲಿ ಸುಪ್ರೀಂ ಕೋರ್ಟ್ ಪೀಠ ಸ್ಥಾಪಿಸಲು 18ನೇ ಕಾನೂನು ಆಯೋಗವೂ ಶಿಫಾರಸು ಮಾಡಿದೆ. 40 ವರ್ಷಗಳಿಂದ ಈ ಕುರಿತು ಪ್ರಯತ್ನ ನಡೆಯುತ್ತಿದೆ. ಈಗಲಾದರೂ ಪೀಠ ಆರಂಭಿಸಬೇಕು' ಎಂದು ವಕೀಲರ ಪರಿಷತ್ತಿನ ಅಧ್ಯಕ್ಷ ಎಲ್. ಶ್ರೀನಿವಾಸ ಬಾಬು ನೇತೃತ್ವದ ನಿಯೋಗ ಒತ್ತಾಯಿಸಿದೆ.

'ಲೈಂಗಿಕ ಅಲ್ಪಸಂಖ್ಯಾತರಿಗೆ ಮೀಸಲಾತಿ ಸ್ವಾಗತಾರ್ಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ವಿಶ್ವವಿದ್ಯಾಲಯವು ಎಲ್ಲ ಕೋರ್ಸ್‌ಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ಶೇ 1ರಷ್ಟು ಮೀಸಲಾತಿ ನೀಡಿರುವುದು ಸ್ವಾಗತಾರ್ಹ' ಎಂದು ಲೈಂಗಿಕ ಅಲ್ಪಸಂಖ್ಯಾತ ಹಕ್ಕುಗಳ ಕಾರ್ಯಕರ್ತೆ ಹಾಗೂ 'ಒಂದೆಡೆ' ಸಂಘಟನೆ ಸ್ಥಾಪಕಿ ಅಕ್ಕಯ್ ಪದ್ಮಶಾಲಿ ಸಂತಸ ವ್ಯಕ್ತಪಡಿಸಿದರು.

ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಕೋಶದ ವತಿಯಿಂದ ಹಮ್ಮಿಕೊಂಡಿದ್ದ 'ವಿಚಾರ ಕಲರವ' ಕಾರ್ಯಕ್ರಮದಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಕುರಿತು ಅವರು ಮಾತನಾ ಡಿದರು.

'ಸುಮಾರು 130 ವರ್ಷಗಳ ನಂತರ ದೆಹಲಿಯ ಹೈಕೋರ್ಟ್ ನಮ್ಮ ಸಮುದಾಯದ ಪರ ತೀರ್ಪು ನೀಡಿತ್ತು. ಅದೇ ರೀತಿ, ಸಂವಿಧಾನದಡಿ ಎಲ್ಲರಂತೆ ಲೈಂಗಿಕ ಅಲ್ಪಸಂಖ್ಯಾತರಿಗೂ ಸಮಾನ ಹಕ್ಕುಗಳಿವೆ ಎಂಬ ತೀರ್ಪನ್ನು ಸುಪ್ರೀಂ ಕೋರ್ಟ್ ಕೂಡ 2014ರಲ್ಲಿ ನೀಡುವ ಮೂಲಕ ನಮ್ಮ ಸಮುದಾಯಕ್ಕೆ ಗೌರವ ತಂದುಕೊಟ್ಟಿತ್ತು' ಎಂದರು.

'ನಾವು ಯಾವುದೇ ಅಪರಾಧವನ್ನು ಮಾಡದಿದ್ದರೂ ನಮ್ಮನ್ನು ಅಪರಾಧಿಗಳ ರೀತಿ ನೋಡಲಾಗುತ್ತಿದೆ. ಇದು ಸರಿಯಲ್ಲ. ನಮ್ಮ ಜೀವನದ ಅನುಭವವೇ ನಮಗೆ ಎಲ್ಲವನ್ನೂ ಕಲಿಸಿದೆ.

ಅಕ್ಕಯ್ ಪದ್ಮಶಾಲಿ

ವಿಶ್ವವಿದ್ಯಾಲಯದ ಇಂತಹ ಕಾರ್ಯಕ್ರಮದಲ್ಲಿ ನಮ್ಮನ್ನು ಆಹ್ವಾನಿಸಿದ್ದು ಹೆಮ್ಮೆ ತಂದಿದೆ' ಎಂದು ಅವರು ಸಂತಸ ವ್ಯಕ್ತಪಡಿಸಿರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ ಅವರು ಮಾತನಾಡಿ, 'ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬರಿಗೂ ಬದುಕುವ ಹಕ್ಕು ಇದೆ. ವ್ಯಕ್ತಿಗಳಲ್ಲಿ ಕೊರತೆಗಳನ್ನು ಹುಡುಕುವ ಬದಲು ಒಬ್ಬರಿಗೊಬ್ಬರು ಸಹಕಾರ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು. ಲಿಂಗ ಅಸಮಾನತೆಯು ಒಂದು ಸಮಾಜದ ಅವನತಿಗೆ ದಾರಿಯಾಗುತ್ತದೆ. ಇದಕ್ಕೆ ಯಾರೂ ಅವಕಾಶ ಕೊಡಬಾರದು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಉಪಸ್ಥಿತರಿದ್ದರು.

ತಮಿಳುನಾಡು ಸಿ.ಎಂ ಸ್ಟಾಲಿನ್‌ಗೆ ಬಿಎಸ್‌ವೈ ಪತ್ರ

'ಮೇಕೆದಾಟು ಯೋಜನೆಗೆ ಯಾವುದೇ ಅಡ್ಡಿಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಕರ್ನಾಟಕದ ಯೋಜನೆಯಿಂದ ತಮಿಳುನಾಡಿನ ಹಿತಾಸಕ್ತಿಗೆ ಯಾವುದೇ ರೀತಿಯಿಂದಲೂ ಧಕ್ಕೆಯಾಗದು. ಈ ಯೋಜನೆಗೆ ಅಡ್ಡಿಪಡಿಸಬಾರದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಪತ್ರ ಬರೆದಿದ್ದಾರೆ.

'ಸುಪ್ರೀಂಕೋರ್ಟ್ ಆದೇಶದ ಅನುಸಾರ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ಇದರಿಂದ 400 ಮೆಗಾವಾಟ್ ವಿದ್ಯುತ್ ಉತ್ಪಾದಿಸಲು ಅವಕಾಶವಿದೆ. ಬೆಂಗಳೂರಿಗೆ ಕುಡಿಯುವ ನೀರು ಪೂರೈಸುವುದಕ್ಕಾಗಿ 4.75 ಟಿಎಂಸಿ ಅಡಿ ನೀರನ್ನು ಕೊಂಡೊಯ್ಯುವುದಕ್ಕೂ ಅನುಮತಿ ನೀಡಲಾಗಿದೆ. ರಾಜ್ಯವು ತನ್ನ ಪಾಲಿನ ನೀರನ್ನಷ್ಟೇ ಬಳಸಿಕೊಳ್ಳುತ್ತಿದೆ. ಈ ಯೋಜನೆಯಿಂದ ಎರಡೂ ರಾಜ್ಯಗಳಿಗೆ ಅನುಕೂಲವಾಗಲಿದೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

ಮೇಕೆದಾಟು ಯೋಜನೆಯಿಂದ ತಮಿಳುನಾಡು ರೈತರಿಗೆ ಯಾವುದೇ ತೊಂದರೆ ಆಗುವುದಿಲ್ಲ. ಆದರೂ, ತಮಿಳುನಾಡು ಸರ್ಕಾರವು ಯೋಜನೆಯನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪರಿಸರ ಹಾನಿ ಅಂದಾಜು (ಇಐಎ) ಅಧ್ಯಯನ ನಡೆಸುವುದಕ್ಕೆ ಅನುಮತಿ ಕೋರಿ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದೆ ಎಂದು ಯಡಿಯೂರಪ್ಪ ಅವರು ಪತ್ರದಲ್ಲಿ ಮಾಹಿತಿ ನೀಡಿದ್ದಾರೆ.

ತಮಿಳುನಾಡು ಸರ್ಕಾರವು ಕಾವೇರಿ ಕಣಿವೆಯಲ್ಲಿ ಎರಡು ಜಲ ವಿದ್ಯುತ್ ಯೋಜನೆಗಳ ಅನುಷ್ಠಾನಕ್ಕೆ ಮುಂದಾಗಿದೆ. ಕುಂಡಾಹ್ ಮತ್ತು ಸಿಲ್ಲಹಳ್ಳ ಜಲ ವಿದ್ಯುತ್ ಯೋಜನೆಗಳನ್ನು ರೂಪಿಸಲಾಗಿದೆ. ಕುಂಡಾಹ್ ಯೋಜನೆಗೆ ಫೆಬ್ರುವರಿ 12ರಂದು ಕೇಂದ್ರ ಪರಿಸರ ಸಚಿವಾಲಯ ಅನುಮತಿ ನೀಡಿದೆ. ಸಿಲ್ಲಹಳ್ಳ ಯೋಜನೆಯ ಪ್ರಸ್ತಾವ ಪರಿಶೀಲನೆಯಲ್ಲಿದೆ. ಈ ಎರಡೂ ಯೋಜನೆಗಳ ವಿಚಾರದಲ್ಲಿ ತಮಿಳುನಾಡು ಸರ್ಕಾರವು ಕರ್ನಾಟಕದ ಸಹಮತಿಯನ್ನು ಪಡೆದಿರುವುದಿಲ್ಲ. ಅಲ್ಲದೇ, ಮೆಟ್ಟೂರಿನಿಂದ ಕೆಳಭಾಗದಲ್ಲಿ ಹಲವು ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದಾಗಿ ತಮಿಳುನಾಡು ಸರ್ಕಾರ, ಮದ್ರಾಸ್ ಹೈಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಬಹಿರಂಗ ಪಡಿಸಿದೆ ಎಂದೂ ಅವರು ಉಲ್ಲೇಖಿಸಿದ್ದಾರೆ.

'ಎರಡೂ ರಾಜ್ಯಗಳು ಸೌಹಾರ್ದವಾಗಿ ಮುನ್ನಡೆಯಬೇಕಿದೆ. ತಮಿಳುನಾಡು ಸರ್ಕಾರವು, ಮೇಕೆದಾಟು ಯೋಜನೆಯನ್ನು ವಿರೋಧಿಸದೇ ಸಹಕಾರ ನೀಡಿದರೆ, ರಾಜ್ಯವೂ ಯಾವುದೇ ವಿಷಯಗಳಲ್ಲಿ ಸಹಕಾರ ನೀಡಲು ಸಿದ್ಧ. ಇಂತಹ ಸಮಸ್ಯೆಗಳು ಉದ್ಭವಿಸಿದಾಗ ಅನುಮಾನಗಳನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ ಸಂಬಂಧಿಸಿದ ಅಧಿಕಾರಿಗಳ ಉಪಸ್ಥಿತಿಯಲ್ಲಿ ದ್ವಿಪಕ್ಷೀಯ ಸಭೆಗಳನ್ನು ನಡೆಸುವುದು ಉತ್ತಮ' ಎಂದು ಯಡಿಯೂರಪ್ಪ ಅವರು ಸಲಹೆ ನೀಡಿದ್ದಾರೆ.

'ನೀರು ಸೋರಿಕೆ ತಡೆಯಲು ₹ 34 ಕೋಟಿ ಯೋಜನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಲ್ಲೇಶ್ವರ ವಿಧಾನಸಭೆ ಕ್ಷೇತ್ರದಲ್ಲಿ ಜಲಮಂಡಳಿ ನೀರು ಪೂರೈಕೆಯ ಹಳೆಯ ಕೊಳವೆಗಳನ್ನು ₹34 ಕೋಟಿ ವೆಚ್ಚದಲ್ಲಿ ಬದಲಾವಣೆ ಮಾಡಲಾಗುತ್ತಿದೆ' ಎಂದು ಕ್ಷೇತ್ರದ ಶಾಸಕರೂ ಆಗಿರುವ ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಕ್ಷೇತ್ರ ವ್ಯಾಪ್ತಿಯ ಗಾಯತ್ರಿನಗರದಲ್ಲಿ ₹94 ಲಕ್ಷ ಮೊತ್ತದಲ್ಲಿ ಪೈಪುಗಳ ಬದಲಾವಣೆ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು. 'ಹಳೆಯ ಕೊಳವೆಗಳಿಂದ ಭಾರಿ ಪ್ರಮಾಣದ ನೀರು ಸೋರಿಕೆ ಆಗುತ್ತಿದೆ. ಇದನ್ನು ತಡೆಯುವುದರ ಜೊತೆಗೆ, ನೀರಿನ ಶುದ್ಧತೆ ಕಾಪಾಡಿಕೊಳ್ಳುವುದು ಯೋಜನೆಯ ಉದ್ದೇಶ' ಎಂದರು.

'ಕ್ಷೇತ್ರದಲ್ಲಿ ಸುಮಾರು 7 ಸಾವಿರ ಮ್ಯಾನ್‌ಹೋಲ್‌ಗಳಿವೆ. ಇವೆಲ್ಲವೂ ಹಳೆಯದಾಗಿದ್ದು, ಅವುಗಳನ್ನು ಬದಲಿಸುವ ಯೋಜನೆಯನ್ನೂ ಹಾಕಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ 4 ಸಾವಿರ ಮ್ಯಾನ್‌ಹೋಲ್‌ಗಳನ್ನು ಸರಿಪಡಿಸಿ, ಮುಂದಿನ ಹಂತದಲ್ಲಿ ಉಳಿದವುಗಳನ್ನು ದುರಸ್ತಿಗೊಳಿಸಲಾಗುವುದು' ಎಂದು ಹೇಳಿದರು.

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ
ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ನಗರದಲ್ಲಿ ಇಂದು

ಆನ್‌ಲೈನ್ ಸಮಾವೇಶ: '4 ವರ್ಷಗಳ ಪದವಿ ಕೋರ್ಸ್ ಯಾರ ಹಿತಾಸಕ್ತಿಗಾಗಿ?', ಭಾಷಣಕಾರರು: ಪ್ರೊ. ಸುಖದೇವ್ ಥೋರಟ್, ಪ್ರೊ.ಎ. ಮುರಿಗೆಪ್ಪ, ಪ್ರೊ. ಅನೀಸ್ ರಾಯ್, ಅಲ್ಲಮಪ್ರಭು ಬೆಟ್ಟದೂರು, ಡಾ. ಮಹಾಬಲೇಶ್ವರ್ ರಾವ್, ಅಧ್ಯಕ್ಷತೆ: ವೈ.ಎನ್. ರಾಜಶೇಖರ್, ಆಯೋಜನೆ: ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ದತ್ತಿ ಉಪನ್ಯಾಸ: ಡಾ.ಫ.ಗು. ಹಳಕಟ್ಟಿ ಜನ್ಮದಿನಾಚರಣೆ ದತ್ತಿ ಉಪನ್ಯಾಸ, ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ: ಸಿ. ಸೋಮಶೇಖರ್, ಉಪನ್ಯಾಸ: ಜಿ. ಆಶಾ, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಹರ್ಷಗೌಡ ಪಾಟೀಲ, ಪ್ರಮೀಳಾ ಗರಡಿ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಅಟಲ್ ಜೀ ಕೇಂದ್ರದಲ್ಲಿ 800 ಆನ್‌ಲೈನ್ ಸೇವೆ

ಶುಲ್ಕ ಪಡೆದು ಮನೆಗೆ ಪಡಿತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಲ್ಕ ನಿಗದಿ ಮಾಡಿ ಪಡಿತರವನ್ನು ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆ ಮಾಡುವುದು, ಆರ್‌ಟಿಒ ಸಂಬಂಧಿತ ಎಲ್ಲ ಸೇವೆಗಳನ್ನು ಕಾಗದ ರಹಿತ ಮಾಡುವುದು ಸೇರಿದಂತೆ ಹಲವು ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ನಿಕಟಪೂರ್ವ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ನೇತೃತ್ವದ ಆಡಳಿತ ಸುಧಾರಣಾ ಆಯೋಗ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ.

ಕಂದಾಯ ಇಲಾಖೆಯ 800 ಆನ್‌ಲೈನ್ ಸೇವೆಗಳಿಗೆ ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು (ಎಜೆಎಸ್‌ಕೆ) ಏಕಗವಾಕ್ಷಿ ವೇದಿಕೆಯಾಗಿಸಿ ಸೇವೆಗಳು ಲಭ್ಯವಾಗುವಂತೆ ಮಾಡಬೇಕು ಎಂದೂ ಪ್ರತಿಪಾದಿಸಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಶನಿವಾರ ಮಧ್ಯಂತರ ವರದಿ ಸಲ್ಲಿಸಿರುವ ಆಯೋಗ, ವರದಿಯಲ್ಲಿ ಕಂದಾಯ, ಆಹಾರ ಮತ್ತು ಸಾರಿಗೆ ಇಲಾಖೆಗೆ ಸಂಬಂಧಿಸಿದ ಸುಧಾರಣೆಗೆ ಶಿಫಾರಸುಗಳನ್ನು ಮಾಡಿದೆ.

ಆಯೋಗದ ಶಿಫಾರಸುಗಳು

ಕಂದಾಯ ಇಲಾಖೆ:
- ಸಕಾಲ ಅರ್ಜಿಗಳಲ್ಲಿ ಶೇ 81ರಷ್ಟು ಆನ್‌ಲೈನ್ ಮೂಲಕ ಸಲ್ಲಿಕೆಯಾಗುತ್ತಿದ್ದು, ಎಲ್ಲ ಇಲಾಖೆಗಳ ಸಕಾಲ ಮತ್ತು ಸಕಾಲವಲ್ಲದ 800 ಇ-ಸೇವೆಗಳಿಗೆ ಸೇವಾ ಸಿಂಧು ಏಕಮಾತ್ರ ವೇದಿಕೆ ಆಗಬೇಕು.
- ಎಜೆಎಸ್‌ಕೆ, ಭೂಮಿ, ಸಾಮಾಜಿಕ ಭದ್ರತಾ ಪಿಂಚಣಿ (ಎಸ್‌ಎಸ್‌ಪಿ), ಭೂ ಮಾಪನ ಮತ್ತು ಭೂ ದಾಖಲೆಗಳು (ಎಸ್‌ಎಸ್‌ಎಲ್‌ಆರ್) ಸೇವಾ ಪೋರ್ಟಲ್‌ಗಳು ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್ ಮತ್ತು ಆನ್‌ಲೈನ್ ವ್ಯಾಲೆಟ್ ವ್ಯವಸ್ಥೆಯನ್ನು ಬಳಸಿಕೊಂಡು ಅರ್ಜಿ ಶುಲ್ಕವನ್ನು ಸಂಗ್ರಹಿಸಲು ಯುಪಿಐ, ಕ್ಯೂಆರ್ ಕೋಡ್ ಪಾವತಿ ವಿಧಾನ ಹೊಂದಿರಬೇಕು.
- ಕೆಲವು ಪ್ರಮಾಣಪತ್ರಗಳು ಅನುಪಯುಕ್ತವಾಗಿದ್ದು (ವಾಸ ಸ್ಥಳ, ಬೆಳೆ, ಕೃಷಿಕ) ಅವುಗಳ ಬದಲು ಪರ್ಯಾಯಗಳನ್ನು ಸೂಚಿಸಬೇಕು
- ಭೂಸ್ವಾಧೀನ ನಿರ್ವಹಣಾ ಸಾಫ್ಟ್‌ವೇರ್ ತ್ವರಿತವಾಗಿ ಅಭಿವೃದ್ಧಿಪಡಿಸಬೇಕು. ಅದನ್ನು ಕೆಐಎಡಿಬಿ, ಬಿಡಿಎ, ಎನ್‌ಎಚ್‌ಎಐ ಸೇರಿದಂತೆ ವಿವಿಧ ಭೂ ಸ್ವಾಧೀನಪಡಿಸಿಕೊಳ್ಳುವ ಸಂಸ್ಥೆಗಳಲ್ಲಿ ಕಡ್ಡಾಯಗೊಳಿಸಬೇಕು.
- ಎಜೆಎಸ್‌ಕೆ, ತಹಶೀಲ್ದಾರ್, ಎಡಿಎಲ್‌ಆರ್, ಸಬ್ ರಿಜಿಸ್ಟ್ರಾರ್ ಕಚೇರಿಗಳ ಮೇಲಿನ ಎಲ್ಲ ಕಚೇರಿಗಳಿಗೆ ಇ-ಆಫೀಸ್ ಕಡ್ಡಾಯಗೊಳಿಸಬೇಕು
- ನಾಲ್ಕೂ ಪ್ರಾದೇಶಿಕ ಆಯುಕ್ತರ ಕಚೇರಿಗಳನ್ನು ರದ್ದುಪಡಿಸಿ ರಾಜ್ಯ ಮಟ್ಟದಲ್ಲಿ ಕಂದಾಯ ಆಯುಕ್ತಾಲಯ ಸ್ಥಾಪಿಸಬಹುದು.

ಆಹಾರ ಇಲಾಖೆ:
- ಪಡಿತರ ಚೀಟಿದಾರರರು ಮತ್ತು ನ್ಯಾಯಬೆಲೆ ಅಂಗಡಿಯವರು ಒಪ್ಪಿದ ಶುಲ್ಕ ಪಾವತಿಸಿ, ಮನೆಬಾಗಿಲಿಗೆ ಪಡಿತರ ತಲುಪಿಸಲು ವ್ಯವಸ್ಥೆ ಮಾಡಬಹುದು.
- ಜನನ, ಮರಣ ನೋಂದಣಿ ಪ್ರಕ್ರಿಯೆ ಪಡಿತರ ಚೀಟಿ ಡೇಟಾ ಬೇಸ್‌ನೊಂದಿಗೆ ಸಂಯೋಜಿಸಿ, ಮರಣ ನೋಂದಣಿಯ ನಂತರ ಪಡಿತರಚೀಟಿ ಕುಟುಂಬ ಸದಸ್ಯರ ಪಟ್ಟಿ ಸ್ವಯಂಚಾಲಿತವಾಗಿ ನವೀಕರಣವಾಗುವಂತಾಗಬೇಕು.

ಸಾರಿಗೆ ಇಲಾಖೆ:
- ಯಾವುದೇ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ನೋಂದಣಿಗೆ ಅವಕಾಶವಿರುವಂತೆ, ಬೆಂಗಳೂರು ನಗರದ ಯಾವುದೇ ಆರ್‌ಟಿಒ ಕಚೇರಿ ಆಯ್ಕೆ ಮಾಡಿಕೊಳ್ಳುವಂತಿರಬೇಕು.
- ವಶಪಡಿಸಿಕೊಂಡ ವಾಹನಗಳ ದಂಡ ಪಾವತಿಸದಿದ್ದರೆ, ಇ-ಹರಾಜಿಗೆ ಪೂರಕವಾಗಿ ಕರ್ನಾಟಕ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ಮಾಡಬಹುದು.
- ಆರ್‌ಟಿಒಗಳಲ್ಲಿ ಕ್ಯೂಆರ್ ಕೋಡ್ ಆಧಾರಿತ ಕ್ರೆಡಿಟ್, ಡೆಬಿಟ್ ಕಾರ್ಡ್ ಪಾವತಿ ಯಂತ್ರ ಸ್ಥಾಪಿಸಬಹುದು.

ಆರಂಭಕ್ಕೆ ಸಿದ್ಧತೆ

ಸೋಮವಾರದಿಂದ ಶಾಪಿಂಗ್ ಮಾಲ್‌ಗಳು ತೆರೆಯಲಿರುವ ಕಾರಣ ಬೆಂಗಳೂರಿನ ಗರುಡ ಮಾಲ್‌ನಲ್ಲಿ ಶನಿವಾರ ಸಿಬ್ಬಂದಿ ಪಿಪಿಇ ಕಿಟ್ ಧರಿಸಿ ಎಸ್ಕಲೇಟರ್‌ಗಳನ್ನು ಶುಚಿಗೊಳಿಸಿದರು
ಪ್ರಜಾವಾಣಿ ಚಿತ್ರ/ ರಂಜು ಪಿ.

ಸಿದ್ಧಾಂತ ಒಪ್ಪಿದರೆ ಸ್ವಾಗತ: ಡಿ.ಕೆ. ಶಿವಕುಮಾರ್

ಪಕ್ಷಕ್ಕೆ ವಾಪಸಾಗಲು ಆಹ್ವಾನ: ನಾಯಕರ ಭಿನ್ನಧ್ವನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾವಿ ಮುಖ್ಯಮಂತ್ರಿ ಹೇಳಿಕೆ, ಬಳಿಕ ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಗೊಂದಲ, ನಂತರ ಪದಾಧಿಕಾರಿಗಳ ಬದಲಾವಣೆಯ ವಿಷಯದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಧ್ಯೆ ಭಿನ್ನಧ್ವನಿ ಎದ್ದಿರುವ ಬೆನ್ನಲ್ಲೇ, ಪಕ್ಷ ತ್ಯಜಿಸಿ ಬಿಜೆಪಿ ಸೇರಿದ್ದ ಶಾಸಕರನ್ನು ಮರಳಿ ಪಕ್ಷಕ್ಕೆ ಸೇರಿಸಿಕೊಳ್ಳುವ ವಿಚಾರ ಇದೀಗ ಮುನ್ನೆಲೆಗೆ ಬಂದಿದೆ.

'ಕಾಂಗ್ರೆಸ್‌ನ ಸಿದ್ಧಾಂತ, ನಾಯಕತ್ವ ಒಪ್ಪಿ, ಕೆಲಸ ಮಾಡಲು ಇಚ್ಛಿಸುವ ಯಾರೇ ಆದರೂ ಪಕ್ಷ ಸೇರಲು ಅರ್ಜಿ ಹಾಕಬಹುದು. ನಾನು ಕೇವಲ 17 ಜನರನ್ನು (ಕಾಂಗ್ರೆಸ್, ಜೆಡಿಎಸ್ ತ್ಯಜಿಸಿ ಬಿಜೆಪಿ ಸೇರಿದ ಶಾಸಕರು) ಉದ್ದೇಶಿಸಿ ಈ ಮಾತು ಹೇಳುತ್ತಿಲ್ಲ. ಯಾರೇ ಅರ್ಜಿ ಹಾಕಿದರೂ ಅದನ್ನು ಪರಿಶೀಲಿಸಿ ಪಕ್ಷ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಪ್ರಳಯ ಆದರೂ 14 ಜನರನ್ನು (ಬಿಜೆಪಿ ಸೇರಿದ ಕಾಂಗ್ರೆಸ್ ಶಾಸಕರು) ಸೇರಿಸಿಕೊಳ್ಳುವುದಿಲ್ಲ ಎಂದು ಸದನದಲ್ಲಿ ಹೇಳಿದ್ದೆ. ಈ ಬಗ್ಗೆ ಶಿವಕುಮಾರ್ ಜೊತೆ ನಾನು ಮಾತನಾಡುತ್ತೇನೆ' ಎಂದರು.

ಸಿದ್ದರಾಮಯ್ಯ

ಡಿಕೆಶಿ

ಅರ್ಜಿ ಹಾಕಲಿ: 'ಯಾರು ಕಾಂಗ್ರೆಸ್ ಸಿದ್ಧಾಂತ, ನಾಯಕತ್ವ ನಂಬಿ ಪಕ್ಷ ಸೇರಲು ಬಯಸುತ್ತಾರೊ ಅವರು ಅಲ್ಲಂ ವೀರಭದ್ರಪ್ಪ ನೇತೃತ್ವದ ಸಮಿತಿಗೆ ಅರ್ಜಿ ಹಾಕಲಿ. ಯಾರನ್ನು ತೆಗೆದುಕೊಳ್ಳಬೇಕು, ಯಾರನ್ನು ತೆಗೆದುಕೊಳ್ಳಬಾರದು ಎಂಬುದನ್ನು ಸಮಿತಿ ಪರಿಶೀಲಿಸಿ ನಿರ್ಧರಿಸಲಿದೆ. ಬಳಿಕ ಯಾವುದೇ ಗೊಂದಲ ಉದ್ಭವಿಸಬಾರದು ಎಂಬ ಕಾರಣಕ್ಕೆ ಬ್ಲಾಕ್ ಕಾಂಗ್ರೆಸ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಮತ್ತು ಸ್ಥಳೀಯ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ ರಾಜ್ಯಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೇವೆ. ಯಾರಿಗೆ ಇಚ್ಛೇ ಇದೆಯೊ ಅವರು ಅರ್ಜಿ ಹಾಕಲಿ, ಆ ಮೇಲೆ ಆ ಬಗ್ಗೆ ತೀರ್ಮಾನ ಮಾಡೋಣ' ಎಂದು ಶಿವಕುಮಾರ್ ಶನಿವಾರ ಹೇಳಿದರು.

'ಪಕ್ಷದಲ್ಲಿ ಒಬ್ಬೊಬ್ಬರದ್ದೂ ಒಂದೊಂದು ಅಭಿಪ್ರಾಯ ಇರುತ್ತದೆ. ಈ ವಿಷಯದಲ್ಲಿ ವೈಯಕ್ತಿಕ ಅಭಿಪ್ರಾಯ ಮುಖ್ಯ ಅಲ್ಲ. ಪಕ್ಷದ ಒಟ್ಟಾರೆ ಅಭಿಪ್ರಾಯ ಮುಖ್ಯ. ಪಕ್ಷ ತೊರೆದು ಮಂತ್ರಿಯಾಗಿರುವ ಯಾರೂ ಪಕ್ಷ ಸೇರುವ ಬಗ್ಗೆ ಈವರೆಗೆ ಸಂಪರ್ಕ ಮಾಡಿಲ್ಲ. ನಾನು ಕೇವಲ ಅವರನ್ನು ಉದ್ದೇಶಿಸಿ ಮಾತ್ರ ಈ ಮಾತು ಹೇಳುತ್ತಿಲ್ಲ. ಯಾರು ಬೇಕಾದರೂ ಅರ್ಜಿ ಹಾಕಬಹುದು' ಎಂದು ಸ್ಪಷ್ಟಪಡಿಸಿದರು.

'ರಾಜಕೀಯದಲ್ಲಿ ಬೆನ್ನಿಗೆ ಚೂರಿ ಹಾಕುವ ಕೆಲಸ ನಿತ್ಯ ನಡೆಯುತ್ತಿರುತ್ತದೆ. ಇದು ಕೇವಲ ಡಿ.ಕೆ. ಶಿವಕುಮಾರ್ ಅಥವಾ ಕಾಂಗ್ರೆಸ್ ಪಕ್ಷ ಎಂದಲ್ಲ, ಎಲ್ಲ ಪಕ್ಷಗಳಲ್ಲೂ ಇಂಥ ಉದಾಹರಣೆಗಳನ್ನು ನೋಡಿದ್ದೇವೆ. ಪ್ರತಾಪಗೌಡ ಪಾಟೀಲ ಅವರನ್ನು ನಾವು ಬಿಜೆಪಿಯಿಂದಲೇ ಕರೆ ತಂದಿದ್ದೆವು. ಹೀಗೆ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋಗುವುದು, ವಾಪಸ್ ಆಗುವುದು ರಾಜಕೀಯದಲ್ಲಿ ಸಾಮಾನ್ಯ' ಎಂದೂ ಹೇಳಿದರು.

ಫ್ರಾನ್ಸ್‌ನ ತನಿಖಾ ವೆಬ್‌ಸೈಟ್ ಮೀಡಿಯಾಪಾರ್ಟ್ ವರದಿ

ರಫೇಲ್: ನ್ಯಾಯಾಂಗ ತನಿಖೆ ಆರಂಭಿಸಿದ ಫ್ರಾನ್ಸ್

ನವದೆಹಲಿ (ಪಿಟಿಐ): ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದದಲ್ಲಿ ಭ್ರಷ್ಟಾಚಾರ ಮತ್ತು ಪಕ್ಷಪಾತ ನಡೆದಿದೆ ಎಂಬ ಆರೋಪದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ನ್ಯಾಯಾಧೀಶರನ್ನು ನೇಮಿಸಲಾಗಿದೆ ಎಂದು ಫ್ರಾನ್ಸ್‌ನ ತನಿಖಾ ವೆಬ್‌ಸೈಟ್ ಮೀಡಿಯಾಪಾರ್ಟ್ ವರದಿ ಮಾಡಿದೆ.

ರಾಷ್ಟ್ರೀಯ ಹಣಕಾಸು ಅಭಿಯೋಜಕರ ಕಚೇರಿಯು (ಪಿಎನ್‌ಎಫ್) ಈ ತನಿಖೆಯನ್ನು ಪ್ರಾರಂಭಿಸಿದೆ ಎಂದು ವರದಿ ಹೇಳಿದೆ.

2016ರಲ್ಲಿ ಭಾರತ ಹಾಗೂ ಫ್ರಾನ್ಸ್ ಸರ್ಕಾರಗಳ ನಡುವೆ ಸುಮಾರು ₹59,000 ಕೋಟಿ ಮೊತ್ತದ ಈ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಡಾಸೊ ಕಂಪನಿ ತಯಾರಿಸಿದ 36 ರಫೇಲ್ ಯುದ್ಧವಿಮಾನಗಳನ್ನು ಭಾರತಕ್ಕೆ ಒದಗಿಸಲು ಒಪ್ಪಂದ ಏರ್ಪಟ್ಟಿತ್ತು. ಈ ಒಪ್ಪಂದದಲ್ಲಿ ತಪ್ಪುಗಳು ಆಗಿವೆ ಎಂದು, ಮೀಡಿಯಾಪಾರ್ಟ್ ಏಪ್ರಿಲ್‌ನಲ್ಲಿ ವರದಿ ಮಾಡಿತ್ತು. ಬಳಿಕ, ಆರ್ಥಿಕ ಅಪರಾಧ ಪತ್ತೆಯಲ್ಲಿ ವಿಶೇಷ ಪರಿಣತಿ ಹೊಂದಿರುವ ಫ್ರಾನ್ಸ್‌ನ ಶೆರ್ಪಾ ಎನ್‌ಜಿಒ ಸಲ್ಲಿಸಿದ ದೂರಿನ ಅನ್ವಯ, ಫ್ರಾನ್ಸ್‌ನ ರಾಷ್ಟ್ರೀಯ ಹಣಕಾಸು ಅಭಿಯೋಜಕರ ಕಚೇರಿಯಿಂದ ನ್ಯಾಯಾಂಗ ತನಿಖೆಗೆ ಆದೇಶಿಸಲಾಗಿದೆ. ಮೀಡಿಯಾಪಾರ್ಟ್ ಸಂಸ್ಥೆಯ ಪತ್ರಕರ್ತ ಯಾನ್ ಫಿಲಿಪಿನ್ ಅವರು ಈ ಒಪ್ಪಂದದಲ್ಲಿ ನಡೆದಿರುವ ಭ್ರಷ್ಟಾಚಾರ ಕುರಿತು ಸರಣಿ ವರದಿಗಳನ್ನು ಪ್ರಕಟಿಸಿದ್ದರು.

'ಇದಕ್ಕೆ ಸಂಬಂಧಿಸಿದ ದೂರನ್ನು 2019ರಲ್ಲಿ ಮಾಜಿ ಪಿಎನ್‌ಎಫ್ ಮುಖ್ಯ ಸ್ಥರು ಮುಚ್ಚಿಹಾಕಿದ್ದರು' ಎಂದು ಯಾನ್ ಟ್ವೀಟ್ ಮಾಡಿದ್ದಾರೆ. 'ಡಾಸೊ ಏವಿಯೇಷನ್ ಕಂಪನಿಯು ಭಾರತದ ಮಧ್ಯವರ್ತಿಗೆ ಸುಮಾರು ₹8.8 ಕೋಟಿ ಪಾವತಿಸಿದೆ' ಎಂದು ಫ್ರಾನ್ಸ್‌ನ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ನಡೆಸಿದ ತನಿಖೆಯನ್ನು ಉಲ್ಲೇಖಿಸಿ ಮೀಡಿಯಾಪಾರ್ಟ್ ಸಂಸ್ಥೆ ಏಪ್ರಿಲ್‌ನಲ್ಲಿ ವರದಿ ಪ್ರಕಟಿಸಿತ್ತು. ಆದರೆ ಈ ಆರೋಪವನ್ನು ಡಾಸೊ ನಿರಾಕರಿಸಿತ್ತು.

'ದಾಳ'ವಾಗಿ ರಾಹುಲ್ ಬಳಕೆ: ಬಿಜೆಪಿ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಪ್ರತಿಸ್ಪರ್ಧಿ ರಕ್ಷಣಾ ಕಂಪನಿಗಳು 'ದಾಳ'ವಾಗಿ ಬಳಸುತ್ತಿವೆ ಎಂದು ಬಿಜೆಪಿ ಶನಿವಾರ ಆರೋಪಿಸಿದೆ.

ಎನ್‌ಜಿಒ ನೀಡಿದ ದೂರು ಆಧರಿಸಿ ತನಿಖೆಗೆ ಆದೇಶಿಸಲಾಗಿದೆಯೇ ವಿನಾ, ಅದನ್ನು ಭ್ರಷ್ಟಾಚಾರದ ದೃಷ್ಟಿಯಲ್ಲಿ ನೋಡಬಾರದು ಎಂದಿರುವ ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, 'ಈ ವಿಷಯವಾಗಿ ಕಾಂಗ್ರೆಸ್ ಸುಳ್ಳು ಮತ್ತು ತಪ್ಪು ಕಲ್ಪನೆಗಳನ್ನು ಹರಡುತ್ತಿದೆ. ರಾಹುಲ್ ವರ್ತನೆಯನ್ನು ನೋಡಿದರೆ, ಅವರು ಪ್ರತಿಸ್ಪರ್ಧಿ ಕಂಪನಿಗಳ ಏಜೆಂಟ್ ಆಗಿರುವಂತೆ ತೋರುತ್ತಿದೆ' ಎಂದು ಹೇಳಿದ್ದಾರೆ.

ಜಂಟಿ ಸದನ ಸಮಿತಿ ತನಿಖೆಗೆ ಕಾಂಗ್ರೆಸ್ ಆಗ್ರಹ

ಈ ಬೆಳವಣಿಗೆಯ ಹಿನ್ನೆಲೆಯಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ರಫೇಲ್ ಒಪ್ಪಂದ ಕುರಿತು ಜಂಟಿ ಸದನ ಸಮಿತಿಯ (ಜೆಪಿಸಿ) ತನಿಖೆಗೆ ಆದೇಶಿಸಬೇಕು ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಒತ್ತಾಯಿಸಿದ್ದಾರೆ. 'ಈ ಒಪ್ಪಂದದಲ್ಲಿ ನಡೆದಿರುವ ಭ್ರಷ್ಟಾಚಾರ ಈಗ ಸ್ಪಷ್ಟವಾಗಿ ಹೊರಬಂದಿದೆ. ಫ್ರಾನ್ಸ್ ಸರ್ಕಾರ ತನಿಖೆಗೆ ಆದೇಶಿಸಿರುವುದು ಕಾಂಗ್ರೆಸ್ ಪಕ್ಷ ಮತ್ತು ರಾಹುಲ್ ಗಾಂಧಿಯವರ ನಿಲುವನ್ನು ಸಮರ್ಥಿಸಿದಂತಾಗಿದೆ' ಎಂದು ಅವರು ತಿಳಿಸಿದರು.

ಯುಪಿಎ ಸರ್ಕಾರದ ಅವಧಿಯಲ್ಲಿ ಪ್ರತೀ ವಿಮಾನಕ್ಕೆ ₹526 ಕೋಟಿ ನೀಡಿ ಖರೀದಿಸುವ ಒಪ್ಪಂದವಾಗಿತ್ತು. ಆದರೆ ಎನ್‌ಡಿಎ ಸರ್ಕಾರವು ಅದೇ ವಿಮಾನವನ್ನು ₹1,670 ಕೋಟಿ ನೀಡಿ ಖರೀದಿಸಲು ಮುಂದಾಗಿರುವ ಔಚಿತ್ಯವೇನು ಎಂದು ಪ್ರಶ್ನಿಸಿದ್ದ ಕಾಂಗ್ರೆಸ್, ಒಪ್ಪಂದದಲ್ಲಿ ಭಾರಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿತ್ತು.

ಉತ್ತರಾಖಂಡ: ಪುಷ್ಕರ್ ಸಿಂಗ್ ಧಾಮಿ ನೂತನ ಮುಖ್ಯಮಂತ್ರಿ

ನವದೆಹಲಿ/ಡೆಹ್ರಾಡೂನ್: ಎರಡನೇ ಅವಧಿಗೆ ಶಾಸಕರಾಗಿರುವ, 45 ವರ್ಷದ ಪುಷ್ಕರ್ ಸಿಂಗ್ ಧಾಮಿ, ಉತ್ತರಾಖಂಡ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಭಾನುವಾರ ಅಧಿಕಾರ ಸ್ವೀಕರಿಸಲಿದ್ದಾರೆ.

ಪುಷ್ಕರ್ ಸಿಂಗ್ ಧಾಮಿ

ರಾಜ್ಯ ವಿಧಾನ ಸಭೆಗೆ ನಿಗದಿತ ಅವಧಿಯಲ್ಲಿ ಚುನಾಯಿತರಾಗದ ಕಾರಣ ಹಾಲಿ ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್ ಅವರು ಶುಕ್ರವಾರ ರಾಜೀನಾಮೆ ಸಲ್ಲಿಸಿದ್ದರು. ತೆರವಾದ ಸ್ಥಾನದಲ್ಲಿ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಧಾಮಿ ಅವರನ್ನು ಆಯ್ಕೆ ಮಾಡಲಾಗಿತ್ತು.

ಧಾಮಿ ಅವರು ಮಾಜಿ ಮುಖ್ಯಮಂತ್ರಿ, ಮಹಾರಾಷ್ಟ್ರದ ಹಾಲಿ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರ ಆಪ್ತರು. ಉತ್ತರಾಖಂಡ ಪಿತೋರ್‌ಗಡ ವಲಯದ ಟುಂಡಿ ಹುಟ್ಟೂರು. ವೃತ್ತಿಯಿಂದ ವಕೀಲರು. 2000ರಲ್ಲಿ ಉತ್ತರಾಖಂಡ ಅಸ್ತಿತ್ವಕ್ಕೆ ಬಂದಾಗ ಸಕ್ರಿಯ ರಾಜಕಾರಣ ಪ್ರವೇಶಿಸಿದ್ದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಪುರುಷ ಆಧಿಪತ್ಯದ ಸಂಗೀತ ಕ್ಷೇತ್ರದಲ್ಲಿ ಪ್ರವೇಶ ಪಡೆದ 'ಸಂಗೀತ ಸರಸ್ವತಿಯರು' ತಮಗೆ ಎದುರಾದ ಸವಾಲುಗಳನ್ನು ಮೆಟ್ಟಿ ನಿಂತಿದ್ದಾದರೂ ಹೇಗೆ?

ಕೊಪ್ಪಳದಲ್ಲಿ ಬಿರುಸಿನ ಮಳೆ 4
ಸೆಪ್ಟೆಂಬರ್ ವೇಳೆಗೆ ಕನಿಷ್ಠ ಶೇ 10ರಷ್ಟು ಜನರಿಗೆ ಲಸಿಕೆ: ಡಬ್ಲ್ಯುಎಚ್‌ಒ ಸಲಹೆ
ನಿರಾಶ್ರಿತರು, ಭಿಕ್ಷುಕರೂ ದುಡಿಯಬೇಕು: ಹೈಕೋರ್ಟ್ 5
'ಡೆಲ್ಟಾ ಹೆಚ್ಚು ಅಪಾಯಕಾರಿ' 7

ರಾಜ್ಯ ಕೋವಿಡ್ ಅಂಕಿ–ಅಂಶ

28,52,079 ▲	ಒಟ್ಟು ಸೋಂಕಿತರು (28,49,997 ನಿನ್ನೆಯ ವಿವರ)
48,116 ▼	ಸಕ್ರಿಯ ಪ್ರಕರಣಗಳು
27,68,632 ▲	ಗುಣಮುಖರಾದವರು
35,308 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	2,082 ▼
ಗುಣಮುಖ	7,751 ▼
ಸಾವು	86 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ

2019ರಲ್ಲಿ ಉಂಟಾಗಿದ್ದ ನೆರೆ, ಅತಿವೃಷ್ಟಿ: ಚೇತರಿಕೆಗೆ ಸಂತ್ರಸ್ತರ ಪರದಾಟ

ಪ್ರಗತಿ ಕಾಣದ ಪುನರ್ವಸತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ' ಎರಡು ವರ್ಷಗಳ ಹಿಂದೆ, ಕೃಷ್ಣಾ ನದಿ ಪ್ರವಾಹದಿಂದ ಕುಸಿದಿದ್ದ ಈ ಮನೆಯನ್ನೊಮ್ಮೆ ನೋಡಿ; ಬಿರುಕು ಬಿಟ್ಟ ಗೋಡೆಗಳು ಯಾವಾಗ ಬೀಳುತ್ತವೆಯೋ ಎಂಬ ಆತಂಕದಲ್ಲೇ ಮಕ್ಕಳೊಂದಿಗೆ ಬದುಕುತ್ತಿದ್ದೇನೆ. ಪರಿಹಾರ ಇನ್ನೂ ಸಿಕ್ಕಿಲ್ಲ...'

–ಹೀಗೆ ಹೇಳುತ್ತಾ ತಮ್ಮ ಮನೆಯನ್ನು ತೋರಿಸಿದ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಶಾಲಾ ಗಣಪತಿ ಕುರಣೆ ಅವರ ಕಣ್ಣಾಲಿಗಳು ತುಂಬಿ ಬಂದಿದ್ದವು.

'ದಾನಿಗಳು ನೀಡಿದ ಹಣದಿಂದ ಸಾಧ್ಯವಾದಷ್ಟು ದುರಸ್ತಿ ಮಾಡಿಸಿದ್ದೇನೆ. ನೆರೆ ಬಂದು ಎರಡು ವರ್ಷಗಳು ಕಳೆಯುತ್ತಿದ್ದರೂ ಸರ್ಕಾರದಿಂದ ನೆರವು ದೊರೆತಿಲ್ಲ. ದಿಕ್ಕೇ ತೋಚದಂತಾಗಿದೆ' ಎಂದು ಕಣ್ಣೀರಿಟ್ಟರು.

ಹಲವು ಜಿಲ್ಲೆಗಳಲ್ಲಿ

ಇಂತಹ ಹಲವು ಕಣ್ಣೀರ ಕಥೆಗಳು ಪ್ರವಾಹ ಬಾಧಿತ ಜಿಲ್ಲೆಗಳ ಸಂತ್ರಸ್ತರದ್ದಾಗಿವೆ. ಹಲವು ಜಿಲ್ಲೆಗಳಲ್ಲಿ 2019ರಲ್ಲಿ ಉಂಟಾಗಿದ್ದ ನೆರೆ ಮತ್ತು ಅತಿವೃಷ್ಟಿಯಿಂದ ಮನೆ ಕಳೆದುಕೊಂಡವರ ಪುನರ್ವಸತಿಗೆ ಸರ್ಕಾರ ಇನ್ನೂ ಕ್ರಮ ವಹಿಸಿಲ್ಲ. ಕೋವಿಡ್ ಕಾರ್ಮೋಡದಿಂದ, ಕೆಲಸವಿಲ್ಲದೆ ಜನರ ಬಳಿ ಹಣವಿಲ್ಲದಂತಾಗಿದೆ. ನಿರ್ಮಾಣ ಸಾಮಗ್ರಿಗಳ ಬೆಲೆ ಏರಿಕೆಯಿಂದಾಗಿ ಚಿಂತೆ ಹೆಚ್ಚುತ್ತಲೇ ಇದೆ. ಪರಿಹಾರ ನೀಡಿದರೂ ಸಾಕಾಗದು ಎಂಬ ಅಳಲು ಸಂತ್ರಸ್ತರದ್ದು.

ಪ್ರವಾಹದಿಂದಾಗಿ ಮನೆ ಕುಸಿದಾಗ, ಆ ಕುಟುಂಬದವರಿಗೆ ಸಮುದಾಯ ಭವನ, ವಸತಿಗೃಹ ಮತ್ತಿತರ ಕಡೆಗೆ ಆಶ್ರಯ ನೀಡಲಾಗಿತ್ತು. ಈಗಲೂ ಹಲವೆಡೆ ಇಲ್ಲಿಯೇ ಬದುಕು ಮುಂದುವರಿದಿದೆ. ದೊಡ್ಡದೊಡ್ಡ ಸಭಾಭವನದಲ್ಲಿ ಸೀರೆ, ಟರ್ಪಾಲಿನ್‌ಗಳನ್ನು ಅಡ್ಡಡ್ಡ ಕಟ್ಟಿಕೊಂಡು ತಮ್ಮ ಖಾಸಗೀತನ ಕಾಪಾಡಿಕೊಳ್ಳಲು ಪರದಾಡುತ್ತಿದ್ದಾರೆ. ಅವರಿಗೆ ಬಯಲು ಶೌಚಾಲಯವೇ ಗತಿಯಾಗಿದೆ. ಇನ್ನೂ ಕೆಲವರು ಬಿದ್ದ ಮನೆಗಳಿಗೇ ಶೀಟ್ ಹಾಕಿಸಿ, ಟರ್ಪಾಲಿನ್‌ಗಳ ಹೊದಿಕೆ ಹೊದಿಸಿ, ದಿನ ದೂಡುತ್ತಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ತಾತ್ಕಾಲಿಕ ಶೆಡ್‌ಗಳೇ ಸೂರಾಗಿವೆ. ಮಳೆಬಂದರೆ ಇಂದಿಗೂ ಪಾತ್ರೆಪಗಡಗಳನ್ನು ಹೊದಿಸಬೇಕು. ತಾವೂ ಪ್ಲಾಸ್ಟಿಕ್ ಹಾಳೆ ಹೊದ್ದೇ ಇರಬೇಕು.

6ನೇ ಪುಟ ನೋಡಿ

ಒಳನೋಟ

ಸೂರು: ದೂರು ನೂರಾರು

ಪ್ರತಿಕ್ರಿಯಿಸಿ: 9606038256
feedback@prajavani.co.in

ಪರಿಹಾರ ಸಿಗುತ್ತದೆ ಎಂದು ಹೇಳಿದ್ದರು. ನಂತರ ಪಟ್ಟಿಯಲ್ಲಿ ನಿಮ್ಮ ಹೆಸರು ಡಿಲೀಟ್ ಆಯ್ತು ಎಂದರು. ಬಿದ್ದಿರುವ ಮನೆಯಲ್ಲೇ ಬದಕುತ್ತಿದ್ದೇವೆ.

ಕಾಂತಾ ಕುರಣೆ ಮಾಂಜರಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಇನ್ನಷ್ಟು ಸುದ್ದಿಗಳು 6

ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದಲ್ಲಿ ಉಮಾಶ್ರೀ ಯಶವಂತ ಲಂಬುಗೋಳ ಅವರು, ಕೃಷ್ಣಾ ನದಿ ಪ್ರವಾಹದಿಂದ ಬಿದ್ದಿದ್ದ ಮನೆಗೆ ಸಿಮೆಂಟ್ ಶೀಟು ಮತ್ತು ಟಾರ್ಪಲಿನ್ ಅನ್ನು ಗೋಡೆಯಂತೆ ಕಟ್ಟಿಕೊಂಡಿದ್ದಾರೆ. ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

2020ರಲ್ಲಿ ಸೂರು ಕಳೆದುಕೊಂಡವರ ಕಥೆ

₹130.57 ಕೋಟಿ ಫಲಾನುಭವಿಗಳಿಗೆ ಈವರೆಗೆ ವಿತರಿಸಿದ ಮೊತ್ತ

39,014	1,101	7,694	30,219
2020ರಲ್ಲಿ ಹಾನಿಗೆ ಒಳಗಾದ ಒಟ್ಟು ಮನೆಗಳು	ಸಂಪೂರ್ಣವಾಗಿ ಹಾನಿಯಾದ ಮನೆಗಳು	ಭಾಗಶಃ ಹಾನಿಯಾದ ಮನೆಗಳು	ಅಲ್ಪಸ್ವಲ್ಪ ಹಾನಿಯಾದ ಮನೆಗಳು

2019-2020ರ ಮಹಾಮಳೆಯ ಪರಿಣಾಮ

1,73,950	₹2,865.80 ಕೋಟಿ	₹1,643.46 ಕೋಟಿ	₹1,222.34 ಕೋಟಿ
2019 ಮತ್ತು 2020ರಲ್ಲಿ ಹಾನಿಗೊಳಗಾದ ಒಟ್ಟು ಮನೆಗಳು	ಪರಿಹಾರ ನೀಡಲು ಅಗತ್ಯವಾದ ಒಟ್ಟು ಮೊತ್ತ	ಈವರೆಗೆ ಬಿಡುಗಡೆಯಾದ ಮೊತ್ತ	ಬಿಡುಗಡೆಗೆ ಬಾಕಿ

ಸರ್ಕಾರದಿಂದ ₹ 5 ಲಕ್ಷ ಸಿಗುತ್ತದೆಂದು ಸಹಕಾರ ಸಂಘದಲ್ಲಿ ₹ 4 ಲಕ್ಷ ಸಾಲ ಪಡೆದಿರುವೆ. ಮೊದಲಿಗೆ ₹25ಸಾವಿರ ದೊರೆತಿದೆ. ₹ 5 ಲಕ್ಷ ಕೊಡದಿದ್ದರೆ ವಿಷ ಕುಡಿಯುವುದೊಂದೆ ದಾರಿ

ವೆಂಕಟೇಶ್ ಭಟ್ ಅಯ್ಯಪ್ಪಸ್ವಾಮಿ ದೇವಸ್ಥಾನದ ಅರ್ಚಕ, ಹಿರೇಬೈಲು, ಚಿಕ್ಕಮಗಳೂರು ಜಿಲ್ಲೆ

ಬಿಎಸ್‌ವೈಗೆ ತನಿಖೆಯ 'ಕಂಟಕ'

ಡಿನೋಟಿಫೈ ಪ್ರಕರಣ • ಮೇಲ್ನೋಟಕ್ಕೆ ಅಪರಾಧಿಕ ಸಾಕ್ಷ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿ ಗ್ರಾಮಗಳಲ್ಲಿ ಐ.ಟಿ ಕಾರಿಡಾರ್ ನಿರ್ಮಾಣಕ್ಕೆ ಸ್ವಾಧೀನ ಪಡಿಸಿಕೊಂಡಿದ್ದ 8 ಎಕರೆ 10 ಗುಂಟೆ ಜಮೀನನ್ನು ಅಕ್ರಮವಾಗಿ ಡಿನೋಟಿಫೈ ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ 'ಬಿ' ವರದಿ ತಿರಸ್ಕರಿಸಿರುವ ಚುನಾಯಿತ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಮರು ತನಿಖೆ ನಡೆಸುವಂತೆ ಆದೇಶಿಸಿದೆ.



ಯಡಿಯೂರಪ್ಪ ವಿರುದ್ಧದ ಪ್ರಕರಣ ಮುಕ್ತಾಯಗೊಳಿಸುವಂತೆ ಶಿಫಾರಸು ಮಾಡಿ ಲೋಕಾಯುಕ್ತ ಪೊಲೀಸರು ಜನವರಿ 18ರಂದು ಸಲ್ಲಿಸಿದ್ದ ವರದಿಯನ್ನು ನ್ಯಾಯಾಲಯ ಶನಿವಾರ ತಿರಸ್ಕರಿಸಿದ್ದು, ಮರು ತನಿಖೆ ನಡೆಸಿ ಆಗಸ್ಟ್ 21ರೊಳಗೆ ವರದಿ ಸಲ್ಲಿಸುವಂತೆ ತನಿಖಾಧಿಕಾರಿಗೆ ನಿರ್ದೇಶನ ನೀಡಿದೆ.

2006-07ರಲ್ಲಿ ಉಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಯಡಿಯೂರಪ್ಪ ಅವರು ಕಾನೂನಿಗೆ ವಿರುದ್ಧವಾಗಿ ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿ ಗ್ರಾಮಗಳ 8 ಎಕರೆ 10 ಗುಂಟೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿದ್ದರು ಎಂದು ಆರೋಪಿಸಿ ನಗರದ ವಾಸುದೇವ ರೆಡ್ಡಿ ಎಂಬುವವರು 2013ರಲ್ಲಿ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು. ವಿಚಾರಣಾ ನ್ಯಾಯಾಲಯದ ಆದೇಶದಂತೆ 2015ರ ಫೆಬ್ರುವರಿ 21ರಂದು ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಿದ್ದರು.

ದೀರ್ಘ ಕಾಲ ತನಿಖೆಯಲ್ಲಿ ಯಾವುದೇ ಪ್ರಗತಿ ಕಂಡುಬಂದಿರಲಿಲ್ಲ. ಪ್ರಕರಣ ರದ್ದು ಮಾಡುವಂತೆ ಕೋರಿ ಯಡಿಯೂರಪ್ಪ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

4ನೇ ಪುಟ ನೋಡಿ

ಆ.21ಕ್ಕೆ ಸಮನ್ಸ್ ಜಾರಿ ಸಾಧ್ಯತೆ

ಮುಂದಿನ ಹಂತದಲ್ಲಿ ಯಡಿಯೂರಪ್ಪ ಸೇರಿದಂತೆ ಆರೋಪಿಗಳ ವಿರುದ್ಧ ಸಮನ್ಸ್ ಜಾರಿಗೊಳಿಸುವ ಪ್ರಕ್ರಿಯೆ ನಡೆಯಲಿದೆ ಎಂದು ನ್ಯಾಯಾಲಯ ಹೇಳಿದೆ. ಆಗಸ್ಟ್ 21ಕ್ಕೆ ಪ್ರಕರಣದ ಮುಂದಿನ ವಿಚಾರಣೆ ನಿಗದಿಯಾಗಿದೆ. ಅದೇ ದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಇತರ ಆರೋಪಿಗಳಿಗೆ ಸಮನ್ಸ್ ಜಾರಿಗೆ ಆದೇಶಿಸುವ ಸಾಧ್ಯತೆ ಇದೆ.

ಲಾಕ್‌ಡೌನ್: ನಾಳೆಯಿಂದ ಇನ್ನಷ್ಟು ಸಡಿಲ

ದೇವಸ್ಥಾನ, ಮಾಲ್ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಜಿಲ್ಲೆ ಬಿಟ್ಟು ರಾಜ್ಯದಾದ್ಯಂತ ಸೋಮವಾರದಿಂದ (ಜು.5) ದೇವಸ್ಥಾನಗಳು, ಮಾಲ್‌ಗಳನ್ನು ತೆರೆಯಲು ಅನುಮತಿ ನೀಡಲಾಗಿದೆ.

ರಾತ್ರಿ 9 ಗಂಟೆಯವರೆಗೆ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡಿದ್ದು, ವಾರಾಂತ್ಯದ ಕರ್ಫ್ಯೂ ರದ್ದುಗೊಳಿಸಲಾಗಿದೆ. ಆದರೆ, ಪ್ರತಿದಿನ ರಾತ್ರಿ 9ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ ಜಾರಿಯಲ್ಲಿರುತ್ತದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಿವಾಸದಲ್ಲಿ ಶನಿವಾರ ಸಂಜೆ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಪರಿಷ್ಕೃತ ಮಾರ್ಗಸೂಚಿಗಳನ್ನೂ ಹೊರಡಿಸಲಾಗಿದೆ. ಜುಲೈ 19ರವರೆಗೂ ಈ ನಿಯಮ ಜಾರಿಯಲ್ಲಿರಲಿದೆ.

'ಸೋಮವಾರದಿಂದ ಎಲ್ಲ ಸರ್ಕಾರಿ, ಖಾಸಗಿ ಕಚೇರಿಗಳು, ಕೈಗಾರಿಕೆಗಳು ಮತ್ತು ವಾಣಿಜ್ಯ ಸಂಸ್ಥೆಗಳು ಶೇಕಡ 100ರಷ್ಟು ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸಬಹುದು. ಮಾಲ್‌ಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದೆ' ಎಂದು ಯಡಿಯೂರಪ್ಪ ಸುದ್ದಿಗಾರರಿಗೆ ತಿಳಿಸಿದರು.

ಮೆಟ್ರೊ ರೈಲು ಮತ್ತು ಬಸ್‌ಗಳಲ್ಲಿ ಸಾಮರ್ಥ್ಯದ ಶೇ 100ರಷ್ಟು ಪ್ರಯಾಣಿಕರ ಸಂಚಾರಕ್ಕೆ ಅನುಮತಿ ನೀಡಲಾಗಿದೆ. ಕ್ರೀಡಾ ಸಂಕೀರ್ಣಗಳು ಮತ್ತು ಈಜು ಕೊಳಗಳಲ್ಲಿ ಕ್ರೀಡಾಪಟುಗಳ ತರಬೇತಿಗೆ ಮಾತ್ರ ಅವಕಾಶ ನೀಡಲಾಗಿದೆ ಎಂದರು.

ದರ್ಶನಕ್ಕಷ್ಟೆ ಅವಕಾಶ: 'ದೇವಸ್ಥಾನಗಳನ್ನು ತೆರೆಯಲಿದ್ದರೂ ದರ್ಶನಕ್ಕಷ್ಟೇ ಅವಕಾಶ. ಯಾವುದೇ ರೀತಿಯ ಸೇವೆಗಳು ಇರುವುದಿಲ್ಲ. ಚಿತ್ರಮಂದಿರಗಳನ್ನು ತೆರೆಯುವಂತಿಲ್ಲ. ಶಾಲಾ, ಕಾಲೇಜುಗಳ ಪುನರಾರಂಭದ ಕುರಿತು ಪ್ರತ್ಯೇಕವಾಗಿ ಸಭೆ ನಡೆಸಿ, ತೀರ್ಮಾನ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಮದ್ಯ ಸೇವನೆಗೆ ಅನುಮತಿ: ಬಾರ್‌ಗಳಲ್ಲಿ ಮದ್ಯ ಸೇವಿಸಲು ಅನುಮತಿ ಇದೆ. ಪಬ್‌ಗಳಿಗೆ ಅವಕಾಶ ನೀಡಿಲ್ಲ. ವಾರಾಂತ್ಯದ ಕರ್ಫ್ಯೂ ಇರುವುದಿಲ್ಲ.

ಮದುವೆ ಮತ್ತಿತರ ಕೌಟುಂಬಿಕ ಸಮಾರಂಭಗಳಿಗೆ 100 ಜನರು ಹಾಗೂ ಅಂತ್ಯಸಂಸ್ಕಾರದಲ್ಲಿ 20 ಜನ ಪಾಲ್ಗೊಳ್ಳಬಹುದು. ಸಾಮಾಜಿಕ, ಧಾರ್ಮಿಕ, ರಾಜಕೀಯ ಸಭೆ ಸಮಾರಂಭಗಳು, ಪ್ರತಿಭಟನೆಗಳು ಮತ್ತು ಇತರ ಸಮಾರಂಭಗಳಿಗೆ ಅವಕಾಶ ಇರುವುದಿಲ್ಲ ಎಂದು ಹೇಳಿದರು.

ಡಿಕೆಶಿ ನಡೆ
ಕಾರ್ಯಕರ್ತರ ಮುನ್ನಡೆ

ಕೈ ಪಡೆಗೆ ಕಸುವು ತುಂಬಿದ ನಿಜದ ನಾಯಕ

ಬೆಂಗಳೂರು: ನಾಯಕರು ಆಕಾಶದಿಂದ ಉದ್ಭವಿಸುವುದಿಲ್ಲ; ಯಾರು ಜನರ ಮಧ್ಯೆ ಇದ್ದು, ಜನರ ಕಷ್ಟಗಳನ್ನು ಆಲಿಸಿ, ಅದಕ್ಕೆ ಸಕಾಲದಲ್ಲಿ ಪರಿಹಾರ ಸೂತ್ರಗಳನ್ನು ರೂಪಿಸಿ ಸಂಕಷ್ಟ ಕೂಪದಿಂದ ಜನರನ್ನು ಪಾರು ಮಾಡುವ ಉಪಾಯ ಹುಡುಕುವವರೇ ನಿಜವಾದ ಜನನಾಯಕರಾಗಿ ಪ್ರಜ್ವಲಿಸುತ್ತಾರೆ. ಹೀಗೆ ಜನರ ಮಧ್ಯೆದಿಂದ ಉದಯಿಸಿ, ಜನರ ಜತೆಗೆ ಬೆಳೆದು-ಬೆಳಗುವ ಗುಣಶೀಲ ನೇತಾರ ಡಿ.ಕೆ. ಶಿವಕುಮಾರ್.

ಕೋವಿಡ್ ತಂದಿತ್ತ ಕೇಡುಗಾಲದ ಮಧ್ಯೆಯೇ ಕೆಪಿಸಿಸಿ ಅಧ್ಯಕ್ಷ ಗಾದಿ ಸ್ವೀಕರಿಸಿದ ಡಿ.ಕೆ. ಶಿವಕುಮಾರ್, ಸವಾಲುಗಳನ್ನೇ ಅವಕಾಶಗಳನ್ನಾಗಿ ಪರಿವರ್ತಿಸಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ಬಲ ತುಂಬಿದ್ದಾರೆ. ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಜನರ ಕಷ್ಟಗಳಿಗೆ ಮಿಡಿಯುತ್ತಾ, ರಾಜ್ಯದ ಉದ್ದಗಲದಲ್ಲಿ ಕಾರ್ಯಕರ್ತರನ್ನೂ ಉತ್ತೇಜಿಸಿದ ಅವರು, ವರ್ಷ ಕಳೆಯುವುದರೊಳಗೆ ಕೈ ಪಡೆಗೆ ಶಕ್ತಿ ತುಂಬುವುದರಲ್ಲಿ ಯಶಸ್ಸು ಕಂಡಿದ್ದಾರೆ.

ಕೆಪಿಸಿಸಿಯ ನೂತನ ಅಧ್ಯಕ್ಷರನ್ನಾಗಿ ಡಿ.ಕೆ. ಶಿವಕುಮಾರ್ ಅವರನ್ನು 2020ರ ಮಾರ್ಚ್‌ನಲ್ಲಿ ಘೋಷಿಸಿಲಾಗಿತ್ತು. ಲಾಕ್‌ಡೌನ್, ನಿರ್ಬಂಧಗಳ ತುಸು ಸಡಿಲಿಕೆಯ ಬೆನ್ನಲ್ಲೇ 2020ರ ಜುಲೈ 2ರಂದು ಕೆಪಿಸಿಸಿ ಅಧ್ಯಕ್ಷರಾಗಿ ಪದಗ್ರಹಣ ಮಾಡಿದ್ದ ಅವರು, ಆ ದಿನವೇ ಲಕ್ಷಾಂತರ ಕಾರ್ಯಕರ್ತರನ್ನು 'ಝೂಮ್' ಸಭೆಗಳಲ್ಲಿ ಸೇರಿಸುವ ಮೂಲಕ ಇತಿಹಾಸ ಬರೆದಿದ್ದರು. ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮವೇ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಚೈತನ್ಯ ತುಂಬುವ ಪ್ರಕ್ರಿಯೆಗೆ ನಾಂದಿ ಹಾಡಿತ್ತು.

ಹೋರಾಟದ ಹಾದಿಯ ಹೆಜ್ಜೆ ಗುರುತು:

ಅಧ್ಯಕ್ಷ ಸ್ಥಾನ ಸ್ವೀಕರಿಸಿದ ನಂತರ ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಅಖಾಡಕ್ಕೆ ಧುಮುಕಿದ ಶಿವಕುಮಾರ್, ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದ ಜನರ ಪರವಾಗಿ ಧ್ವನಿ ಎತ್ತಿದ್ದರು. ಅಸಂಘಟಿತ ವಲಯದ ಕಾರ್ಮಿಕರಿಗೆ ತಲಾ ₹ 10,000 ಪರಿಹಾರ ನೀಡಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟರು. ಇದರಿಂದ ಒತ್ತಡಕ್ಕೆ ಸಿಲುಕಿದ ರಾಜ್ಯ ಸರ್ಕಾರ, ತಲಾ ₹ 5,000 ಪರಿಹಾರ ಘೋಷಿಸಿತು.

ಕೋವಿಡ್ ಸಂದರ್ಭದಲ್ಲಿ ಹಾಸಿಗೆಗಳು, ವೆಂಟಿಲೇಟರ್, ಔಷಧಿ ಖರೀದಿಯಲ್ಲಿ ನಡೆದ ಭ್ರಷ್ಟಾಚಾರವನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದ ಶಿವಕುಮಾರ್, ಅವ್ಯವಹಾರಕ್ಕೆ ಕಡಿವಾಣ ಹಾಕುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ತರುವ ಪ್ರಯತ್ನ ಮಾಡಿದ್ದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದಲ್ಲಿ ವಿತರಿಸಲಾದ ಪಡಿತರ ಮತ್ತು ದಿನಸಿ ಕಿಟ್‌ಗಳ ಮೇಲೆ ಬಿಜೆಪಿ ನಾಯಕರ ಭಾವಚಿತ್ರ ಹಾಗೂ ಪಕ್ಷದ ಚಿಹ್ನೆ ಮುದ್ರಿಸಿದ್ದನ್ನು ಖಂಡಿಸಿ ಬೀದಿಗೆ ಇಳಿದು, ಆಡಳಿತ ಪಕ್ಷಕ್ಕೆ ಬಿಸಿ ಮುಟ್ಟಿಸಿದ್ದರು.

ಪಡಿತರ ಕಿಟ್ ವಿತರಣೆಗೆ ಪೂರೈಕೆಯಾಗಿದ್ದ ಆಹಾರ ಧಾನ್ಯಗಳನ್ನು ತಮಿಳುನಾಡಿನ ಕಾಳಸಂತೆಗೆ ಪೂರೈಸುತ್ತಿದ್ದ ಜಾಲದ ಮಾಹಿತಿ ಕಲೆಹಾಕಿದ್ದ ಶಿವಕುಮಾರ್, ಸಂಸದರೂ ಆಗಿರುವ ಸಹೋದರ ಡಿ.ಕೆ. ಸುರೇಶ್ ಜತೆಗೂಡಿ ಖುದ್ದಾಗಿ ಕಾರ್ಯಾಚರಣೆ ನಡೆಸಿ ಅದನ್ನು ಬಯಲಿಗೆ ಎಳೆದಿದ್ದರು.

ರಾಜ್ಯವ್ಯಾಪಿ ಪ್ರವಾಸ: ಕೋವಿಡ್ ನಡುವೆಯೇ ಪ್ರವಾಸ ಆರಂಭಿಸಿದ್ದ ಶಿವಕುಮಾರ್, ಸ್ವತಃ ಸೋಂಕಿತರಾದರೂ ಎದೆಗುಂದಲಿಲ್ಲ. ಜನರು ಸಂಕಷ್ಟಕ್ಕೆ ಸಿಲುಕಿರುವ ಸುದ್ದಿ ಕಿವಿಗೆ ಬಿದ್ದಾಗಲೆಲ್ಲ ಅಲ್ಲಿಗೆ ದೌಡಾಯಿಸಿ, ನೆರವಿಗೆ ನಿಲ್ಲುವ ಕೆಲಸ ಮಾಡಿದರು. ರಾಜ್ಯದ ಹಲವು ಜಿಲ್ಲೆಗಳಿಗೆ ತೆರಳಿ ಸ್ವಂತ ವೆಚ್ಚದಲ್ಲಿ ಪಡಿತರ, ದಿನಸಿ ಕಿಟ್ ವಿತರಿಸುವ ಮೂಲಕ ಅಸಹಾಯಕ ಜನರ ಹಸಿವು ನೀಗುವ ಪ್ರಯತ್ನ ಮಾಡಿದರು.

ಪಕ್ಷವನ್ನು ನಿರಂತರ ಹೋರಾಟಕ್ಕೆ ಅಕ್ಷವನ್ನು ಅಣಿಗೊಳಿಸಿದ ಶಿವಕುಮಾರ್, '2021 ಹೋರಾಟದ ವರ್ಷ' ಎಂದು ಘೋಷಿಸಿ, ಅದೇ ಹಾದಿಯಲ್ಲಿ ಮುನ್ನಡೆಯುತ್ತಿದ್ದಾರೆ. ಪೆಟ್ರೋಲ್ ದರ ಪ್ರತಿ ಲೀಟರ್‌ಗೆ ₹ 100 ತಲುಪಿದಾಗ ಎಐಸಿಸಿ ನಿರ್ದೇಶನದಂತೆ ರಾಜ್ಯದಾದ್ಯಂತ 5,000ಕ್ಕೂ ಹೆಚ್ಚು ಪೆಟ್ರೋಲ್ ಬಂಕ್‌ಗಳ ಎದುರು 'ಪೆಟ್ರೋಲ್ 100 ನಾಟೌಟ್' ಪ್ರತಿಭಟನಾ ಪ್ರದರ್ಶನ ನಡೆದಿದೆ. ಇದು ಕೆಪಿಸಿಸಿ ಸಾರಥಿಯ ಕಾರ್ಯವೈಖರಿಗೆ ಸಾಕ್ಷಿ.

ಸರ್ವರ ತಲುಪಿದ 'ಆರೋಗ್ಯ ಹಸ್ತ':

ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲೇ ಜನಜಾಗೃತಿ ಮತ್ತು ವೈದ್ಯಕೀಯ ನೆರವನ್ನು ಜನರಿಗೆ ತಲುಪಿಸುದಕ್ಕಾಗಿ 'ಆರೋಗ್ಯ ಹಸ್ತ' ಎಂಬ ಕ್ರಾಂತಿಕಾರಿ ಕಾರ್ಯಕ್ರಮವನ್ನು ಶಿವಕುಮಾರ್ ರೂಪಿಸಿದ್ದರು. ಪಕ್ಷದಲ್ಲಿ ಸಕ್ರಿಯರಾಗಿರುವ ವೈದ್ಯರು ಮತ್ತು ಕಾರ್ಯಕರ್ತರ ತಂಡಗಳನ್ನು ರಚಿಸಿ ರಾಜ್ಯದಾದ್ಯಂತ ಕಾರ್ಯಾಚರಣೆಗೆ ಇಳಿಸಿದ್ದರು.

ಈ ತಂಡಗಳು ಪ್ರತಿ ಮನೆಗೂ ತೆರಳಿ ಕೊರೊನಾ ವೈರಾಣು ಸೋಂಕಿನ ಕುರಿತು ಜಾಗೃತಿ ಮೂಡಿಸುವ ಕೆಲಸ ಮಾಡಿದ್ದವು. ಪಲ್ಸ್ ಆಕ್ಸಿಮೀಟರ್, ಥರ್ಮಲ್ ಸ್ಕ್ಯಾನರ್ ಸೇರಿದಂತೆ ಅಗತ್ಯ ಉಪಕರಣಗಳು ಮತ್ತು ಔಷಧಿಯ ಕಿಟ್‌ಗಳನ್ನು ಈ ತಂಡಗಳಿಗೆ ಪೂರೈಸುವ ವ್ಯವಸ್ಥೆ ಮಾಡಿದ್ದ ಕೆಪಿಸಿಸಿ ಅಧ್ಯಕ್ಷರು, ಮುನ್ನೆಚ್ಚರಿಕೆ ಮತ್ತು ಸಕಾಲಕ್ಕೆ ಪರೀಕ್ಷೆಯಿಂದ ಮಾತ್ರವೇ ಕೋವಿಡ್ ಎದುರು ಜಯಿಸಲು ಸಾಧ್ಯ ಎಂಬ ಪಾಠವನ್ನು ಸರ್ಕಾರಕ್ಕೂ ರವಾನಿಸಿದ್ದರು.

ಜನರ ಸಂಕಷ್ಟಕ್ಕೆ ಸ್ಪಂದಿಸುತ್ತಲೇ ಕಾರ್ಯಕರ್ತರನ್ನೂ ಸಜ್ಜುಗೊಳಿಸುವ ಹೊಸ ಶೈಲಿಯನ್ನು ಕಾಂಗ್ರೆಸ್‌ಗೆ ಪರಿಚಯಿಸಿದ ಕೀರ್ತಿ ಶಿವಕುಮಾರ್ ಅವರಿಗೆ ಸಲ್ಲುತ್ತದೆ. ಪರಿಣಾಮವಾಗಿಯೇ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಈಗ ಹೊಸ ಹುಮ್ಮಸ್ಸು ಸೃಷ್ಟಿಯಾಗಿದೆ. ವರ್ಷದ ಹಿಂದೆ ನಿರಾಸಕ್ತಿ, ನಿರುತ್ಸಾಹದಿಂದ ಸೊರಗಿದ್ದ ಕಾಂಗ್ರೆಸ್‌ನ ಮುಂಚೂಣಿ ಘಟಕಗಳಲ್ಲಿ ಈಗ ಬಿಡುವಿಲ್ಲದ ಚಟುವಟಿಕೆಗಳು ನಡೆಯುತ್ತಿವೆ. ಕೆಪಿಸಿಸಿ ಅಧ್ಯಕ್ಷ ಗಾದಿ ಏರುತ್ತಿದ್ದಂತೆಯೇ ಶಿವಕುಮಾರ್ ನೀಡಿದ ಉತ್ಸಾದ 'ಟಾನಿಕ್' ಈಗ ಇಡೀ ಪಕ್ಷಕ್ಕೆ ನವೋಲ್ಲಾಸ ತುಂಬಿದೆ. ❖

ಪ್ರಸ್ತುತಿ:
ಪಿ.ವಿ.
ಬ್ರ್ಯಾಂಡ್ ಸ್ಪಾಟ್

ಉಚಿತ ಲಸಿಕೆ ಯೋಜನೆಗೆ ತಲೆಬಾಗಿದ ಸರ್ಕಾರ

ಕೋವಿಡ್ ಸೋಂಕಿನಿಂದ ಜನರನ್ನು ರಕ್ಷಿಸಲು ಲಸಿಕೆಯೊಂದೇ ಪರಿಹಾರ. ಆದರೆ, ಉಚಿತ ಲಸಿಕೆ ವಿತರಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಸಕ್ತಿಯನ್ನೇ ತೋರಿರಲಿಲ್ಲ. ಅಗತ್ಯವಿರುವವರು ಹಣ ಕೊಟ್ಟು ಖರೀದಿಸಿ ಲಸಿಕೆ ಹಾಕಿಸಿಕೊಳ್ಳಿ ಎಂಬ ಸಂದೇಶ ಸರ್ಕಾರದಿಂದಲೇ ರವಾನೆಯಾಯಿತು.

ತಕ್ಷಣವೇ ಜನರ ಪರವಾಗಿ ಧ್ವನಿ ಎತ್ತಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪಕ್ಷದ ಶಾಸಕರು ಮತ್ತು ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಬಳಸಿಕೊಂಡು ಉಚಿತ ಲಸಿಕೆ ಅಭಿಯಾನ ನಡೆಸಲು ಅವಕಾಶ ಕೋರಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಪಕ್ಷದ ವತಿಯಿಂದ ₹ 10 ಕೋಟಿಯಷ್ಟು ಮೊತ್ತ ಭರಿಸುವುದಾಗಿ ಘೋಷಿಸಿದರು.

ಕಾಂಗ್ರೆಸ್‌ನ ಬೇಡಿಕೆಯಿಂದ ಇಕ್ಕಟ್ಟಿಗೆ ಸಿಲುಕಿದ ರಾಜ್ಯ ಸರ್ಕಾರ, ಎಲ್ಲರಿಗೂ ಉಚಿತ ಲಸಿಕೆ ವಿತರಿಸುವ ಅಗತ್ಯ ಕುರಿತು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿತು. ಕೆಪಿಸಿಸಿ ಅಧ್ಯಕ್ಷರು ಪ್ರಯೋಗಿಸಿದ ಅಸ್ತ್ರ ಕೇಂದ್ರ ಸರ್ಕಾರವನ್ನೂ ತಲುಪಿ, ಉಚಿತ ಲಸಿಕೆ ಘೋಷಣೆ ಹೊರಬಿತ್ತು.

ಸರ್ಕಾರಕ್ಕೇ ಮಾರ್ಗದರ್ಶನ

ಕೋವಿಡ್ ಎದುರಿಸುವ ವಿಚಾರದಲ್ಲಿ ಡಿ.ಕೆ. ಶಿವಕುಮಾರ್ ಕೈಗೊಂಡ ಕೆಲವು ನಿರ್ಧಾರಗಳು, ರಾಜ್ಯ ಸರ್ಕಾರಕ್ಕೂ ಮಾರ್ಗದರ್ಶನ ನೀಡಿದವು. ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿ ಅಧ್ಯಯನಕ್ಕಾಗಿ ಪಕ್ಷದಿಂದಲೇ ಕಾರ್ಯಪಡೆ ರಚಿಸಿ, ವರದಿ ಪಡೆದಿದ್ದರು. ನಂತರದ ದಿನಗಳಲ್ಲಿ ಸರ್ಕಾರವೂ ಅದೇ ಮಾದರಿಯಲ್ಲಿ ಹಲವು ತಜ್ಞರ ಸಮಿತಿಗಳನ್ನು ರಚಿಸಿತು.

ಕೋವಿಡ್ ವಾರ್ ರೂಮ್ ಸ್ಥಾಪನೆ, ಸ್ಥಳೀಯವಾಗಿ ಜನರ ಬೇಡಿಕೆಗಳಿಗೆ ಸ್ಪಂದಿಸಲು ಕಾರ್ಯಕರ್ತರ ತಂಡ ರಚನೆ, ಆಂಬುಲೆನ್ಸ್‌ಗಳ ನಿಯೋಜನೆ ಸೇರಿದಂತೆ ಹಲವು ವಿಷಯಗಳಲ್ಲಿ ಶಿವಕುಮಾರ್ ಒಂದು ಹೆಜ್ಜೆ ಮುಂದೆಯೇ ಇದ್ದರು.

ಡಿ.ಕೆ. ಶಿವಕುಮಾರ್ ಅವರು ಪದಗ್ರಹಣ ಸಮಾರಂಭದಲ್ಲಿ ಕೆಪಿಸಿಸಿ ನಿಕಟಪೂರ್ವ ಅಧ್ಯಕ್ಷ ದಿನೇಶ್ ಗುಂಡೂರಾವ್ ಅವರಿಂದ ಪಕ್ಷದ ಧ್ವಜ ಸ್ವೀಕರಿಸಿದ ಸಂದರ್ಭ.

'ಪೆಟ್ರೋಲ್ 100 ನಾಟೌಟ್' ಪ್ರತಿಭಟನಾ ಪ್ರದರ್ಶನದಲ್ಲಿ ಡಿ.ಕೆ. ಶಿವಕುಮಾರ್ (ಮೊದಲ ಚಿತ್ರ) 'ಆರೋಗ್ಯ ಹಸ್ತ' ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತಿತರರ ಜತೆ

ಮಾದರಿಯಾಯ್ತು ತರಕಾರಿ – ಹಣ್ಣು ಖರೀದಿ ಅಭಿಯಾನ

ಅನ್ನದಾತರ ಸಂಕಷ್ಟಕ್ಕೆ ಮಿಡಿದ ಸಾರಥಿ

ಕಳೆದ ವರ್ಷ ಕೊರೊನಾ – ಲಾಕ್‌ಡೌನ್ ನಿಂದಾಗಿ ಅಂಗಡಿ-ಮುಂಗಟ್ಟು, ಮಾರ್ಕೆಟ್, ಹೋಟೆಲ್, ರೆಸ್ಟೋರೆಂಟ್, ಕಲ್ಯಾಣ ಮಂಟಪಗಳೆಲ್ಲ ಬಂದ್ ಆದಾಗ, ರೈತರ ಜಮೀನಿನಲ್ಲಿ ಕೊಯ್ಲಿಗೆ ಬಂದಿದ್ದ ಹಣ್ಣು- ತರಕಾರಿಗಳು, ಕೊಳ್ಳುವವರಿಲ್ಲದೇ, ಮಣ್ಣಲ್ಲಿ ಮಣ್ಣಾಗುತ್ತಿದ್ದವು. ಲಕ್ಷಾಂತರ ರೂಪಾಯಿ ಮೌಲ್ಯದ ಕೃಷಿ ಉತ್ಪನ್ನಗಳು ಕಣ್ಣೆದುರೇ ಮಣ್ಣಾಗುತ್ತಿದ್ದಾಗ ಬೆಳೆದವರು ಕಣ್ಣೀರಲ್ಲಿ ಕೈತೊಳೆವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸಾಮಾಜಿಕ ಜಾಲತಾಣಗಳಲ್ಲಿ ಇಂಥ ರೈತರ ಸಂಕಷ್ಟದ ಕಥೆಗಳೇ ಹರಿದಾಡುತ್ತಿದ್ದವು. ಅನ್ನದಾತರ ಸಂಕಷ್ಟದ ಕಥೆಗಳು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೂ ತಲುಪಿದವು. ಸಹೋದರ, ಸಂಸದ ಡಿ.ಕೆ. ಸುರೇಶ್ ಅವರೊಂದಿಗೆ ಸಂಕಷ್ಟದಲ್ಲಿದ್ದ ರೈತರನ್ನು ಗುರುತಿಸಿ, ಅವರನ್ನು ಸಂಪರ್ಕಿಸಿ, ಜಮೀನಿನಲ್ಲಿಯೇ ಹಣ್ಣು – ತರಕಾರಿಗಳನ್ನು ಮಾರುಕಟ್ಟೆ ಬೆಲೆಗೆ ಖರೀದಿಸಿದರು. ಕಣ್ಣೆದುರೇ ಮಣ್ಣುಪಾಲಾಗುತ್ತಿದ್ದ ಹಣ್ಣು – ತರಕಾರಿಗೆ 'ಡಿ.ಕೆ.ಬ್ರದರ್ಸ್' ಅವರ ಸಕಾಲಿಕ ನೆರವು ಬೆಳೆಗಾರ ನಿಟ್ಟುಸಿರು ಬಿಡುವಂತೆ ಮಾಡಿತು.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯಿಂದ ಆರಂಭವಾದ ಡಿ.ಕೆ. ಬ್ರದರ್ಸ್ ಅವರ 'ರೈತರ ಕಣ್ಣೀರು ಒರೆಸುವ' ಈ ಕಾಯಕ, ಮದ್ದೂರು, ಪಾಂಡವಪುರ, ಆನೇಕಲ್, ಚಿಕ್ಕಬಳ್ಳಾಪುರ ಸೇರಿದಂತೆ, ತಮ್ಮ ಕ್ಷೇತ್ರವಲ್ಲದ ಸ್ಥಳಗಳಿಗೂ ವಿಸ್ತರಿಸಿತು. ಕಲ್ಲಂಗಡಿ, ಕೋಸು, ಟೊಮೆಟೊ, ಕುಂಬಳ ಕಾಯಿ ಸೇರಿದಂತೆ ವಿವಿಧ ಬಗೆಯ ತರಕಾರಿಗಳನ್ನು ಟನ್‌ಗಟ್ಟಲೆ ಖರೀದಿಸಿ ಅನ್ನದಾತರ ಸಂಕಷ್ಟಕ್ಕೆ ನೆರವಾದರು.

ಬಡವರ ಹಸಿವಿಗೆ, ರೈತರ ಫಸಲು

ಲಾಕ್‌ಡೌನ್ ಅವಧಿಯಲ್ಲಿ ಬಡವರ್ಗದವರ ಸಂಕಷ್ಟವನ್ನು ಸಮೀಪದಿಂದ ಕಂಡಿದ್ದ ಅವರು, ರೈತರಿಂದ ಖರೀದಿಸಿದ ಎಲ್ಲ ಹಣ್ಣು – ತರಕಾರಿಗಳನ್ನು ಕಾರ್ಯಕರ್ತರ ಮೂಲಕ ತಮ್ಮ ಕ್ಷೇತ್ರದಲ್ಲಿರುವ ಬಡ ಜನರಿಗೆ ಹಂಚಿಸಿದರು. ತಮ್ಮ ಸಹೋದರ ಸುರೇಶ್ ಅವರೊಂದಿಗೆ ರಾಮನಗರ ಜಿಲ್ಲೆಯ ಜನರಿಗೆ ಉಚಿತವಾಗಿ ಹಣ್ಣು – ತರಕಾರಿ ವಿತರಿಸಿದರು. 'ನಾನು ರೈತರ ಪರ' ಎಂಬ ಮಾತನ್ನು ಭಾಷಣಕ್ಕಷ್ಟೇ ಸೀಮಿತಗೊಳಿಸದ ಶಿವಕುಮಾರ್, ಈ ಕಾರ್ಯದ ಮೂಲಕ ಕೃತಿಯಲ್ಲೂ ನಿರೂಪಿಸಿದರು.

ಮಾದರಿಯಾದ ಡಿಕೆಶಿ 'ರೈತ ಸೇವೆ'

ಶಿವಕುಮಾರ್ ಸಹೋದರರ 'ತರಕಾರಿ –ಹಣ್ಣು ಖರೀದಿ-ವಿತರಣೆಯ' ಅಭಿಯಾನ, ಕೆಲವು ಅಭಿಮಾನಿಗಳಿಗೆ ಪ್ರೇರಣೆಯಾಗಿತ್ತು. ನಂತರದಲ್ಲಿ ಶಿವಕುಮಾರ್ ಅವರೇ, 'ನಿಮ್ಮ ವ್ಯಾಪ್ತಿಯ ರೈತರಿಂದ ತರಕಾರಿಯನ್ನು ಬೆಂಬಲ ಬೆಲೆ ಕೊಟ್ಟು ಖರೀದಿಸಿ, ಅದನ್ನು ಬಡವರಿಗೆ ಉಚಿತವಾಗಿ ವಿತರಿಸಿ' ಎಂದು ಪಕ್ಷದ ಕಾರ್ಯಕರ್ತರಿಗೆ ಕರೆ ಕೊಟ್ಟರು. ಪರಿಣಾಮ ಕಾಂಗ್ರೆಸ್ ನಾಯಕರು ₹100 ಕೋಟಿಗೂ ಅಧಿಕ ಮೌಲ್ಯದ ತರಕಾರಿ–ಹಣ್ಣಿನ ಬೆಳೆಯನ್ನು ರೈತರಿಂದ ಖರೀದಿಸಿ, ಅದನ್ನು ಜನಸಾಮಾನ್ಯರಿಗೆ ಉಚಿತವಾಗಿ ಹಂಚಿಸಿದರು. ಹೀಗೆ ರಾಮನಗರ ಜಿಲ್ಲೆಯಿಂದ ಶುರುವಾದ ತರಕಾರಿ ಹಣ್ಣು – ಖರೀದಿ ಹಂಚಿಕೆ ಕಾರ್ಯ ರಾಜ್ಯದಾದ್ಯಂತ ವಿಸ್ತರಿಸಲು ಸಾಧ್ಯವಾಯಿತು.

ಸಂಕಟದಲ್ಲಿದ್ದ ರೈತರಿಗೆ ಸಾಂತ್ವನ...

ಕೊರೊನಾ ಸಾಂಕ್ರಾಮಿಕದ ಮೊದಲ ಲಾಕ್‌ಡೌನ್ ಅವಧಿಯಲ್ಲಿ ರೈತರಿಂದ ತರಕಾರಿ ಖರೀದಿಸಿ, ಬಡ ಜನರಿಗೆ ವಿತರಿಸಿದ್ದ ಡಿ.ಕೆ. ಶಿವಕುಮಾರ್ ಎರಡನೇ ಅವಧಿಯಲ್ಲಿ ರೈತರ ಸಂಕಷ್ಟ ಆಲಿಸಲು ರಾಜ್ಯದಾದ್ಯಂತ ಪ್ರವಾಸ ಮಾಡಿದರು. ರೈತರ ಸಂಕಷ್ಟವನ್ನು ಆಲಿಸಿದರು. ಕೈಲಾದಷ್ಟು ನೆರವು ನೀಡಿ, ಒಂದಷ್ಟು ಸಾಂತ್ವನ ಹೇಳಿದರು. ಬೆಂಬಲ ಬೆಲೆಯಲ್ಲಿ ಕೃಷಿ ಉತ್ಪನ್ನ ಖರೀದಿಸುವಂತೆ ಸರ್ಕಾರದ ಮೇಲೆ ಒತ್ತಡ ತರುವ ಪ್ರಯತ್ನವನ್ನೂ ಮಾಡಿದರು.

ರೈತರು ತಮ್ಮ ಬೆಳೆಯನ್ನು ಮಾರುಕಟ್ಟೆಗೆ ಸಾಗಿಸಲು ಪೊಲೀಸರು ಅಡ್ಡಿ ಪಡಿಸಿದಾಗ ಮಧ್ಯರಾತ್ರಿಯಲ್ಲೇ ನೆರವಿಗೆ ಧಾವಿಸಿ, ಅವರ ಪರ ಧ್ವನಿ ಎತ್ತಿದ ಧೀಮಂತ ರೈತ ಪರ ನಾಯಕ ಡಿ.ಕೆಶಿವಕುಮಾರ್.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸತೀಶ ಜಾರಕಿಹೊಳಿ, ಈಶ್ವರ ಖಂಡ್ರೆ, ಆರ್ ಧ್ರುವನಾರಾಯಣ, ಸಲೀಂ ಅಹ್ಮದ್ ಮತ್ತು ರಾಮಲಿಂಗಾರೆಡ್ಡಿ ಅವರೊಂದಿಗೆ ಸಭೆ ನಡೆಸುತ್ತಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್

ಗುಲಾಬಿ ಬೆಳೆದ ರೈತನಿಗೆ ಹೊಲದಲ್ಲೇ ಸಾಂತ್ವನ ಹೇಳುತ್ತಿರುವ ಡಿ.ಕೆ. ಶಿವಕುಮಾರ್

ಬಡವರಿಗೆ ಪಡಿತರ ಕಿಟ್ ವಿತರಣೆಯಲ್ಲಿ ಡಿ.ಕೆ. ಶಿವಕುಮಾರ್

ದಣಿವರಿಯದ ಜನಪರ ಹೋರಾಟಗಾರ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೊಳಗೊಬ್ಬ ದಣಿವರಿಯದ ಹೋರಾಟಗಾರ ಇದ್ದಾನೆ. ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಗಾದಿ ಏರಿದ ಬಳಿಕ ಅವರೊಳಗಿನ ಹೋರಾಟಗಾರ ಮತ್ತಷ್ಟು ಚುರುಕಾಗಿದ್ದಾನೆ. ಒಂದು ವರ್ಷದಿಂದ ಈಚೆಗೆ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಸಂಘಟಿಸಿದ ಸಾಲು ಸಾಲು ಹೋರಾಟಗಳೇ ಇದಕ್ಕೆ ಸಾಕ್ಷಿ.

ಕೋವಿಡ್ ಕಾಲದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆದ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿರುವುದಲ್ಲದೇ ಅಸಹಾಯಕ ಜನರ ನೆರವಿಗೆ ನಿಲ್ಲುವಂತೆ ಸರ್ಕಾರವನ್ನು ಆಗ್ರಹಿಸುವುದಕ್ಕಾಗಿಯೂ ಬೀದಿಗೆ ಇಳಿದರು. ರೈತರು, ಸಾರಿಗೆ ನೌಕರರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು, ಅಸಂಘಟಿತ ವಲಯದ ಕಾರ್ಮಿಕರ ಬೇಡಿಕೆಗಳನ್ನು ಬೆಂಬಲಿಸಿ ಶಿವಕುಮಾರ್ ಹೋರಾಟದಲ್ಲಿ ಭಾಗಿಯಾದರು.

ಕಾಂಗ್ರೆಸ್ ಪಕ್ಷ ಸಂಘಟಿಸಿದ ಹೋರಾಟಗಳು ಮಾತ್ರವಲ್ಲ, ಇತರ ಸಂಘಟನೆಗಳು ಹಮ್ಮಿಕೊಂಡ ಚಳವಳಿಗಳಲ್ಲೂ ಭಾಗವಹಿಸಿ ಬೆಂಬಲ ಸೂಚಿಸುವ ಮೂಲಕ ಹೋರಾಟದ ಕೆಚ್ಚು ಪ್ರದರ್ಶಿಸಿದ್ದಾರೆ. ಕೃಷಿ ಸಂಬಂಧಿ ಕಾಯ್ದೆಗಳ ತಿದ್ದುಪಡಿ ಕೈಬಿಡಬೇಕೆಂಬ ರೈತರ ಬೇಡಿಕೆಯನ್ನು ಬೆಂಬಲಿಸಿ ರಸ್ತೆಗೆ ಇಳಿದವರು ಶಿವಕುಮಾರ್. ರಾಯಚೂರಿನ ಮಸ್ಕಿಯಲ್ಲಿ 5–ಎ ನಾಲೆ ನಿರ್ಮಾಣಕ್ಕೆ ಆಗ್ರಹಿಸಿ ನೂರಾರು ದಿನಗಳಿಂದ ಹೋರಾಟ ನಡೆಸುತ್ತಿರುವ ರೈತರನ್ನು ಭೇಟಿಮಾಡಿ ಧೈರ್ಯ ತುಂಬಿದ್ದಾರೆ. ಕಾಂಗ್ರೆಸ್ ಸರ್ಕಾರಕ್ಕೆ ಅಧಿಕಾರಕ್ಕೆ ಬಂದರೆ ನಾಲೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವ ಭರವಸೆಯನ್ನೂ ಕೊಟ್ಟು ಬಂದಿದ್ದಾರೆ.

ಬೆಲೆ ಏರಿಕೆಯ ವಿರುದ್ಧ ರಾಜ್ಯದಲ್ಲಿ ಸಂಘಟಿತವಾದ ಹೋರಾಟ ನಿರಂತರವಾಗಿ ನಡೆಯುತ್ತಿರುವುದರಲ್ಲಿ ಶಿವಕುಮಾರ್ ಅವರ ಪಾತ್ರ ದೊಡ್ಡದು. ಜಿಲ್ಲೆ, ತಾಲ್ಲೂಕುಗಳ ಮಟ್ಟದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಹುರಿದುಂಬಿಸಿ ಹೋರಾಟದಲ್ಲಿ ನಿರಂತರತೆ ಕಾಯ್ದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ ಅವರು.

ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಆಟೊ, ಟ್ಯಾಕ್ಸಿ ಚಾಲಕರು, ಅಸಂಘಟಿತ ವಲಯದ ಕಾರ್ಮಿಕರು, ನೇಕಾರರು, ಕುಂಬಾರರು, ಕ್ಷೌರಿಕರು, ಚಮ್ಮಾರರು, ಕಮ್ಮಾರರು ಸೇರಿದಂತೆ ಸಾಂಪ್ರದಾಯಿಕ ವೃತ್ತಿ ಮಾಡುವವರು, ತೃತೀಯ ಲಿಂಗಿಗಳು ಸೇರಿದಂತೆ ಹಲವರು ತಮ್ಮ ಬೇಡಿಕೆಗಳ ಪರವಾಗಿ ಧ್ವನಿಯಾಗುವಂತೆ ಮತ್ತು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವಂತೆ ಕೆಪಿಸಿಸಿ ಅಧ್ಯಕ್ಷರ ಬಳಿ ಮನವಿ ಹೊತ್ತು ಬರುತ್ತಿದ್ದಾರೆ. ಇದು ಶಿವಕುಮಾರ್ ಅವರ ಹೋರಾಟದ ಸ್ವಭಾವ ರಾಜ್ಯದಲ್ಲಿ ವಿಶ್ವಾಸ ಮೂಡಿಸಿರುವುದಕ್ಕೆ ನಿದರ್ಶನ.

2021ರ ಇಡೀ ವರ್ಷ ರಾಜ್ಯದಲ್ಲಿ ನಡೆಸಬೇಕಾಗಿರುವ ಹೋರಾಟದ ಕಾರ್ಯಸೂಚಿಯನ್ನು ಕೆಪಿಸಿಸಿ ಅಧ್ಯಕ್ಷ ಸಿದ್ಧಪಡಿಸಿಕೊಂಡಿದ್ದಾರೆ. ಆ ಮೂಲಕ ರಾಜ್ಯದಲ್ಲಿ ಜನರ ಪರವಾದ ಧ್ವನಿಯನ್ನು ಜೀವಂತವಾಗಿ ಇಡಲು ಶಿವಕುಮಾರ್ ಸಜ್ಜಾಗಿದ್ದಾರೆ.

'ಕಾರ್ಯಕರ್ತ ಮೊದಲು' ಎಂಬ ಪರಿಕಲ್ಪನೆಯನ್ನು ಪರಿಚಯಿಸಿದ ಸಾರಥಿ

ಪಕ್ಷ ಸಂಘಟನೆಗೆ ತಂತ್ರಜ್ಞಾನದ ಸ್ಪರ್ಶ

ಬೆಂಗಳೂರು: ಉತ್ಸಾಹಿ ನೇತಾರ ಡಿ.ಕೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾದ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನಾ ಕಾರ್ಯವಿಧಾನವೂ ಬದಲಾಗಿದೆ. ಪಕ್ಷನಿಷ್ಠೆಯನ್ನೇ ಆಧಾರವಾಗಿಟ್ಟುಕೊಂಡು ಕಾರ್ಯಕರ್ತರಿಗೆ ಆದ್ಯತೆ ನೀಡುವ ಕೆಲಸದ ಜತೆಯಲ್ಲೇ, ಕೋವಿಡ್‌ನಂತಹ ಸವಾಲುಗಳ ನಡುವೆ ಕಾರ್ಯಕರ್ತರು ಮತ್ತು ಜನರನ್ನು ತಲುಪಲು ತಂತ್ರಜ್ಞಾನವನ್ನು ಬಳಸಿಕೊಳ್ಳುವ ಹೊಸ ವಿಧಾನವನ್ನೂ ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲಾಗಿದೆ.

ಕಾಂಗ್ರೆಸ್ ಅನ್ನು 'ಕಾರ್ಯಕರ್ತರ ಪಡೆ' (ಕೇಡರ್) ಆಧಾರಿತ ಪಕ್ಷವನ್ನಾಗಿ ಪರಿವರ್ತಿಸುವ ಮಹತ್ವಾಕಾಂಕ್ಷೆಯೊಂದಿಗೆ ಶಿವಕುಮಾರ್ ಕೆಲಸ ಮಾಡುತ್ತಿದ್ದಾರೆ. ಈ ಪಕ್ಷದ ಎಲ್ಲ ಮುಖಂಡರು, ನಾಯಕರು ಕೂಡ ತಾವು ಪ್ರತಿನಿಧಿಸುವ ಬ್ಲಾಕ್ ಮಟ್ಟದ ಸಮಿತಿಗಳ ಹಂತದಿಂದಲೇ ಪಕ್ಷ ಸಂಘಟನೆಯಲ್ಲಿ ಸಕ್ರಿಯರಾಗಬೇಕು ಎಂಬ ಆದೇಶ ಹೊರಡಿಸಿದ್ದಾರೆ.

ಬ್ಲಾಕ್ ಹಂತದಿಂದ ಸಕ್ರಿಯರಾಗಿದ್ದವರಿಗಷ್ಟೇ ಪಕ್ಷದ ಪದಾಧಿಕಾರಿಗಳ ಆಯ್ಕೆಯಲ್ಲಿ ಸ್ಥಾನ ನೀಡುವ ಯೋಚನೆಯನ್ನು ಹರಿಯಬಿಟ್ಟಿರುವ ಅವರು, ಕಾರ್ಯಕರ್ತರಲ್ಲಿ ಸಂಚಲನ ಮೂಡಿಸಿದ್ದಾರೆ. ವಿವಿಧ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಆಯ್ಕೆಗೂ ಮುನ್ನ ಸ್ಥಳೀಯ ಕಾರ್ಯಕರ್ತರ ಅಭಿಪ್ರಾಯ ಆಲಿಸುವ ಪದ್ಧತಿಯನ್ನೂ ಪ್ರಾಯೋಗಿಕವಾಗಿ ಪರಿಚಯಿಸಿದ್ದಾರೆ. ಇದಕ್ಕಾಗಿಯೇ ಎಲ್ಲ ಕಂದಾಯ ವಿಭಾಗಗಳಲ್ಲೂ 'ಸಂಕಲ್ಪ ಸಮಾವೇಶ' ನಡೆಸಿದ್ದಾರೆ.

'ಕಾಂಗ್ರೆಸ್ ಇತಿಹಾಸ ದೇಶದ ಇತಿಹಾಸ', 'ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ' ಎಂಬ ಮಾತುಗಳನ್ನು ಸದಾಕಾಲ ಪುನರುಚ್ಚರಿಸುವ ಶಿವಕುಮಾರ್, 'ಕಾಂಗ್ರೆಸ್ ನಮ್ಮ ಧರ್ಮ' ಎಂಬ ಭಾವನೆಯನ್ನು ಕಾರ್ಯಕರ್ತರ ಮನದಾಳಕ್ಕೆ ಇಳಿಸಲು ಸತತ ಪ್ರಯತ್ನ ನಡೆಸುತ್ತಿದ್ದಾರೆ. ಸರ್ವಜನರನ್ನೂ ಪ್ರೀತಿಸಿ ಒಟ್ಟಿಗೆ ಕರೆದೊಯ್ಯುವ ಗುಣವನ್ನು ಕಾರ್ಯಕರ್ತರಲ್ಲಿ ಬೆಳೆಸುವುದಕ್ಕೆ ಅವಿರತವಾಗಿ ಶ್ರಮಿಸುತ್ತಿದ್ದಾರೆ.

ಟ್ಯಾಕ್ಸಿ, ಆಟೊ ಚಾಲಕರನ್ನು ಪಕ್ಷದತ್ತ ಸೆಳೆಯುವುದಕ್ಕಾಗಿಯೇ ಕೆಪಿಸಿಸಿಯಲ್ಲಿ ಪ್ರತ್ಯೇಕವಾಗಿ ಚಾಲಕರ ಘಟಕವನ್ನು ಅಸ್ತಿತ್ವಕ್ಕೆ ತರಲಾಗಿದೆ. ವಿವಿಧ ಮುಂಚೂಣಿ ಘಟಕಗಳ ಪದಾಧಿಕಾರಿಗಳ ಬದಲಾವಣೆ ಮಾಡಿ ಹೊಸ ಮುಖಗಳನ್ನು ಪರಿಚಯಿಸಿದ್ದಾರೆ. ಪಕ್ಷ ಮತ್ತು ಜನರ ಅಗತ್ಯಕ್ಕೆ ತಕ್ಕಂತೆ ಸ್ಪಂದಿಸುವ ಮನಸ್ಥಿತಿಯನ್ನು ಎಲ್ಲ ಘಟಕಗಳಲ್ಲೂ ರೂಪಿಸುವಲ್ಲಿ ಕೆಪಿಸಿಸಿ ಅಧ್ಯಕ್ಷರು ಯಶಸ್ಸು ಕಂಡಿದ್ದಾರೆ.

ಸಂಘಟನೆಗೆ ಡಿಜಿಟಲ್ ಸ್ಪರ್ಶ: ಕೋವಿಡ್‌ನಿಂದಾಗಿ ರಾಜಕೀಯ ಸಭೆ, ಸಮಾರಂಭಗಳನ್ನು ನಡೆಸಲಾಗದ ಸ್ಥಿತಿ ಇದೆ. 2020ರ ಮಾರ್ಚ್‌ನಲ್ಲಿ ಆರಂಭವಾದ ಈ ಬಿಕ್ಕಟ್ಟು ಇನ್ನೂ ಕೊನೆಯಾಗಿಲ್ಲ. ಆದರೆ, ಭೌತಿಕವಾಗಿ ಸಭೆಗಳನ್ನು ನಡೆಸಲು ಸಾಧ್ಯವಿಲ್ಲ ಎಂಬ ಕಾರಣವನ್ನೇ ಮುಂದಿಟ್ಟುಕೊಂಡು ಕೆಪಿಸಿಸಿ ಅಧ್ಯಕ್ಷರು ಕೈಕಟ್ಟಿ ಕುಳಿತಿಲ್ಲ.

ತಂತ್ರಜ್ಞಾನವನ್ನು ಬಳಸಿಕೊಂಡು ಪಕ್ಷದ ನಾಯಕರು, ಮುಖಂಡರು ಮತ್ತು ಕಾರ್ಯಕರ್ತರನ್ನು ತಲುಪುವ ಪ್ರಯತ್ನ ನಿರಂತರವಾಗಿ ನಡೆದಿದೆ. ಕೆಲವೊಮ್ಮೆ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿರುವ ಕೆಪಿಸಿಸಿ ಅಧ್ಯಕ್ಷರು, ಸಾರ್ವಜನಿಕರ ಜತೆಗಿನ ಸಂವಾದಕ್ಕೂ ಡಿಜಿಟಲ್ ವೇದಿಕೆಗಳನ್ನೇ ಬಳಸಿಕೊಳ್ಳುತ್ತಿದ್ದಾರೆ.

ಪದಗ್ರಹಣ ಸಮಾರಂಭದ ದಿನವೇ 'ಝೂಮ್' ತಂತ್ರಾಂಶವನ್ನು ಬಳಸಿಕೊಂಡು ರಾಜ್ಯದ ಹಳ್ಳಿ ಹಳ್ಳಿಗಳ ಕಾರ್ಯಕರ್ತರ ಜತೆ ಸಂಪರ್ಕ ಸಾಧಿಸಲಾಗಿತ್ತು. ಬಳಿಕ ನಿರಂತರವಾಗಿ ಶಾಸಕರು, ಸಂಸದರು, ಜಿಲ್ಲಾ ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು, ವಿವಿಧ ಹಂತಗಳ ಮುಖಂಡರ ಜತೆಗೆ 'ಝೂಮ್' ಸಭೆಗಳನ್ನು ನಡೆಸುತ್ತಿರುವ ಶಿವಕುಮಾರ್, ರಾಜ್ಯದ ಮೂಲೆ ಮೂಲೆಗಳಲ್ಲಿ ಪಕ್ಷ ಸಂಘಟನೆಯ ವಿಚಾರದಲ್ಲಿ ಇರುವ ಸಮಸ್ಯೆ, ಸವಾಲುಗಳ ಕುರಿತು ನೇರವಾಗಿ ಮಾಹಿತಿ ಪಡೆಯುತ್ತಿದ್ದಾರೆ. ಕುಗ್ರಾಮದಲ್ಲಿ ಕುಳಿತ ಕಾರ್ಯಕರ್ತರು ಕ್ಷಣಮಾತ್ರದಲ್ಲಿ ಕೆಪಿಸಿಸಿ ಅಧ್ಯಕ್ಷರ ಜತೆ ಸಂಪರ್ಕ ಸಾಧಿಸಿ, ಅಹವಾಲು ಹೇಳಿಕೊಳ್ಳಬಹುದಾದ ವ್ಯವಸ್ಥೆಯನ್ನು ಕಾಂಗ್ರೆಸ್‌ಗೆ ಪರಿಚಯಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷರ ಪ್ರಯತ್ನ ಮತ್ತು ಪ್ರೋತ್ಸಾಹದ ಫಲವಾಗಿ ಸಾಮಾಜಿಕ ಮಾಧ್ಯಮಗಳಲ್ಲೂ ಕಾಂಗ್ರೆಸ್ ಕಾರ್ಯಕರ್ತರ ಪಡೆ ಚುರುಕಾಗಿದೆ. ಸಾರಥಿಯ ಹಾದಿಯಲ್ಲೇ ಸಾಗುತ್ತಿರುವ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು, ಜನರನ್ನು ತಲುಪುವುದಕ್ಕೂ ತಂತ್ರಜ್ಞಾನವನ್ನು ಬಳಸಿಕೊಳ್ಳುವತ್ತ ಹೆಜ್ಜೆ ಇಟ್ಟಿದ್ದಾರೆ. ❖

ಕೆಪಿಸಿಸಿ ಕಚೇರಿಗೂ ಹೊಸ ಕಳೆ

ಡಿ.ಕೆ. ಶಿವಕುಮಾರ್ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಾದ ಬಳಿಕ, ಕೆಪಿಸಿಸಿ ಕಚೇರಿಗಳೂ ಹೊಸ ಕಳೆ ಬಂದಿದೆ. ಕ್ವೀನ್ಸ್ ರಸ್ತೆ ಮತ್ತು ರೇಸ್ ಕೋರ್ಸ್ ರಸ್ತೆಯಲ್ಲಿರುವ ಎರಡೂ ಕಚೇರಿಗಳು ಸುಣ್ಣ, ಬಣ್ಣ, ಹೊಸ ವಿನ್ಯಾಸದೊಂದಿಗೆ ಕಂಗೊಳಿಸುತ್ತಿವೆ.

ಕ್ವೀನ್ಸ್ ರಸ್ತೆಯ ಕಚೇರಿ ಎದುರು ಬೃಹತ್ ಟಿ.ವಿ ಪರದೆ ಅಳವಡಿಸಲಾಗಿದೆ. ರೇಸ್ ಕೋರ್ಸ್ ರಸ್ತೆಯ ಕಟ್ಟಡದ ಮುಂಭಾಗದಲ್ಲಿ ಆಕರ್ಷಕ ವಿನ್ಯಾಸದೊಂದಿಗೆ ಅಂದ ಹೆಚ್ಚಿಸಲಾಗಿದೆ. ಎರಡೂ ಕಡೆಗಳಲ್ಲಿ ಹೆಚ್ಚಿನ ಮೂಲಸೌಕರ್ಯ ಒದಗಿಸುವ ಮೂಲಕ ಕಚೇರಿಗಳನ್ನು ಸಂಪೂರ್ಣವಾಗಿ ಸಜ್ಜುಗೊಳಿಸಲಾಗಿದೆ.

ಕಟ್ಟಡಗಳು ಮಾತ್ರವಲ್ಲ ಕಾರ್ಯನಿರ್ವಹಣಾ ಶೈಲಿಯೂ ಬದಲಾಗಿದೆ. ಕಾಂಗ್ರೆಸ್ ಕಚೇರಿಯ ಸಿಬ್ಬಂದಿಯನ್ನು ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಸಜ್ಜುಗೊಳಿಸಲಾಗಿದೆ. ಪಕ್ಷದ ನಾಯಕರು, ಮುಖಂಡರ ಭೇಟಿಯ ಕುರಿತು ಖಚಿತ ಮಾಹಿತಿ ಒದಗಿಸುವ ವ್ಯವಸ್ಥೆ ಮಾಡಲಾಗಿದೆ.

ಸಂವಿಧಾನಕ್ಕೆ ಶ್ರೇಷ್ಠತೆಯ ಗೌರವ

ಡಾ.ಬಿ.ಆರ್. ಅಂಬೇಡ್ಕರ್ ಅವರಿಂದ ರಚಿಸಿರುವ ಸಂವಿಧಾನದ ಕುರಿತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅಪಾರ ಗೌರವ ಹೊಂದಿದ್ದಾರೆ. ಕೋಮುವಾದಿ ಸರ್ಕಾರಗಳು ಮತ್ತು ಶಕ್ತಿಗಳು ಸಂವಿಧಾನದ ವಿರುದ್ಧ ಅಪಸ್ವರ ಎತ್ತಿದಾಗ, ಅಪಪ್ರಚಾರ ನಡೆಸಿದಾಗಲೆಲ್ಲ ಅವರು ಬಲವಾಗಿ ಖಂಡಿಸಿದ್ದಾರೆ. ತಮ್ಮ ಪದಗ್ರಹಣದ ದಿನ ಸಂವಿಧಾನದ ಪೀಠಿಕೆಯನ್ನು ವಾಚಿಸುವ ಮೂಲಕ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ಪ್ರತಿಜ್ಞೆ ಮಾಡಿದ್ದರು. ಅದು ಸಂವಿಧಾನದ ಮೇಲೆ ಅವರಿಗೆ ಇರುವ ಅಪರಿಮಿತ ಗೌರವಕ್ಕೆ ಸಾಕ್ಷಿ.

ಲಾಕ್‌ಡೌನ್ ಮತ್ತಷ್ಟು ಸಡಿಲಗೊಳಿಸಲು ಸಿದ್ಧತೆ • ಬಿಬಿಎಂಪಿ– ಪೊಲೀಸ್ ಇಲಾಖೆ ಜಂಟಿ ಸಭೆ

ಕೋವಿಡ್: ನಿಗಾ ಇಡಲು 54 ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೊಸ ಕೋವಿಡ್ ಪ್ರಕರಣಗಳು ಪತ್ತೆಯಾಗುವ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಹಾಗಾಗಿ ಲಾಕ್‌ಡೌನ್ ಅನ್ನು ಮತ್ತಷ್ಟು ಸಡಿಲಗೊಳಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ.

ಲಾಕ್‌ಡೌನ್ ಇನ್ನಷ್ಟು ಸಡಿಲಗೊಳಿಸಿದ ಬಳಿಕವೂ ಕೋವಿಡ್ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಶನಿವಾರ ಸಮಾಲೋಚನೆ ನಡೆಸಿದರು.

54 ತಂಡಗಳ ರಚನೆ: ಸಾರ್ವಜನಿಕ ಸ್ಥಳಗಳಲ್ಲಿ ಜನ ಮಾಸ್ಕ್ ಧರಿಸುವುದು ಹಾಗೂ ಪರಸ್ಪರ ಅಂತರ ಕಾಯ್ದುಕೊಳ್ಳುವುದರ ಮೇಲೆ ನಿಗಾ ಇಡಲು 54 ತಂಡಗಳನ್ನು ಬಿಬಿಎಂಪಿ ರಚಿಸಿದೆ. ಪ್ರತಿ ತಂಡದಲ್ಲಿ ನಾಲ್ವರು ಮಾರ್ಷಲ್‌ಗಳಿರುತ್ತಾರೆ. ಜನದಟ್ಟಣೆಯ ಸ್ಥಳಗಳಲ್ಲಿ ಅವರು ಜನ ಕೋವಿಡ್ ಮಾರ್ಗಸೂಚಿ ಪಾಲಿಸುವಂತೆ ಮಾಡಲು ಕ್ರಮಕೈಗೊಳ್ಳಲಿದ್ದಾರೆ.

ಕೋವಿಡ್ ನಿಯಮಗಳ ಉಲ್ಲಂಘನೆ ಹೆಚ್ಚಿನ ಪ್ರಮಾಣದಲ್ಲಿ ನಡೆಯುವ ಸ್ಥಳಗಳಲ್ಲಿ ಆಯಾ ವಲಯದ ಹಿರಿಯ ಅಧಿಕಾರಿಗಳು, ಆರೋಗ್ಯಾಧಿಕಾರಿ, ವೈದ್ಯಾಧಿಕಾರಿಗಳನ್ನು ಒಳಗೊಂಡ ತಂಡವು ಕಾರ್ಯಾಚರಣೆ ನಡೆಸಲಿದೆ. ಜನಜಂಗುಳಿಗೆ ಕಾರಣವಾಗುವ ಸ್ಥಳಗಳ ಪರಿಶೀಲನೆ ನಡೆಸಲಿದೆ. ಅಗತ್ಯಬಿದ್ದರೆ, ಮಳಿಗೆಗಳಿಗೆ ನೋಟಿಸ್ ನೀಡುವುದಲ್ಲದೇ ಬೀಗಮುದ್ರೆಯನ್ನೂ ಹಾಕಲಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಬಿಬಿಎಂಪಿ ವ್ಯಾಪ್ತಿಯಲ್ಲಿ ತಿಂಗಳ ಹಿಂದೆ ನಿತ್ಯ 20 ಸಾವಿರ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿದ್ದವು. ಈಗ 600 ರಿಂದ 700 ಪ್ರಕರಣಗಳು ಮಾತ್ರ ಪತ್ತೆಯಾಗುತ್ತಿವೆ. ಹಾಗಾಗಿ ಮುಂದಿನ ದಿನಗಳಲ್ಲಿ ನಗರದಲ್ಲಿ ಎಲ್ಲಾ ವಹಿವಾಟುಗಳಿಗೆ ವಿನಾಯ್ತಿ ಸಿಗಲಿದೆ. ಬಳಿಕ ಕೋವಿಡ್ ನಿಯಂತ್ರಿಸಲು ಪಾಲಿಕೆ ಮೇಲೆ ಹೆಚ್ಚು ಜವಾಬ್ದಾರಿ ಬರುತ್ತದೆ. ಎಲ್ಲಾ ನಾಗರಿಕರು ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿದಾಗ ಮಾತ್ರ ನಾವು ಕೋವಿಡ್ ಸೋಂಕನ್ನು ನಿಯಂತ್ರಿಸಲು ಸಾಧ್ಯ. ಆಗ ಮಾತ್ರ ನಗರದ ಎಲ್ಲ ಜನರೂ ಸುರಕ್ಷಿತವಾಗಿರಬಹುದು' ಎಂದರು.

'ನಗರದ ಸಾರ್ವಜನಿಕ ಸ್ಥಳ, ವಹಿವಾಟು ನಡೆಯುವ ಸ್ಥಳ, ಮದುವೆ ಸಮಾರಂಭ, ಮಾರುಕಟ್ಟೆ ಪ್ರದೇಶಗಳಲ್ಲಿ ಕೋವಿಡ್ ನಿಯಮಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಮಾರ್ಷಲ್‌ಗಳು, ಗೃಹರಕ್ಷಕ ದಳದ ಸಿಬ್ಬಂದಿ ಹಾಗೂ ಪೊಲೀಸ್ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳ ಪಾಲನೆ ಬಗ್ಗೆ ನಾಗರಿಕರಲ್ಲಿ ತಿಳಿವಳಿಕೆ ಮೂಡಿಸಬೇಕು. ಕೋವಿಡ್ ನಿಯಂತ್ರಣ ನಿಯಮಗಳು ಪಾಲಿಸದವರಿಗೆ ದಂಡ ವಿಧಿಸಬೇಕು' ಎಂದು ಸೂಚಿಸಿದರು.

ಬಿಬಿಎಂಪಿಯ ವಿಶೇಷ ಆಯುಕ್ತ (ಕಸ ವಿಲೇವಾರಿ) ಹರೀಶ್ ಕುಮಾರ್, ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್, ಹೆಚ್ಚುವರಿ ಪೊಲೀಸ್ ಆಯುಕ್ತ ಮುರುಗನ್, ಬಿಬಿಎಂಪಿ ಜಂಟಿ ಆಯುಕ್ತ (ಕಸ ವಿಲೇವಾರಿ) ಸರ್ಫರಾಜ್ ಖಾನ್ ವಿವಿಧ ವಲಯಗಳ ಜಂಟಿ ಆಯುಕ್ತರು ಮತ್ತು ಮುಖ್ಯ ಎಂಜಿನಿಯರ್‌ಗಳು, ಮಾರ್ಷಲ್‌ಗಳ ಮೇಲ್ವಿಚಾರಕರು, ಮಾರ್ಷಲ್‌ಗಳು ಹಾಗೂ ಇತರ ಅಧಿಕಾರಿಗಳು ಭಾಗವಹಿಸಿದರು.

ಸಭೆಯಲ್ಲಿ ಭಾಗವಹಿಸಿದ ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು

'ಕೋವಿಡ್ ಯೋಧರ ಕರ್ತವ್ಯಕ್ಕೆ ಅಡ್ಡಿ– ಕಠಿಣ ಕ್ರಮ'

'ಕೋವಿಡ್ ನಿಯಂತ್ರಣ ಮಾರ್ಗಸೂಚಿ ಪಾಲನೆ ಬಗ್ಗೆ ನಿಗಾ ಇಡುವ ಮಾರ್ಷಲ್‌ಗಳು ಮತ್ತು ಇತರ ಕೋವಿಡ್ ಯೋಧರ ಮೇಲೆ ಜನ ಹಲ್ಲೆ ಮಾಡಿದರೆ, ವಾಗ್ವಾದ ನಡೆಸಿದರೆ ಅಥವಾ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದರೆ, ಅವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಿದ್ದೇವೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲಪಂತ್ ಎಚ್ಚರಿಸಿದರು.

'ಕೋವಿಡ್ ವಿರುದ್ಧದ ಸಮರದಲ್ಲಿ ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆ ಒಟ್ಟಾಗಿ ಕಾರ್ಯನಿರ್ವಹಿಸಿದೆ. ಇದನ್ನು ಮುಂದುವರಿಸುವ ಬಗ್ಗೆ ಚರ್ಚೆ ನಡೆಸಿದ್ದೇವೆ. ಬಿಬಿಎಂಪಿ ಕೈಗೊಳ್ಳುವ ನಿರ್ಧಾರಗಳ ಜಾರಿಗೆ ನಾವು ನೆರವಾಗಲಿದ್ದೇವೆ. ಮಾರ್ಷಲ್‌ಗಳಿಗೆ ಪೊಲೀಸ್ ಸಿಬ್ಬಂದಿಯು ಭದ್ರತೆ ಕಲ್ಪಿಸಲಿದ್ದಾರೆ' ಎಂದರು.

'ಮದುವೆ ಮತ್ತಿತರ ಸಮಾರಂಭಗಳು, ಮಾರುಕಟ್ಟೆಯಂತಹ ಪ್ರದೇಶಗಳೂ ಸೇರಿ ಎಲ್ಲ ಸಾರ್ವಜನಿಕ ಪ್ರದೇಶಗಳಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯ. ನಿಯಮ ಉಲ್ಲಂಘನೆ ಅವಕಾಶ ನೀಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಪಾದಚಾರಿ ಮಾರ್ಗ– ಒತ್ತುವರಿ ತೆರವು'

'ಬಿಬಿಎಂಪಿ ವ್ಯಾಪ್ತಿಯ ಪಾದಚಾರಿ ಮಾರ್ಗಗಳಲ್ಲಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅವಕಾಶವಿರಬೇಕು. ಆದರೆ, ನಗರದ ಬಹುತೇಕ ಪಾದಚಾರಿ ಮಾರ್ಗಗಳಲ್ಲಿ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ತಳ್ಳುಗಾಡಿ ವ್ಯಾಪಾರ ಫುಟ್‌ಪಾತ್‌ಗಳಲ್ಲೇ ನಡೆಯುತ್ತಿದೆ. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಾಶಿ ಹಾಕಲಾಗುತ್ತದೆ. ಪಾಲಿಕೆ ಅಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿ ಜಂಟಿಯಾಗಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಬೇಕಿದೆ' ಎಂದು ಗೌರವ್ ಗುಪ್ತ ತಿಳಿಸಿದರು.

ಕಮಲಪಂತ್, 'ಪೊಲೀಸ್ ಸಿಬ್ಬಂದಿ ಹಲವೆಡೆ ಸ್ವಯಂಪ್ರೇರಿತವಾಗಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಈ ಕಾರ್ಯವನ್ನು ಇನ್ನಷ್ಟು ವ್ಯಾಪಕವಾಗಿ ನಡೆಸಲು ಪಾಲಿಕೆಗೆ ಪೊಲೀಸ್ ಸಂಪೂರ್ಣ ಸಹಕಾರ ನೀಡಲಿದೆ' ಎಂದು ಭರವಸೆ ನೀಡಿದರು.

ಮಾರಕಾಸ್ತ್ರಗಳಿಂದ ಕೊಚ್ಚಿ ಗಾರೆ ಕಾರ್ಮಿಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾರೆ ಕಾರ್ಮಿಕರೊಬ್ಬರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಕಾವಲ್ ಬೈರಸಂದ್ರದ ಅಂಬೇಡ್ಕರ್ ಕಾಲೇಜು ಬಳಿ ಶುಕ್ರವಾರ ರಾತ್ರಿ ನಡೆದಿದೆ. ಕೃಷ್ಣಮೂರ್ತಿ (30) ಕೊಲೆಯಾದ ವ್ಯಕ್ತಿ.

'ಕೃಷ್ಣಮೂರ್ತಿ ಹಾಗೂ ಅವರ ಸಂಬಂಧಿ ನಾಗರಾಜು ಊಟದ ನಂತರ ವಾಯುವಿಹಾರಕ್ಕೆಂದು ಮನೆಯಿಂದ ರಾತ್ರಿ ಹೊರಬಂದಿದ್ದರು. ಈ ವೇಳೆ ಮೂವರು ದುಷ್ಕರ್ಮಿಗಳ ತಂಡ ಕೃಷ್ಣಮೂರ್ತಿ ಅವರ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿದೆ.'

'ತಡೆಯಲು ಬಂದ ನಾಗರಾಜ್ ಮೇಲೂ ಅವರು ಹಲ್ಲೆ ನಡೆಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಗಳ ಸುಳಿವು ಸಿಕ್ಕಿದೆ. ಕೊಲೆಯಾದ ಸ್ಥಳದ ಅಕ್ಕಪಕ್ಕದಲ್ಲಿರುವ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಡಾ. ಶರಣಪ್ಪ ತಿಳಿಸಿದ್ದಾರೆ.

'ವೈದ್ಯಕೀಯ ಸೌಕರ್ಯ ಸುಧಾರಣೆಗೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮೂರನೇ ಅಲೆ ಎದುರಿಸಲು ಸರ್ಕಾರ ಸರ್ವ ಸನ್ನದ್ಧವಾಗಿದೆ. ವೈದ್ಯಕೀಯ ಮೂಲ ಸೌಕರ್ಯ ಸುಧಾರಣೆಗೂ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸಿ.ಕೆ.ರಾಮಮೂರ್ತಿ ನೇತೃತ್ವದಲ್ಲಿ ಜಯನಗರದಲ್ಲಿ ಆಯೋಜಿಸಿದ್ದ ದಿನಸಿ ಕಿಟ್ ವಿತರಣೆ ಹಾಗೂ ಕೋವಿಡ್ ಯೋಧರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಶನಿವಾರ ಮಾತನಾಡಿದರು.

'ಕೋವಿಡ್ ಸಾಂಕ್ರಾಮಿಕ ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯದಲ್ಲಿ ವೈದ್ಯಕೀಯ ಮೂಲ ಸೌಕರ್ಯಗಳನ್ನು ಹೆಚ್ಚಿಸಲಾಗಿದೆ. ಲಸಿಕಾ ಅಭಿಯಾನ ಭರದಿಂದ ಸಾಗುತ್ತಿದ್ದು, ನಿತ್ಯ 3 ಲಕ್ಷದಿಂದ 4 ಲಕ್ಷ ಮಂದಿಗೆ ಲಸಿಕೆ ನೀಡಲಾಗುತ್ತಿದೆ. ಇನ್ನೂ ಹೆಚ್ಚು ಮಂದಿಗೆ ಲಸಿಕೆ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

'ಕೋವಿಡ್‌ನಿಂದ ಹಲವು ಸಂಕಷ್ಟಗಳು ಸೃಷ್ಟಿಯಾಗಿವೆ. ಆರ್ಥಿಕವಾಗಿ ಹಿಂದುಳಿದವರಿಗೆ ತುಂಬಾ ತೊಂದರೆಯಾಗಿದೆ. ಇದನ್ನು ಮನಗಂಡು ನಮ್ಮ ಸರ್ಕಾರವು ₹2,050 ಕೋಟಿ ಮೊತ್ತದ ವಿಶೇಷ ಪ್ಯಾಕೇಜ್ ಪ್ರಕಟಿಸಿದೆ. ತರಕಾರಿ ಹಾಗೂ ಹೂ ಬೆಳೆಗಾರರ ಆದಿಯಾಗಿ ಎಲ್ಲ ರೈತರು, ಟ್ಯಾಕ್ಸಿ ಹಾಗೂ ಮ್ಯಾಕ್ಸಿಕ್ಯಾಬ್ ಚಾಲಕರು, ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು ಹಾಗೂ ಕಲಾವಿದರಿಗೆ ಆರ್ಥಿಕ ನೆರವು ಒದಗಿಸಲಾಗಿದೆ. ಈಗಾಗಲೇ ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಲಾಗಿದೆ' ಎಂದು ತಿಳಿಸಿದರು.

'ಕೋವಿಡ್ ಮೊದಲ ಅಲೆಯ ವೇಳೆಯೂ ಸಾವಿರಾರು ಮಂದಿಗೆ ದಿನಸಿ ಕಿಟ್ ಹಂಚಿದ್ದ ಸಿ.ಕೆ.ರಾಮಮೂರ್ತಿ ಅವರು ಈ ಸಲವೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ನೆರವಾಗುವ ಮೂಲಕ ಮಾದರಿಯಾಗಿದ್ದಾರೆ' ಎಂದರು.

'ಕೋವಿಡ್ ನಿಯಂತ್ರಣಕ್ಕಾಗಿ ವೈದ್ಯರು, ಶುಶ್ರೂಷಕಿಯರು, ಪೊಲೀಸರು ಹಾಗೂ ಪೌರ ಕಾರ್ಮಿಕರು ಪ್ರಾಣ ಪಣಕ್ಕಿಟ್ಟು ದುಡಿಯುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಹಾತ್ಮ ಗಾಂಧಿ ಸೇವಾ ಟ್ರಸ್ಟ್‌ನ ಸಂಸ್ಥಾಪಕ ವಿನಯ್ ಗುರೂಜಿ, 'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಇಳಿ ವಯಸ್ಸಿನಲ್ಲೂ ಸರ್ಕಾರವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಸಚಿವರು ಹಾಗೂ ಪಾಲಿಕೆಯ ಮಾಜಿ ಸದಸ್ಯರು ಜೀವದ ಹಂಗು ತೊರೆದು ಕೆಲಸ ಮಾಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಸರ್ಕಾರವನ್ನು ದೂರುತ್ತಾ ಕೂರುವ ಬದಲು ಜನರು ಹೊಣೆಯರಿತು ಪರಿವರ್ತನೆಗೆ ನೆರವಾಗಬೇಕು. ಕೋವಿಡ್‌ನಿಂದಾಗಿ ತಂದೆ ತಾಯಿಯನ್ನು ಕಳೆದುಕೊಂಡು ಅನಾಥವಾಗಿರುವ ಮಕ್ಕಳಿಗಾಗಿ ಐ.ಟಿ ಉದ್ಯೋಗಿಗಳು ಕನಿಷ್ಠ ₹5 ಸಾವಿರ ನೀಡಿದರೆ ಅನುಕೂಲ. ಪಿತೃಶಾಪ ನಿವಾರಣೆಗಾಗಿ ನಾವು ಗೋಕರ್ಣಕ್ಕೆ ಹೋಗಿ ಪೂಜೆ ಮಾಡಿಸುತ್ತೇವೆ. ಆ ಹಣವನ್ನು ಅನಾಥ ಮಕ್ಕಳಿಗೆ ಮೀಸಲಿಟ್ಟರೆ ಕರ್ನಾಟಕವು ನಿಜವಾದ ಧರ್ಮಸ್ಥಳವಾಗಲಿದೆ' ಎಂದು ತಿಳಿಸಿದರು.

ಸಚಿವ ಆರ್.ಅಶೋಕ, ಸಂಸದ ತೇಜಸ್ವಿ ಸೂರ್ಯ, ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್.ರಮೇಶ್, ಪಾಲಿಕೆ ಮಾಜಿ ಸದಸ್ಯೆ ನಾಗರತ್ನ ರಾಮಮೂರ್ತಿ ಇದ್ದರು.

ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರು ಮಹಿಳೆಯರಿಗೆ ದಿನಸಿ ಕಿಟ್ ವಿತರಿಸಿದರು. ಕಂದಾಯ ಸಚಿವ ಆರ್‌. ಅಶೋಕ, ವಿನಯ್ ಗುರೂಜಿ, ಸಂಸದ ತೇಜಸ್ವಿ ಸೂರ್ಯ ಹಾಗೂ ಸಿ.ಕೆ. ರಾಮಮೂರ್ತಿ ಇದ್ದಾರೆ –ಪ್ರಜಾವಾಣಿ ಚಿತ್ರ

6 ತಿಂಗಳಲ್ಲಿ ಕೋವಿಡ್ ಲಸಿಕೆ: ನಿತ್ಯ 2.82 ಲಕ್ಷ ಡೋಸ್ ವಿತರಣೆ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ತಿಂಗಳಲ್ಲಿ ರಾಜ್ಯದ ಶೇ 65 ರಷ್ಟು ಜನರಿಗೆ ಕೋವಿಡ್ ಲಸಿಕೆ ಒದಗಿಸಬೇಕಾದರೆ ನಿತ್ಯ ಸರಾಸರಿ 2.82 ಲಕ್ಷ ಡೋಸ್ ಲಸಿಕೆಯನ್ನು ವಿತರಿಸಬೇಕು ಎಂದು ತಜ್ಞರ ಅಧ್ಯಯನವೊಂದು ಅಂದಾಜಿಸಿದೆ.

ರಾಜ್ಯದಲ್ಲಿ ಈವರೆಗೆ 2.36 ಕೋಟಿ ಡೋಸ್ ಲಸಿಕೆಯನ್ನು ವಿತರಿಸಲಾಗಿದೆ. ಅದರಲ್ಲಿ 1.95 ಕೋಟಿ ಮಂದಿ ಮೊದಲ ಡೋಸ್ ಹಾಗೂ 40.34 ಲಕ್ಷ ಮಂದಿ ಎರಡೂ ಡೋಸ್ ಲಸಿಕೆಯನ್ನು ಪಡೆದಿದ್ದಾರೆ.

ಪುಣೆಯ ರೆಕ್ಟರ್ ಹೆಲ್ತ್‌ಕೇರ್‌ನ ಬಬ್ಬ ಕ್ಲಿನಿಕಲ್ ಡಾಟಾ ವಿಜ್ಞಾನಿ ಹಾಗೂ ಬೆಂಗಳೂರಿನ ಎಚ್‌ಸಿಜಿ ಸಂಶೋಧನಾ ಮತ್ತು ಅಧ್ಯಯನ ಕೇಂದ್ರದ ಇಬ್ಬರು ತಜ್ಞರನ್ನು ಒಳಗೊಂಡ ತಂಡವು ಕೋವಿಡ್ ಲಸಿಕೆಗೆ ಸಂಬಂಧಿಸಿದ ಅಧ್ಯಯನ ಮಾದರಿಯನ್ನು ಅಭಿವೃದ್ಧಿಪಡಿಸಿದೆ. ಇದು ಜೂನ್ 30ಕ್ಕೆ ಅನ್ವಯವಾಗುವಂತೆ ಲೆಕ್ಕಹಾಕಿದೆ.

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 35ರಷ್ಟು ಮಂದಿ 18 ವರ್ಷದೊಳಗಿನವರಾಗಿರುವ ಕಾರಣ ಅವರನ್ನು ಈ ಅಧ್ಯಯನ ಮಾದರಿಗೆ ಒಳಪಡಿಸಿಲ್ಲ. ರಾಜ್ಯದಲ್ಲಿ ಜು.3ರಂದು 4.75 ಲಕ್ಷ ಡೋಸ್ ಲಸಿಕೆನು ವಿತರಿಸಲಾಗಿದೆ. ಜು.2ರಂದು 2.34 ಲಕ್ಷ ಡೋಸ್, ಜು.1ರಂದು 1.88 ಲಕ್ಷ ಡೋಸ್ ಲಸಿಕೆ ನೀಡಲಾಗಿತ್ತು.

'ದತ್ತಾಂಶದ ಪ್ರಕಾರ 45 ವರ್ಷ ಮೇಲ್ಪಟ್ಟವರಿಗೆ ಮೊದಲ ಡೋಸ್ ಲಸಿಕೆ ಒದಗಿಸಲು ಕರ್ನಾಟಕದಲ್ಲಿ ಆದ್ಯತೆ ನೀಡಲಾಗಿದೆ. ಉದಾಹರಣೆಗೆ ಜೂ. 30ರ ವೇಳೆಗೆ 1,40,836 ಮಂದಿಗೆ ಮೊದಲ ಡೋಸ್ ಲಸಿಕೆ ಒದಗಿಸಲಾಗಿದೆ. ಅದರಲ್ಲಿ 45,722 ಮಂದಿಗೆ ಮಾತ್ರ ಎರಡನೇ ಡೋಸ್ ನೀಡಲಾಗಿದೆ' ಎಂದು ಈ ಅಧ್ಯಯನ ಮಾದರಿಯಲ್ಲಿ ಕಾರ್ಯನಿರ್ವಹಿಸಿರುವ ಪುಣೆಯ ರೆಕ್ಟರ್ ಹೆಲ್ತ್‌ಕೇರ್‌ನ ವೈದ್ಯಕೀಯ ನಿರ್ದೇಶಕ ಮತ್ತು ಕ್ಲಿನಿಕಲ್ ಡೇಟಾ ವಿಜ್ಞಾನಿ ಡಾ. ಉಜ್ವಲ್ ರಾವ್ ತಿಳಿಸಿದರು.

'ಈ ದರವನ್ನು ಆಧರಿಸಿ ನಾವು ವಯಸ್ಕರಿಗೆ ಲಸಿಕೆ ಒದಗಿಸುವಿಕೆ ಬಗ್ಗೆ ವಿಶ್ಲೇಷಣೆ ಮಾಡಿದ್ದೇವೆ. ಪ್ರತಿನಿತ್ಯ ಕನಿಷ್ಠ 2.82 ಲಕ್ಷ ಡೋಸ್ ಲಸಿಕೆಯನ್ನು ಒದಗಿಸಿದಲ್ಲಿ ಮುಂಬರುವ ಡಿ.31ರೊಳಗೆ ರಾಜ್ಯದ ಎಲ್ಲ ವಯಸ್ಕರಿಗೆ ಲಸಿಕೆ ದೊರೆಯಲಿದೆ. ಲಸಿಕಾ ಅಭಿಯಾನಕ್ಕೆ ವೇಗ ನೀಡಿದಲ್ಲಿ ಮೂರನೇ ಅಲೆಯಲ್ಲಿ ಕಾಣಿಸುವ ರೂಪಾಂತರ ವೈರಾಣುವನ್ನು ಎದುರಿಸಲು ಸಾಧ್ಯವಾಗುತ್ತದೆ' ಎಂದು ಹೇಳಿದರು.



ಪ್ರೀತಿಸುವಂತೆ ಬೆದರಿಕೆ: ಬಂಧನ

ಬೆಂಗಳೂರು: ಪ್ರೀತಿಸುವಂತೆ ವಿದ್ಯಾರ್ಥಿನಿಯನ್ನು ಸದಾ ಪೀಡಿಸುತ್ತಿದ್ದ ಹಾಗೂ ಬೆದರಿಕೆ ಹಾಕಿದ್ದ ಆರೋಪದ ಮೇರೆಗೆ ಯುವಕನೊಬ್ಬನನ್ನು ಚಂದ್ರಾ ಬಡಾವಣೆ ಪೊಲೀಸರು ಬಂಧಿಸಿದ್ದಾರೆ.

ನಾಗರಬಾವಿ ನಿವಾಸಿ ರಾಜೇಶ್ (22) ಬಂಧಿತ ಆರೋಪಿ. ಯುವತಿ ಹಾಗೂ ಅವರ ಕುಟುಂಬದವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ.

ಸಿಲಿಂಡರ್ ಸ್ಫೋಟ: ಯುವಕ ಸಾವು

ಬೆಂಗಳೂರು: ಹುಟ್ಟುಹಬ್ಬ ಸಮಾರಂಭದ ಅಲಂಕಾರಕ್ಕಾಗಿ ಬಲೂನ್‌ಗಳಿಗೆ ಗ್ಯಾಸ್ ತುಂಬಿಸುತ್ತಿದ್ದ ವೇಳೆ ಸಿಲಿಂಡರ್ ಸ್ಫೋಟಗೊಂಡು, ವ್ಯಕ್ತಿಯೊಬ್ಬ ಮೃತಪಟ್ಟಿರುವ ಘಟನೆ ಅಶೋಕನಗರ ಠಾಣಾ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ತಮಿಳುನಾಡಿನ ದಿನೇಶ್ ಮೃತ ಯುವಕ. ಇಲ್ಲಿನ ರಿಚ್‌ಮಂಡ್ ವೃತ್ತದ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಆವರಣದಲ್ಲಿ ಬಲೂನ್‌ಗಳಿಗೆ ಗಾಳಿ ತುಂಬಿಸುತ್ತಿದ್ದಾಗ ಸಿಲಿಂಡರ್ ಏಕಾಏಕಿ ಸ್ಫೋಟಗೊಂಡು, ದಿನೇಶ್ ಅವರ ದೇಹ ಛಿದ್ರವಾಯಿತು ಎಂದು ಮೂಲಗಳು ತಿಳಿಸಿವೆ.

ಕೊಳೆಗೇರಿ ಮಕ್ಕಳಿಗೆ ಪಾಠ ಮಾಡಿದ ಎಚ್‌. ಕುಸುಮಾ

ಮಕ್ಕಳಿಗೆ ಪಾಠ ಮಾಡಿದ ಕುಸುಮಾ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಕಾಂಗ್ರೆಸ್ ನಾಯಕಿ ಎಚ್. ಕುಸುಮಾ ಅವರು, ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾತನ್ ನಗರ ಕೊಳೆಗೇರಿ ಪ್ರದೇಶಕ್ಕೆ ಶನಿವಾರ ಭೇಟಿ ನೀಡಿ, ಮಕ್ಕಳಿಗೆ ಪಾಠ ಮಾಡಿದರು.

ಇಲ್ಲಿನ ಪ್ರತಿ ಮನೆಗೆ ಭೇಟಿ ನೀಡಿದ ಅವರು, ಜನರ ಕಷ್ಟ, ಸುಖ ವಿಚಾರಿಸಿದರು. 'ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ' ಎಂದು ಪೋಷಕರಲ್ಲಿ ಮನವಿ ಮಾಡಿದರು.

'ಕೋವಿಡ್ ಬಿಕ್ಕಟ್ಟು ಆರಂಭವಾಗಿ ವರ್ಷವೇ ಕಳೆದಿದ್ದರೂ ಯಾವುದೇ ಆರೋಗ್ಯಾಧಿಕಾರಿಯಾಗಲಿ, ಆಶಾ ಕಾರ್ಯಕರ್ತರಾಗಲಿ ಭೇಟಿ ನೀಡಿಲ್ಲ. ಬಡವರ ಬಗ್ಗೆ ಸರ್ಕಾರ ತೀವ್ರ ನಿರ್ಲಕ್ಷ್ಯ ತೋರಿಸುತ್ತಿದೆ' ಎಂದು ಸ್ಥಳೀಯ ನಿವಾಸಿ ಲತಾ ಎಂಬುವರು ದೂರಿದರು.

'ಈ ಪ್ರದೇಶ ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿದ್ದರೂ ಇಲ್ಲಿನ ನಿವಾಸಿಗಳಿಗೆ ಪಡಿತರ ಕಾರ್ಡ್ ಇಲ್ಲ, ಆಧಾರ್ ಕಾರ್ಡ್ ಕೂಡ ಒದಗಿಸಿಲ್ಲ. ಶೌಚಾಲಯ ಸೌಲಭ್ಯ ಕೂಡ ಇಲ್ಲ. ಮಣ್ಣುಮಿಶ್ರಿತ ಕೊಳವೆಬಾವಿ ನೀರನ್ನೇ ಕುಡಿಯುವ ಪರಿಸ್ಥಿತಿ ಇದೆ' ಎಂದು ಕುಸುಮಾ ಅಸಮಾಧಾನ ವ್ಯಕ್ತಪಡಿಸಿದರು.

ಕ್ಯಾಬ್ ಡಿಕ್ಕಿಯಲ್ಲಿ ಅವಿತು ದರೋಡೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾಬ್‌ನ ಡಿಕ್ಕಿಯಲ್ಲಿ ಅಡಗಿ, ಪ್ರಯಾಣಿಕರಿಂದ ದರೋಡೆಗೆ ಸಂಚು ರೂಪಿಸಿದ್ದ ತಂಡದಲ್ಲಿದ್ದ ಒಬ್ಬನನ್ನು ಬಾಗಲೂರು ಪೊಲೀಸರು ಬಂಧಿಸಿದ್ದಾರೆ.

ದೆಹಲಿಯ ಕರ್ನಲ್ ಬಹದ್ದೂರ್ ಯಾದವ್ ಅವರ ದರೋಡೆಗೆ ದುಷ್ಕರ್ಮಿಗಳು ಸಂಚು ರೂಪಿಸಿದ್ದರು.

ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬಹದ್ದೂರ್, ದೆಹಲಿಯಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಗುರುವಾರ ರಾತ್ರಿ ಬಂದಿದ್ದರು. ಕ್ಯಾಬ್ ಹತ್ತಿ ಶಿವಾಜಿನಗರಕ್ಕೆ ಕರೆದೊಯ್ಯುವಂತೆ ಚಾಲಕನಿಗೆ ಸೂಚಿಸಿದ್ದರು. ಚಾಲಕ ಟೋಲ್ ರಸ್ತೆಯ ಬದಲಿಗೆ ಬೇರೊಂದು ಮಾರ್ಗದಲ್ಲಿ ಅವರನ್ನು ಕರೆದೊಯ್ದಿದ್ದ.

ಬೇಗೂರು ವೃತ್ತದ ಮೂಲಕ ಸಾಗಿ ನಿರ್ಜನ ಪ್ರದೇಶದ ಬಳಿ ಕಾರು ನಿಲ್ಲಿಸಿದ್ದ. ಇದನ್ನು ಪ್ರಶ್ನಿಸಿದಾಗ, ಡಿಕ್ಕಿಯಲ್ಲಿ ಸದ್ದಾಗುತ್ತಿದ್ದು, ಪರಿಶೀಲಿಸುವುದಾಗಿ ಡಿಕ್ಕಿ ತೆರೆದಿದ್ದ. ಅದರಲ್ಲಿ ಅವಿತಿದ್ದ ಇಬ್ಬರು ಚಾಕು ಹಿಡಿದು ಬಹದ್ದೂರ್ ಅವರನ್ನು ಬೆದರಿಸಿ, ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು.

'ಅದೇ ಮಾರ್ಗದಲ್ಲಿ ಗಸ್ತಿನಲ್ಲಿದ್ದ ಪೊಲೀಸರ ಹೊಯ್ಸಳ ವಾಹನ ಅನುಮಾನಾಸ್ಪದವಾಗಿ ನಿಂತಿದ್ದ ಈ ಕಾರಿನ ಬಳಿಗೆ ತೆರಳಿತ್ತು. ಪೊಲೀಸರನ್ನು ಕಂಡು ಮೂವರೂ ಪರಾರಿಯಾಗಲು ಯತ್ನಿಸಿದ್ದರು. ಅವರನ್ನು ಬೆನ್ನಟ್ಟಿದಾಗ ಒಬ್ಬ ಸಿಕ್ಕಿಬಿದ್ದ, ಇಬ್ಬರು ತಪ್ಪಿಸಿಕೊಂಡರು' ಎಂದು ಪೊಲೀಸರು ತಿಳಿಸಿದರು.

'ಕಾರಿನಲ್ಲಿ ಪ್ರಯಾಣಿಸುವವರನ್ನು ದರೋಡೆ ಮಾಡಲು ಚಾಲಕ ಹಾಗೂ ಆರೋಪಿಗಳು ಮೊದಲೇ ಸಂಚು ರೂಪಿಸಿದ್ದರು. ಇದಕ್ಕಾಗಿ ಒಂದು ಗಂಟೆಗೂ ಮೊದಲು ಡಿಕ್ಕಿಯಲ್ಲಿ ಇಬ್ಬರನ್ನು ಕೂರಿಸಲಾಗಿತ್ತು' ಎಂದು ಬಂಧಿತ ವ್ಯಕ್ತಿ ವಿಚಾರಣೆ ವೇಳೆ ತಿಳಿಸಿದ್ದಾನೆ. ಕ್ಯಾಬ್ ಜಪ್ತಿ ಮಾಡಲಾಗಿದ್ದು, ತಲೆಮರೆಸಿಕೊಂಡಿರುವ ಇಬ್ಬರಿಗಾಗಿ ಶೋಧ ಮುಂದುವರಿದಿದೆ' ಎಂದೂ ಮಾಹಿತಿ ನೀಡಿದರು.

ಬಂಕ್ ಸಿಬ್ಬಂದಿಗೆ ಮಚ್ಚು ತೋರಿಸಿ ದರೋಡೆ

ಪೆಟ್ರೋಲ್ ಹಾಕಿಸಿಕೊಳ್ಳುವ ನೆಪದಲ್ಲಿ ಬೈಕ್‌ಗಳಲ್ಲಿ ಬಂದಿದ್ದ ದುಷ್ಕರ್ಮಿಗಳು, ಪೆಟ್ರೋಲ್ ಬಂಕ್ ಸಿಬ್ಬಂದಿಗೆ ಮಚ್ಚು ತೋರಿಸಿ, ಅವರ ಬಳಿಯಿದ್ದ ಹಣ ದೋಚಿ ಪರಾರಿಯಾಗಿರುವ ಘಟನೆ ಭಾರತಿನಗರ ಠಾಣಾ ವ್ಯಾಪ್ತಿಯಲ್ಲಿ ಶನಿವಾರ ನಡೆದಿದೆ.

'ವಿನೋದ್ ಆಟೊ ಸರ್ವೀಸ್ ಪೆಟ್ರೋಲ್ ಬಂಕ್‌ಗೆ ಶನಿವಾರ ಬೆಳಿಗ್ಗೆ 3 ಬೈಕ್‌ಗಳಲ್ಲಿ 7 ಮಂದಿ ಬಂದಿದ್ದರು. ಅಲ್ಲಿದ್ದವರನ್ನು ಹೆದರಿಸಿದ ದುಷ್ಕರ್ಮಿಗಳು, ಬಿಲ್ ಕಲೆಕ್ಟರ್ ಬಳಿ ಇದ್ದ ₹43 ಸಾವಿರ ಕಸಿದು ಪರಾರಿಯಾಗಿದ್ದಾರೆ. ಈ ಘಟನೆ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

'ಘಟನೆ ನಡೆದ ವೇಳೆ ಒಬ್ಬರೇ ಸಿಬ್ಬಂದಿ ಹೊರಗಿದ್ದರು. ಇಬ್ಬರು ಕಚೇರಿಯಲ್ಲಿದ್ದರು. ದುಷ್ಕರ್ಮಿಗಳು ಪರಾರಿಯಾಗುತ್ತಿದ್ದಾಗ ಸಿಬ್ಬಂದಿ ಕೂಗಿಕೊಂಡಿದ್ದಾರೆ. ಉಳಿದವರು ಸ್ಥಳಕ್ಕೆ ಧಾವಿಸಿ ದುಷ್ಕರ್ಮಿಗಳನ್ನು ಹಿಡಿಯಲು ಯತ್ನಿಸಿದರೂ ಬೈಕ್‌ಗಳಲ್ಲಿ ತಪ್ಪಿಸಿಕೊಂಡಿದ್ದಾರೆ' ಎಂದು ಪೆಟ್ರೋಲ್ ಬಂಕ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಅಪರಾಧ ಸುದ್ದಿ



ಸಿಂಗನಾಯಕನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿಗೆ 6,316 ಮರ ಕಡಿಯುವುದಕ್ಕೆ ವಿರೋಧ

'ಕೆರೆಗಳನ್ನು ಕಾಂಕ್ರಿಟ್ ಕೊಳಗಳನ್ನಾಗಿಸದಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವೃದ್ಧಿ ಹಾಗೂ ಪುನಶ್ಚೇತನದ ನೆಪದಲ್ಲಿ ಕೆರೆಗಳನ್ನು ಕಾಂಕ್ರಿಟ್ ಕೊಳಗಳನ್ನಾಗಿ ಪರಿವರ್ತಿಸಬೇಡಿ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಪ್ರಾಧ್ಯಾಪಕ ಡಾ.ಟಿ.ವಿ.ರಾಮಚಂದ್ರ ಕೋರಿದರು.

ನಮ್ಮ ಬೆಂಗಳೂರು ಪ್ರತಿಷ್ಠಾನವು 'ಸಿಂಗನಾಯಕನಹಳ್ಳಿ ಕೆರೆಯ ಪುನಶ್ಚೇತನಕ್ಕಾಗಿ ಮರಗಳಿಗೆ ಕೊಡಲಿ ಏಟು ಬೇಡ' ವಿಷಯದ ಕುರಿತು ಆನ್‌ಲೈನ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಚರ್ಚೆಯಲ್ಲಿ ಅವರು ಮಾತನಾಡಿದರು.

'ಈ ಯೋಜನೆ ಬಗ್ಗೆ ಆಕ್ಷೇಪವಿಲ್ಲ. ಆದರೆ ಇದನ್ನು ಅನುಷ್ಠಾನಗೊಳಿಸುತ್ತಿರುವ ಕ್ರಮ ಸರಿ ಇಲ್ಲ. ಪೈಪ್‌ವಾಲಾಗಳ ಮಾಫಿಯಾ ಇದರ ಹಿಂದೆ ಕೆಲಸ ಮಾಡುತ್ತಿದೆ. ಕೆರೆಯ ಸಮಗ್ರತೆಗೆ ಧಕ್ಕೆ ಬಾರದ ಹಾಗೆ ಯೋಜನೆ ಕೈಗೊಳ್ಳಬೇಕು. ಪುನಶ್ಚೇತನದ ಉದ್ದೇಶದಿಂದ ಮರಗಳ ಹನನ ಸಲ್ಲದು. ಇದರಿಂದ ಮುಂದಿನ ಪೀಳಿಗೆಗೆ ತೊಂದರೆಯಾಗುತ್ತದೆ' ಎಂದರು.

'ಬೆಂಗಳೂರಿನಲ್ಲಿ ದೊಡ್ಡ ಮಟ್ಟದಲ್ಲಿ ಕೆರೆಗಳ ಒತ್ತುವರಿ ನಡೆಯುತ್ತಿದೆ. ಜಲಮೂಲಗಳು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿವೆ. ಅಂತರ್ಜಲ ಮಟ್ಟವೂ ಕುಸಿಯುತ್ತಿದೆ. ಇದರ ವಿರುದ್ಧ ಯುವ ಸಮುದಾಯ ಧ್ವನಿ ಎತ್ತಬೇಕು. ಪರಿಸರ ರಕ್ಷಣೆಗೆ ಸಾರ್ವಜನಿಕರ ಭಾಗವಹಿಸುವಿಕೆಯೂ ಬಹಳ ಅಗತ್ಯ. ಕೆರೆಯ ಮೀಸಲು ಪ್ರದೇಶಗಳಲ್ಲಿ ಗಿಡ ನೆಡುವಂತೆ ಸಲಹೆ ನೀಡಿದ್ದೇವೆ. ಇದಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ. ಏಜೆನ್ಸಿಗಳು ಹಾಗೂ ಅಲ್ಲಿ ಕಾರ್ಯನಿರ್ವಹಿಸುವ ಎಂಜಿನಿಯರ್‌ಗಳಿಗೆ ಪರಿಸರ ಹಾಗೂ ಜೀವವೈವಿಧ್ಯದ ಬಗ್ಗೆ ಕಾಳಜಿಯೇ ಇಲ್ಲ. ನಾವೆಲ್ಲಾ ಪರಿಸರ ಚಿಂತನೆ ಮೈಗೂಡಿಸಿಕೊಳ್ಳುವುದು ತುಂಬಾ ಅವಶ್ಯ' ಎಂದು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಪರಿಸರ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಎನ್.ನಂದಿನಿ, 'ನಗರೀಕರಣ, ಜನಸಂಖ್ಯೆ ಹೆಚ್ಚಳ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಕೆರೆಗಳು ನಶಿಸಿಹೋಗುತ್ತಿವೆ. ಸಿಂಗನಾಯಕನಹಳ್ಳಿ ಕೆರೆಯು 400 ಎಕರೆ ಕೃಷಿ ಭೂಮಿಯಿಂದ ಆವೃತ್ತವಾಗಿದೆ. ಮಳೆ ನೀರು ಇದಕ್ಕೆ ಆಧಾರ. ಕೆಲ ಷರತ್ತುಗಳ ಮೇಲೆ ಕೆರೆಯನ್ನು ಪುನಶ್ಚೇತನಗೊಳಿಸಬೇಕು. ಕೆರೆಯ ನಡುವೆ ದ್ವೀಪ ನಿರ್ಮಿಸಿ ಆ ಮೂಲಕ ಜೀವ ಸಂಕುಲದ ಉಳಿವಿಗೆ ಮುಂದಾಗಬೇಕು' ಎಂದು ಸಲಹೆ ನೀಡಿದರು.

ಸಿಂಗನಾಯಕನಹಳ್ಳಿ ಕೆರೆ ಪುನಃಶ್ಚೇತನಕ್ಕೆ 6,316 ಮರಗಳನ್ನು ಕಡಿಯಲು ಸಣ್ಣ ನೀರಾವರಿ ಇಲಾಖೆ ಮುಂದಾಗಿದೆ. ಈ ಮರಗಳನ್ನು ಕಡಿಯುವುದಕ್ಕೆ ಅನುಮತಿ ಕೋರಿ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದೆ.

ಬೈಕ್–ಟ್ಯಾಂಕರ್ ಡಿಕ್ಕಿ: ನಿರ್ದೇಶಕನ ಪುತ್ರ ಸಾವು

ಬೆಂಗಳೂರು: ಬೈಕ್‌ನಲ್ಲಿ ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸಿನಿಮಾ ನಿರ್ದೇಶಕರೊಬ್ಬರ ಪುತ್ರ ಮೃತಪಟ್ಟಿರುವ ಘಟನೆ ಬ್ಯಾಡರಹಳ್ಳಿಯ ನ್ಯೂ ಲಿಂಕ್ ರಸ್ತೆಯಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿದೆ.

ಮಯೂರ್ (20) ಮೃತಪಟ್ಟ ಬೈಕ್ ಸವಾರ. ಇವರು ನಟ ಹಾಗೂ ನಿರ್ದೇಶಕ ಸೂರ್ೋದಯ ಪೆರಂಪಳ್ಳಿ ಅವರ ಪುತ್ರ.

ಸ್ನೇಹಿತನ ಕೆಟಿಎಂ ಬೈಕ್ ಪಡೆದಿದ್ದ ಮಯೂರ್, ನ್ಯೂಲಿಂಕ್ ರಸ್ತೆಯಲ್ಲಿ ವೇಗವಾಗಿ ಚಾಲನೆ ಮಾಡುತ್ತಿದ್ದರು. ಈ ವೇಳೆ ನಿಯಂತ್ರಣ ತಪ್ಪಿ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದ್ದ ಪರಿಣಾಮ ಮಯೂರ್ ಸ್ಥಳದಲ್ಲೇ ಮೃತಪಟ್ಟಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

'ಮಯೂರ್ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಯಿತು. ಘಟನೆ ಸಂಬಂಧ ಟ್ಯಾಂಕರ್ ಚಾಲಕ ಮಣಿ ಎಂಬಾತನನ್ನು ವಶಕ್ಕೆ ಪಡೆಯಲಾಗಿದ್ದು, ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ಹೇಳಿದರು.

ಮೃತರ ತಂದೆ ಸೂರ್ೋದಯ ಅವರು 'ದೇಯಿ ಬೈದೆತಿ' ಎಂಬ ತುಳು ಹಾಗೂ ಕನ್ನಡ ಚಿತ್ರಗಳನ್ನು ನಿರ್ದೇಶಿಸಿದ್ದು, ನಟನೆಯೂ ಮಾಡಿದ್ದಾರೆ.

ಮಯೂರ್ ಚಾಲನೆ ಮಾಡಿದ್ದ ಬೈಕ್

ಅಕ್ರಮ ಚಟುವಟಿಕೆ ಅಡ್ಡೆಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿಯಾಗಿದ್ದ ಅವಧಿಯಲ್ಲಿ ನಗರದಾದ್ಯಂತ ಅಕ್ರಮವಾಗಿ ನಡೆಯುತ್ತಿದ್ದ ಜೂಜಾಟ, ಕ್ರಿಕೆಟ್ ಬೆಟ್ಟಿಂಗ್ ಹಾಗೂ ಮಟ್ಕಾ ಅಡ್ಡೆಗಳ ಮೇಲೆ ದಾಳಿ ಸಂಘಟಿಸಿದ್ದ ಸಿಸಿಬಿ ಪೊಲೀಸರು ಒಟ್ಟು 167 ಆರೋಪಿಗಳನ್ನು ಬಂಧಿಸಿ, ₹26.34 ಲಕ್ಷ ಜಪ್ತಿ ಮಾಡಿದ್ದಾರೆ.

ಜೆ.ಜೆ.ನಗರ ಠಾಣಾ ವ್ಯಾಪ್ತಿಯಲ್ಲಿ ಒಂದು ಕ್ರಿಕೆಟ್ ಬೆಟ್ಟಿಂಗ್ ಪ್ರಕರಣ ದಾಖಲಾಗಿತ್ತು. ಬ್ಯಾಟರಾಯನಪುರ ಠಾಣೆಯಲ್ಲಿ ಎರಡು ಜೂಜಾಟ ಪ್ರಕರಣ ಹಾಗೂ ಚಾಮರಾಜಪೇಟೆ, ಕೆ.ಜಿ.ಹಳ್ಳಿ, ಹಲಸೂರು ಗೇಟ್, ಉಪ್ಪಾರಪೇಟೆ, ಬಾಣಸವಾಡಿ, ರಾಜಗೋಪಾಲನಗರ, ಯಲಹಂಕ ನ್ಯೂ ಟೌನ್, ವಿಲ್ಸನ್ ಗಾರ್ಡನ್, ಚಿಕ್ಕಜಾಲ, ಕೆಂಗೇರಿ, ಮಹಾಲಕ್ಷ್ಮೀ ಬಡಾವಣೆ, ಕಮರ್ಷಿಯಲ್ ಸ್ಟ್ರೀಟ್, ಸದಾಶಿವನಗರ, ಕಲಾಸಿಪಾಳ್ಯ ಠಾಣೆಗಳಲ್ಲಿ ತಲಾ ಒಂದು ಜೂಜಾಟ ಪ್ರಕರಣಗಳು ಈ ಅವಧಿಯಲ್ಲಿ ದಾಖಲಾಗಿದ್ದವು.

ವೇಶ್ಯಾವಾಟಿಕೆ ಸ್ಥಳದ ಮೇಲೂ ದಾಳಿ: ಬಾಣಸವಾಡಿ, ಮಾರತ್ತಹಳ್ಳಿ, ಇಂದಿರಾನಗರ, ಚಂದ್ರಾ ಬಡಾವಣೆ, ಪುಟ್ಟೇನಹಳ್ಳಿ, ಕೋರಮಂಗಲ, ಮಲ್ಲೇಶ್ವರ, ಬಸವನಗುಡಿ, ಸುದ್ದಗುಂಟೆಪಾಳ್ಯ, ಹುಳಿಮಾವು ಠಾಣಾ ವ್ಯಾಪ್ತಿಗಳಲ್ಲಿ ಸ್ಪಾ, ಮಸಾಜ್ ಪಾರ್ಲರ್, ಮನೆ, ಹೋಟೆಲ್‌ಗಳು ಹಾಗೂ ಲಾಡ್ಜ್‌ಗಳಲ್ಲಿ ನಡೆಯುತ್ತಿದ್ದ ವೇಶ್ಯಾವಾಟಿಕೆ ಅಡ್ಡೆಗಳ ಮೇಲೆ ದಾಳಿ ನಡೆಸಿ, 51 ಮಂದಿ ಮಹಿಳೆಯರನ್ನು ರಕ್ಷಿಸಲಾಗಿದೆ. ದಾಳಿ ವೇಳೆ ₹1.41 ಲಕ್ಷ ಜಪ್ತಿ ಮಾಡಲಾಗಿದೆ ಎಂದು ಸಿಸಿಬಿ ಪ್ರಕಟಣೆ ತಿಳಿಸಿದೆ.

ಟ್ರಾನ್ಸ್‌ಫಾರ್ಮರ್ ಭಸ್ಮ: ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಕೋಲಾರ: ನಗರದ ಹಾರೋಹಳ್ಳಿ ಬಳಿಯಿರುವ ಕೆಪಿಟಿಸಿಎಲ್‌ನ 220 ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿನ 100 ಎಂವಿಎ (ಮೆಗಾ ವೋಲ್ಟ್ ಆ್ಯಂಪರ್ಸ್) ಟ್ರಾನ್ಸ್‌ಫಾರ್ಮರ್‌ಗೆ ಶನಿವಾರ ಬೆಂಕಿ ಹೊತ್ತಿಕೊಂಡು ಸಂಪೂರ್ಣ ಸುಟ್ಟು ಹೋಗಿದ್ದು, ಇಡೀ ಜಿಲ್ಲೆಯಲ್ಲಿ ಏಳು ತಾಸಿಗೂ ಹೆಚ್ಚು ಕಾಲ ವಿದ್ಯುತ್ ಸೇವೆಯಲ್ಲಿ ವ್ಯತ್ಯಯವಾಯಿತು.

ಈ ಕೇಂದ್ರದಿಂದ ಶ್ರೀನಿವಾಸಪುರ ಹೊರತುಪಡಿಸಿ ಜಿಲ್ಲೆಯ 5 ತಾಲ್ಲೂಕುಗಳಿಗೆ ವಿದ್ಯುತ್ ಪೂರೈಕೆಯಾಗುತ್ತದೆ. ತುಂಬಾ ಹಳೆಯದಾದ 100 ಎಂವಿಎ ಟ್ರಾನ್ಸ್‌ಫಾರ್ಮರ್ ಅನ್ನು ನಿಯಮಿತವಾಗಿ ಸರ್ವಿಸ್ ಮಾಡಲಾಗುತ್ತಿತ್ತು. ಆದರೆ, ಕೋವಿಡ್ ಹಿನ್ನೆಲೆಯಲ್ಲಿ ಆಸ್ಪತ್ರೆಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡಬೇಕಿದ್ದ ಕಾರಣ 3 ತಿಂಗಳಿಂದ ಈ ಟ್ರಾನ್ಸ್‌ಫಾರ್ಮರ್ ಅನ್ನು ಸರ್ವಿಸ್ ಮಾಡಿರಲಿಲ್ಲ.

₹ 15 ಕೋಟಿ ನಷ್ಟ: 'ಅಗ್ನಿ ಅನಾಹುತದಲ್ಲಿ ಸುಟ್ಟು ಹೋಗಿರುವ 100 ಎಂವಿಎ ಟ್ರಾನ್ಸ್‌ಫಾರ್ಮರ್ 20 ವರ್ಷದಷ್ಟು ಹಳೆಯದು. ಸುಮಾರು ₹ 15 ಕೋಟಿ ಮೌಲ್ಯದ ಆ ಟ್ರಾನ್ಸ್‌ಫಾರ್ಮರ್‌ನಲ್ಲಿ 40 ಸಾವಿರ ಲೀಟರ್ ಟ್ರಾನ್ಸಿಲಾ ಆಯಿಲ್ ಇತ್ತು. ಬುಷ್ಶಿಂಗ್ ಪ್ಲಾಷ್‌ನಿಂದ ಟ್ರಾನ್ಸ್‌ಫಾರ್ಮರ್‌ನಲ್ಲಿನ ಟ್ರಾನ್ಸಿಲಾ ಆಯಿಲ್‌ಗೆ ಬೆಂಕಿ ಹೊತ್ತಿಕೊಂಡು ಈ ಅನಾಹುತ ಸಂಭವಿಸಿದೆ' ಎಂದು ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಎಂಜಿನಿಯರ್ ನಟರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ದುರಹಂಕಾರಕ್ಕೆ ಮದ್ದಿಲ್ಲ'

ಮೈಸೂರು: 'ಯಾರಿಗೆ ದುರಹಂಕಾರ ಇರುತ್ತದೆಯೋ ಹಾಗೂ ಮಾಹಿತಿ ಇರುವುದಿಲ್ಲವೋ ಅದಕ್ಕೆ ಔಷಧವನ್ನು ನಮ್ಮ ದೇಶದಲ್ಲಿ ಇನ್ನೂ ಕಂಡು ಹಿಡಿದಿಲ್ಲ. ರಾಹುಲ್ ಗಾಂಧಿ ಅವರ ಸಮಸ್ಯೆಯೂ ಅದೇ' ಎಂದು ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ ಜೋಶಿ ಕಿಡಿಕಾರಿದರು.

ಸುತ್ತೂರು ಮಠದಲ್ಲಿ ಶನಿವಾರ ಸಂಜೆ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಡೀ ಜಗತ್ತಿನಲ್ಲೇ ಭಾರತದ ಕೋವಿಡ್ ಲಸಿಕೆ ಕಾರ್ಯಕ್ರಮ ಅತ್ಯಂತ ದೊಡ್ಡದು. ಈವರೆಗೆ 35 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ. ಜುಲೈನಲ್ಲಿ 12 ಕೋಟಿ ಜನರಿಗೆ ಲಸಿಕೆ ನೀಡುವುದಾಗಿ ಕೇಂದ್ರ ಆರೋಗ್ಯ ಸಚಿವರು ತಿಳಿಸಿದ್ದಾರೆ. 15 ದಿನಗಳ ಬಳಿಕ ರಾಹುಲ್ ಗಾಂಧಿ ಮಾತನಾಡಲಿ' ಎಂದು ಸಲಹೆ ನೀಡಿದರು.

'ಜು.19ರಿಂದ ಮಳೆಗಾಲದ ಅಧಿವೇಶನ ನಡೆಯಲಿದ್ದು, ಒಟ್ಟು 20 ಪ್ರಮುಖ ಮಸೂದೆಗಳ ಬಗ್ಗೆ ಚರ್ಚೆಯಾಗಬೇಕಿದೆ' ಎಂದರು.

ಆ.29ರಂದು ಸೆಲೆಬ್ರಿಟಿಸ್ ಫ್ಯಾಷನ್ ರನ್‌ವೇ

ಮೈಸೂರು: ಬೆಂಗಳೂರಿನ ಆರ್.ಆರ್. ಗ್ರೂಪ್ಸ್ ವತಿಯಿಂದ ಅಲ್ಲಿನ ಅರಮನೆ ಮೈದಾನದಲ್ಲಿ ಆಗಸ್ಟ್ 29ರಂದು ಮಧ್ಯಾಹ್ನ 2 ಗಂಟೆಗೆ 'ಸೆಲೆಬ್ರಿಟಿಸ್ ಫ್ಯಾಷನ್ ರನ್‌ವೇ' ಹಾಗೂ 'ಮಿಸ್ಟರ್, ಮಿಸ್ ಮತ್ತು ಮಿಸಸ್ ಇಂಡಿಯಾ ಫ್ಯಾಷನ್ ಶೋ' ಆಯೋಜಿಸಲಾಗಿದೆ.

'ಸೆಲೆಬ್ರಿಟಿಸ್ ಫ್ಯಾಷನ್ ರನ್‌ವೇ'ಯಲ್ಲಿ ಧಾರಾವಾಹಿಗಳ ಪ್ರಧಾನ ಕಲಾವಿದರು ಮಾತ್ರ ಭಾಗವಹಿಸಲಿದ್ದು, ವೇದಿಕೆ ಮೇಲೆ ವಾಕ್ ಮಾಡಲಿದ್ದಾರೆ. ಇವರಿಗೆ ಬೇಕಾದ ವಸ್ತ್ರ, ಮೇಕಪ್ ಸೌಲಭ್ಯವನ್ನು ಸಂಸ್ಥೆ ವತಿಯಿಂದಲೇ ಪೂರೈಸಲಾಗುತ್ತದೆ. 'ಮಿಸ್ಟರ್, ಮಿಸ್ ಮತ್ತು ಮಿಸಸ್ ಇಂಡಿಯಾ ಫ್ಯಾಷನ್ ಶೋ'ಗೆ ಸಂಬಂಧಿಸಿದಂತೆ ಈಗಾಗಲೇ ಆನ್‌ಲೈನ್ ಆಡಿಷನ್ ಮಾಡಲಾಗಿದೆ. 40ರಿಂದ 50 ಸ್ಪರ್ಧಿಗಳು ಭಾಗವಹಿಸಲಿದ್ದಾರೆ ಎಂದು ಆರ್.ಆರ್.ಗ್ರೂಪ್ಸ್‌ನ ಸಿಇಒ ರಾಕಿಂಗ್ ರಾತು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವೈಲ್ಡ್ ಕಾರ್ಡ್ ಎಂಟ್ರಿ ಮೂಲಕವೂ ಕೆಲ ಸ್ಪರ್ಧಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಸಕ್ತರು ಆದಷ್ಟು ಬೇಗ ನೋಂದಣಿ ಮಾಡಿಕೊಳ್ಳಬಹುದು. ಆಡಿಷನ್ ಶುಲ್ಕ ₹500 ಹಾಗೂ ಆಯ್ಕೆಯಾದ ಬಳಿಕ ಪ್ರತ್ಯೇಕ ಶುಲ್ಕ ವಿಧಿಸಲಾಗುತ್ತದೆ. ಫ್ಯಾಷನ್ ಬಗ್ಗೆ ಆಸಕ್ತಿ ಇರುವ ಬಡ ಪ್ರತಿಭಾವಂತರಿಗೆ ಮಿಸ್ಟರ್, ಮಿಸ್ ಹಾಗೂ ಮಿಸಸ್ ಇಂಡಿಯಾ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಅವರಿಗೆ ಉಚಿತವಾಗಿ ಎಲ್ಲ ವ್ಯವಸ್ಥೆ ಮಾಡಲಾಗುವುದು. ನೋಂದಣಿಗೆ ಮೊ.ಸಂ. 9740616106 ಸಂಪರ್ಕಿಸಬಹುದು ಎಂದರು.

'ಕ್ರಿಯೇಟಿವ್ ಫೈವ್' ಸಂಸ್ಥಾಪಕಿ ಅರ್ಪಿತಾ ದೇವ್, ಫ್ಯಾಷನ್ ಫೋಟೋಗ್ರಾಫರ್ ಪ್ರಾಣೇಶ್ ಭಟ್, ಮೆಂಟರ್ ಸಬ್ರಿನಾ ತರೋನಂ ಇದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ (ವಿದ್ಯುತ್),
ಯಲಹಂಕ ವಲಯ, ಬೆಂಗಳೂರು.

ಸಂಖ್ಯೆ: ಬೃಬೆಂಮಪಾ/ಕಾಪಾಅ/ವಿದ್ಯುತ್/ಯವ/ಟೆಂಡರ್/01/2021-22 ದಿನಾಂಕ: 03.07.2021

ತಿದ್ದುಪಡಿ–1

ವಿಷಯ: ಟೆಂಡರ್ ಪ್ರಕಟಣೆ ಸಂ: ಬೃಬೆಂಮಪಾ/ಕಾಪಾಅ/ವಿದ್ಯುತ್/ಯವ/ಟೆಂಡರ್/01/2021–22, ದಿನಾಂಕ: 03.06.2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು, ವಿದ್ಯುತ್, ಯಲಹಂಕ ವಲಯ, ಇವರು ದಿನಾಂಕ: 03.06.2021ರಂದು ಬಳ್ಳಾರಿ ರಸ್ತೆ, ಬ್ಯಾಟರಾಯನಪುರ ಕಚೇರಿ ವತಿಯಿಂದ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಬಿಡ್ಡರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದು. ಈ ಕೆಳಕಂಡ ಬದಲಾವಣೆಯಂತೆ ತಿದ್ದುಪಡಿ ಮಾಡಲಾಗಿದೆ.

ನಿಗದಿಪಡಿಸಿದ್ದ ದಿನಾಂಕ	ಮಾರ್ಪಾಡಾದ ದಿನಾಂಕ
ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 06.07.2021ರ ಸಂಜೆ 4:00 ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ. ಮತ್ತು ತಾಂತ್ರಿಕ ಬಿಡ್/ಟೆಂಡರ್‌ಗಳನ್ನು ತೆರೆಯುವ ದಿನಾಂಕ 08.07.2021ರ ಸಂಜೆ 4:00 ಗಂಟೆಗೆ.	ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 07.08.2021ರ ಸಂಜೆ 4:00 ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ. ಮತ್ತು ತಾಂತ್ರಿಕ ಬಿಡ್/ಟೆಂಡರ್‌ಗಳನ್ನು ತೆರೆಯುವ ದಿನಾಂಕ 10.08.2021ರ ಸಂಜೆ 4:00 ಗಂಟೆಗೆ.

ಟೆಂಡರ್‌ನ ಇತರೆ ಎಲ್ಲಾ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಹೆಚ್ಚಿನ ಮಾಹಿತಿ ಮತ್ತು ಟೆಂಡರ್ ದಾಖಲೆಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ವಿದ್ಯುತ್ ವಿಭಾಗ, ಯಲಹಂಕ ವಲಯ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹಾರೋಹಳ್ಳಿ ಶಾಖೆ, ಬೆಂಗಳೂರು,
ಫೋನ್ : 080-27562235
ಮೊ : 9483530433, e-Mail : cb0433@canarabank.com

ವಾಹನಗಳ ಹರಾಜು ಮಾರಾಟ ಸೂಚನೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳಕಂಡ ಸಾಲಗಾರರು ಈ ಕೆಳಕಂಡ ಆಧಾರ ಮಾಡಿರುವ ಚರ ಸ್ವತ್ತುಗಳನ್ನು ಸೆಕ್ಯೂರ್ಡ್ ಕ್ರೆಡಿಟರ್ ಆದ ಕೆನರಾ ಬ್ಯಾಂಕ್, ಹಾರೋಹಳ್ಳಿ ಶಾಖೆ ಇವರು ಆಧಾರ ಮಾಡಿರುವ ಅಗ್ರಿಮೆಂಟ್‌ನ ಒಪ್ಪಂದದ ಪ್ರಕಾರ ಪ್ರದತ್ತವಾದ ಅಧಿಕಾರ ಅನ್ವಯ ಭೌತಿಕವಾಗಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು "ಎಲ್ಲಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಹೇಗಿದೆಯೋ ಹಾಗೆ" ಆಧಾರದ ಮೇಲೆ ಬ್ಯಾಂಕಿಗೆ ಬರಬೇಕಾದ ಬಾಕಿ ಮೊತ್ತ ದಿನಾಂಕ 30.06.2012ರಂತೆ ರೂ.15,43,525.00 (ರೂಪಾಯಿ ಹದಿನೈದು ಲಕ್ಷ ನಲವತ್ತಮೂರು ಸಾವಿರದ ಐದು ನೂರ ಇಪ್ಪತ್ತೈದು ಮಾತ್ರ) ಗಳನ್ನು ಬಡ್ಡಿ ಮತ್ತು ಇತರ ವೆಚ್ಚಗಳೊಂದಿಗೆ ವಸೂಲಿ ಮಾಡಲು ದಿನಾಂಕ 19.07.2021ರಂದು ಮಾರಾಟ ಮಾಡಲಾಗುವುದು.

ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ವಿಳಾಸ : ಚಿಕ್ಕಲಬಾಳು ಮಠ, ಚಿಕ್ಕಲಬಾಳು ಗ್ರಾಮ, ಕೊತ್ತಗಾಲು ಅಂಚೆ, ಕನಕಪುರ ತಾಲೂಕು, ರಾಮನಗರ ಜಿಲ್ಲೆ.

ಕ್ರ. ಸಂ.	ವಾಹನದ ಮಾಡೆಲ್	ನೋಂದಣಿಯಾದ ತಿಂಗಳು/ವರ್ಷ	ನೋಂದಣಿ ಸಂಖ್ಯೆ	ಮೀಸಲು ಬೆಲೆ	ಇಎಂಡಿ ಮೊತ್ತ
1	TOYOTA INNOVA CRYSTA 2.4 VBS IV Diesel, Engine No 2GDA197207, Super White Colour, Chasis No. MBJGB8EM8020442630518	07/2018	KA 02 MX 6062	ರೂ. 13,60,000/-	ರೂ. 3,40,000/-

1. ಮೇಲೆ ಸೂಚಿಸಿರುವ ಮುಂಗಡ ಠೇವಣಿಯನ್ನು ದಿನಾಂಕ 17.07.2021ರಂದು ಸಂಜೆ 5.00 ಘಂಟೆಯ ಒಳಗೆ ಪಾವತಿಸಬೇಕು. ಇಎಂಡಿ ಮೊತ್ತವನ್ನು ಡಿಡಿ ಮೂಲಕ ಕೆನರಾ ಬ್ಯಾಂಕ್, ಹಾರೋಹಳ್ಳಿ ಶಾಖೆ, ಇವರಿಗೆ ಅಥವಾ ಆನ್‌ಲೈನ್ ((RTGS/NEFT/IMPS) ಮೂಲಕ ಅಕೌಂಟ್ ನಂ. 7954295000001 (IFSC Code- CNRB0007954) ಕೆನರಾ ಬ್ಯಾಂಕ್, ಹಾರೋಹಳ್ಳಿ ಶಾಖೆ, ಬೆಂಗಳೂರು ಇವರಿಗೆ ಪಾವತಿಸಬೇಕು.
2. ವಾಹನಗಳ ಹರಾಜನ್ನು ದಿನಾಂಕ 19.07.2021ರಂದು ಬೆಳಿಗ್ಗೆ 10.30ರಿಂದ 11.00 ಗಂಟೆವರೆಗೆ ಸೇವಾಪೂರ್ಶೈಕೆದಾರರಾದ ಮೆ. ಆಂಟೆರೀಸ್ ಸಿಸ್ಟಮ್ಸ್ ಲಿಮಿಟೆಡ್ ಬೆಂಗಳೂರು, (ಸಂಪರ್ಕಿಸುವ ಸಂಖ್ಯೆ : 9686196756/080 49352000 e-mail: manohar.s@antaressystems.com) ಇವರು ನಡೆಸುವರು. ಬಿಡ್ ಗುಣಾಂಕ ಮೊತ್ತ ರೂ.5000/–
3. ಆಸಕ್ತ ಖರೀದಿದಾರರು ವಾಹನಗಳನ್ನು ವೀಕ್ಷಿಸಿ ಸಮಾಧಾನಕರವಾಗಿ ಕಂಡುಬಂದಲ್ಲಿ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದು.
4. ಆಸಕ್ತ ಬಿಡ್‌ದಾರರು ಬಿಡ್ ಅರ್ಜಿಯೊಂದಿಗೆ ಕೆವೈಸಿ ದಾಖಲೆಗಳನ್ನು ಸಲ್ಲಿಸಬೇಕು.
5. ಯಶಸ್ವಿ ಬಿಡ್‌ದಾರರು ಬಾಕಿ ಮೊತ್ತವನ್ನು ಹರಾಜು ಮಾರಾಟದ ದಿನಾಂಕದಿಂದ 3 ದಿನಗಳ ಒಳಗೆ ಪಾವತಿಸಬೇಕು. ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮತ್ತು ಅದನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ. ಸಂಬಂಧಪಟ್ಟ ಎಲ್ಲ ವರ್ಗಾವಣಾ ಶುಲ್ಕವನ್ನು, ನೋಂದಣಿ ಶುಲ್ಕ ಇತ್ಯಾದಿಗಳನ್ನು ಯಶಸ್ವಿ ಖರೀದಿದಾರರೇ ಭರಿಸಬೇಕು.
6. ಬ್ಯಾಂಕ್ ಮಾರಾಟವನ್ನು ಮುಂದೂಡುವ/ ರದ್ದುಗೊಳಿಸುವ ಅಥವಾ ಮಾರಾಟದ ನಿಯಮಗಳನ್ನು ಯಾವುದೇ ನೋಟೀಸನ್ನು ನೀಡದೆ ಬದಲಾಯಿಸುವ ಹಕ್ಕನ್ನು ಕಾಯ್ದಿರಿಸಿದೆ.
7. ಹೆಚ್ಚಿನ ವಿವರಗಳಿಗೆ ಪ್ರಬಂಧಕರು, ಕೆನರಾ ಬ್ಯಾಂಕ್, ಹಾರೋಹಳ್ಳಿ ಶಾಖೆ, ಬೆಂಗಳೂರು, ಫೋನ್ ನಂ. 080–27562235, ಮೊಬೈಲ್ : 9483530433 ಇವರನ್ನು ಯಾವುದೇ ಕೆಲಸದ ದಿನದಂದು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 29.06.2021
ಸ್ಥಳ : ಹಾರೋಹಳ್ಳಿ

ಸಹಿ/–
ಅಧಿಕೃತ ಅಧಿಕಾರಿ

AIR FORCE SCHOOL ASTE
Murugeshpalya

Invites applications for the **Post of PGT** (History, Political Science). Details of basic qualification can be checked on **www.afsaste.edu.in**. Hard copies of resume with attested testimonials should be submitted / posted to **Air Force School ASTE, NAL Wind Tunnel Road, Murugeshpalya, Bengaluru – 560 017 (last date of receipt is 19 July 2021 upto 1000 hrs).** Soft copies will not be accepted.

Contact No.080-25272332/25276920.

ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು–56, ದೂರವಾಣಿ: 080–22961039

ಸಂಖ್ಯೆ:ಎಸಿಎ–3:ಸಂ.ನ:2021–22 ದಿನಾಂಕ: 01–07–2021

–: ಜಾಹೀರಾತು :–

ಬೆಂಗಳೂರು ವಿಶ್ವವಿದ್ಯಾಲಯವು, 2021–22ನೇ ಸಾಲಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಅಂದರೆ, ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ (ತಿದ್ದುಪಡಿ) 2015 ರಲ್ಲಿ ನಿಗದಿಪಡಿಸಿರುವಂತೆ ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಾದ ವಿಜಯನಗರ, ಪದ್ಮನಾಭನಗರ, ಬೊಮ್ಮನಹಳ್ಳಿ, ಆನೇಕಲ್, ಬೆಂಗಳೂರು ದಕ್ಷಿಣ, ಯಶವಂತಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಮಹಾಲಕ್ಷ್ಮೀ ಬಡಾವಣೆ, ಗೋವಿಂದರಾಜನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರ ನೆಲಮಂಗಲ, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳಿಂದ ವಿವಿಧ ರೀತಿಯ ಸಂಯೋಜನೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ ಪ್ರಕರಣ 59 ಮತ್ತು 62ರ ಅಡಿಯಲ್ಲಿ ಅರ್ಜಿಗಳನ್ನು ಅಧಿಸೂಚನೆ ಸಂಖ್ಯೆ: ಎಸಿಎ–3:ಸಂನ:2021–22 ದಿನಾಂಕ: 01–07–2021ರ ಮೂಲಕ ಆಹ್ವಾನಿಸಿದೆ. ಈ ಅಧಿಸೂಚನೆಯು ವಿಶ್ವವಿದ್ಯಾಲಯದ ವೆಬ್‌ಸೈಟ್: **www.bangaloreuniversity.ac.in** ನಲ್ಲಿ ಲಭ್ಯವಿರುತ್ತದೆ.

ಈ ಅಧಿಸೂಚನೆಯನ್ನು ಪರಾಮರ್ಶಿಸಿದ ನಂತರವೇ ಕಾಲೇಜುಗಳು/ಸಂಸ್ಥೆಗಳು ಸಂಯೋಜನಾ ಅರ್ಜಿಗಳನ್ನು ಸರ್ಕಾರದ ಆನ್–ಲೈನ್ ವೆಬ್‌ಸೈಟ್ **https://www.onlineaffiliation.karnataka.gov.in/Affiliation2122/login.aspx** ಮಾತ್ರವೇ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ದಂಡ ಶುಲ್ಕ ರಹಿತವಾಗಿ ದಿನಾಂಕ: 14–07–2021 ಮತ್ತು ದಂಡಶುಲ್ಕ ರೂ. 1,000/– ಗಳೊಂದಿಗೆ ದಿನಾಂಕ: 20–07–2021ರ ಒಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಯನ್ನು ವಿದ್ಯಾಕಾರ್ಯ ಶಾಖೆ–3, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು–56 (ದೂರವಾಣಿ: 080–22961039) ಇಲ್ಲಿ ಪಡೆಯಬಹುದಾಗಿದೆ.

ಸಹಿ/- ಕುಲಸಚಿವರು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

EXPERIENCED ACCOUNTS and ADMINISTRATIVE OFFICER required by 44 year Engineering Company located in Fraser Town Should be familiar with Accounts, Computer operation, Tally and dealing with Auditor, Bank and other Agencies such as Professional Tax, Periodical returns, Shop and Establishment Dept, Sales-Tax. Salary between Rs.18000-22000 pm. May also consider part-time at special rates. Apply with full details to: spmnirvana@gmail.com

Engg/ Production Technical

WANTED EXECUTIVE IN ENVIRONMENTAL, HEALTH and SAFETY (EHS) CHEMICAL ENGINEER Education Qualification: 1.Diploma/Degree/BE in Environmental Science. 2.Diploma/BE in Chemical Experience:2 to 5 years and similar field for E-Parisaraa Pvt Ltd, Job location: Dobaspet. Apply to: hr@ewasteindia.com

REQUIRED LATHE Turner/ ITI Fitter for manufacturing company at Konanakunte Cross. PF, ESI Available. Contact-9731170660 / 08043712388.

General

REQUIRED-STENOGRAPHER with experience in taking steno dictation, computer typing, printing, operating and handling mail downloading and printing with soft handling for Advocates Office, knowledge of English is compulsory. Interested may contact M/s VBS Law Inc., #230, 1st Floor, 4th Main, Chamarajpet, Bengaluru- 560018. 080-26678443 / 080-22426644, 9886117443

EDUCATION SPECIAL

We are coming out with special offer for Admission Notice, Education Success Congratulation Ads

For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

REQUIRED OFFICE assistant for CA office near shivananda circle Bangalore-560001. contact: 080-41136800.

Teachers/ Professors

WANTED: **TEACHERS:** SCIENCE- B.Sc/M.Sc-B.Ed SOCIAL SCIENCE- BA/MA-B.Ed ENGLISH- BA/MA-B.Ed Attend Interview with certificates and resume on 08-07-2021 at 12:30pm Secretary, 'SAVM ENGLISH MEDIUM SCHOOL', Kumarswamy Layout, Near Srinivasa Theatre, Bangalore. Contact: 94837-55974/ 96637-42763. Gmail: savm2003@gmail.com

HERITAGE PUBLIC SCHOOL, Srinidhi Layout, Konanakunte, Urgently Requires Hindi and Chemistry/ Biology TEACHERS For High School. Contact: 9901733776.

REQUIRES LADY Teachers for English (MA.BEd)walk-in Interview with the Secretary, Srikrishna International School, ITI-Layout, BSK 3rd Stage, Bangalore-85, Phone: 65365824

GURUKULA INTERNATIONAL School requires English Social, Maths Teachers for Primary and High school and Lady Accountant with Kannada Typing. Near Magadi Road, Metro Station, Bangalore-23. 7829338292, 7676676629.

REQUIRED
Asst. Professors with Ph.D/NET & Experience
FOR UG
English, French, Economics, Commerce, Statistics Computer Science, Hotel Management
For MBA, MCom & MSW
Management (Marketing, HR, Accounting & Finance), Commerce, (Accounting & Taxation), Social Work, (Medical & Psychiatry), Placement Officer, Librarian, HR Manager
ST. CLARET COLLEGE AND INSTITUTE OF MANAGEMENT
P.O.Box 1355, Jalahalli Post, Bengaluru 560 013
Contact: 080-23454755
Mob: 9620912639
Send your resumes to:
scc@claretcollege.edu.in
www.claretcollege.edu.in

WANTED ENGLISH MEDIUM TRAINED LADY TEACHERS B.A /M.A., B.Ed to teach English/ Social Science/ Hindi, B.Sc., B.Ed. to teach Maths/ Science for Primary Sections/ N.T.T/ B.Sc Computer Science faculty. Contact in person (10.00 am-3.00 pm on all working days) -Secretary, Deccan Educational Society, No.95, 3rd Cross, Srirampuram, Bengaluru- 560 021 (Near Sampige Theater, Malleswaram)

VLS VIDYASAGARA ENGLISH-MEDIUM SCHOOL, #58/22, Sharada Colony, Basaveshwaranagar, Bangalore-79. Ph:080-23586050/ 23282029. REQUIRED LADY TEACHERS-CLASS I TO X STD; ENGLISH/SOCIAL- B.A.M.A, B.Ed, M.Ed

WANTED TEACHERS to teach English, Social Studies, Maths, Science, Biology, Computer Science, Attender, Peon, Security Guard, Aya. Walk-in between 10am to 1pm with resume & certificates. CAMLIN HIGH SCHOOL, 6th 'C' Main, 4th Cross, Hampinagar, Vijayanagar 2nd Stage, Bangalore. Call: 080-23301363

ZEENA ENGLISH SCHOOL
REQUIRES
1. TEACHERS - Qualified, trained & experienced for Nursery, Primary & High School
2. PHYSICAL EDUCATION TEACHER
3. PRINCIPAL- with 5 years teaching experience in High School
Candidates may email their resume within 10 days.
E-mail: zeenaenglishschool2016@gmail.com
Mobile: 9448389303

***ELITE PUBLIC** SCHOOL*Kempegowda layout Laggere Bangalore *Requires teachers* Chemistry, Bsc/ Msc, B.Ed 9980200444, 8884420009

Hospital & Medical Jobs

REPUTED SKIN Centre #36,1st Floor, 2nd Main Road, Vayalikaval, Required Experienced Female STAFF NURSES, Fluent in English, Good Salary+ Perks. 9845535763/ 9845002024

WANTED M.B.B.S/ANYPG doctor male andfemalefor a reputed medicalestablishment in TalukaHQin NorthKarnataka. Contact:9448476229

Part-Time Jobs

VACANCY IN MNC Company, Age 30-55, PUC+ pay 30-80k P/m.Contact: Srilatha-8431104300/ 7090022176

Receptionist/ Secretary

WANTED RESIDENT Secretaries to Chairman at Bangalore. Fresh bright B.Tech/M.Tech (civil), B.Com/M.Com. Apply iceas04@yahoo.com, info@basecap.in

Wanted

REQUIRED EXPERIENCED Tele Caller around Rajajinagar, Malleshwaram & Manjunathnagar, Uttarahalli, Padmanabhanagara. Contact:9945627248 /9845178483

WANTED EXPERIENCED Graduates from IAS coaching centers, send resume to ceo@vxplore.co.in Mob: 9740191676

DELIVERY BOYS Required with valid Driving Licence, Android phone Aadhaar card, bike provided by co., Salary 10k- 12k. Interested call: 9886685985.

WANTED VEGETARIAN COOK AT BASAVANAGUDI MORNINGS ONLY 2 PERSONS ONLY AT HOME CONTACT 9342819739.

WANTED EXPERIENCED Graduates from IAS coaching centers, send resume to ceo@vxplore.co.in Mob: 9740191676

MATRIMONIAL

Grooms Wanted

Muslim

ALLIANCE FOR Sunni Muslim Syed Girl, 34yrs / 5'7"ht, MBBS, Gynaecologist, V.Fair, Religious, Based in Bangalore, Contact : 8971311382.

Punjabi

GURSIKH MATCH (medico, professional, civil services, army officer) for Gursikh MD (Anaesthesiology) girl, born 1989, Currently pursuing DM. Contact 7018988903

Matrimonial Bureaus

USHODHAYA MATRIMONIAL (Estd: 1998)
FOR HIGH CLASS PROPOSALS, FIRST/ SECOND/ INDIA/ ABROAD, CONTACT 9611919477 9886884291

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

OTHERS

For Sale

OWNER LEAVING Leather Sofa Leather Diwan Boxcot Dining Dressing Silk curtains...Call 9845414482, 7019263843

PERSONAL

Change of Name

SNEHA D/O JC670811A- SUB- MUNISWAMY M, R/a #10, Halle Halli, KR Puram, Bangalore changed name from SNEHA to SNEHA M notary KV Mani Bangalore.

MEENA W/O JC670811A- SUB- MUNISWAMY M, R/a #10, Halle Halli, KR Puram, Bangalore changed name from MEENA to MEENA P notary KV Mani Bangalore.

SACHIN KUMAR, S/o, JC672567K, SUB, MAHIPAL, Vill- SIHA, KHATTLA, HODAL, PALWAL, HARYANA, have changed my name from SACHIN KUMAR to SACHIN, 02/07/2021, Notary K.V. Mani, Bangalore

SHASHANK KAMAKHYA S/o JC670811A- SUB- MUNISWAMY M, R/a #10, Halle Halli, KR Puram, Bangalore, changed name from SHASHANK KAMAKHYA to SHASHANK KAMAKHYA M notary KV Mani Bangalore.

PROPERTY
To Place your Classified Ads Contact:
9880856233

Lost

I AKSHARA Varma residing at #FF5, Soorya Splendor Apt. 5th A cross road, Akshaya Nagar, Ramamurthy Nagar, Bangalore- 560016. Have lost my degree certificate of graduation (B. Com) at Ramamurthy Nagar, Bangalore, issued by Banasthali University, Jaipur. Whosoever found please return it to me. Contact: 9425117093 FIR No.115012/2021

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಎಂಎಸ್‌ಎಂಇಗಳಿಗೆ ಶೇ 30ರಷ್ಟು ಜಮೀನು: ಜಗದೀಶ ಶೆಟ್ಟರ್

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ)ಯಿಂದ ಅಭಿವೃದ್ಧಿಪಡಿಸುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ ಶೇಕಡ 30ರಷ್ಟು ಜಮೀನನ್ನು ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಮೀಸಲಿಡಲಾಗುವುದು ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ತಿಳಿಸಿದರು.

ಕ್ರೆಡೈ ಕರ್ನಾಟಕ ವತಿಯಿಂದ ಶನಿವಾರ ಆಯೋಜಿಸಿದ್ದ 'ಕ್ರೆಡೈ ಜ್ಞಾನ ಸರಣಿ' ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜ್ಯದ ಅಭಿವೃದ್ಧಿಯಲ್ಲಿ ಸಣ್ಣ ಕೈಗಾರಿಕೆಗಳ ಪಾತ್ರ ಮಹತ್ವದ್ದು. ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಉತ್ತೇಜನ ನೀಡಲಾಗುವುದು. ಅದನ್ನು ಈ ವಲಯದ ಉದ್ಯಮಿಗಳು ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಕ್ಲಸ್ಟರ್' ಅಭಿವೃದ್ಧಿ ಯೋಜನೆ ಅನುಷ್ಠಾನಕ್ಕೆ ಹೊಸ ಕೈಗಾರಿಕಾ ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿಕೆ

ಜಲ ಸಂರಕ್ಷಣೆಗೆ ಉದ್ಯೋಗ ಖಾತರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ವರ್ಷ ಮಳೆ ನೀರು ಸಂಗ್ರಹಿಸುವುದಕ್ಕೆ ಪೂರಕವಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಕ್ಕಾಗಿ ರಾಜ್ಯದಲ್ಲಿ 1.47 ಲಕ್ಷ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಪ್ರಕಟಿಸಿರುವ 'ಕರ್ನಾಟಕ ರಾಜ್ಯ ಗ್ರಾಮೀಣ ನೈರ್ಮಲ್ಯ ನೀತಿ, ಕಾರ್ಯತಂತ್ರ ಮತ್ತು ಮಾದರಿ ಉಪ ವಿಧಿಗಳು' ಹಾಗೂ 'ಸ್ವಚ್ಛ ಸಂಕೀರ್ಣ ಮತ್ತು ಸ್ವಚ್ಛತೆ' ಕೈಪಿಡಿಗಳನ್ನು ವಿಧಾನ ಸೌಧದಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ನೈರ್ಮಲ್ಯ ಮತ್ತು ಶುಚಿತ್ವಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಕಟಿಸಿರುವ ಕೈಪಿಡಿಗಳನ್ನು ಸಚಿವ ಕೆ.ಎಸ್.ಈಶ್ವರಪ್ಪ ಬಿಡುಗಡೆ ಮಾಡಿದರು. ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್‌.ಕೆ. ಅತೀಕ್ ಇದ್ದರು.

ಜಲಶಕ್ತಿ ಅಭಿಯಾನಕ್ಕೆ ಪೂರಕವಾಗಿ ಉದ್ಯೋಗ ಖಾತರಿ ಯೋಜನೆಯನ್ನೂ ಅನುಷ್ಠಾನ ಮಾಡಲಾಗುತ್ತಿದೆ. ಕೆರೆ ಅಭಿವೃದ್ಧಿ, ಕಲ್ಯಾಣಿ ಪುನಶ್ಚೇತನ, ಮಳೆ ನೀರು ಸಂಗ್ರಹ ರಚನೆಗಳು, ಚೆಕ್ ಡ್ಯಾಂ, ಕೊಳವೆ ಬಾವಿಗಳ ಪುನಶ್ಚೇತನ, ಅರಣ್ಯೀಕರಣ, ಕೃಷಿ ಹೊಂಡ, ಬದು ಮತ್ತು ತೆರೆದ ಬಾವಿಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಏಪ್ರಿಲ್ 1ರಿಂದ ಆರಂಭವಾಗಿರುವ 100 ದಿನಗಳ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುತ್ತಿದೆ. ಪ್ರಸಕ್ತ ವರ್ಷ ಉದ್ಯೋಗ ಖಾತರಿ ಯೋಜನೆಯಡಿ 1,544.45 ಕೋಟಿ ವೆಚ್ಚ ಮಾಡಲಾಗಿದೆ. ಜಲ ಮತ್ತು ನೈಸರ್ಗಿಕ ಸಂಪನ್ಮೂಲಕ್ಕೆ ಸಂಬಂಧಿಸಿದ ಕಾಮಗಾರಿಗಳಿಗೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಉದ್ಯೋಗ ಖಾತರಿ ಯೋಜನೆಯಡಿ 13 ಕೋಟಿ ಮಾನವ ದಿನಗಳನ್ನು ಸೃಜಿಸುವ ಗುರಿ ಹೊಂದಲಾಗಿದೆ. ಈವರೆಗೆ 4.49 ಕೋಟಿ ಮಾನವ ದಿನಗಳನ್ನು ಸೃಜಿಸಲಾಗಿದೆ. 18.68 ಲಕ್ಷ ಕುಟುಂಬಗಳಿಗೆ ಕೂಲಿ ನೀಡಲಾಗಿದೆ ಎಂದು ಅವರು ವಿವರಿಸಿದರು.

ತಲಾ ಎರಡು ಸಸಿ: ಇಲಾಖೆಯ ಎಲ್ಲ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿ ತಲಾ ಎರಡು ಸಸಿಗಳನ್ನು ನೆಟ್ಟು, ಪೋಷಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಸಂಬಂಧ ಇಲಾಖೆಗೆ ಒಪ್ಪಂದದ ಪತ್ರವನ್ನು ಸಲ್ಲಿಸಿದ್ದಾರೆ. ಈ ಯೋಜನೆ ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಈಶ್ವರಪ್ಪ ಹೇಳಿದರು.

ಕೋವಿಡ್ ನಿಯಂತ್ರಣದ ಅವಧಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗಣನೀಯ ಕೆಲಸಗಳನ್ನು ಮಾಡಿದೆ. ಕೋವಿಡ್ ನಿಯಂತ್ರಣ, ಜನರಿಗೆ ನೆರವು ಒದಗಿಸುವುದರ ಜತೆಯಲ್ಲೇ ಸಂಕಷ್ಟದಲ್ಲಿರುವ ಜನರಿಗೆ ಉದ್ಯೋಗ ಖಾತರಿ ಮೂಲಕ ಆರ್ಥಿಕ ಬಲ ನೀಡುವ ಕೆಲಸವನ್ನೂ ಮಾಡಲಾಗುತ್ತಿದೆ ಎಂದರು.

ಸುದ್ದಿ 2 ನಿಮಿಷ

ರಾಜ್ಯದ ₹ 5,495 ಕೋಟಿ ತಡೆದಿದ್ದೇ ನಿರ್ಮಲಾ: ಸಿದ್ದರಾಮಯ್ಯ ಟೀಕೆ

ಬೆಂಗಳೂರು: 'ಹದಿನೈದನೇ ಹಣಕಾಸು ಆಯೋಗದ ಶಿಫಾರಸು ಪ್ರಕಾರ ಕರ್ನಾಟಕಕ್ಕೆ ಬರಬೇಕಿದ್ದ ₹ 5,495 ಕೋಟಿಯನ್ನು ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ತಡೆ ಹಿಡಿದಿದ್ದಾರೆ ಎಂದು ಆಯೋಗವೇ ನೀಡಿದ ಮಾಹಿತಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಆಯೋಗ ಶಿಫಾರಸು ಮಾಡಿದ ಅನುದಾನದಲ್ಲಿ ಒಂದೇ ಒಂದು ರೂಪಾಯಿ ಕರ್ನಾಟಕಕ್ಕೆ ಕೊಟ್ಟಿಲ್ಲ. ಕೊಟ್ಟಿದ್ದರೆ ದಾಖಲೆ ತೋರಿಸಲಿ' ಎಂದು ಸವಾಲು ಹಾಕಿದರು.

'ನಿರ್ಮಲಾ ಅವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ದೇಶದ ಹಣಕಾಸು ಸಚಿವರಾಗಿ ಅವರು ತವರು ರಾಜ್ಯಕ್ಕೇ ಅನುದಾನ ಕೊಡುವುದಿಲ್ಲವೆಂದರೆ, ಕೇಂದ್ರದಲ್ಲಿ ಮಂತ್ರಿಯಾಗಲು ಅವರಿಗೆ ಯೋಗ್ಯತೆ ಇದೆಯೇ' ಎಂದು ಪ್ರಶ್ನಿಸಿದರು.

'ಹಣಕಾಸು ಆಯೋಗ ಶಿಫಾರಸು ಮಾಡಿದ ಪ್ರಕಾರ ರಾಜ್ಯಕ್ಕೆ ಹಣ ಕೊಟ್ಟಿದ್ದಾರೆ. ಆ ಹಣ ರಾಜ್ಯ ಸರ್ಕಾರದ ಬೊಕ್ಕಸ ಸೇರಿದ್ದರೆ ಕೋವಿಡ್ ಸಂಕಷ್ಟದ ಕಾಲದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಬಡವರಿಗಾಗಿ ಖರ್ಚು ಮಾಡಬಹುದಿತ್ತು' ಎಂದರು.

'ರಾಜ್ಯದಲ್ಲಿ ಯಡಿಯೂರಪ್ಪ ಮತ್ತು ಅವರ ಪುತ್ರ ಲೂಟಿ ಮಾಡುತ್ತಿದ್ದಾರೆಯೇ ಹೊರತು ಬಡವರಿಗೆ ನೆರವಾಗುತ್ತಿಲ್ಲ. ಇನ್ನಾದರೂ ಅವರು ಹಣ ದೋಚುವುದನ್ನು ಬಿಟ್ಟು ಜನರ ಕಡೆಗೆ ನೋಡಲಿ. ಅವರೇ ಶ್ರೀರಾಮುಲು ಆಪ್ತ ಸಹಾಯಕನ ವಿರುದ್ಧ ದೂರು ನೀಡುತ್ತಾರೆ. ಮಂತ್ರಿಗಳು, ಅವರ ಆಪ್ತಸಹಾಯಕರು, ಯಡಿಯೂರಪ್ಪ ಮತ್ತವರ ಮಗ ಎಲ್ಲರೂ ಸೇರಿ ಹಣ ದೋಚುತ್ತಿದ್ದಾರೆ' ಎಂದು ಆಪಾದಿಸಿದರು.

ನಿರಾಣಿ ಶುಗರ್ಸ್ ಕರಾರು ಉಲ್ಲಂಘನೆ: ಎಸಿಬಿಗೆ ದೂರು

ಮಂಡ್ಯ: 'ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯನ್ನು (ಪಿಎಸ್‌ಎಸ್‌ಕೆ) 40 ವರ್ಷಗಳವರೆಗೆ ಗುತ್ತಿಗೆ ಪಡೆದಿರುವ ನಿರಾಣಿ ಶುಗರ್ಸ್ ಆಡಳಿತ ಮಂಡಳಿ ಕರಾರು ಉಲ್ಲಂಘಿಸಿದ್ದು, ಕಾನೂನು ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿ ಕಾಂಗ್ರೆಸ್ ಮುಖಂಡ ಡಾ.ಎಚ್.ಎನ್.ರವೀಂದ್ರ ಶನಿವಾರ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ಸಲ್ಲಿಸಿದ್ದಾರೆ.

'ನಿರಾಣಿ ಶುಗರ್ಸ್ ವ್ಯವಸ್ಥಾಪಕ ನಿರ್ದೇಶಕ ವಿಜಯ ಎಂ.ನಿರಾಣಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವ ಮುರುಗೇಶ ನಿರಾಣಿ ಅವರ ಪುತ್ರರಾಗಿದ್ದು, ತಂದೆಯ ಅಧಿಕಾರ ದುರ್ಬಳಕೆ ಮಾಡಿಕೊಂಡು ಪಿಎಸ್‌ಎಸ್‌ಕೆ ಗುತ್ತಿಗೆ ಕರಾರಿನ 11 ಷರತ್ತುಗಳನ್ನು ಉಲ್ಲಂಘಿಸಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

'ಗುತ್ತಿಗೆ ಕರಾರು ವೇಳೆ ಆಡಳಿತ ಮಂಡಳಿಯು ಕಾರ್ಖಾನೆಗೆ ಮುಂಗಡವಾಗಿ ₹ 20 ಕೋಟಿ ಪಾವತಿಸಬೇಕಾಗಿತ್ತು, ಭದ್ರತಾ ಠೇವಣಿಯಾಗಿ ₹ 5 ಕೋಟಿ ಇಡಬೇಕಾಗಿತ್ತು. ಈ ಹಣದಿಂದ 2017ರಿಂದ ನೌಕರರ ಬಾಕಿ ವೇತನ, ಭವಿಷ್ಯ ನಿಧಿ ಪಾವತಿ ಹಾಗೂ ಕಾರ್ಖಾನೆಯ ಸಾಲ ತೀರಿಸಬೇಕಾಗಿತ್ತು. ಗುತ್ತಿಗೆ ಪಡೆದು ವರ್ಷ ಕಳೆದರೂ ಮುಂಗಡ ಹಣ, ಠೇವಣಿ ಹಣ ಪಾವತಿಸಿಲ್ಲ. ಮೊದಲು ಇದ್ದ ಕಾರ್ಮಿಕರನ್ನು ಮುಂದುವರಿಸಬೇಕಾಗಿತ್ತು, ಆದರೆ, 54 ಕಾರ್ಮಿಕರನ್ನು ವಜಾಗೊಳಿಸಿ ಒಪ್ಪಂದ ಮುರಿಯಲಾಗಿದೆ ಎಂದು ದೂರಿನಲ್ಲಿ ಆಪಾದಿಸಿದ್ದಾರೆ.



ಜಲಸಿರಿ ವೈಭವ... ಮುಂಗಾರು ಮಳೆಯ ಅಲ್ಪವಿರಾಮದ ನಂತರ ಆರಿದ್ರಾ ಮಳೆ ಮತ್ತೆ ಆರಂಭವಾಗಿದ್ದು, ಜೋಗ ಜಲಪಾತದಲ್ಲಿ ವೈಭವ ಮನೆಮಾಡಿದೆ. ಜೋಗದಲ್ಲಿ ಶನಿವಾರ ಕಂಡ ಜಲಸಿರಿಯ ಸೊಬಗು ಕಣ್ಮನ ಸೆಳೆಯಿತು. ಪ್ರಜಾವಾಣಿ ಚಿತ್ರ/ ಸಂತೋಷ್ ಕುಮಾರ್ ಕಾರ್ಗಲ್

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಆರೋಪಿ ಜಾಮೀನು ಅರ್ಜಿ

ಹಿಂದಿನ ಆದೇಶ ಪರಿಗಣಿಸದಿರಲು ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿ ವಿರುದ್ಧ ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಕೆಸಿಒಸಿಎ) ಅಡಿ ದಾಖಲಾಗಿದ್ದ ಆರೋಪಗಳನ್ನು ರದ್ದುಗೊಳಿಸಿ ಹೊರಡಿಸಲಾದ ಆದೇಶ ಪರಿಗಣಿಸದೇ ಜಾಮೀನು ಅರ್ಜಿ ಇತ್ಯರ್ಥಪಡಿಸುವಂತೆ ಸುಪ್ರೀಂ ಕೋರ್ಟ್ ರಾಜ್ಯ ಹೈಕೋರ್ಟ್‌ಗೆ ಸೂಚಿಸಿದೆ.

ಆರೋಪಿ ಮೋಹನ್ ನಾಯಕ್ ವಿರುದ್ಧ ದಾಖಲಾಗಿದ್ದ ಆರೋಪಗಳನ್ನು ರದ್ದುಪಡಿಸಿ ರಾಜ್ಯ ಹೈಕೋರ್ಟ್ ಏಪ್ರಿಲ್ 22ರಂದು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಗೌರಿ ಅವರ ಸೋದರಿ ಕವಿತಾ ಲಂಕೇಶ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿರುವ ನ್ಯಾಯಮೂರ್ತಿ ಎ.ಎಂ. ಖನ್ವಿಲ್ಕರ್ ನೇತೃತ್ವದ ಪೀಠ ಈ ಸೂಚನೆ ನೀಡಿದೆ.

ಪ್ರಕರಣ ಕುರಿತು ಪ್ರತಿಕ್ರಿಯೆ ನೀಡುವಂತೆ ಸೂಚಿಸಿ ಜೂನ್ 29ರಂದು ಕರ್ನಾಟಕ ಸರ್ಕಾರ ಹಾಗೂ ಆರೋಪಿಗೆ ನ್ಯಾಯಪೀಠ ನೋಟಿಸ್ ಜಾರಿ ಮಾಡಿದೆ.

ಪ್ರಕರಣದ ವಿಚಾರಣೆಯನ್ನು ಜುಲೈ 15ಕ್ಕೆ ಮುಂದೂಡಿದೆ.

ಕೋವಿಡ್: 2 ಸಾವಿರಕ್ಕೆ ಇಳಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 2,082 ಮಂದಿ ಕೋವಿಡ್ ಪೀಡಿತರಾಗಿರುವುದು ಶನಿವಾರ ದೃಢಪಟ್ಟಿದೆ. ಇವು ಕೋವಿಡ್ ಎರಡನೇ ಅಲೆಯ ಅವಧಿಯಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳಾಗಿವೆ.

ಕಳೆದ ಮಾರ್ಚ್ ಮೂರನೇ ವಾರದ ಬಳಿಕ ಸೋಂಕಿತರ ಸಂಖ್ಯೆ ಏರುಗತಿ ಪಡೆದುಕೊಂಡಿತ್ತು. ಕಳೆದೊಂದು ತಿಂಗಳಿನಿಂದ ಈ ಸಂಖ್ಯೆ ಇಳಿಮುಖ ಮಾಡಿದೆ. ಒಂದು ದಿನದ ಅವಧಿಯಲ್ಲಿ 1.54 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 1.34ಕ್ಕೆ ಇಳಿಕೆಯಾಗಿದೆ. ಮೂರುವರೆ ತಿಂಗಳಲ್ಲಿ ವರದಿಯಾದ ಕನಿಷ್ಠ ದೃಢಪ್ರಮಾಣ ಇದಾಗಿದೆ.

ಬೆಂಗಳೂರಿನಲ್ಲಿ 481, ಮೈಸೂರಿನಲ್ಲಿ 227, ದಕ್ಷಿಣ ಕನ್ನಡದಲ್ಲಿ 214, ಹಾಸನದಲ್ಲಿ 202 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. 15 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿ ಹಾಗೂ 8 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.52 ಲಕ್ಷ ದಾಟಿದೆ.

ಕೊರೊನಾ ಸೋಂಕಿತರಲ್ಲಿ 86 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 4.13ಕ್ಕೆ ಏರಿಕೆಯಾಗಿದೆ. ರಾಜ್ಯದ 23 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 13 ಹಾಗೂ ಬೆಂಗಳೂರಿನಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 35,308ಕ್ಕೆ ತಲುಪಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 48,116 ಲಕ್ಷಕ್ಕೆ ಇಳಿಕೆಯಾಗಿದೆ. ಸೋಂಕಿತರಲ್ಲಿ 7,751 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 27.68 ಲಕ್ಷ ದಾಟಿದೆ.

ಕೊಪ್ಪಳದಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ನಗರದಲ್ಲಿ ಶನಿವಾರ ರಾತ್ರಿ ಸುಮಾರು ಒಂದು ಗಂಟೆ ಬಿರುಸಿನ ಮಳೆಯಾಯಿತು. ವಾರದಿಂದಲೂ ಮಳೆಯಿಲ್ಲದೆ ಬಿತ್ತನೆಗೆ ರೈತರು ಪರದಾಡುವಂತೆ ಆಗಿತ್ತು. ಏಕಾಏಕಿ ಮಳೆ ಬಂದು ನಗರವನ್ನು ತಂಪು ಮಾಡಿತು.

ಮುಂಗಾರು ಮಳೆ ಆರಂಭವಾದ ನಂತರ ಮೊದಲ ದೊಡ್ಡ ಮಳೆ ಇದಾಗಿದ್ದು, ಚರಂಡಿಗಳು ತುಂಬಿ ರಸ್ತೆ ಮೇಲೆ ಹರಿದವು.

ಮಳೆಯಿಂದ ಯಾವುದೇ ಅನಾಹುತ ಸಂಭವಿಸಿಲ್ಲ. ಕುಕನೂರು, ಯಲಬುರ್ಗಾ ತಾಲ್ಲೂಕಿನಲ್ಲಿ ಸಾಧಾರಣ ಮಳೆಯಾಗಿದೆ.

ಅಳವಂಡಿ ಹೋಬಳಿ, ಕಾರಟಗಿ, ಗಂಗಾವತಿ ತಾಲ್ಲೂಕಿನಲ್ಲಿ ಜಿಟಿಜಿಟಿ ಮಳೆಯಾಗಿದೆ.

ಕೊಪ್ಪಳದಲ್ಲಿ ಶನಿವಾರ ಸುರಿದ ಮಳೆಯಲ್ಲಿ ಒಂದೇ ಛತ್ರಿಯಲ್ಲಿ ಹೊರಟ ಮೂವರು ಬಾಲಕರು ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಉತ್ತರ ಕನ್ನಡದಲ್ಲಿ ಉತ್ತಮ ಮಳೆ (ಕಾರವಾರ ವರದಿ) : ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಲ್ಕು ದಿನಗಳಿಂದ ಕಡಿಮೆಯಾಗಿದ್ದ ಮಳೆಯು ಶನಿವಾರ ಮತ್ತೆ ಚುರುಕಾಯಿತು.

ಶಿರಸಿ, ಸಿದ್ದಾಪುರ, ಭಟ್ಕಳದಲ್ಲಿ ಮಧ್ಯಾಹ್ನದ ಮೇಲೆ ಜೋರಾಗಿ ಮಳೆಯಾಯಿತು. ಉಳಿದಂತೆ, ಕಾರವಾರ ನಗರ, ಅಂಕೋಲಾದ ಗ್ರಾಮೀಣ ಭಾಗದಲ್ಲಿ ಆಗಾಗ ಸಾಧಾರಣ ಮಳೆ ಬಂತು.

ಮುಂದಿನ ಮೂರು ದಿನ ಇದೇ ರೀತಿಯ ವಾತಾವರಣ ಇರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಅರಸೀಕೆರೆಯಲ್ಲಿ ಜೋರು ಮಳೆ (ಹಾಸನ/ಕೊಡಗು ವರದಿ): ಹಾಸನ ಜಿಲ್ಲೆಯ ಅರಸೀಕೆರೆ ಪಟ್ಟಣದಲ್ಲಿ ಶನಿವಾರ ಸಂಜೆ ಒಂದು ಗಂಟೆ ಜೋರು ಮಳೆ ಸುರಿಯಿತು.

ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೇಹಳ್ಳಿಯಲ್ಲಿ ಸಾಧಾರಣ ಮಳೆಯಾಯಿತು.

ಕೊಡಗು ಜಿಲ್ಲೆಯ ಸಿದ್ದಾಪುರ, ನೆಲ್ಯಹುದಿಕೇರಿ, ಗುಹ್ಯ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಡಿವಿಎಸ್ ನಡೆಗೆ ಕಾಂಗ್ರೆಸ್ ಟೀಕೆ

ಬೆಂಗಳೂರು: ಮಾನಹಾನಿ ಸುದ್ದಿ ಪ್ರಕಟಿಸದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ಕೇಂದ್ರ ರಸಗೊಬ್ಬರ ಸಚಿವ ಡಿ.ವಿ. ಸದಾನಂದ ಗೌಡ ಅವರ ನಡೆಯನ್ನು ಟ್ವೀಟ್ ಮೂಲಕ ರಾಜ್ಯ ಕಾಂಗ್ರೆಸ್ ಕಾಲೆಳೆದಿದೆ.

'ತಮ್ಮವರಿಂದಲೇ #ಬ್ಲ್ಯಾಕ್ ಮೇಲ್ ಜನತಾ ಪಾರ್ಟಿ ಎಂದು ಕರೆಸಿಕೊಂಡ ಬಿಜೆಪಿಯಲ್ಲಿ ಬ್ಲ್ಯಾಕ್ ಮೇಲ್ ಭರ್ಜರಿಯಾಗಿ ನಡೆಯುತ್ತಿರುವಂತಿದೆ. ಕಂಡವರ ಬೆಡ್ ರೂಮಲ್ಲಿ ಕ್ಯಾಮೆರಾ ಇಡುವ ಚಾಳಿ ಹೊಂದಿರುವ ರಾಜ್ಯದ ಬಿಜೆಪಿ ನಾಯಕರು, ಡಿ.ವಿ ಸದಾನಂದ ಗೌಡ ಅವರನ್ನೂ ಬ್ಲ್ಯಾಕ್ ಮೇಲ್ ಮಾಡುತ್ತಿರುವಂತಿದೆ. ಬಿಜೆಪಿಯಲ್ಲಿ ಸ್ವಚ್ಛ ಚಾರಿತ್ರ್ಯ ಹೊಂದಿದವರು ಒಬ್ಬರೂ ಇಲ್ಲ' ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

'ಕಳ್ಳನ ಮನಸು ಹುಳ್ಳು ಹುಳ್ಳಗೆ ಎಂಬಂತೆ ಸದಾನಂದ ಗೌಡ ಅವರು ಸಿಡಿ ಬಿಡುಗಡೆ ಆಗದಂತೆ ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆ ತಂದ ಬಿಜೆಪಿಗರಲ್ಲಿ ಇವರು ಏಳನೆಯವರು! ಬಿಜೆಪಿಯವರಿಗೇ ಏಕೆ ಈ ಪರಿ ಸಿಡಿ ಭಯ ಎಂಬುದೇ ಯಕ್ಷಪ್ರಶ್ನೆ. ತಡೆಯಾಜ್ಞೆ ತರುವ ಮೂಲಕ ತಮ್ಮದೂ ಸಿಡಿ ಇದೆ ಎಂದು ಗೌಡರು ಸ್ವಯಂ ಒಪ್ಪಿಕೊಂಡಂತಾಗಿದೆ' ಎಂದು ವ್ಯಂಗ್ಯವಾಡಿದೆ.

ಸಿದ್ದರಾಮಯ್ಯ, 'ಕುಂಬಳ ಕಾಯಿ ಕಳ್ಳ ಎಂದರೆ ಸದಾನಂದಗೌಡ ಅವರು ಹೆಗಲು ಮುಟ್ಟಿ ನೋಡಿಕೊಳ್ಳುವುದೇಕೆ' ಎಂದು ಪ್ರಶ್ನಿಸಿದರು.

ಬಿಎಸ್‌ವೈಗೆ ತನಿಖೆಯ 'ಕಂಟಕ'

ಒಂದನೇ ಪುಟದಿಂದ

ಅದನ್ನು ತಿರಸ್ಕರಿಸಿ 2020ರ ಡಿಸೆಂಬರ್ 22ರಂದು ಆದೇಶ ಹೊರಡಿಸಿದ್ದ ಹೈಕೋರ್ಟ್, 'ಅರ್ಜಿದಾರರು ಸಂಜ್ಞೇಯ ಅಪರಾಧ ಕೃತ್ಯದಲ್ಲಿ ಭಾಗಿಯಾಗಿರುವ ಸಾಕ್ಷ್ಯಗಳು ಮೇಲ್ನೋಟದಲ್ಲೇ ಕಾಣಿಸುತ್ತಿರುವುದರಿಂದ ಪ್ರಕರಣ ರದ್ದು ಮಾಡಲಾಗದು' ಎಂದು ಹೇಳಿತ್ತು. ಪ್ರಕರಣದ ತನಿಖೆಯನ್ನು ವಿಳಂಬ ಮಾಡಿರುವುದಕ್ಕಾಗಿ ಲೋಕಾಯುಕ್ತ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿತ್ತು.

10,000 ಪುಟಗಳ ವರದಿ:

2021ರ ಜನವರಿ 18ರಂದು ಭಾರಿ ಪ್ರಮಾಣದ ದಾಖಲೆಗಳೊಂದಿಗೆ 10,000 ಪುಟಗಳ 'ಬಿ' ವರದಿ ಸಲ್ಲಿಸಿದ್ದ ಲೋಕಾಯುಕ್ತ ಡಿವೈಎಸ್‌ಪಿ ಎಂ.ಜಿ. ಶಂಕರನಾರಾಯಣ, ಯಡಿಯೂರಪ್ಪ ವಿರುದ್ಧದ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಶಿಫಾರಸು ಮಾಡಿದ್ದರು.

ದೂರುದಾರರ ಪರ ವಾದ ಮಂಡಿಸಿದ್ದ ಸುಪ್ರೀಂಕೋರ್ಟ್ ವಕೀಲ ಕೆ.ವಿ. ಧನಂಜಯ್, 'ಬಿ' ವರದಿಗೆ ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದರು. ತನಿಖಾ ತಂಡದ ವರದಿಯನ್ನು ತಿರಸ್ಕರಿಸಿ, ಯಡಿಯೂರಪ್ಪ ಮತ್ತು ಇತರ ಆರೋಪಿಗಳ ವಿರುದ್ಧ ವಿಚಾರಣೆ ಆರಂಭಿಸುವಂತೆ ಕೋರಿದ್ದರು. ಈ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಾಧೀಶ ಶ್ರೀಧರ್ ಗೋಪಾಲಕೃಷ್ಣ ಭಟ್, 'ಬಿ' ವರದಿಯನ್ನು ತಿರಸ್ಕರಿಸಿದರು.

'ದೂರಿನಲ್ಲಿರುವ ಆರೋಪಗಳ ಕುರಿತು ಮರುತನಿಖೆ ನಡೆಸಿ ಅಂತಿಮ ವರದಿ ಅಥವಾ ಹೆಚ್ಚುವರಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಲೋಕಾಯುಕ್ತ ಪೊಲೀಸ್ ಘಟಕದ ಡಿವೈಎಸ್‌ಪಿಗೆ ನಿರ್ದೇಶನ ನೀಡಲಾಗಿದೆ. ಈ ದೂರನ್ನು ರದ್ದುಗೊಳಿಸುವಂತೆ ಕೋರಿದ್ದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪಿನಲ್ಲಿ, ತನಿಖೆಯ ವಿಳಂಬದ ಕುರಿತು ನ್ಯಾಯಾಲಯ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಗಮನದಲ್ಲಿ ಇರಿಸಿಕೊಂಡು ತನಿಖೆ ನಡೆಸಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ದೂರಿನಲ್ಲಿ ಶಾಸಕ ಆರ್.ವಿ. ದೇಶಪಾಂಡೆ ಅವರನ್ನು ಮೊದಲ ಆರೋಪಿ ಎಂದು ಹೆಸರಿಸಲಾಗಿತ್ತು. ಅವರ ವಿರುದ್ಧದ ವಿಚಾರಣೆಯನ್ನು ಹೈಕೋರ್ಟ್ ರದ್ದುಗೊಳಿಸಿತ್ತು. ಆ ಆದೇಶದ ಆಧಾರದಲ್ಲೇ ತನಿಖಾಧಿಕಾರಿ 'ಬಿ' ವರದಿ ಸಲ್ಲಿಸಿದ್ದರು.

'ತನಿಖಾಧಿಕಾರಿ ಪ್ರಕರಣದ ಪ್ರಾಥಮಿಕ ಅಂಶಗಳ ಬಗ್ಗೆಯೇ ತನಿಖೆ ನಡೆಸಿಲ್ಲ. ಈ ಪ್ರಕರಣಕ್ಕೆ ಸಂಬಂಧಪಡದ ವಿಚಾರಗಳ ಆಧಾರದಲ್ಲಿ ನಿರ್ಧಾರಕ್ಕೆ ಬರಲಾಗಿದೆ. ಆರೋಪಿಯು ಅಧಿಕಾರ ದುರ್ಬಳಕೆ ಮಾಡಿದ್ದಾರೆಯೆ? ಡಿನೋಟಿಫಿಕೇಷನ್ ಮಾಡಲು ಯಾವುದಾದರೂ ಲಾಭ ಪಡೆದಿದ್ದಾರೆಯೆ? ಈ ತೀರ್ಮಾನವನ್ನು ಸಾರ್ವಜನಿಕ ಹಿತಾಸಕ್ತಿಗಾಗಿ ಕೈಗೊಂಡಿದ್ದರೆ ಎಂಬ ಪ್ರಶ್ನೆಗಳಿಗೆ ವರದಿಯಲ್ಲಿ ಉತ್ತರವೇ ಇಲ್ಲ' ಎಂದು ನ್ಯಾಯಾಲಯ ಹೇಳಿದೆ.

ಕ್ಲಬ್‌ಹೌಸ್‌ನಲ್ಲಿ ಪ್ರಜಾವಾಣಿ

ಪ್ರಜಾವಾಣಿ ಆಲದಮರ
ಖ್ಯಾತ ಸಂಗೀತ ನಿರ್ದೇಶಕ ವಿ.ಮನೋಹರ್ ಜೊತೆಗೆ ಸಿನಿಮಾದಲ್ಲಿ ಸಂಗೀತ ಕುರಿತು ಮಾತು-ಕತೆ
ಇಂದು ಬೆಳಿಗ್ಗೆ 10.30ರಿಂದ 12 ರವರೆಗೆ
/prajavani.net @prajavani /prajavani http://bit.ly/Prajavani

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
2023ರಲ್ಲಿ ಪರಿಶಿಷ್ಟ ಸಮುದಾಯಕ್ಕೆ ರಾಜ್ಯದ ಸಿಎಂ ಹುದ್ದೆ ಸಿಗಬಹುದೆ?
ಸಂವಾದದಲ್ಲಿ ಭಾಗವಹಿಸುವವರು

ಬಿ.ಎಲ್.ಶಂಕರ್ ಅಧ್ಯಕ್ಷ, ಕೆಪಿಸಿಸಿ ಮಾಧ್ಯಮ ವಿಭಾಗ
ಎನ್.ಮಹೇಶ್ ಶಾಸಕ, ಕೊಳ್ಳೇಗಾಲ
ಕೆ.ಎಂ.ಶಿವಲಿಂಗೇಗೌಡ ಜೆಡಿಎಸ್ ಶಾಸಕ, ಅರಸೀಕೆರೆ
ಸೋಮವಾರ, 5-7-2021 ಸಮಯ- ಮಧ್ಯಾಹ್ನ 2 ರಿಂದ 3

ಮೀಸಲಾತಿ: ಆಕ್ಷೇಪಣೆ ಸಲ್ಲಿಸಲು 8 ಕೊನೆಯ ದಿನ

ಬೆಂಗಳೂರು: ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ಮೀಸಲಾತಿ ನಿಗದಿಪಡಿಸಿ ಹೊರಡಿಸಿರುವ ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು ಇದೇ 8 ಕೊನೆ ದಿನ.

ಮೀಸಲಾತಿ ನಿಗದಿಪಡಿಸಿ ಇದೇ 1ರಂದು ರಾಜ್ಯ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಿತ್ತು.

ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಒಂದನೇ ಮಹಡಿ, ಕೆಎಸ್‌ಸಿಎಂಎಫ್ ಕಟ್ಟಡ (ಹಿಂಭಾಗ), ನಂ.8, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು ಇಲ್ಲಿಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ದಯಾಮರಣ ಕೋರಿ ರಾಷ್ಟ್ರಪತಿಗೆ ಮನವಿ ಸಲ್ಲಿಸಿದ ಹಾವೇರಿ ತಾಲ್ಲೂಕಿನ ಅಕ್ಕೂರು ಗ್ರಾಮದ ಸಾಗುವಳಿದಾರರು

'ಜೀವ ಬಿಟ್ಟೇವು, ಜಮೀನು ಬಿಡುವುದಿಲ್ಲ'

ಪ್ರಜಾವಾಣಿ ವಾರ್ತೆ

ಗುತ್ತಲ (ಹಾವೇರಿ): 'ಜೀವ ಬಿಟ್ಟೇವು ಜಮೀನು ಬಿಡುವುದಿಲ್ಲ' ಎಂದು ಅಕ್ಕೂರ ಗ್ರಾಮದ 20ಕ್ಕೂ ಹೆಚ್ಚು ಸಾಗುವಳಿದಾರರು ಘೋಷಣೆ ಮೊಳಗಿಸಿದರು. ಗೋಮಾಳದಲ್ಲಿ ನಡೆಸಿರುವ ಅಭಿವೃದ್ಧಿ ಕಾಮಗಾರಿಗಳನ್ನು ತಕ್ಷಣ ನಿಲ್ಲಿಸಬೇಕು. ಇಲ್ಲದಿದ್ದರೆ ತಮಗೆ ದಯಾಮರಣಕ್ಕೆ ಅನುಮತಿ ನೀಡಬೇಕು ಎಂದು ಸಾಗುವಳಿದಾರರು ಕುಟುಂಬಸ್ಥರೊಂದಿಗೆ ಶನಿವಾರ ಪ್ರತಿಭಟನೆ ನಡೆಸಿದರು.

ಬಸವನಗೌಡ ರಾಮನಗೌಡ್ರ, ಯಲ್ಲನಗೌಡ ಮರಿಗೌಡ್ರ, ಪರಮೇಶ ಕೊಂಚಿಗೇರಿ, ಸೋಮಣ್ಣ ರಾಮನೌಡ್ರ, ಪವಿತ್ರಾ ಉದ್ದಣ್ಣನವರ, ಯಲ್ಲಪ್ಪ ಕೊಂಚಿಗೇರಿ, ಮುತ್ತಪ್ಪ ಹರಿಜನ, ರವಿಚಂದ್ರಗೌಡ ಮರಿಗೌಡ್ರ, ಮಂಜಪ್ಪ ಕೊಂಚಿಗೇರಿ, ದುರಗನಗೌಡ ಮರಿಗೌಡ್ರ, ಸಂತೋಷಗೌಡ ಮರಿಗೌಡ್ರ ಸೇರಿದಂತೆ 20 ಕುಟುಂಬಗಳು ಸಾಮೂಹಿಕ ದಯಾಮರಣ ಕೋರಿ ತಹಶೀಲ್ದಾರ್ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದ್ದಾರೆ.

ಹಾವೇರಿ ತಾಲ್ಲೂಕಿನ ಅಕ್ಕೂರ ಗ್ರಾಮದ ಬಗರ್‌ಹುಕುಂ ಸಾಗುವಳಿದಾರರು ತಮ್ಮ ಕುಟುಂಬಸ್ಥರೊಂದಿಗೆ ಶನಿವಾರ ಪ್ರತಿಭಟನೆ ನಡೆಸಿದರು

ಗ್ರಾಮದ ಸರ್ವೆ ನಂ.98/2-ಇ ಗೋಮಾಳದ ಸಾಗುವಳಿ ಜಮೀನಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ವಿವಿಧ ಅಭಿವೃದ್ಧಿ ಕಾಮಗಾರಿ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಬೇಕು. ಬಗರ್‌ಹುಕುಂ ಸಮಿತಿಗಳನ್ನು ರಚಿಸಿ, ಸಾಗುವಳಿದಾರರಿಗೆ ಪಟ್ಟ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅಕ್ಕೂರ ಗ್ರಾಮದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಇತರ ಜಾತಿಯ ಭೂರಹಿತ ಕೂಲಿ ಕಾರ್ಮಿಕರು ಗ್ರಾಮದ ಅರಣ್ಯ ಹುಲ್ಲುಗಾವಲು ಗೋಮಾಳದ ಜಾಗದಲ್ಲಿ 35 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದು, ಈ ಭೂಮಿ ಬಿಟ್ಟರೆ ತಮಗೆ ಜೀವನೋಪಾಯಕ್ಕೆ ಬೇರೆ ದಾರಿಯಿಲ್ಲ ಎಂದು ಅಳಲು ತೋಡಿಕೊಂಡರು.

ಹಾವೇರಿ ಶಾಸಕ ನೆಹರು ಓಲೇಕಾರ ಅವರು ಅಧಿಕಾರಿಗಳ ಮೂಲಕ ಅಕ್ಕೂರ ಗ್ರಾಮದ ರೈತರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಹಾವೇರಿ ತಹಶೀಲ್ದಾರ್ ಅವರು ಗುತ್ತಲದ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್‌ಗೆ ಪತ್ರ ಬರೆದು, ಸಾಗುವಳಿ ಜಮೀನಿನಿಂದ ರೈತರನ್ನು ಹೊರಹಾಕಲು ತಿಳಿಸಿದ್ದಾರೆ. ಜಮೀನು ಕಸಿಯಲು ಹೊಂಚು ಹಾಕುತ್ತಿದ್ದು, ಪ್ರತಿನಿತ್ಯ ಪೊಲೀಸರ ಮೂಲಕ ನಮಗೆ ಕಿರುಕುಳ, ಒತ್ತಡ ನೀಡುತ್ತಿದ್ದಾರೆ ಎಂದು ರೈತ ರಾಮನಗೌಡ ಹಾಗೂ ಇತರರು ಆರೋಪಿಸಿದರು.

'ಬಗರ್‌ಹುಕುಂ ಸಾಗುವಳಿ ಮಾಡಿದ ರೈತರು ಸಲ್ಲಿಸಿರುವ ಅರ್ಜಿಗಳು ಪರಿಶೀಲನೆ ಹಂತದಲ್ಲಿವೆ. ಅಕ್ರಮ-ಸಕ್ರಮ ಸಮಿತಿ ರಚಿಸಲಾಗಿದೆ. ಸಮಿತಿಯಲ್ಲಿ ಮಂಜೂರಾದ ನಂತರ ವಿಚಾರಣೆ ಮಾಡಲಾಗುವುದು. ಯಾವ ರೈತರಿಗೂ ಅನ್ಯಾಯ ಮಾಡುವುದಿಲ್ಲ' ಎಂದು ಹಾವೇರಿ ತಹಶೀಲ್ದಾರ್ ಗಿರೀಶ ಸ್ವಾದಿ 'ಪ್ರಜಾವಾಣಿ'ಗೆ ತಿಳಿಸಿದರು.

ರೈತರ ಆರೋಪ ಸುಳ್ಳು: ಓಲೇಕಾರ

'ರೈತರು ಮಾಡುತ್ತಿರುವ ಆರೋಪ ಸುಳ್ಳು. ಯಾವ ರೈತರೂ 20 ವರ್ಷದಿಂದ ಉಳುಮೆ ಮಾಡಿಲ್ಲ. ಎಲ್ಲರೂ ಜಮೀನು ಇದ್ದವರೇ. ಜಮೀನು ಇಲ್ಲದವರಿಗೆ ಒಂದು ಎಕರೆ ಜಮೀನು ಕೊಡಲಾಗುವುದು. ಉಳುಮೆ ಮಾಡುವ ಸ್ಥಳವನ್ನು ಬಿಟ್ಟು, ಬೇರೆ ಕಡೆ ನವೋದಯ ಶಾಲೆ ಮತ್ತು ಕಾಲೇಜು ನಿರ್ಮಾಣ ಮಾಡಲಾಗುವುದು' ಎಂದು ಹಾವೇರಿ ಶಾಸಕ ನೆಹರು ಓಲೇಕಾರ ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	91.66	1,298	4,670
ಹಾರಂಗಿ	2,859	2,841.77	375	80
ಕಬಿನಿ	2,284	2,275.83	1,140	700
ಹೇಮಾವತಿ	2,922	2,895.96	508	200
ಲಿಂಗನಮಕ್ಕಿ	1,819	1,784.90	4,864	ಶೂನ್ಯ
ಸೂಪಾ (ಮೀ)	564	538.68	2,537	3,988
ಮಾಣಿ	594.36	573.66	557	ಶೂನ್ಯ
ತುಂಗಭದ್ರಾ	1,633	1,609.21	52,417	266
ಮಲಪ್ರಭಾ	2,079.50	2,062.85	692	194
ಘಟಪ್ರಭಾ	2,175	2,134.91	722	125
ಭದ್ರಾ	186	155.1	913	80
ಆಲಮಟ್ಟಿ (ಮೀ)	519.60	517.45	8,912	10,451
ನಾರಾಯಣಪುರ (ಮೀ)	492.25	490.06	10,000	00

* ನೆಲಮಟ್ಟದಿಂದ

ನಿರಾಶ್ರಿತರು, ಭಿಕ್ಷುಕರೂ ದುಡಿಯಬೇಕು: ಹೈಕೋರ್ಟ್

ಮುಂಬೈ (ಪಿಟಿಐ): 'ನಿರಾಶ್ರಿತರು, ಭಿಕ್ಷುಕರು ದುಡಿಯಬೇಕು. ಅವರಿಗೆ ಆಹಾರ, ನೀರು ಸೇರಿದಂತೆ ಎಲ್ಲ ಸೌಲಭ್ಯಗಳನ್ನು ರಾಜ್ಯ ಸರ್ಕಾರವೇ ಪೂರೈಸಲು ಸಾಧ್ಯವಿಲ್ಲ' ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

ನಿರಾಶ್ರಿತರು, ಭಿಕ್ಷುಕರ ಸಮಸ್ಯೆಗಳಿಗೆ ಸಂಬಂಧಿಸಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ವೇಳೆ, ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಜಿ.ಎಸ್. ಕುಲಕರ್ಣಿ ಅವರಿದ್ದ ವಿಭಾಗೀಯ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ನಿರಾಶ್ರಿತರು ಮತ್ತು ಭಿಕ್ಷುಕರಿಗೆ ಪ್ರತಿ ದಿನ ಮೂರು ಹೊತ್ತು ಪೌಷ್ಟಿಕಾಂಶಯುಕ್ತ ಆಹಾರ, ಕುಡಿಯುವ ನೀರು, ವಸತಿ ನೀಡಬೇಕು. ಜತೆಗೆ, ಸಾರ್ವಜನಿಕ ಶೌಚಾಲಯಗಳ ಉಚಿತ ಬಳಕೆಗೆ ಅನುಮತಿ ನೀಡುವಂತೆ ಬೃಹನ್ ಮುಂಬೈ ಮಹಾನಗರ ಪಾಲಿಕೆಗೆ (ಬಿಎಂಸಿ) ನಿರ್ದೇಶಿಸುವಂತೆ ಕೋರಿ ಬ್ರಿಜೇಶ್ ಆರ್ಯ ಎಂಬುವವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಮುಖ್ಯಾಂಶಗಳು

- 'ಅವರ ಬೇಡಿಕೆಗಳಿಗೆ ಒಪ್ಪಿದರೆ ಕೆಲಸ ಮಾಡಬೇಡಿ ಎಂದು ಹೇಳಿದಂತಲ್ಲವೆ'
- ಸಾರ್ವಜನಿಕ ಶೌಚಾಲಯವನ್ನು ನಿರಾಶ್ರಿತರಿಗೆ ಉಚಿತವಾಗಿ ಬಳಕೆಗೆ ನೀಡಲು ಆದೇಶ

'ಈಗಾಗಲೇ ಸ್ವಯಂ ಸೇವಾ ಸಂಸ್ಥೆಗಳ ನೆರವಿನಿಂದ ಮುಂಬೈ ಮಹಾನಗರದಲ್ಲಿರುವ ಈ ವರ್ಗದ ಜನರಿಗೆ ಆಹಾರ ಪೊಟ್ಟಣಗಳನ್ನು ವಿತರಿಸಿದ್ದೇವೆ. ಜೊತೆಗೆ ಈ ವರ್ಗದ ಮಹಿಳೆಯರಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಲಾಗಿದೆ' ಎಂದು ಬಿಎಂಸಿ ನ್ಯಾಯಾಲಯಕ್ಕೆ ತಿಳಿಸಿತು.

'ಇಂಥ ವರ್ಗದವರಿಗೆ ಆಹಾರ ಪೂರೈಕೆ ಹೆಚ್ಚಿಸುವುದು ಸೇರಿದಂತೆ ಯಾವುದೇ ವಿಷಯದಲ್ಲೂ ನಿರ್ದೇಶನ ನೀಡುವ ಅಗತ್ಯವಿಲ್ಲ. ಎಲ್ಲರೂ ಕೆಲಸ ಮಾಡುತ್ತಿದ್ದಾರೆ. ಹಾಗೆಯೇ ನಿರಾಶ್ರಿತರು (ಮನೆ ಇಲ್ಲದವರು) ಕೂಡ ದೇಶಕ್ಕಾಗಿ ಕೆಲಸ ಮಾಡಬೇಕು. ಎಲ್ಲವನ್ನೂ ರಾಜ್ಯ ಸರ್ಕಾರ ಪೂರೈಸಲು ಸಾಧ್ಯವಿಲ್ಲ. ಇಂಥ ಮನವಿ ಸಲ್ಲಿಸುವ ಮೂಲಕ, ನೀವು (ಅರ್ಜಿದಾರರು) ಸಮಾಜದಲ್ಲಿ ಇಂಥ ವರ್ಗದ ಜನರ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದೀರಿ' ಎಂದು ನ್ಯಾಯಪೀಠ ಹೇಳಿತು.

ಚೀನಾಕ್ಕೆ ರಹಸ್ಯ ಮಾಹಿತಿ ಸೋರಿಕೆ: ಪತ್ರಕರ್ತನ ಬಂಧನ

ನವದೆಹಲಿ (ಪಿಟಿಐ): ಚೀನಾದ ಗುಪ್ತಚರ ಅಧಿಕಾರಿಗಳಿಗೆ ಸೂಕ್ಷ್ಮ ಮಾಹಿತಿ ಸೋರಿಕೆ ಮಾಡಿದ ಆರೋಪ ಮತ್ತು ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ದೆಹಲಿ ಮೂಲದ ಸ್ವತಂತ್ರ ಪತ್ರಕರ್ತನನ್ನು ಬಂಧಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ತಿಳಿಸಿದೆ.

ಬಂಧಿತ ರಾಜೀವ್ ಶರ್ಮಾನನ್ನು ಜುಲೈ 1ರಂದು ಅಕ್ರಮ ಹಣ ವರ್ಗಾವಣೆ ನಿಯಂತ್ರಣ ಕಾಯ್ದೆಯ (ಪಿಎಂಎಲ್‌ಎ) ಕ್ರಿಮಿನಲ್ ಸೆಕ್ಷನ್‌ಗಳ ಅಡಿ ಬಂಧಿಸಲಾಗಿದ್ದು, ಸ್ಥಳೀಯ ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಲಾಯಿತು. ನ್ಯಾಯಾಲಯವು ಶರ್ಮಾನನ್ನು ಏಳು ದಿನಗಳವರೆಗೆ ಇ.ಡಿ ಕಸ್ಟಡಿಗೆ ನೀಡಿದೆ ಎಂದು ಕೇಂದ್ರ ತನಿಖಾ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

'ಚೀನಾದ ಗುಪ್ತಚರ ಅಧಿಕಾರಿಗಳಿಗೆ ಗೋಪ್ಯ ಮತ್ತು ಸೂಕ್ಷ್ಮ ಮಾಹಿತಿ ಒದಗಿಸಿದ್ದಕ್ಕಾಗಿ, ಚೀನಾ ಮೂಲದ ಶೆಲ್ ಕಂಪನಿಯೊಂದರ ಮೂಲಕ ಹವಾಲ ಹಣವನ್ನು ಶರ್ಮಾ ಮತ್ತು ಇತರ ಆಪಾದಿತ ವ್ಯಕ್ತಿಗಳು ಸಂಭಾವನೆಯಾಗಿ ಪಡೆದಿದ್ದಾರೆ' ಎಂದು ತನಿಖಾ ಸಂಸ್ಥೆ ಆರೋಪಿಸಿದೆ.

ನಗದು ಪಡೆದಿರುವುದರ ಹೊರತಾಗಿ, ಚೀನಾದ ವಿವಿಧ ಕಂಪನಿಗಳು ಮತ್ತು ಭಾರತದ ಇತರ ಕೆಲವು ವ್ಯಾಪಾರ ಕಂಪನಿಗಳೊಂದಿಗೆ ಬೃಹತ್ ವಹಿವಾಟು ಕೂಡ ನಡೆದಿದ್ದು, ಅವುಗಳನ್ನೂ ಪರಿಶೀಲಿಸಲಾಗುತ್ತಿದೆ ಎಂದು ಇ.ಡಿ ತಿಳಿಸಿದೆ.

ಶರ್ಮಾ ವಿರುದ್ಧದ ಇ.ಡಿ ಪ್ರಕರಣ ಆಧರಿಸಿ ದೆಹಲಿ ಪೊಲೀಸರು ಕಳೆದ ವರ್ಷವೇ ಎಫ್‌ಐಆರ್ ದಾಖಲಿಸಿದ್ದರು. ಕಳೆದ ಸೆಪ್ಟೆಂಬರ್ 14ರಂದು ದೆಹಲಿ ಪೊಲೀಸರು ಈತನನ್ನು ಬಂಧಿಸಿದ್ದರು. ಬಳಿಕ ಅವರು ಬಿಡುಗಡೆಯಾಗಿದ್ದರು.

ಮತಾಂತರಕ್ಕೆ ವಿದೇಶಿ ಹಣ ಬಳಕೆ ಆರೋಪ

ದೇಶದ 6 ಕಡೆ ಇ.ಡಿ ದಾಳಿ

ನವದೆಹಲಿ (ಪಿಟಿಐ): ಇಸ್ಲಾಂ ಧರ್ಮಕ್ಕೆ ಅಯ್ಯು ವಿದ್ಯಾರ್ಥಿಗಳನ್ನು ಮತಾಂತರಗೊಳಿಸಲು ವಿದೇಶಗಳಿಂದ ಅಕ್ರಮವಾಗಿ ಹಣ ವರ್ಗಾವಣೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶನಿವಾರ ದೆಹಲಿ ಮತ್ತು ಉತ್ತರ ಪ್ರದೇಶದಲ್ಲಿ ಆರು ಕಡೆ ತಪಾಸಣೆ ನಡೆಸಿದರು.

ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಉಮರ್ ಗೌತಮ್ ಮತ್ತು ಅವರ ಸಹಚರ ಮುಫ್ತಿ ಕಾಜಿ ಜಹಾಂಗೀರ್ ಆಲಂ ಖಾಸ್ಮಿ ಅವರಿಗೆ ಸೇರಿದ್ದ, ದಕ್ಷಿಣ ದೆಹಲಿಯ ಜಾಮಿಯಾ ನಗರ ಪ್ರದೇಶದಲ್ಲಿರುವ ನಿವಾಸಗಳು ಮತ್ತು ಇಸ್ಲಾಮಿಕ್ ದವಾಹ್ ಸೆಂಟರ್‌ನ (ಐಡಿಸಿ) ಕಚೇರಿಯ ಮೇಲೆ ದಾಳಿ ನಡೆಯಿತು.

ಲಖನೌನಲ್ಲಿರುವ ಅಲ್ ಹಸನ್ ಎಜುಕೇಷನ್ ಅಂಡ್ ವೆಲ್‌ಫೇರ್ ಫೌಂಡೇಷನ್ ಕಚೇರಿ ಮತ್ತು ಮಾರ್ಗದರ್ಶಿ ಕೇಂದ್ರದ ಕಚೇರಿ ಮೇಲೆ ದಾಳಿ ನಡೆಯಿತು. 'ಉಮರ್ ಗೌತಮ್ ನಡೆಸುತ್ತಿದ್ದ ಈ ಸಂಸ್ಥೆಗಳು ಮತಾಂತರ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ' ಎಂದು ಇ.ಡಿ ಅಧಿಕಾರಿಗಳು ತಿಳಿಸಿದರು.

ಉತ್ತರ ಪ್ರದೇಶ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಪತ್ತೆ ಹಚ್ಚಿದ ಈ ಪ್ರಕರಣ ಕುರಿತಂತೆ ಇ.ಡಿಯು ಅಕ್ರಮ ಹಣ ವರ್ಗಾವಣೆ ನಿಯಂತ್ರಣ ಕಾಯ್ದೆ (ಪಿಎಂಎಲ್‌ಎ) ಅನ್ವಯ ಕ್ರಿಮಿನಲ್ ಪ್ರಕರಣ ದಾಖಲಿಸಿದೆ.

ದಾಳಿ ಸಂದರ್ಭದಲ್ಲಿ ಅನೇಕ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಉಮರ್ ಗೌತಮ್, ಅವರ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿಯೇ ಮತಾಂತರ ಕೈಗೊಂಡಿರುವುದು, ಈ ಉದ್ದೇಶಕ್ಕಾಗಿಯೇ ವಿದೇಶಗಳಿಂದ ಕೋಟ್ಯಂತರ ರೂಪಾಯಿ ಸಂಸ್ಥೆಗಳಿಗೆ ವರ್ಗಾವಣೆ ಆಗಿರುವುದು ಈ ದಾಖಲೆಗಳಿಂದ ತಿಳಿದುಬಂದಿದೆ ಎಂದು ತಿಳಿಸಿದ್ದಾರೆ.

ಉಮರ್ ಮತ್ತು ಖಾಸ್ಮಿ ಅವರನ್ನು ಬಂಧಿಸಿದ್ದ ಉತ್ತರ ಪ್ರದೇಶದ ಎಟಿಎಸ್ ಅಧಿಕಾರಿಗಳು, 'ಅವರು ನಡೆಸುತ್ತಿದ್ದ 'ಇಸ್ಲಾಮಿಕ್ ದವಾಹ್ ಸೆಂಟರ್'ಗೆ ಪಾಕಿಸ್ತಾನದ ಐಎಸ್‌ಐ ಮತ್ತು ಇತರ ವಿದೇಶಿ ಸಂಸ್ಥೆಗಳಿಂದ ಹಣ ವರ್ಗಾವಣೆ ಆಗುತ್ತಿತ್ತು, ಈ ಮೂಲಕ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತು' ಎಂದು ತಿಳಿಸಿತ್ತು.

ಆರೋಪಿ ಉಮರ್ ಗೌತಮ್ ಈ ಎಲ್ಲ ಸಂಘಟನೆಗಳ ಜೊತೆಗೂ ಗುರುತಿಸಿಕೊಂಡಿದ್ದು, ಮತಾಂತರ ಚಟುವಟಿಕೆಗಳಲ್ಲಿ ಮುಖ್ಯಪಾತ್ರ ವಹಿಸಿದ್ದ ಎಂದು ಇ.ಡಿ ಅಧಿಕಾರಿಗಳು ಹೇಳಿದ್ದಾರೆ.

ಉತ್ತರ ಪ್ರದೇಶ ಪೊಲೀಸರ ಪ್ರಕಾರ, ಆರೋಪಿ ಸಲಾವುದ್ದೀನ್ ಶೇಖ್ ಎಂಬಾತ ಹವಾಲಾ ಹಣವನ್ನು ಉಮರ್‌ಗೆ ಕಳುಹಿಸಿಕೊಟ್ಟಿದ್ದು, ಮತಾಂತರಕ್ಕೆ ನೆರವು ನೀಡುವಂತೆ ಸೂಚಿಸಿದ್ದ. ಈ ಪ್ರಕರಣದ ಸಂಬಂಧ ಉತ್ತರ ಪ್ರದೇಶದ ಪೊಲೀಸರು ಒಟ್ಟು ಆರು ಜನರನ್ನು ಬಂಧಿಸಿದ್ದಾರೆ.

ಅಮೀರ್– ಕಿರಣ್ ರಾವ್ ವಿಚ್ಛೇದನಕ್ಕೆ ನಿರ್ಧಾರ

ಮುಂಬೈ (ರಾಯಿಟರ್ಸ್): ಬಾಲಿವುಡ್ ನಟ ಅಮೀರ್ ಖಾನ್ ಮತ್ತು ನಿರ್ದೇಶಕಿ, ನಿರ್ಮಾಪಕಿಯೂ ಆದ ಅವರ ಪತ್ನಿ ಕಿರಣ್ ರಾವ್ 15 ವರ್ಷದ ದಾಂಪತ್ಯದ ಬದುಕನ್ನು ಅಂತ್ಯಗೊಳಿಸಲು ನಿರ್ಧರಿಸಿದ್ದಾರೆ. ನಾವು ವಿಚ್ಛೇದನ ಹೊಂದಲು ತೀರ್ಮಾನಿಸಿದ್ದೇವೆ ಎಂದೂ ಅವರು ಜಂಟಿಯಾಗಿ ಹೇಳಿಕೆ ನೀಡಿದ್ದಾರೆ.

ವಿಚ್ಛೇದನದ ನಂತರವೂ ಮಗ ಅಜಾದ್ ಬೆಳವಣಿಗೆಗೆ ಒತ್ತಾಸೆಯಾಗಿ ನಿಲ್ಲಲು ಹಾಗೂ ಚಲನಚಿತ್ರಗಳ ನಿರ್ಮಾಣದಲ್ಲಿ ಸಹಯೋಗ ಹೊಂದಲು ಹಾಗೂ ಸೇವಾಸಂಸ್ಥೆ

'ಪಾನಿ ಫೌಂಡೇಷನ್' ಹಾಗೂ ಇತರೆ ಯೋಜನೆಗಳಲ್ಲಿ ಒಟ್ಟಿಗೇ ಕಾರ್ಯ ನಿರ್ವಹಿಸಲು ತೀರ್ಮಾನಿಸಿದ್ದೇವೆ ಎಂದೂ ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಬೇರೆ ಆಗಬೇಕು ಎಂದು ತುಂಬ ಹಿಂದೆಯೇ ನಿರ್ಧರಿಸಿದ್ದೆವು. ಈಗ ಕಾರ್ಯಗತಗೊಳಿಸುತ್ತಿದ್ದೇವೆ. ಪ್ರತ್ಯೇಕವಾಗಿ ಜೀವಿಸಿದರೂ, ಬೆಳೆದ ಕುಟುಂಬದಂತೆ ನಾವು ಬದುಕನ್ನು ಹಂಚಿಕೊಳ್ಳಲಿದ್ದೇವೆ ಎಂದು ತಿಳಿಸಿದ್ದಾರೆ.

'ನಮ್ಮ ಬದುಕಿನಲ್ಲಿ ಇನ್ನು ಹೊಸ ಅಧ್ಯಾಯ. ನಾವು ಇನ್ನು ಪತಿ, ಪತ್ನಿಯಲ್ಲ. ಒಂದು ಕುಟುಂಬದಲ್ಲಿನ ಸಹ ಪೋಷಕರು' ಎಂದು ನಾಳಿನ ಬದುಕನ್ನು ವ್ಯಾಖ್ಯಾನಿಸಿಕೊಂಡಿದ್ದಾರೆ.

56 ವರ್ಷದ ಅಮೀರ್ ಖಾನ್ ಅವರಿಗೆ ಮೊದಲ ಪತ್ನಿಯಿಂದ ಇಬ್ಬರು ಮಕ್ಕಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಹಾರಾಷ್ಟ್ರ ವಿಚಾರಣೆಗೆ ಹಾಜರಾಗಲು ದೇಶಮುಖ್‌ಗೆ ಸಮನ್ಸ್

ಮುಂಬೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜುಲೈ 5ರಂದು ವಿಚಾರಣೆಗೆ ಹಾಜರಾಗುವಂತೆ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರಿಗೆ ಸಮನ್ಸ್ ನೀಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ದೇಶಮುಖ್ ಅವರಿಗೆ ನೀಡಿರುವ ಮೂರನೇ ಸಮನ್ಸ್ ಇದಾಗಿದೆ. ದಕ್ಷಿಣ ಮುಂಬೈನಲ್ಲಿರುವ ಇ.ಡಿ ಕಚೇರಿಯಲ್ಲಿ ಸೋಮವಾರ ಹೇಳಿಕೆ ದಾಖಲಿಸುವಂತೆ ಅವರಿಗೆ ಸೂಚನೆ ನೀಡಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಉಪಚುನಾವಣೆ ನಡೆಸಿ: ಆಯೋಗಕ್ಕೆ ಪ.ಬಂಗಾಳ ಸರ್ಕಾರದ ಪತ್ರ

ನವದೆಹಲಿ: ಕೋವಿಡ್ ಎರಡನೇ ಅಲೆಯು ಕ್ಷೀಣಿಸುತ್ತಿದ್ದು ಪಶ್ಚಿಮ ಬಂಗಾಳದಲ್ಲಿ, ಖಾಲಿ ಇರುವ ವಿಧಾನಸಭೆಯ ಏಳು ಕ್ಷೇತ್ರಗಳಿಗೆ ಎಷ್ಟು ಸಾಧ್ಯವೋ ಅಷ್ಟು ಬೇಗ ಚುನಾವಣೆ ನಡೆಸಬೇಕು ಎಂದು ಕೋರಿ ಪಶ್ಚಿಮ ಬಂಗಾಳ ಸರ್ಕಾರವು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ.

ವಿಧಾನಸಭೆಗೆ ಆಯ್ಕೆಯಾಗದ ಕಾರಣಕ್ಕೆ ಉತ್ತರಾಖಂಡದಲ್ಲಿ ಮುಖ್ಯಮಂತ್ರಿಯನ್ನು ಬದಲಾಯಿಸಿದ ಬೆಳವಣಿಗೆಯನ್ನು ನೆಪವಾಗಿಸಿ, ಪಶ್ಚಿಮ ಬಂಗಾಳದಲ್ಲಿಯೂ ಮುಖ್ಯಮಂತ್ರಿ ರಾಜೀನಾಮೆಗೆ ಬಿಜೆಪಿ ಒತ್ತಡ ಹೇರಬಹುದು ಎಂಬ ಊಹಾಪೋಹದ ಹಿನ್ನೆಲೆಯಲ್ಲಿ ಇದು ಮಹತ್ವ ಪಡೆದಿದೆ.

ರಾಜ್ಯಸಭೆಯ ಎರಡು ಸ್ಥಾನಗಳಿಗಷ್ಟೇ ಅಲ್ಲ, ಖಾಲಿ ಉಳಿದಿರುವ ವಿಧಾನಸಭೆಯ ಏಳು ಕ್ಷೇತ್ರಗಳಿಗೂ ಚುನಾವಣೆ ನಡೆಸಬೇಕು ಎಂದು ಪತ್ರದಲ್ಲಿ ಒತ್ತಾಯಿಸಿದೆ.

ಉ. ಪ್ರದೇಶ: ಯುಎಪಿಎ ಪ್ರಕರಣ ಪರಿಶೀಲನೆಗೆ ಪ್ರಾಧಿಕಾರ ರಚನೆ

ಲಖನೌ (ಪಿಟಿಐ): ರಾಜ್ಯ ಪೊಲೀಸ್ ಇಲಾಖೆಯ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ತನಿಖೆ ನಡೆಸುತ್ತಿರುವ ಪ್ರಕರಣಗಳಿಗೆ ಕಾನೂನು ಕ್ರಮ ಜರುಗಿಸುವ ಮೊದಲು ಸ್ವತಂತ್ರ ಪರಿಶೀಲನೆ ನಡೆಸಲು ಉತ್ತರ ಪ್ರದೇಶ ಸರ್ಕಾರ ಪ್ರಾಧಿಕಾರವನ್ನು ರಚಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಈ ಪ್ರಾಧಿಕಾರದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರು ಮತ್ತು ನಿವೃತ್ತ ಪ್ರಧಾನ ಕಾರ್ಯದರ್ಶಿ (ಕಾನೂನು) ಸದಸ್ಯರಾಗಿರುತ್ತಾರೆ.

'ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ 1967ರ ಅಡಿಯಲ್ಲಿ ರಾಜ್ಯದಲ್ಲಿ ದಾಖಲಾದ ಪ್ರಕರಣಗಳು ಮತ್ತು ಸಾಕ್ಷ್ಯಗಳನ್ನು ಪರಿಶೀಲಿಸಲು ರಾಜ್ಯ ಸರ್ಕಾರ ಇಬ್ಬರು ಸದಸ್ಯರ ಪ್ರಾಧಿಕಾರ ರಚಿಸಿದೆ' ಎಂದು ಗೃಹ ಕಾರ್ಯದರ್ಶಿ ಬಿ.ಡಿ. ಪಾಲ್ಸನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಈ ಪ್ರಾಧಿಕಾರವು ಒಂದು ವರ್ಷದವರೆಗೆ ಕಾರ್ಯನಿರ್ವಹಿಸಲಿದೆ. ಈ ಸಮಿತಿ ಯುಎಪಿಎ ಅಡಿಯಲ್ಲಿ ದಾಖಲಾದ ಪ್ರಕರಣಗಳ ವಿಚಾರಣೆ ನಡೆಸಿ, ಕಾನೂನು ಕ್ರಮ ಜರುಗಿಸಲು ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡಲಿದೆ' ಎಂದು ಹೇಳಿದರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ
ನಂ.ಪಂರಾಇಂವಿ/ಹಾವೇರಿ/ಪಿಬಿ–4/ಟೆಂಡರ್/2020–21/1206ದಿನಾಂಕ:29–06–2021
ಟೆಂಡರ ಪ್ರಕಟಣೆ ನಂ: 16/2021–22
(E.GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

2019–20 ನೇ ಸಾಲಿನ ಆರ್ಥಿಕ ವರ್ಷದ ಲೆಕ್ಕಶೀರ್ಷಿಕೆ 5054 ಮಳೆಹಾನಿ ಯೋಜನೆಯಡಿ ರಾಣೇಬೆನ್ನೂರ ತಾಲೂಕಿನ ರಸ್ತೆ ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ. (1) ಮುದೇನೂರು ಗ್ರಾಮದ ವ್ಯಾಪ್ತಿಯಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ **(INDENT84446) (ST)** (2) ಉದಗಟ್ಟಿ ಗ್ರಾಮದ ವ್ಯಾಪ್ತಿಯಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ **(INDENT84447)** (3) ಅಂತರವಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ **(INDENT84448)** (4) ಮಾಕನೂರ ಗ್ರಾಮದ ವ್ಯಾಪ್ತಿಯಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ **(INDENT84449)**

(1) ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಡೌನಲೋಡ್ ಮಾಡುವ ದಿನಾಂಕ : **30–06–2021** (2) ಇ–ಪ್ರಕ್ಯೂರಮೆಂಟ್ ಮೂಲಕ ಭರ್ತಿಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **14–07–2021** ರ 16:00 ಗಂಟೆವರೆಗೆ (3) ಇ–ಪ್ರೋಕ್ಯೂರಮೆಂಟ್ ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) (ಕ್ರ.ಸಂ. 1 ಮತ್ತು 3ಕ್ಕೆ ಆರ್ಥಿಕ ಬಿಡ್) (ಕ್ರ.ಸಂ. 4ಕ್ಕೆ ತಾಂತ್ರಿಕ ಬಿಡ್) ದಿನಾಂಕ : **15–07–2021** ರ 17:00 ಗಂಟೆಗೆ (4) ಇ–ಪ್ರೋಕ್ಯೂರಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) (ಕ್ರ.ಸಂ. 4ಕ್ಕೆ ಆರ್ಥಿಕ ಬಿಡ್) ದಿನಾಂಕ : **19–07–2021** ರ 10:30 ಗಂಟೆಗೆ

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ–ಪ್ರಕ್ಯೂರಮೆಂಟ್ ಪ್ಲಾಟ್‌ಫಾರಂನಲ್ಲಿ **www.eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾಸಾಸಂಇ/ಹಾವೇರಿ/ಎಂ.ಸಿ.ಎ/128/2021–22 ಪಂ.ರಾ.ಇಂ. ವಿಭಾಗ, ಹಾವೇರಿ

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2278480, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂಖ್ಯೆ.ತುಮಪಾ/ಆಶಾ/ಸಿಆರ್–22/2021–22 ದಿನಾಂಕ: 01.07.2021
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ವಚ್ಛಭಾರತ್ ಮಿಷನ್ ನಿಧಿಯಡಿಯಲ್ಲಿ ಆರೋಗ್ಯಶಾಖೆಯಿಂದ ತುಮಕೂರು ಮಹಾನಗರ ಪಾಲಿಕೆಗೆ ಘನತ್ಯಾಜ್ಯ ವಸ್ತು ಸಾಗಾಣಿಕೆ ಮತ್ತು ನಿರ್ವಹಣೆಗೆ ಅವಶ್ಯಕವಿರುವ ವಿವಿಧ ವಾಹನ/ಯಂತ್ರೋಪಕರಣಗಳನ್ನು ಸರಬರಾಜು ಮಾಡುವ 02 ಸಂಖ್ಯೆಯ ಕಾಮಗಾರಿಗಳಿಗೆ ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಮಾಹಿತಿಯನ್ನು http://www.eproc.karnataka. gov.inನಲ್ಲಿ ಪಡೆಯಬಹುದಾಗಿದೆ.

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ. (1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: **02.07.2021** ರಿಂದ ದಿನಾಂಕ: **31.07.2021** ರವರೆಗೆ. **(2)** ಪ್ರೀಬಿಡ್ ಮೀಟಿಂಗ್ ದಿನಾಂಕ: **23.07.2021** ಬೆಳಗ್ಗೆ 11.30ಗಂಟೆಗೆ. **(3)** ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **31.07.2021** ರಂದು ಸಾಯಂಕಾಲ 4.30 ಗಂಟೆವರೆಗೆ **(4)** ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **02.08.2021** ಬೆಳಗ್ಗೆ 11.00ಗಂಟೆಗೆ

ಸಹಿ/– ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ, ತುಮಕೂರು
DIPR/TUM/145/MCA/2021-22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ
ಅಂಬೇಡ್ಕರ್ ಸರ್ಕಲ್ ಹತ್ತಿರ, ಹಂಪಿ ರಸ್ತೆ, ಕಮಲಾಪುರ–583221
ಹೊಸಪೇಟೆ (ತಾ) ಇ–ಮೇಲ್: hwhama@gmail.com
ವೆಬ್‌ಸೈಟ್ :hwhama.tpa.gov.in ದೂರವಾಣಿ: 08394–241661
ಸಂಖ್ಯೆ:ಹವಿಪಪ್ರನಿಪ್ರಾ/ಕ/35/2012–13 ದಿನಾಂಕ:01–07–2021
ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ 2015 ಕಲಂ 69(3)ರಡಿಯಲ್ಲಿ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಹೊಸಪೇಟೆ ತಾಲೂಕು ಕಮಲಾಪುರ ಗ್ರಾಮದ ಸ.ನಂ:238/ಎ1ಎ2ಬಿ ಒಟ್ಟು ವಿಸ್ತೀರ್ಣ 2.96 ಎಕರೆ ಜಮೀನು ಶ್ರೀ ವಿ.ಎಸ್.ಫಯಾಜ್ ಅಹಮ್ಮದ್ ತಂದೆ ವಿ.ಎಸ್.ಜಾನಿಪಾಷ, ಕಮಲಾಪುರ ಇವರ ಮಾಲೀಕತ್ವದಲ್ಲಿ ಇರುತ್ತದೆ.

ಸದರಿ ಜಮೀನು ಅನುಮೋದಿತ ಮಹಾಯೋಜನೆಯಲ್ಲಿ ಸಾರ್ವಜನಿಕ ಅರೆಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿದೆ. ಸದರಿ ಜಮೀನು ಹಾಲಿ ಕಮಲಾಪುರದಿಂದ ಪಾಪಿನಾಯಕನಹಳ್ಳಿಗೆ ಹೋಗುವ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿದ್ದು, ರಸ್ತೆ ಸಂಪರ್ಕ ಇರುತ್ತದೆ. ಪ್ರಸ್ತಾಪಿತ ಜಮೀನನ್ನು ವಾಣಿಜ್ಯ (ಹೋಟೆಲ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಹೊಟೇಲ್ ನಿರ್ಮಾಣ ಮಾಡುವುದಾಗಿ ಹಾಗೂ ಇದರಿಂದ ಸ್ಥಳೀಯರಿಗೆ ಉದ್ಯೋಗ ಅವಕಾಶ ಮತ್ತು ಪ್ರವಾಸಿಗರಿಗೆ ಅನುಕೂಲವಾಗುವುದರಿಂದ ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ.

ಆದ್ದರಿಂದ ಪ್ರಸ್ತಾಪಿತ ಜಮೀನಿಗೆ ವಾಣಿಜ್ಯ (ಹೋಟೆಲ್) ವಲಯವೆಂದು ಹೊಸ ಭೂ ಉಪಯೋಗವನ್ನು ನಿಗದಿಪಡಿಸುವ ಬಗ್ಗೆ ಸಾರ್ವಜನಕರ ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಕಮಲಾಪುರ ಇವರಿಗೆ ಲಿಖಿತ ಆಕ್ಷೇಪಣೆ/ಸಲಹೆಗಳನ್ನು ಖುದ್ದಾಗಿ/ನೊಂದಾಯಿತ ಅಂಚೆ ಮೂಲಕ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ಅವಧಿಯ ನಂತರ ಬಂದ ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ
ನಿರ್ವಹಣಾ ಪ್ರಾಧಿಕಾರ, ಹೊಸಪೇಟೆ
ಡಿಐಪಿಆರ್/ಬಳ್ಳಾರಿ/171/ಎಂಸಿಎ/2021–22

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
Phone : 08472-278672, Fax : 08472-278804
ಸಂಖ್ಯೆ : ನಪ್ರಾಕ/ತಾಂತ್ರಿಕ/ಎಸ್.ಬಿ. ಕೆರೆ/2021–22/983 ದಿನಾಂಕ: 03–07–2021
:: ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ ::

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಈ ಕೆಳಕಂಡ ಕಾಮಗಾರಿಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಮೊದಲನೇ ದರ್ಜೆ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ದ್ವಿಲಕೋಟೆ ಮಾದರಿಯಲ್ಲಿ KW-4 ರಂತೆ ಇ–ಪ್ರೋಕ್ಯೂರಮೆಂಟ ಟೆಂಡರ ಕರೆಯಲಾಗಿರುವುದು.

ಟೆಂಡರ ದಿನಾಂಕ ಮತ್ತು ಸಮಯ :

1) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ : **28-07-2021 @ 11.00 am,** 2) ಕ್ವಾರೀಸ್‌ಗಾಗಿ ಕೊನೆಯ ದಿನಾಂಕ ಮತ್ತು ಸಮಯ : **31-07-2021 upto 5.30 pm,** 3) ಟೆಂಡರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **03-08-2021 upto 4.00 pm,** 4) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **05-08-2021 @ 11.00 am,** 5) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : **09-08-2021 @ 11.00 am,**

1) ಕಾಮಗಾರಿ ಹೆಸರು : ಕಲಬುರಗಿ ನಗರದ (ಅಪ್ಪಾ ಕೆರೆಗೆ ಹೊಂದಿಕೊಂಡಿರುವ) ಧೋಬಿ ಘಾಟ ಸ್ಥಳದಿಂದ ಮೀನು ಮಾರುಕಟ್ಟೆ ಸ್ಟಾಲ್ ವರೆಗೆ (ಗಣೇಶ ವಿಸರ್ಜನೆ ರಸ್ತೆಯ ಎರಡು ಬದಿ) ಪಾದಚಾರಿ ಮಾರ್ಗ ನಿರ್ಮಿಸಿ ಅಭಿವೃದ್ಧಿಪಡಿಸುವ ಕಾಮಗಾರಿ, 2) ಟೆಂಡರಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): **Rs. 408.99,** 3) ಮುಂಗಡ ಠೇವಣಿ ಮೊತ್ತ (ಇ.ಎಂ.ಡಿ) : Rs. 1.00 Lakhs Through e- portal & Rs. 308,990/- through FDR/B.G/DD, 4) ಟೆಂಡರ ಅರ್ಜಿ ಶುಲ್ಕ : As per e- portal, 5) ಕೆಲಸದ ಅವಧಿ : 09 ತಿಂಗಳು (ಮಳೆಗಾಲ ಸಹಿತ).

ಸಹಿ/– ಆಯುಕ್ತರು
ವಾ.ಸಾ.ಸಂ.ಇ/ಕಲಬುರಗಿ/391/ಎಂ.ಸಿ.&ಎ/2021–22 ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.
website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಪಿಎಂಸಿ/ಇಟಿಎನ್‌ಡಿ–ಇಪಿ–01/3302/2021–22 ದಿನಾಂಕ: 03.07.2021
ಯೋಜನಾ ನಿರ್ವಹಣಾ ಸೇವೆಗಳನ್ನು (ಪಿಎಂಸಿ) ಒದಗಿಸಲು ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಯೋಜನಾ ನಿರ್ವಹಣಾ ಸೇವೆಗಳನ್ನು (ಪಿಎಂಸಿ) ಒದಗಿಸಲು ಅರ್ಹ ಸಲಹಾ ಸಂಸ್ಥೆಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿಗಳ ಹೆಸರು: ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕು, ಕೈವಾರ ಹೋಬಳಿಯ ರಾಜ್ಯ ಹೆದ್ದಾರಿ ಎಸ್‌ಹೆಚ್–82 (ಹೊಸಕೋಟೆ – ಚಿಂತಾಮಣಿ ರಸ್ತೆ)ಯ ಪ್ರವೇಶ ರಸ್ತೆಯಿಂದ ಮಸ್ತೇನಹಳ್ಳಿ ಕೈಗಾರಿಕಾ ಪ್ರದೇಶದವರೆಗೆ 30 ಮೀ ಅಗಲದ ಡಾಂಬರೀಕರಣ ರಸ್ತೆ, ಆರ್‌ಸಿಸಿ ಒಳಚರಂಡಿ ಮತ್ತು ಕಲ್ವರ್ಟ್‌ಗಳ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಗಳಿಗೆ ಪಿಎಂಸಿ ಸೇವೆ ಒದಗಿಸುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23.07.2021, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
DIPR/DDU/Zen/R.O:736/2021-22 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.
website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–12/3225/2021–22 ದಿನಾಂಕ: 02.07.2021
ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕ ಕೌಶಲ್ಯತೆಗಳು, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕರ್ನಾಟಕ ಸರ್ಕಾರದ ಕೆ.ಸಿ.ಇ.ಐ ನಿಂದ ಪಡೆದ ಸೂಪರ್ ಗ್ರೇಡ್ ವಿದ್ಯುತ್ ಗುತ್ತಿಗೆದಾರರ ಪರವಾನಗಿ ಹಾಗೂ ಕೆ.ಪಿ.ಡಬ್ಲ್ಯೂ.ಡಿ ದರ್ಜೆ–1 (ಸಿವಿಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು: (1) ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕು, ಕುಡುತಿನಿ ಕೈಗಾರಿಕಾ ಪ್ರದೇಶದಲ್ಲಿ 2x10 ಎಂ.ವಿ.ಎ, 110/11 ಕೆವಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಹಾಗೂ ಸಂಬಂಧಿಸಿದ 110 ಕೆ.ವಿ ಲೈನ್‌ನ್ನು ಹಾಲಿ ಇರುವ ಅಲಿಪುರ–ಮುನಿರಾಬಾದ್ 110ಕೆ.ವಿ ಡಿ/ಸಿ ಲೈನ್‌ನಿಂದ ಪ್ರಸ್ತಾಪಿತ ಉಪ ಕೇಂದ್ರದವರೆಗೆ 110ಕೆ.ವಿ ಲಿಲೋ ಲೈನ್ ನಿರ್ಮಾಣವನ್ನು ಒಳಗೊಂಡಂತೆ ಸಮಗ್ರ ಗುತ್ತಿಗೆ ಆಧಾರದಲ್ಲಿ ಸ್ಥಾಪನೆ ಮಾಡುವ ಕಾಮಗಾರಿ. (2) ರಾಯಚೂರು ಜಿಲ್ಲೆ ಮತ್ತು ತಾಲ್ಲೂಕು, ಕೆ.ಐ.ಎ.ಡಿ.ಬಿ ವಸತಿ ಬಡಾವಣೆಯಲ್ಲಿ 1x20 ಎಂ.ವಿ.ಎ, 1x10 ಎಂ.ವಿ.ಎ 110/11 ಕೆವಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಹಾಗೂ ಸಂಬಂಧಿಸಿದ 110 ಕೆ.ವಿ ಡಿ/ಸಿ ಲೈನ್‌ನ್ನು ಹಾಲಿ ಚಿಕ್ಕಸುಗುರ್ ಉಪ ಕೇಂದ್ರದಲ್ಲಿ ಟರ್ಮಿನಲ್ ಬೇ ನಿರ್ಮಿಸಿ, ಚಿಕ್ಕಸುಗುರ್–ವಡವಟ್ಟಿ ಎಸ್/ಸಿ ಲೈನ್ ಸಂಪರ್ಕ ಒದಗಿಸುವುದು ಮತ್ತು ಸದರಿ ಲೈನ್‌ನಿಂದ ಪ್ರಸ್ತಾಪಿತ ಉಪ ಕೇಂದ್ರಕ್ಕೆ Lynx ವಾಹಕ ಬಳಸಿ ಲಿಲೋ ಲೈನ್ ನಿರ್ಮಾಣವನ್ನು ಒಳಗೊಂಡಂತೆ ಸಮಗ್ರ ಗುತ್ತಿಗೆ ಆಧಾರದಲ್ಲಿ ಸ್ಥಾಪನೆ ಮಾಡುವ ಕಾಮಗಾರಿ (3) ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹಿಮ್ಮಾವು ಕೈಗಾರಿಕಾ ಪ್ರದೇಶದಲ್ಲಿ 2x8 ಎಂ.ವಿ.ಎ, 66/11 ಕೆವಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಹಾಗೂ ಸಂಬಂಧಿಸಿದ 66 ಕೆ.ವಿ ಎಸ್/ಸಿ ಲೈನ್‌ನ್ನು ಹಾಲಿ 66/11 ಕೆ.ವಿ ಅಯ್ಯರಹಳ್ಳಿ ಉಪ ಕೇಂದ್ರದಲ್ಲಿ ಟರ್ಮಿನಲ್ ಬೇ ನಿರ್ಮಿಸಿ, ಪ್ರಸ್ತಾಪಿತ 220/66/11 ಕೆ.ವಿ ಅಡಕನಹಳ್ಳಿ ಉಪ ಕೇಂದ್ರದಿಂದ ಹಾಲಿ 66/11 ಕೆ.ವಿ ಅಯ್ಯರಹಳ್ಳಿ ಉಪ ಕೇಂದ್ರಕ್ಕೆ ಎಸ್/ಸಿ ಲೈನ್ ಸಂಪರ್ಕ ಒದಗಿಸುವುದು ಮತ್ತು ಸದರಿ ಲೈನ್‌ನಿಂದ ಪ್ರಸ್ತಾಪಿತ ಇಮ್ಮಾವು ಉಪ ಕೇಂದ್ರಕ್ಕೆ ಲಿಲೋ ಲೈನ್ ನಿರ್ಮಾಣವನ್ನು ಒಳಗೊಂಡಂತೆ ಸಮಗ್ರ ಗುತ್ತಿಗೆ ಆಧಾರದಲ್ಲಿ ಸ್ಥಾಪನೆ ಮಾಡುವ ಕಾಮಗಾರಿ. (4) ನರಸಾಪುರ 2ನೇ ಹಂತ ಹಾಗೂ ಮಸ್ತೇನಹಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಭಾಗ–1: ಕೋಲಾರ ಜಿಲ್ಲೆ ನರಸಾಪುರ 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ 2x100 ಎಂ.ವಿ.ಎ, 2x20 ಎಂ.ವಿ.ಎ, 220/66/11 ಕೆವಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಹಾಗೂ ಸಂಬಂಧಿಸಿದ 220 ಕೆ.ವಿ ಲೈನ್‌ನ್ನು ಹಾಲಿ ಇರುವ ಹೂಡಿ–ಮಾಲೂರು–ಕೋಲಾರ 220 ಕೆ.ವಿ ಎಸ್/ಸಿ ಲೈನಿನಿಂದ ಪ್ರಸ್ತಾಪಿತ ಉಪ ಕೇಂದ್ರದವರೆಗೆ ಡ್ರೇಕ್ ವಾಹಕ ಬಳಸಿ 220 ಕೆ.ವಿ ಲಿಲೊ ಲೈನ್ ನಿರ್ಮಾಣವನ್ನು ಒಳಗೊಂಡಂತೆ ಸಮಗ್ರ ಗುತ್ತಿಗೆ ಆಧಾರದಲ್ಲಿ ಸ್ಥಾಪನೆ ಮಾಡುವ ಕಾಮಗಾರಿ, ಭಾಗ–2: ಚಿಕ್ಕಬಳ್ಳಾಪುರ ಜಿಲ್ಲೆ, ಮಸ್ತೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 2x12.5 ಎಂ.ವಿ.ಎ, 66/11 ಕೆವಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಹಾಗೂ ಸಂಬಂಧಿಸಿದ 66 ಕೆ.ವಿ ಲೈನ್‌ನ್ನು ಹಾಲಿ ಇರುವ ತಳಗವಾರ–ಚಿಂತಾಮಣಿ 66 ಕೆ.ವಿ ಎಸ್/ಸಿ ಲೈನಿನಿಂದ ಪ್ರಸ್ತಾಪಿತ ಉಪ ಕೇಂದ್ರದವರೆಗೆ ಡ್ರೇಕ್ ವಾಹಕ ಬಳಸಿ 66 ಕೆ.ವಿ ಲಿಲೊ ಲೈನ್ ನಿರ್ಮಾಣವನ್ನು ಒಳಗೊಂಡಂತೆ ಸಮಗ್ರ ಗುತ್ತಿಗೆ ಆಧಾರದಲ್ಲಿ ಸ್ಥಾಪನೆ ಮಾಡುವ ಕಾಮಗಾರಿ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 10.08.2021, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
DIPR/DDU/Zen/R.O:724/2021-22 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು–560 009
ಇ–ಮೇಲ್ : directorayush@gmail.com
ದೂರವಾಣಿ ಸಂ: 080–22876553, ಫ್ಯಾಕ್ಸ್ : 080–22340139
ಸಂಖ್ಯೆ: ಆಯುಷ್/09/ವೈಶಿ(2)/2021–22 ದಿನಾಂಕ: 03–07–2021
: ಪ್ರಕಟಣೆ :

ಸರ್ಕಾರದ ಆದೇಶ ಸಂಖ್ಯೆ ಆಕುಕ 153 ಪಿಐಎಂ 2021, ಬೆಂಗಳೂರು, ದಿನಾಂಕ: 30.06.2021ರ ಅನ್ವಯ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಆಯುಷ್ ಕಾಲೇಜು/ಕೋರ್ಸ್‌ಗಳನ್ನು ಪ್ರಾರಂಭಿಸಲು/ಪ್ರವೇಶ ಮಿತಿ ಹೆಚ್ಚಿಸಲು ಇಚ್ಛಿಸುವ ಭಾರತ ಸರ್ಕಾರದ ಆಯುಷ್ ಮಂತ್ರಾಲಯಕ್ಕೆ ಅರ್ಜಿ ಸಲ್ಲಿಸಲು ಇಚ್ಛಿಸುವ ಸಂಸ್ಥೆಗಳು ರಾಜ್ಯ ಸರ್ಕಾರದಿಂದ ಪ್ರಪತ್ರ–04ರಲ್ಲಿ ನಿರಾಕ್ಷೇಪಣಾ ಪತ್ರ ಪಡೆಯಲು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ Consent of Affiliation ಪ್ರಪತ್ರ–05ರಲ್ಲಿ ಪಡೆದು, ಆಯುಷ್ ನಿರ್ದೇಶನಾಲಯಕ್ಕೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 15ನೇ ಜುಲೈ 2021ಎಂದು ನಿಗದಿಪಡಿಸಿದೆ. ಅಂತಿಮ ದಿನಾಂಕದ ಒಳಗಾಗಿ ಅರ್ಜಿಗಳನ್ನು ಸಲ್ಲಿಸುವುದು. ತದನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಆಯುಕ್ತರು
DIPR/DDU/Zen/R.O:728/2021-22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಅಲ್ಪಾವಧಿ ಟೆಂಡರ್ ಅಧಿಸೂಚನೆ–2 ನೇ ಕರೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್ಲ್ ಮುಖಾಂತರ)

ಚಿಕ್ಕಮಗಳೂರು ನಗರದ ಒಳಚರಂಡಿ ಯೋಜನೆಯಡಿ ಗೃಹ ಸಂಪರ್ಕಗಳು ಹಾಗೂ ಬಿಟ್ಟು ಹೋಗಿರುವ, ಹೊಸ ಬಡಾವಣೆಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಯೋಜನಾ ಕಾಮಗಾರಿಗೆ ಅಲ್ಪಾವಧಿ ಪೂರ್ವಾರ್ಹ ಟೆಂಡರನ್ನು ಆಹ್ವಾನಿಸಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು 12 ತಿಂಗಳ ಅವಧಿಯನ್ನು ನೀಡಲಾಗಿದೆ. ಸದರಿ ಟೆಂಡರಿನ ಸಂಖ್ಯೆ: **KUWSDB/CE(MYS)/DCE-2/TA-1/AE-1/CKM-UGD HSC – 2** ನೇ ಕರೆ/ 564 ದಿನಾಂಕ:03.07.2021 ರ ಘಟನೆಗಳ ಕ್ಯಾಲೆಂಡರ್‌ಗೆ ಹೊರಡಿಸಲಾಗಿದ್ದು, ವಿವರಗಳು ಹೀಗಿವೆ; ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 14.07.2021, ಸಂಜೆ 5.00 ಗಂಟೆಯ** ವರೆಗೆ; ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 16.07.2021, ಸಂಜೆ 5.15 ಗಂಟೆಯ ನಂತರ.**

ಹೆಚ್ಚಿನ ವಿವರಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಸಂಪರ್ಕಿಸುವುದು.

ದೂರವಾಣಿ ಸಂ: 0821– 2545894, ಮೊಬೈಲ್: 9480813140
ಇ–ಮೇಲ್: kwbcemys2014@gmail.com
ವಿಳಾಸ: ನಂ.927, 1ನೇ ಮಹಡಿ, 6ನೇ ಮುಖ್ಯರಸ್ತೆ, ನ್ಯೂ ಕಾಂತರಾಜು ಅರಸುರಸ್ತೆ, ಸರಸ್ವತಿ ಪುರಂ, ಮೈಸೂರು

ಸಹಿ/–ಮುಖ್ಯ ಅಭಿಯಂತರರು,
ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು
DIPR/DD-MYS/MCA/265/2021-22

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.
ಸಂ: ಕಾಇಂ:ಗ್ರಾಕುನೀ&ನೈವಿ:ದಾ/ಕಿಇಂ–2/ಎಂ.ವಿ.ಎಸ್./ಡಿ.ಬಿ.ಓ.ಟಿ/ಟೆಂಡರ್/373/2020–21 ದಿನಾಂಕ: 02.07.2021
ಅಲ್ಪಾವಧಿ ಟೆಂಡರ್ ತಿದ್ದುಪಡಿ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ ವ್ಯಾಪ್ತಿಯ ಹೊನ್ನಾಳಿ ತಾಲ್ಲೂಕಿನಲ್ಲಿ 2021–22ನೇ ಸಾಲಿನ ಜಲಜೀವನ್ ಮಿಷನ್ ಯೋಜನೆಯಡಿ ಅನುಮೋದಿತ ಹೊನ್ನಾಳಿ ತಾಲ್ಲೂಕಿನ ಫಲವನಹಳ್ಳಿ ಹೊಸಕೊಪ್ಪ ಮತ್ತು ಇತರೆ 59 ಜನವಸತಿಗಳಿಗೆ ಶುದ್ಧ ಹಾಗೂ ಶಾಶ್ವತ ಕುಡಿಯುವ ನೀರಿನ್ನು ಒದಗಿಸುವ (5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿ (O&M), (DBOT) ಆಧಾರದ ಮೇಲೆ ಟೆಂಡರ್‌ನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ. ವಿವರಗಳನ್ನು www.eproc.karnataka.gov.in ರಲ್ಲಿ ಪಡೆಯಬಹುದಾಗಿರುತ್ತದೆ.

(1) ಪೂರ್ವಭಾವಿ ಸಭೆ ಮತ್ತು ದಿನಾಂಕ ಹಾಗೂ ಸ್ಥಳ ಪರಿಶೀಲನೆ:– 15.07.2021ರ ಬೆಳಿಗ್ಗೆ 11.00 ಗಂಟೆಗೆ. ಮುಖ್ಯ ಇಂಜಿನಿಯರ್ ಗ್ರಾ.ಕು.ನೀ.ನೈ. ಇಲಾಖೆ, ಕೆ.ಹೆಚ್.ಬಿ. ಕಟ್ಟಡ, 'ಇ' ಬ್ಲಾಕ್, 1ನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು. (2) ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಅನ್‌ಲೈನ್‌ನಲ್ಲಿ ಸ್ವೀಕರಿಸುವ ಕೊನೆಯ ದಿನಾಂಕ: 31.07.2021 ಸಂಜೆ 5.00 ಗಂಟೆಯವರೆಗೆ. (3) ತಾಂತ್ರಿ ಬಿಡ್ ತೆರೆಯುವ ದಿನಾಂಕ: 02.08.2021ರ ಬೆಳಿಗ್ಗೆ 11.00 ಗಂಟೆಗೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 09.08.2021ರ ಬೆಳಿಗ್ಗೆ 11.00 ಗಂಟೆಗೆ.

Scheme Name:- Providing Water Supply Scheme to Palavanahalli. Hosakoppa & other 59 habitations Of Honnali Taluka in Davanagere District. KARNATAKA STATE, INDIA under DBOT. EMD Amount:- Rs. 54,00,000/-

ವಾಸಾಇ/ದಾವಣಗೆರೆ/205/ಎಂಸಿಎ/2021–22 ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ ಮತ್ತು ನೈ ವಿಭಾಗ, ದಾವಣಗೆರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ,
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ
ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 07/21–22 ದಿನಾಂಕ:01.07.2021.
(ಏಕ ಟೆಂಡರ್ ದಾಖಲೆ & ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ ಕರ್ನಾಟಕ ನೀರಾವರಿ ನಿಗಮದಲ್ಲಿ ನೊಂದಾಯಿತವಾಗಿರುವ ಕೆ.ಎನ್.ಎನ್.ಎಲ್ ಕೆಟಗೆರಿ–III ಮತ್ತು ಮೇಲ್ಪಟ್ಟ ದರ್ಜೆಯ ಅಥವಾ ಕೆ.ಪಿಡಬ್ಲ್ಯೂ.ಡಿ ಕ್ಲಾಸ್–1 ದರ್ಜೆಯ ಗುತ್ತಿಗೆದಾರರಿಂದ (ಕ್ರಮ ಸಂಖ್ಯೆ 01 ರಿಂದ 02 ವರೆಗೆ SC Category ಗುತ್ತಿಗೆದಾರರು ಹಾಗೂ ಕ್ರಮ ಸಂಖ್ಯೆ 03 ST Category ಗುತ್ತಿಗೆದಾರರು ಮಾತ್ರ ಭಾಗವಹಿಸತಕ್ಕದ್ದು) ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ ಟೆಂಡರ್ ದಾಖಲೆ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

ಸಾಗರ ಹಾಗೂ ಹೊಸನಗರ ರಸ್ತೆ ಅಭಿವೃದ್ಧಿ ನಿರ್ಮಾಣದ 03 ಸಂಖ್ಯೆ ಕಾಮಗಾರಿಳ ಟೆಂಡರಿಗಿಟ್ಟ ಮೊತ್ತ ರೂ. 49.93 ಲಕ್ಷಗಳಿಂದ ರೂ. 29.89 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 0.50 ಲಕ್ಷಗಳಿಂದ ರೂ.0.30 ಲಕ್ಷಗಳು.

1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ: 03–07–2021 ರಿಂದ 12–07–2021 ಸಂಜೆ 5.30 ರವರೆಗೆ, **2)** ಟೆಂಡರ್ ಸ್ಪಷ್ಟಿಕರಣಕ್ಕೆ ಕೊನೆಯ ದಿನಾಂಕ: 09–07–2021 ಸಂಜೆ 5.00 ಗಂಟೆಗೆ **3)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 14–07–2021 ಬೆಳಿಗ್ಗೆ 11.00 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ (www.eproc.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ.
ವಾ.ಸಾ.ಸಂ.ಇ/ಶಿ/ನಂ–15/07/ಎಂಸಿಎ/21–22

ಇನ್ನೂ ಕೈ ಸೇರಿಲ್ಲ ಪರಿಹಾರ ಹಣ

• ರಾಜೇಶ್ ರೈ ಚಟ್ಲ

ಬೆಂಗಳೂರು: ಎರಡು ವರ್ಷ (2019 ಮತ್ತು 2020) ಸುರಿದ ಮಹಾಮಳೆಗೆ, ರಾಜ್ಯದ ಕೆಲವು ಜಿಲ್ಲೆಗಳು ತತ್ತರಿಸಿಹೋಗಿದ್ದವು. ಸೂರು ಕಳೆದುಕೊಂಡವರಿಗೆ ರಾಜ್ಯ ಸರ್ಕಾರ ಪರಿಹಾರ ಘೋಷಿಸಿತ್ತು. ಆದರೆ, ಬಹುತೇಕ ಫಲಾನುಭವಿಗಳಿಗೆ ಪರಿಹಾರ ಮೊತ್ತದ ಮೊದಲ ಕಂತಷ್ಟೇ ತಲುಪಿದೆ. ಎರಡು, ಮೂರನೇ ಕಂತು ಇನ್ನೂ ಕೈ ಸೇರಿಲ್ಲ.

ಪ್ರವಾಹದಿಂದ ಸಂಪೂರ್ಣ ಹಾನಿಗೊಳಗಾದ ಮನೆ (ಎ ವರ್ಗ) ಮಾಲೀಕರಿಗೆ ₹ 5 ಲಕ್ಷ, ಭಾಗಶಃ ಹಾನಿಗೊಳಗಾದ ಮನೆ (ಬಿ ವರ್ಗ) ಮಾಲೀಕರಿಗೆ ₹ 3 ಲಕ್ಷ ಪರಿಹಾರವನ್ನು ಸರ್ಕಾರ ಘೋಷಿಸಿತ್ತು. ಅಲ್ಪಸ್ವಲ್ಪ ಹಾನಿಗೊಳಗಾದ ಮನೆಯ (ಸಿ ವರ್ಗ) ಮಾಲೀಕರಿಗೆ ₹ 50 ಸಾವಿರ ಪರಿಹಾರ ನೀಡುವುದಾಗಿ ಪ್ರಕಟಿಸಿತ್ತು.

ಸಂಪೂರ್ಣ ಹಾನಿಯಾದ ಮನೆಗಳ ಮಾಲೀಕರಿಗೆ ತಾತ್ಕಾಲಿಕ ವಸತಿ ಸೌಲಭ್ಯ ಕಲ್ಪಿಸಿಕೊಳ್ಳಲು ಬಾಡಿಗೆ ಮೊತ್ತವಾಗಿ ₹ 5 ಸಾವಿರದಂತೆ ಗರಿಷ್ಠ 10 ತಿಂಗಳು ಹಣ ಪಾವತಿಸುವುದಾಗಿಯೂ ಸರ್ಕಾರ ಪ್ರಕಟಿಸಿತ್ತು.

'ಎ' ವರ್ಗದ ಫಲಾನುಭವಿಗಳಿಗೆ ₹ 5 ಲಕ್ಷ ಪರಿಹಾರ ಮೊತ್ತವನ್ನು, ಮನೆ ನಿರ್ಮಾಣದ ಪ್ರಗತಿಯ ಆಧಾರದಲ್ಲಿ ನಾಲ್ಕು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. 'ಬಿ' ವರ್ಗದ ಫಲಾನುಭವಿಗಳಿಗೆ ₹ 3 ಲಕ್ಷವನ್ನು ಮೂರು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಆದರೆ, ಬಹುತೇಕ ಮನೆಗಳಿಗೆ ಇದುವರೆಗೆ ಮೊದಲ ಕಂತು ಆಗಿ ₹ 1 ಲಕ್ಷ ಮಾತ್ರ ಬಿಡುಗಡೆ ಆಗಿದೆ.

ಲಭ್ಯ ಅಂಕಿ-ಅಂಶಗಳ ಪ್ರಕಾರ ಸಂಪೂರ್ಣ ಹಾನಿಗೊಳಗಾದ 1,101 ಮನೆಗಳ ಪೈಕಿ, ಇದುವರೆಗೆ 970 ಮನೆಗಳಿಗೆ ಮೊದಲ ಕಂತಿನ ಪರಿಹಾರ ಹಣ ನೀಡಲಾಗಿದೆ. ಉಳಿದ 131 ಮನೆಗಳಿಗೆ ಇನ್ನೂ ಹಣ ಬಿಡುಗಡೆಯಾಗಿಲ್ಲ. ಭಾಗಶಃ ಹಾನಿಗೊಳಗಾದ 7,694 ಮನೆಗಳ ಪೈಕಿ ಇದುವರೆಗೆ 4,545 ಮನೆಗಳಿಗೆ ಮೊದಲ ಕಂತು ಬಿಡುಗಡೆ ಮಾಡಲಾಗಿದೆ. ಅಲ್ಪಸ್ವಲ್ಪ ಹಾನಿಗೊಳಗಾದ 30,219 ಮನೆಗಳ ಪೈಕಿ 25,357 ಮನೆಗಳಿಗೆ ಮಾತ್ರ ಮೊದಲ ಕಂತಿನ ಪರಿಹಾರ ನೀಡಲಾಗಿದೆ. ಹಾನಿಗೊಳಗಾದ ಎಲ್ಲ ವರ್ಗದ ಮನೆಗಳಿಗೆ ಸೇರಿ ಇದುವರೆಗೆ ಒಟ್ಟು ₹ 130.57 ಕೋಟಿಯನ್ನು ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ.

ವಿಳಂಬಕ್ಕೆ ಕೋವಿಡ್ ಕಾರಣ: 'ಸೂರು ಕಳೆದುಕೊಂಡ ಶೇ 90ರಷ್ಟು ಫಲಾನುಭವಿಗಳಿಗೆ ಮನೆಗಳ ಮರು ನಿರ್ಮಾಣಕ್ಕೆ ಮೊದಲ ಕಂತಿನ ಪರಿಹಾರ ಹಣ ಮಾತ್ರ ಬಿಡುಗಡೆ ಆಗಿದೆ. ಶೇ 30ರಷ್ಟು ಫಲಾನುಭವಿಗಳಿಗಷ್ಟೇ ಎರಡನೇ ಕಂತಿನ ಪರಿಹಾರ ಸಿಕ್ಕಿದೆ. ರಾಜ್ಯದಲ್ಲಿ ಕೋವಿಡ್ ವ್ಯಾಪಕವಾಗಿ ಹರಡಿದ ಕಾರಣ, ಪರಿಹಾರ ಹಣ ಪಾವತಿಗೂ ಅಡ್ಡಿಯಾಗಿದೆ. ಮತ್ತೊಂದೆಡೆ ಕಟ್ಟಡ ಕಾರ್ಮಿಕರು ಸಿಗದೇ ಮನೆ ನಿರ್ಮಾಣ ಕಾಮಗಾರಿ ವಿಳಂಬವಾಗುತ್ತಿದೆ. ನಿರ್ಮಾಣ ಹಂತದ ಪ್ರಗತಿಯನ್ನು ಆಧರಿಸಿ ಪರಿಹಾರದ ಕಂತು ಬಿಡುಗಡೆ ಮಾಡಲಾಗುತ್ತದೆ. ಪ್ರಗತಿಯ ಮಾಹಿತಿಯನ್ನು ಫಲಾನುಭವಿಗಳು ನೀಡಿದ ಬಳಿಕ, ಪರಿಶೀಲಿಸಿ ಹಣ ಬಿಡುಗಡೆ ಮಾಡಲಾಗುತ್ತದೆ' ಎಂದು ಕಂದಾಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಇನ್ನೂ ಬೇಕು ₹ 1,222.34 ಕೋಟಿ

2019 ಮತ್ತು 2020ನೇ ಸಾಲಿನಲ್ಲಿ ಹಾನಿಗೊಳಗಾದ ಮನೆಗಳಿಗೆ ಒಟ್ಟು ₹ 2,865.80 ಕೋಟಿ ('ಸಿ'ವರ್ಗವನ್ನು ಹೊರತುಪಡಿಸಿ) ಅನುದಾನ ಅಗತ್ಯವಿದೆ ಎಂದು ರಾಜ್ಯ ಸರ್ಕಾರ ಲೆಕ್ಕಹಾಕಿದೆ. ಈವರೆಗೆ ಸರ್ಕಾರ ₹ 1,643.46 ಕೋಟಿ ಬಿಡುಗಡೆ ಮಾಡಲಾಗಿದ್ದು, ಇನ್ನೂ ₹ 1,222.34 ಕೋಟಿ ಬಿಡುಗಡೆ ಮಾಡಬೇಕಿದೆ.

2019ರ ಸಾಲಿನಲ್ಲಿ ಹಾನಿಗೊಳಗಾದ (ಒಟ್ಟು 1,34,936) ಮನೆಗಳ ನಿರ್ಮಾಣ ಪ್ರಗತಿಗೆ ಅನುಗುಣವಾಗಿ, ಫಲಾನುಭವಿಗಳಿಗೆ ಪರಿಹಾರ ವಿತರಿಸಲಾಗಿದೆ. 2020ರ ಸಾಲಿನಲ್ಲಿ ಹಾನಿಗೊಳಗಾದ ಮನೆಗಳ ಮರು ನಿರ್ಮಾಣ ಪ್ರಗತಿಗೆ ಅನುಗುಣವಾಗಿ ಈವರೆಗೆ ₹ 121.87 ಕೋಟಿ ಬಿಡುಗಡೆ ಆಗಿದೆ. ಪ್ರಸ್ತುತ ಪ್ರಗತಿಗೆ ಅನುಗುಣವಾಗಿ ಮತ್ತೆ ₹ 62.12 ಕೋಟಿ ಬಿಡುಗಡೆ ಮಾಡುವಂತೆ ಏ. 19 ಮತ್ತು ಜೂನ್ 1ರಂದು ಹಣಕಾಸು ಇಲಾಖೆಗೆ ಕಂದಾಯ ಇಲಾಖೆ ಪ್ರಸ್ತಾವ ಸಲ್ಲಿಸಿದೆ. ಅನುದಾನ ಬಿಡುಗಡೆಯಾದ ಬಳಿಕ ರಾಜೀವ್ ಗಾಂಧಿ ವಸತಿ ನಿಗಮದಿಂದ ಫಲಾನುಭವಿಗಳಿಗೆ ಅನುದಾನ ಬಿಡುಗಡೆಯಾಗಲಿದೆ ಎಂದು ಕಂದಾಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಮನೆ ಕಳೆದುಕೊಂಡವರಿಗೆ ಪರಿಹಾರ ನೀಡಲು ತಕ್ಷಣ ₹ 60 ಕೋಟಿ ಬಿಡುಗಡೆ ಮಾಡುವಂತೆ ಕಂದಾಯ ಇಲಾಖೆಯ ಮೂಲಕ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ

ಬಸವರಾಜು ಎಸ್. ವ್ಯವಸ್ಥಾಪಕ ನಿರ್ದೇಶಕ, ರಾಜೀವ್ ಗಾಂಧಿ ವಸತಿ ನಿಗಮ

ಹಾನಿಗೀಡಾದ ಮನೆಗಳ ಮರು ನಿರ್ಮಾಣದ ಹಂತ ಆಧರಿಸಿ ಕಂತುಗಳಲ್ಲಿ ಅರ್ಹ ಫಲಾನುಭವಿಗಳಿಗೆ ರಾಜೀವ್ ಗಾಂಧಿ ವಸತಿ ನಿಗಮ ಹಣ ಬಿಡುಗಡೆ ಮಾಡುತ್ತದೆ

ಎನ್. ಮಂಜುನಾಥ ಪ್ರಸಾದ್ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ

ಮಲೆನಾಡು, ಕರಾವಳಿ ಭಾಗದ ವಿದ್ಯಾರ್ಥಿಗಳಿಗೆ ಮಳೆಗಾಲದ ಸವಾಲು

ಮೋಹಕ ಮಳೆಗಾಲ ಮಾರಕವಾಯಿತು

• ಆದಿತ್ಯ ಕೆ.ಎ.

ಮಡಿಕೇರಿ: 'ದಿನವಿಡೀ ಮಳೆ ಸುರಿಯುವಾಗ ಕೊಡೆ ಹಿಡಿದ ಮಕ್ಕಳು ಶಾಲೆ, ಕಾಲೇಜಿಗೆ ನಡೆದು ಹೋಗುವುದು ಆನಂದ ತರುತ್ತಿತ್ತು. ರಸ್ತೆಯಂಚಿನ ಪುಟ್ಟ ಜಲಪಾತ, ಶಾಂತ ನದಿ-ಹೊಳೆ, ಹಸಿರು ಮೈದುಂಬುತ್ತಿತ್ತು. ತೇವವಾದ ಬಟ್ಟೆಯಲ್ಲೇ ಮಕ್ಕಳು ಪಾಠ ಕೇಳುತ್ತಿದ್ದರು. ಆದರೆ ಇತ್ತೀಚೆಗೆ ಮಳೆ ಎಂದರೆ ಭಯ. ಮಕ್ಕಳ ಕಲಿಕೆಯು ಪ್ರವಾಹ, ಭೂಕುಸಿತದ ದುರಂತಗಳಲ್ಲಿ ನಲುಗುತ್ತಿದೆ...'

ಭಾಗಮಂಡಲದ ಗೃಹಿಣಿ ಸುಷ್ಮಾ ಹೀಗೆ ಹೇಳುವಾಗ ಅವರ ದನಿಯಲ್ಲಿ ದುಗುಡವಿತ್ತು. ಮೋಹಕ ಮಳೆಗಾಲ ಮಾರಕವಾದ ಬಗ್ಗೆ ವಿಷಾದವೂ ಇತ್ತು.

ಕೊಡಗು ಸೇರಿದಂತೆ ಮಲೆನಾಡು, ಕರಾವಳಿ ಹಾಗೂ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳು ಮೂರು ವರ್ಷಗಳಿಂದ ಪ್ರವಾಹದಿಂದ ತತ್ತರಿಸುತ್ತಿವೆ. ಈಗ ಮತ್ತೊಂದು ಮಳೆಗಾಲ ಕಾಲಿಟ್ಟಿದ್ದು ಜುಲೈ, ಆಗಸ್ಟ್‌ನಲ್ಲಿ ಮಳೆ ಏನು ಅನಾಹುತ ಮಾಡುವುದೋ ಎಂಬ ಆತಂಕ ಮಡುಗಟ್ಟಿದೆ.

'ಜೋರು ಮಳೆ, ಗಾಳಿ ಬೀಸಿದರೆ ಒಂದೆರಡು ದಿನ ರಜೆ ಘೋಷಿಸಿ, ಮಳೆ ಕಡಿಮೆಯಾದಂತೆ ಮತ್ತೆ ತರಗತಿಗಳು ಆರಂಭವಾಗುತ್ತಿದ್ದವು. ಆದರೆ, ಈಗ ಮಳೆಗಾಲದ ದುರಂತಗಳು ಮಕ್ಕಳ ಶೈಕ್ಷಣಿಕ ಬದುಕನ್ನೇ ಕೊಚ್ಚಿಕೊಂಡು ಹೋಗುತ್ತಿವೆ' ಎಂದು ಶಿಕ್ಷಕ ರವಿ ಹೇಳುತ್ತಾರೆ.

2018ರ ಭೂಕುಸಿತ, ಪ್ರವಾಹದಿಂದ ಕೊಡಗು ಜಿಲ್ಲೆಯ ನಾಲ್ಕು ಗ್ರಾಮಗಳ ಶಾಲೆಗಳು ಸಂಪೂರ್ಣ ಬಂದ್ ಆಗಿದ್ದವು. ಮಕ್ಕಳೊಂದಿಗೆ ಪೋಷಕರು ಗ್ರಾಮವನ್ನು ತೊರೆದಿದ್ದರು. ಎರಡು ವರ್ಷಗಳ ಬಳಿಕ ಶಾಲೆ ಆರಂಭಿಸುವ ಪ್ರಯತ್ನ ನಡೆದರೂ ಕೋವಿಡ್ ಕಾರಣಕ್ಕೆ ಇನ್ನೂ ತೆರೆದಿಲ್ಲ.

ಮನೆಗಳು ಕುಸಿದಿದ್ದರಿಂದ ಪುಸ್ತಕ, ದಾಖಲೆಗಳು ಮಣ್ಣಿನಲ್ಲಿ ಹುದುಗಿ ಹೋಗಿದ್ದವು. ಹೊಸದಾಗಿ ದಾಖಲೆ ಪಡೆಯಲು ಆ ಮಕ್ಕಳು ಪರದಾಡಿದ್ದರು.

2018ರಲ್ಲಿ ಕೊಡಗು ಜಿಲ್ಲೆಯ 32 ಗ್ರಾಮಗಳಲ್ಲಿ ಭೂಕುಸಿತವಾಗಿತ್ತು. 2019ರಲ್ಲಿ ಸಿದ್ದಾಪುರ ಭಾಗದಲ್ಲಿ ಕಾವೇರಿ ನದಿ, ಗೋಣಿಕೊಪ್ಪಲು ವ್ಯಾಪ್ತಿಯಲ್ಲಿ ಲಕ್ಷ್ಮಣ-ತೀರ್ಥ ನದಿಗಳ ಪ್ರವಾಹದಿಂದ ಹಲವು ಕುಟುಂಬಗಳು ನೆಲೆ ಕಳೆದುಕೊಂಡಿದ್ದವು. ಕಳೆದ ವರ್ಷವೂ ಭೂಕುಸಿತವಾಗಿತ್ತು. ಆಗ ಜಿಲ್ಲಾಡಳಿತ ತೆರೆದಿದ್ದ ಕಾಳಜಿ ಕೇಂದ್ರಕ್ಕೆ ಮಕ್ಕಳೊಂದಿಗೆ ಪೋಷಕರು ಬಂದು ವಾಸ್ತವ್ಯ ಮಾಡಿದ್ದರು.

'ಕಾಳಜಿ ಕೇಂದ್ರಕ್ಕೆ ಬರುವ ವಿದ್ಯಾರ್ಥಿಗಳು ಆತಂಕದಲ್ಲಿರುತ್ತಾರೆ. ಅದನ್ನು ನಿವಾರಿಸಲು ಹಾಡು, ನೃತ್ಯಕ್ಕೆ ಆದ್ಯತೆ ನೀಡುತ್ತೇವೆ. ಈ ವರ್ಷವೂ ಕಾಳಜಿ ಕೇಂದ್ರದಲ್ಲಿ ಕಲಿಕಾ ವಾತಾವರಣ ಕಲ್ಪಿಸಲು ಯೋಜನೆ ರೂಪಿಸಿದ್ದೇವೆ' ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಮದೆ ಗ್ರಾಮದಲ್ಲಿ ಮಕ್ಕಳ ದಾಖಲಾತಿ ಇಲ್ಲದೆ ಮುಚ್ಚಿದ್ದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನೂ ಗ್ರಾಮಸ್ಥರೇ ಸ್ವಚ್ಛಗೊಳಿಸಿ, ಹೊಸ ಪೀಠೋಪಕರಣ ಖರೀದಿಸಿ ಕಳೆದ ವರ್ಷ ಪುನರ್ ಆರಂಭಕ್ಕೆ ಮುನ್ನುಡಿ ಬರೆದಿದ್ದರು. ಗ್ರಾಮಸ್ಥರ ಉತ್ಸಾಹ ಕಂಡು ಶಿಕ್ಷಣ ಇಲಾಖೆ ಶಿಕ್ಷಕರನ್ನು ನಿಯೋಜಿಸಿತ್ತು. ಶಾಲಾ ಸಮೀಪವೇ ಸಂತ್ರಸ್ತರ ಪುನರ್ವಸತಿ ಬಡಾವಣೆಯಿದ್ದು 42 ವಿದ್ಯಾರ್ಥಿಗಳೂ ದಾಖಲಾಗಿದ್ದರು. ಅದಾದ ಮೇಲೆ ಕೊರೊನಾದಿಂದ ಶಾಲೆ ನಡೆಯಲಿಲ್ಲ.

ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕು ಬೇವಿನಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಠಡಿಯ ಈಗಿನ ಸ್ಥಿತಿ

ಅತಂತ್ರವಾಗುವ ವಿದ್ಯಾರ್ಥಿಗಳ ಕಲಿಕೆ

ಹುಬ್ಬಳ್ಳಿ/ಮೈಸೂರು/ಹಾಸನ: ನದಿಗಳು ಹಾಗೂ ಹಳ್ಳಗಳು ಉಕ್ಕಿ ಹರಿದಾಗ, ಜನರಿಗೆ ಪುನರ್ವಸತಿ ಒದಗಿಸಲು ಸ್ಥಳೀಯ ಆಡಳಿತದ ಮೊದಲ ಆಯ್ಕೆ ಶಾಲೆಗಳು. ನೆರೆ ಇಳಿದು ಜನರು ಮತ್ತೆ ತಮ್ಮ ನೆಲೆಗೆ ಹೋಗುವವರೆಗೆ ಶಾಲೆಗಳು ಬಂದ್ ಆಗುತ್ತವೆ.

'ಮೈಸೂರು ಜಿಲ್ಲೆಯ ಹುಣಸೂರು, ನಂಜನಗೂಡು, ಎಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಶಾಲೆಗಳಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿತ್ತು. ವಿದ್ಯಾರ್ಥಿಗಳಿಗೆ ರಜೆ ನೀಡಲಾಗಿತ್ತು. ಪ್ರವಾಹ ಪರಿಸ್ಥಿತಿ ನಿಯಂತ್ರಣಕ್ಕೆ ಬಂದ ಮೇಲೆ ಸ್ವಚ್ಛಗೊಳಿಸಿ, ಶಾಲೆ ಆರಂಭಿಸಲಾಯಿತು' ಎನ್ನುತ್ತಾರೆ ಮೈಸೂರು ಜಿಲ್ಲೆ ಡಿಡಿಪಿಐ ಪಾಂಡುರಂಗ.

ಹಾಸನ ಜಿಲ್ಲೆಯ ಸಕಲೇಶಪುರ ಪಟ್ಟಣದ ಆನೆಮಹಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಮ್ಯಾಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿತ್ತು.

2019ರ ಪ್ರವಾಹದಲ್ಲಿ ಹಲವು ಶಾಲಾ ಕಟ್ಟಡಗಳು ಜಲಾವೃತಗೊಂಡಿದ್ದವು. ಮರದ ಕೆಳಗೆ, ದೇಗುಲದ ಪ್ರಾಂಗಣ, ಟೆಂಟ್, ಸಮುದಾಯ ಭವನ ಮಕ್ಕಳ ತರಗತಿ ಕೊಠಡಿಗಳಾಗಿ ಬದಲಾಗಿದ್ದವು. ಧಾರವಾಡ, ಬೆಳಗಾವಿ, ಹಾವೇರಿ, ಉತ್ತರ ಕನ್ನಡ, ವಿಜಯಪುರ, ಬಾಗಲಕೋಟೆ ಹಾಗೂ ಬಳ್ಳಾರಿ ಜಿಲ್ಲೆಯ ಹಲವು ಹಳ್ಳಿಗಳ ಶಾಲೆಗಳು ಇಂಥ ಸ್ಥಿತಿಗೆ ಸಾಕ್ಷಿಯಾಗಿವೆ.

ಮಳೆಗೆ ಶಾಲೆ ಕಟ್ಟಡ ಕುಸಿದಿದ್ದರಿಂದ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಲಕ್ಕಿಕೊಪ್ಪ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಮರದಡಿ ಪಾಠ ಮಾಡಿದ ಶಿಕ್ಷಕ (ಸಂಗ್ರಹ ಚಿತ್ರ)

ಆಸರೆಯಾದ ಕಾರ್ಪೊರೇಟ್ ಕಂಪನಿಗಳು

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಪ್ರವಾಹಕ್ಕೆ ಸಿಲುಕಿ ಸಂಕಷ್ಟ ಅನುಭವಿಸುತ್ತಿರುವ, ರಾಜ್ಯದ ವಿವಿಧ ಪ್ರದೇಶಗಳ ಜನರಿಗೆ ಹಲವು ಕಾರ್ಪೊರೇಟ್ ಕಂಪನಿಗಳು ನೆರವಿನ ಹಸ್ತ ಚಾಚಿವೆ. ಸಾಮಾಜಿಕ ಹೊಣೆಗಾರಿಕೆಯಡಿ, ನೆಲೆ ಕಳೆದುಕೊಂಡ ಬಡವರಿಗೆ ಮನೆ, ಕೆಲವೆಡೆ ಶಾಲಾ ಕಟ್ಟಡಗಳನ್ನು ನಿರ್ಮಿಸಿಕೊಟ್ಟು ಮಾನವೀಯತೆ ತೋರಿವೆ.

ಬೆಳಗಾವಿ ಜಿಲ್ಲೆಯ ಹಸರೆ ತೋಟದಲ್ಲಿ ಬೆಂಗಳೂರಿನ ಪಿಇಎಸ್ ಸಂಸ್ಥೆ ಕಟ್ಟಿಕೊಟ್ಟಿರುವ ಸರ್ಕಾರಿ ಶಾಲೆಯ ಕಟ್ಟಡ

ತುಂಗಾ ನದಿಯ ಪ್ರವಾಹದಿಂದ, ಮೂರು ವರ್ಷಗಳ ಹಿಂದೆ ಶಿವಮೊಗ್ಗ ನಗರದ ಹಲವು ಸರ್ಕಾರಿ ಶಾಲೆಗಳಿಗೆ ಹಾನಿಯಾಗಿತ್ತು. ಇಂತಹ 87 ಸರ್ಕಾರಿ ಶಾಲೆಗಳನ್ನು ₹ 15 ಕೋಟಿ ವೆಚ್ಚದಲ್ಲಿ ದುರಸ್ತಿ ಮಾಡಲಾಗಿದೆ. ಸ್ಮಾರ್ಟ್ ಸಿಟಿ ಲಿಮಿಟೆಡ್ ಜತೆ ಹಲವು ಕಾರ್ಪೊರೇಟ್ ಕಂಪನಿಗಳು ಕೈಜೋಡಿಸಿದ ಕಾರಣ, 45 ಸರ್ಕಾರಿ ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ಸೌಲಭ್ಯ ಕಲ್ಪಿಸಲಾಗಿದೆ. 92 ಡಿಜಿಟಲ್ ಕೊಠಡಿಗಳನ್ನು ನಿರ್ಮಿಸಲಾಗಿದೆ. 460 ಕಂಪ್ಯೂಟರ್, ಪ್ರೊಜೆಕ್ಟರ್, ಲ್ಯಾಪ್‌ಟಾಪ್‌ಗಳನ್ನು ಒದಗಿಸಲಾಗಿದೆ.

ಸೊರಬ ತಾಲ್ಲೂಕು ನಿಸರಾಣಿಯ ಶಾಲೆಗೆ ಬಿಇಎಲ್ ಕಂಪನಿ ₹ 1 ಕೋಟಿ ನೀಡಿದೆ. ಬಿ.ಬಿ.ರಸ್ತೆ, ಸೀಗೆಹಟ್ಟಿ, ಕೆ.ಆರ್.ಪುರಂ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಸಚಿವ ಈಶ್ವರಪ್ಪ ಒಡೆತನದ ಕಂಪನಿ ನೆರವಿನ ಹಸ್ತ ಚಾಚಿದೆ. ಬೆಂಗಳೂರಿನ ಕೇರ್ ವರ್ಕ್ಸ್ ಕಂಪನಿ ತೀರ್ಥಹಳ್ಳಿ ತಾಲ್ಲೂಕು ಗಡ್ಡೇಕೇರಿ ಪ್ರೌಢಶಾಲೆಗೆ ಕೊಠಡಿಗಳನ್ನು ನಿರ್ಮಿಸಿಕೊಟ್ಟಿದೆ. ಕೃಷ್ಣಾ, ಘಟಪ್ರಭಾ ಹಾಗೂ ಮಲಪ್ರಭಾ ನದಿಗಳ ಪ್ರವಾಹಕ್ಕೆ ಸಿಲುಕಿ, ಬಹುತೇಕ ಗುರುತು ಸಿಗದಂತಾಗಿದ್ದ ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳ ಏಳು ಸರ್ಕಾರಿ ಶಾಲೆಗಳು ಹಾಗೂ ಎರಡು ಅಂಗನವಾಡಿಗಳಿಗೆ ಬೆಂಗಳೂರಿನ ಪ್ರೊ.ಎಂ.ಆರ್. ದೊರೆಸ್ವಾಮಿ ಅವರ ಪಿಇಎಸ್ ಶಿಕ್ಷಣ ಸಂಸ್ಥೆ ಮರುಜೀವ ನೀಡಿದೆ. ಹೊಸ ಕೊಠಡಿಗಳೊಂದಿಗೆ ಸುಣ್ಣ-ಬಣ್ಣಗಳಿಂದ ಅಲಂಕೃತಗೊಂಡಿರುವ ಶಾಲೆಗಳು ನಳನಳಿಸುತ್ತಿವೆ. ಕೆಲವು ಈಗಾಗಲೇ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಹಸ್ತಾಂತರಗೊಂಡಿವೆ.

ಘಟಪ್ರಭಾ ನದಿಯ ಆರ್ಭಟಕ್ಕೆ ತತ್ತರಿಸಿದ ಮುಧೋಳ ತಾಲ್ಲೂಕಿನ ಒಂಟಿಗೋಡಿ, ಬಿ.ಕೆ.ಬುದ್ನಿಯ ಸರ್ಕಾರಿ ಶಾಲೆ, ಅಂಗನವಾಡಿ ಕಟ್ಟಡಗಳು; ಮಲಪ್ರಭಾ ನದಿಯ ಪ್ರವಾಹಕ್ಕೆ ಸಿಕ್ಕ ಬಾದಾಮಿ ತಾಲ್ಲೂಕಿನ ಕರ್ಲಕೊಪ್ಪ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಾಲಾಕೊಠಡಿಗಳನ್ನು ಮರುನಿರ್ಮಿಸಿಕೊಡುವಲ್ಲಿ, ಪಿಇಎಸ್ ಸಂಸ್ಥೆಯು ಸಾರ್ವಜನಿಕ ಶಿಕ್ಷಣ ಇಲಾಖೆಗೆ ನೆರವಾಗಿದೆ.

ನಾಲ್ಕು ಶಾಲೆಗಳ ಮರುನಿರ್ಮಾಣ: ಬೆಳಗಾವಿ ವಿಭಾಗದ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ನಾಲ್ಕು ಸರ್ಕಾರಿ ಶಾಲೆಗಳನ್ನು ಹೊಸದಾಗಿ ಕಟ್ಟಲಾಗುತ್ತಿದೆ. ರಾಯಬಾಗ ತಾಲ್ಲೂಕು ನಿಲಜಿಯ ಹಸರೆತೋಟದ ಕೆಪಿಎಸ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ನದಿಇಂಗಳಗಾಂವ ಪೇರಲತೋಟದ ಪ್ರಾಥಮಿಕ ಶಾಲೆಗೆ ತಲಾ ಐದು ಹಾಗೂ ಅದೇ ತಾಲ್ಲೂಕಿನ ತೀರ್ಥ ಗ್ರಾಮದ ಶಾಲೆಗೆ ಮೂರು ಕೊಠಡಿಗಳನ್ನು ನಿರ್ಮಿಸಿಕೊಡಲಾಗುತ್ತಿದೆ. ಮಹಿಷವಾಡಗಿ ಗ್ರಾಮದಲ್ಲಿ ಎಂಟು ಕೊಠಡಿಗಳನ್ನು ಕಟ್ಟಿಸಲಾಗುತ್ತಿದೆ.

ಧಾರವಾಡದಲ್ಲಿ ಕೋಲ್ ಇಂಡಿಯಾ ಕಂಪನಿ, ₹ 15 ಕೋಟಿ ವೆಚ್ಚದಲ್ಲಿ 120 ಶಾಲಾ ಕೊಠಡಿಗಳ ನಿರ್ಮಾಣಕ್ಕೆ ನೆರವಾಗಿದೆ. ಎಂಟಿಪಿಸಿ ಕಂಪನಿ 2 ಸಾವಿರ ಡೆಸ್ಕ್‌ಗಳನ್ನು ನೀಡಿದೆ. ಮೈಸೂರು ಜಿಲ್ಲೆಯಲ್ಲೂ ಶಾಲೆಗಳ ನಿರ್ಮಾಣ, ದುರಸ್ತಿಗೆ ಸಿಎಸ್‌ಆರ್ ನಿಧಿ ಬಂದಿದೆ. ಆದರೆ, ಇದು ಪ್ರವಾಹದಿಂದ ಹಾನಿಗೀಡಾದ ಶಾಲೆಗಳಿಗಷ್ಟೇ ಸೀಮಿತವಾಗಿಲ್ಲ.

'ಶಿಥಿಲಗೊಂಡ ಕಟ್ಟಡ ಕೆಡವಿ, ಹೊಸದಾಗಿ ಕಟ್ಟಡ ನಿರ್ಮಿಸಿಕೊಟ್ಟಿದ್ದಾರೆ. ಕಾಂಪೌಂಡ್, ಶೌಚಾಲಯ ನಿರ್ಮಿಸಿಕೊಟ್ಟಿದ್ದಾರೆ, ಕಂಪ್ಯೂಟರ್‌ಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಆರ್‌ಬಿಐ ಮೈಸೂರು, ಎಲ್ ಅಂಡ್ ಟಿ, ಕಲಿಸು ಫೌಂಡೇಷನ್, ಆಟೊಮೋಟಿವ್ ಆ್ಯಕ್ಸೆಲ್ಸ್, ಇನ್ಫೊಸಿಸ್, ಐಟಿಸಿ ಸೇರಿದಂತೆ ಹಲವು ಸಂಸ್ಥೆಗಳು ನೆರವು ನೀಡಿವೆ' ಎಂದು ಡಿಡಿಪಿಐ ಪಾಂಡುರಂಗ ಮಾಹಿತಿ ನೀಡಿದರು.

ಇನ್ಫೊಸಿಸ್ ಫೌಂಡೇಷನ್, ಕೊಡಗಿನ ಜಂಬೂರಿನಲ್ಲಿ 200 ಮನೆಗಳನ್ನು ನಿರ್ಮಿಸುತ್ತಿದೆ. ಅಮೆರಿಕದ ಅಕ್ಕ ಸಂಘಟನೆಯೂ ಶಾಲಾ ನಿರ್ಮಾಣಕ್ಕೆ ನೆರವು ನೀಡಿದೆ.

ಈಗಲೂ ಸಮುದಾಯ ಭವನವೇ ಆಸರೆ!

• ಎಂ. ಮಹೇಶ

ಬೆಳಗಾವಿ: ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದಲ್ಲಿ 2019ರಲ್ಲಿ ಕೃಷ್ಣಾನದಿ ಪ್ರವಾಹದಿಂದಾಗಿ ಮನೆ ಕಳೆದುಕೊಂಡಿದ್ದ ಎರಡು ಕುಟುಂಬಗಳು ಈಗಲೂ ಸಮುದಾಯ ಭವನದಲ್ಲೇ ಜೀವನ ಸಾಗಿಸುತ್ತಿವೆ.

ಮಲ್ಲಿಕಾರ್ಜುನ ಧನಪಾಲ ಕುರಳೆ ಮತ್ತು ಸಹೋದರನ ಕುಟುಂಬದವರು ಸಮಾಜ ಕಲ್ಯಾಣ ಇಲಾಖೆಯ ಸಮುದಾಯ ಭವನದ ಮೊದಲ ಮಹಡಿಯ ಸಭಾಂಗಣದಲ್ಲಿ ಸೀರೆ ಮತ್ತು ಹೊದಿಕೆಗಳನ್ನು ಅಡ್ಡಕಟ್ಟಿ ವಾಸ ಮಾಡುತ್ತಿದ್ದಾರೆ. ಮಕ್ಕಳು ಸೇರಿ ಆರು ಮಂದಿ ಇಲ್ಲಿದ್ದಾರೆ. ನೆರೆ ಬಂದು ಎರಡು ವರ್ಷ ಕಳೆದಿದ್ದರೂ ಸ್ವಂತ ಸೂರು ಕನಸಾಗಿಯೇ ಉಳಿದಿದೆ. ಕೂಲಿಯನ್ನೇ ನಂಬಿರುವ ಇವರಿಗೆ ಮನೆ ಕಟ್ಟಿಕೊಳ್ಳುವಷ್ಟು ಆರ್ಥಿಕ ಚೈತನ್ಯ ಇಲ್ಲ.

ಕೃಷ್ಣಾ ನದಿ ಪ್ರವಾಹದಿಂದ ಮನೆ ಕಳೆದುಕೊಂಡ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮಲ್ಲಿಕಾರ್ಜುನ ಕುರಳೆ ಕುಟುಂಬ ಸಮುದಾಯ ಭವನದಲ್ಲಿ ವಾಸವಿದೆ. ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

'ಹೊಳೆ ಬಂದಾಗ ನಮ್ಮ ಹೆಂಚಿನ ಮನೆ ಬಿದ್ದುಹೋಯಿತು. ಆಗಿನಿಂದಲೂ ಇಲ್ಲೇ ಇದ್ದೇವೆ. ಮನೆ ನಿರ್ಮಿಸಿಕೊಳ್ಳಲು ಸರ್ಕಾರದಿಂದ ಈವರೆಗೂ ಪರಿಹಾರ ಸಿಕ್ಕಿಲ್ಲ. ಶೌಚಕ್ಕೆ ಬಯಲನ್ನೇ ಆಶ್ರಯಿಸಿಕೊಳ್ಳಬೇಕಾದ ಸ್ಥಿತಿ ಇದೆ. ತಾತ್ಕಾಲಿಕ ಪರಿಹಾರವಾಗಿ ನೀಡಿದ ₹ 10ಸಾವಿರವಷ್ಟೆ ಸಿಕ್ಕಿದೆ. ಪಡಿತರ ಚೀಟಿ, ಉತಾರ ಮೊದಲಾದ ದಾಖಲೆಗಳಿಲ್ಲವಾದ್ದರಿಂದ ಪರಿಹಾರ ಸಿಕ್ಕಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಮನೆ ಬಿದ್ದಿರುವುದು ಕಣ್ಮುಂದೆಯೇ ಇದ್ದರೂ ಪರಿಹಾರಕ್ಕೆ ಪರಿಗಣಿಸುತ್ತಿಲ್ಲ' ಎಂದು ಮಲ್ಲಿಕಾರ್ಜುನ ಅಳಲು ತೋಡಿಕೊಂಡರು.

'ನಮ್ಮ ಅಪ್ಪ-ಅಮ್ಮ ಇಲ್ಲಿದ್ದಾಗಲೇ ನಿಧನರಾದರು. 15 ದಿನಗಳಲ್ಲಿ ಭವನದಿಂದ ಖಾಲಿ ಮಾಡುವಂತೆ ಸ್ಥಳೀಯರೇ ಗಡುವು ನೀಡಿದ್ದಾರೆ. ಎಲ್ಲಿಗೆ ಹೋಗಬೇಕು ಎಂದು ತಿಳಿಯುತ್ತಿಲ್ಲ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

'ಮನೆ ಕಳೆದುಕೊಂಡ ಗ್ರಾಮದ 500ಕ್ಕೂ ಹೆಚ್ಚಿನ ಕುಟುಂಬಕ್ಕೆ ಈವರೆಗೂ ಪರಿಹಾರ ಸಿಕ್ಕಿಲ್ಲ. ಅವರೆಲ್ಲರ ಹೆಸರುಗಳು ಪಟ್ಟಿಯಿಂದ ಡಿಲೀಟ್ ಆಗಿವೆ ಎಂಬ ಕಾರಣ ಹೇಳಲಾಗುತ್ತಿದೆ. ಸರ್ಕಾರ ಇತ್ತ ಗಮನಹರಿಸಿ ಅವರಿಗೆ ಪರಿಹಾರ ದೊರಕಿಸಿಕೊಡಬೇಕು' ಎಂದು ಮುಖಂಡ ರಾಘವೇಂದ್ರ ಲಂಬುಗೋಳ ಒತ್ತಾಯಿಸಿದರು.

ಪ್ರಗತಿ ಕಾಣದ ಪುನರ್ವಸತಿ

ಒಂದನೇ ಪುಟದಿಂದ...

ನೆರೆ ಬಂದಾಗ ಹಲವರು ಉಟ್ಟ ಬಟ್ಟೆಯಲ್ಲಿಯೇ ಮನೆಬಿಟ್ಟು ಆಚೆ ಬಂದಿದ್ದರು. ದವಸ ಧಾನ್ಯ, ಬಟ್ಟೆಗಳೊಂದಿಗೆ ಬದುಕೇ ನೀರಿನಲ್ಲಿ ಕೊಚ್ಚಿಹೋಗಿತ್ತು. ಜೊತೆಗೆ ಅವರ ಇರುವಿಕೆಯ ದಾಖಲೆಗಳೂ ಕೊಚ್ಚಿಹೋಗಿದ್ದವು. ಬಹುತೇಕ ಗ್ರಾಮಗಳಲ್ಲಿ ಹಿರಿಯರಿಂದ ಬಂದ ಮನೆಗಳಿದ್ದವು. ಅವುಗಳಿಗೂ ಸೂಕ್ತ ದಾಖಲೆಗಳ ಕೊರತೆ ಇತ್ತು. ಇದ್ದಬದ್ದ ದಾಖಲೆಗಳೂ ಈಗ ಇಲ್ಲದಂತಾಗಿವೆ. 'ದಾಖಲೆಗಳಿಲ್ಲ' ಎಂಬ ಕಾರಣಕ್ಕೆ ಬಹಳಷ್ಟು ಮಂದಿ ಪರಿಹಾರದಿಂದ ವಂಚಿತರಾಗಿದ್ದಾರೆ. ಬೆಳಗಾವಿ ಜಿಲ್ಲೆಯೊಂದರಲ್ಲೇ ಇಂತಹ 11ಸಾವಿರ ಮಂದಿಗೆ ಪರಿಹಾರ ಸಿಕ್ಕಿಲ್ಲ. ಗೋಕಾಕಿನಲ್ಲಿ 300 ಕುಟುಂಬಗಳು ತಾತ್ಕಾಲಿಕ ಶೆಡ್‌ನಲ್ಲಿ ವಾಸವಾಗಿವೆ.

ರಾಜ್ಯದ ನೆರೆ ಮತ್ತು ಅತಿವೃಷ್ಟಿ ಪರಿಣಾಮವಾದ ಜಿಲ್ಲೆಗಳಲ್ಲಿಯೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನಲ್ಲಿ ಬಿದ್ದಿದ್ದ 96 ಮನೆಗಳ ಪೈಕಿ ಮರು ನಿರ್ಮಾಣಗೊಂಡವುಗಳು 18 ಮಾತ್ರ! ಹಾಸನದಲ್ಲಿ 2,152 ಮನೆಗಳಲ್ಲಿ 902 ಮನೆಗಳಷ್ಟೆ ಸಿದ್ಧವಾಗಿವೆ. ಮೈಸೂರಿನ ಎಚ್.ಡಿ. ಕೋಟೆ ತಾಲ್ಲೂಕಿನ ಬಿದರಹಳ್ಳಿ ಜನರಿಗೆ ಸಿಕ್ಕಿದ್ದ ಭರವಸೆ ಈಡೇರಿಲ್ಲ.

ಅಕ್ರಮದ ವಾಸನೆ

ಕೇವಲ ಆಡಳಿತಾತ್ಮಕ ಕಾರಣದಿಂದ ಪರಿಹಾರ ಸಿಗುತ್ತಿಲ್ಲವೆಂದಲ್ಲ, ಭ್ರಷ್ಟಾಚಾರ ಹಾಗೂ ಅಕ್ರಮಗಳು ಜನರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿವೆ.

'ತಾಲ್ಲೂಕು ಪಂಚಾಯಿತಿ ಸದಸ್ಯರೊಬ್ಬರು ತಮ್ಮ ಕೊಟ್ಟಿಗೆಗೆ 'ಎ' ವರ್ಗದ ಲಾಭ ಪಡೆದಿದ್ದಾರೆ. ಅದೇ ಗ್ರಾಮದ ಕುಟುಂಬವೊಂದು ಪರಿಹಾರ ಸಿಗದೆ ಮಸೀದಿಯಲ್ಲಿದೆ' ಎಂದು ಅಕ್ರಮಕ್ಕೆ ಕನ್ನಡಿ ಹಿಡಿಯುತ್ತಾರೆ ಧಾರವಾಡ ತಾಲ್ಲೂಕಿನ ಯಾದವಾಡದ ಮಡಿವಾಳಪ್ಪ ದಿಂಡಲಕೊಪ್ಪ.

ಉತ್ತರ ಕರ್ನಾಟಕದಲ್ಲಿ ಈ ಅವಸ್ಥೆಯಾದರೆ, ದಕ್ಷಿಣದಲ್ಲಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಕೊಡಗು ಜಿಲ್ಲೆಯ ಬೆಟ್ಟದಕಾಡು, ಕುಂಬಾರಗುಂಡಿ, ಬರಡಿ, ಗುಹ್ಯ, ಕರಡಿಗೋಡಿನ ನಿವಾಸಿಗಳಿಗೆ ಸೂರು ಸಿಕ್ಕಿಲ್ಲ. ಹಲವರು ನದಿ ಪಕ್ಕದಲ್ಲೇ ಶೆಡ್‌ನಲ್ಲಿದ್ದಾರೆ. ಅಭ್ಯತ್‌ಮಂಗಲದ ಅರೆಕಾಡು ವ್ಯಾಪ್ತಿಯಲ್ಲಿ 8 ಎಕರೆ ಒತ್ತುವರಿ ತೆರವುಗೊಳಿಸಿ, ಪುನರ್ವಸತಿಗೆ ಜಾಗ ಗುರುತಿಸಲಾಗಿತ್ತು. ನಂತರ ಪ್ರಗತಿಯಾಗಿಲ್ಲ. ಮಳೆಗಾಲ ಆರಂಭವಾಗಿದ್ದು, ಮತ್ತೆ ಭೀತಿ ಎದುರಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತವರು ಶಿವಮೊಗ್ಗ ಜಿಲ್ಲೆಯಲ್ಲೇ ಪುನರ್ವಸತಿಗೆ ₹ 34 ಕೋಟಿ ಬಾಕಿ ಇದೆ. ಹಲವು ಮನೆಗಳು ಬುನಾದಿ ಹಂತದಲ್ಲೇ ಇವೆ. ಕೆಲವರು ಅರ್ಧಂಬರ್ಧ ಗೋಡೆ ಕಟ್ಟಿಕೊಂಡಿದ್ದಾರೆ. ಕರಾವಳಿ ಮತ್ತು ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ.

ನೆರೆ ಮತ್ತು ಅತಿವೃಷ್ಟಿಪೀಡಿತ ಜಿಲ್ಲೆಗಳಲ್ಲಿ ಇಂಥ ಹಲವು ಕಣ್ಣೀರಿನ ಕತೆಗಳು ಸಿಗುತ್ತವೆ. ಕಡತಗಳಲ್ಲಿ, ಮನೆ ನಿರ್ಮಾಣ ಹಾಗೂ ಪರಿಹಾರಧನ ವಿಲೇವಾರಿಯಾದ ಪುರಾವೆಗಳಿದ್ದರೂ ಬದುಕು ಬಯಲಿನಲ್ಲಿಯೇ ಸಾಗುತ್ತಿದೆ.

ಶಾಲೆಗಳದ್ದೂ ಇದೇ ಸ್ಥಿತಿ: ಬದುಕಿಗೆ ಸುರಕ್ಷೆ ನೀಡುವ ಸೂರುಗಳ ಕತೆ ಹೀಗಾದರೆ, ಭವಿಷ್ಯವನ್ನು ಸುರಕ್ಷಿತಗೊಳಿಸುವ ಶಾಲೆಗಳ ಪರಿಸ್ಥಿತಿಯೂ ಭಿನ್ನವಾಗಿಲ್ಲ. ನದಿ ದಂಡೆಗಳ ಗ್ರಾಮಗಳಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳು ಎರಡು ವರ್ಷವಾದರೂ ದುರಸ್ತಿಯಾಗಿಲ್ಲ.

ಗುತ್ತಿಗೆದಾರರ ಆಯ್ಕೆಗೆ ವಿಳಂಬ, ಜಾಗದ ಕೊರತೆ, ಜಾಗವಿದ್ದರೂ ಒತ್ತುವರಿ ತೆರವಿಗೆ ಸ್ಥಳೀಯರ ಅಸಹಕಾರ, ನ್ಯಾಯಾಲಯದಲ್ಲಿನ ಪ್ರಕರಣ, ಕೋವಿಡ್ ಸಂಕಷ್ಟ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಹಣವಿದ್ದರೂ ಕಾಮಗಾರಿ ಅನುಷ್ಠಾನದಲ್ಲಿ ನಿರೀಕ್ಷಿತ ಪ್ರಗತಿಯಾಗಿಲ್ಲ.

ಶೆಡ್‌ಗಳೇ ಆಸರೆ: ಆಗ ತಾತ್ಕಾಲಿಕವಾಗಿ ಆಶ್ರಯ ನೀಡಿದ್ದ ತಗಡಿನ ಶೆಡ್‌ಗಳಿಂದ ಈಗಲೂ ಶಾಲೆಗೆ ಮುಕ್ತಿ ಸಿಕ್ಕಿಲ್ಲ. 'ಪ್ರವಾಹಕ್ಕೆ ತುತ್ತಾದ ಮೊದಲ ವರ್ಷ ತಾತ್ಕಾಲಿಕ ಶೆಡ್‌ಗಳಲ್ಲೇ ಮಕ್ಕಳಿಗೆ ಪಾಠ ಮಾಡಿದ್ದೆವು. ಬಳಿಕ ಕೋವಿಡ್‌ನಿಂದಾಗಿ ಶಾಲೆ ತೆರೆದಿಲ್ಲ. ಈ ಅವಧಿಯಲ್ಲಿ ಕಾಮಗಾರಿಯನ್ನಾದರೂ ಪೂರ್ಣಗೊಳಿಸಬೇಕಿತ್ತು' ಎನ್ನುತ್ತಾರೆ ಹುನಗುಂದ ತಾಲ್ಲೂಕಿನ ಬೇವಿನಾಳದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಬಿ.ಬಿ. ಸಜ್ಜನ.

ಕೆಲವೆಡೆ ಶಾಲೆಗಳು ಕಾಳಜಿ ಕೇಂದ್ರಗಳಾಗಿ ಬದಲಾಗಿದ್ದವು. ಆಗ ಹಾಳಾದ ಶೌಚಾಲಯಗಳೂ ದುರಸ್ತಿಯಾಗಬೇಕಿದೆ. ಬೇವಿನಾಳ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದೆ. ಗುತ್ತಿಗೆದಾರರು ಅಂತಿಮಗೊಂಡಿಲ್ಲ. ನಿಗದಿಯಾದ ಸ್ಥಳ ಒತ್ತುವರಿಯಾಗಿದ್ದು, ತೆರವಿಗೆ ಪಂಚಾಯಿತಿ ಮುಂದಾಗುತ್ತಿಲ್ಲ. ಮಳೆ-ಪ್ರವಾಹ ತಂದಿಟ್ಟ ಪರಿಸ್ಥಿತಿಯನ್ನು ಸರಿಪಡಿಸಬೇಕಾದ ವ್ಯವಸ್ಥೆಯ ಮೇಲೆ ನಿಷ್ಕ್ರಿಯತೆ ಹಾಗೂ ವಿಳಂಬಗತಿಯೆಂಬ ಪಾಚಿ ಮನೆಮಾಡಿದೆ.

ನದಿ ದಡ ಬಿಟ್ಟು ಪರ್ಯಾಯ ಸ್ಥಳಕ್ಕೆ ತೆರಳುವುದಾಗಿ ಬರೆದುಕೊಟ್ಟಿದ್ದರೂ ಪುನರ್ವಸತಿ ಕಲ್ಪಿಸಿಲ್ಲ. ಈ ಮಳೆಗಾಲದಲ್ಲಿ ಮತ್ತೆ ಕಾಳಜಿ ಕೇಂದ್ರ ಸೇರಬೇಕಾದ ಸ್ಥಿತಿ ಇದೆ

ಎಂ.ಎ. ಕೃಷ್ಣ ಸಂಚಾಲಕ, ನಿವೇಶನ ಹೋರಾಟ ಸಮಿತಿ, ಕೊಡಗು

ದಿನ ಭವಿಷ್ಯ

ಭಾನುವಾರ ಜುಲೈ 4, 2021

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಆರ್ದ್ರೆ ದಶಮೀ ಗಂ. 35-58 (ರಾ. 8-29) ಭಾನುವಾರ ನಿತ್ಯ ನಕ್ಷತ್ರ ಅಶ್ವಿನೀ ಗಂ. 11--21 (ಹ. 10-38) ಸುಕರ್ಮ ನಾಮ ಯೋಗ ಗಂ. 20-56 ವಣಿಜ ಕರಣ ಗಂ. 3-57 ವಿಷ ಗಂ. 1-4 ಪುನರ್ವಿಷ ಗಂ. 37-47 ಅಮೃತಾಭಾವಃ ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-00 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 1 8

ಮೇಷ: ಪ್ರಯತ್ನಕ್ಕೆ ತಕ್ಕ ಫಲವನ್ನು ನಿರೀಕ್ಷಿಸಬಹುದು. ಇಂದಿನ ಆತ್ಮವಿಶ್ವಾಸದ ನಡೆ ಮುಂದಿನ ಶ್ರೇಯಸ್ಸಿಗೆ ಬುನಾದಿ. ಬುದ್ಧಿಮತ್ತೆಯನ್ನು ಮೆರೆಯುವ ಅವಕಾಶ ನಿಮ್ಮದಾಗಲಿದೆ.

ವೃಷಭ: ಅಪರೂಪದ ಗೆಳೆಯರೊಂದಿಗೆ ಕಾಲ ಕಳೆಯುವ ಸಾಧ್ಯತೆ ಕಂಡುಬರುತ್ತಿದೆ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿಯಿಂದ ಭಾಗಿ. ಮಾಡಬೇಕಾದ ಕೆಲಸವನ್ನು ವಿನಾಕಾರಣ ಮುಂದೂಡದಿರಿ.

ಮಿಥುನ: ಅತಿಯಾದ ಮಾತಿನಿಂದ ವಿಪತ್ತು ಎದುರಾದೀತು. ವೃತ್ತಿಗೆ ಸಂಬಂಧಿಸಿದ ಒಪ್ಪಂದ ಮಾಡಿಕೊಳ್ಳುವಾಗ ಜಾಗರೂಕವಾಗಿ ವ್ಯವಹರಿಸುವುದು ಉತ್ತಮ. ನಡೆ ನುಡಿಯಿಂದಾಗಿ ಸದಭಿಪ್ರಾಯ ಮೂಡಿಬರಲಿದೆ.

ಕರ್ಕಾಟಕ: ಎಲ್ಲರೂ ಬೆರಗಾಗಿ ನೋಡುವಂತೆ ಮಹತ್ತರ ಕಾರ್ಯವೊಂದನ್ನು ಮಾಡಿ ಸೈ ಎನಿಸಿಕೊಳ್ಳಲಿದ್ದೀರಿ. ಕೊಡಬೇಕಾದ ಸಾಲಗಳನ್ನು ತೀರಿಸುವ ಮೂಲಕ ನೆಮ್ಮದಿ. ಕುಟುಂಬ ಸದಸ್ಯರಲ್ಲಿ ಸಂತಸ ಮೂಡಿಬರುವುದು.

ಸಿಂಹ: ನಾಯಕತ್ವದ ಗುಣದಿಂದಾಗಿ ಎದೆಗುಂದದ ಪ್ರಯತ್ನ ನಡೆಸಿ ನಿರೀಕ್ಷೆಗೆ ಮೀರಿದ ಯಶಸ್ಸನ್ನು ಹೊಂದಲಿದ್ದೀರಿ. ಮಕ್ಕಳ ನಡವಳಿಕೆ ಮತ್ತು ವಿದ್ಯಾಭ್ಯಾಸದ ಬಗ್ಗೆ ಕಾಳಜಿ ವಹಿಸುವುದು ಅವಶ್ಯ.

ಕನ್ಯಾ: ಅತಿಯಾದ ಕಾರ್ಯಬಾಹುಳ್ಯದಿಂದಾಗಿ ದೇಹಾಲಾಸ್ಯ ಉಂಟಾದೀತು. ಮುಂದಿನ ಏಳಿಗೆಯ ಮಾರ್ಗವೊಂದು ಗೋಚರವಾಗುವ ಸಾಧ್ಯತೆ. ಉದ್ಯಮದ ಸಲುವಾಗಿ ಹಿತೈಷಿಗಳೊಂದಿಗೆ ವಿಚಾರ ವಿನಿಮಯ ನಡೆಸಲಿದ್ದೀರಿ.

ತುಲಾ: ಸಂತೋಷದ ವಿಚಾರವೊಂದನ್ನು ಕೇಳುವ ಸಾಧ್ಯತೆ ಕಂಡುಬರುತ್ತಿದೆ. ಸಮಾಜಕ್ಕೆ ಒಳಿತಾಗುವ ಕಾರ್ಯವೊಂದರಲ್ಲಿ ಭಾಗಿಯಾಗಿ ಆನಂದ ಹೊಂದುವಿರಿ. ಜನಮಾನಸದಲ್ಲಿ ಉಳಿಯುವ ಅವಕಾಶ.

ವೃಶ್ಚಿಕ: ಬಹುದಿನಗಳಿಂದ ನನೆಗುದಿಗೆ ಬಿದ್ದ ಕಾರ್ಯಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ಕುಟುಂಬ ಸಮೇತ ದೂರದ ಪ್ರಯಾಣದ ಸವಿಯನ್ನು ಸವಿಯಲಿದ್ದೀರಿ.

ಧನು: ಆರ್ಥಿಕ ಅನುಕೂಲತೆಗಳು ಕೂಡಿಬರಲಿದೆ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಲಿದ್ದೀರಿ. ಆಪ್ತ ಬಂಧುಗಳೊಂದಿಗೆ ಸಂತಸವನ್ನು ಹಂಚಿಕೊಳ್ಳುವ ಸಾಧ್ಯತೆ ಕಂಡುಬರುತ್ತಿದೆ.

ಮಕರ: ನ್ಯಾಯಾಲಯದಲ್ಲಿನ ಕಟ್ಲೆಗಳಲ್ಲಿ ಯಶಸ್ಸನ್ನು ನಿರೀಕ್ಷಿಸಬಹುದು. ಹೆರವರ ಕಷ್ಟ ಸುಖಗಳಲ್ಲಿ ಭಾಗಿಯಾಗಿ ನೆಮ್ಮದಿ. ಮಕ್ಕಳ ಪ್ರಗತಿಯ ಸುದ್ದಿಯಿಂದಾಗಿ ಮನೆಯಲ್ಲಿ ನೆಮ್ಮದಿಯ ವಾತಾವರಣ.

ಕುಂಭ: ಧೈರ್ಯ ಶ್ರದ್ಧೆಯಿಂದ ಕೆಲಸ ಕಾರ್ಯಗಳನ್ನು ನಿರ್ವಹಿಸಿ ಯಶಸ್ಸನ್ನು ಸಾಧಿಸಲಿದ್ದೀರಿ. ಹಿರಿಯರ ಅನುಗ್ರಹ ನಿಮ್ಮ ಬೆಂಬಲಕ್ಕೆ ಇರುವುದು. ದಿನವಿಡೀ ಸಂತಸ.

ಮೀನ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸ್ನೇಹಿತರ ಸಹಕಾರವೂ ದೊರೆತು ಅಭೂತಪೂರ್ವ ಯಶ ಸಾಧಿಸಲಿದ್ದೀರಿ. ಹೊಸ ಉದ್ಯಮವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಮಾತುಕತೆ ನಡೆಸುವ ಸಾಧ್ಯತೆ.

ನಿಮ್ಮ ಜನ್ಮದಿನ 4-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ನಿಮ್ಮ ಯಶಸ್ಸಿನ ಬಾಗಿಲು ತೆರೆದುಕೊಳ್ಳುವ ದಿನಗಳು ಸಮೀಪಿಸುತ್ತಿವೆ. ಆರ್ಥಿಕ ಸಂಪನ್ಮೂಲಗಳು ಅನಾಯಾಸವಾಗಿ ಕೂಡಬರಲಿವೆ. ವಿದ್ಯಾರ್ಥಿಗಳಿಗೆ ಯಶಸ್ಸಿನ ಉತ್ತುಂಗಕ್ಕೆ ಏರುವ ಅವಕಾಶಗಳು ಕೂಡಿಬರುವುದು. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧಗಳು ಕೂಡಿಬರಲಿದೆ.

ಪದಬಂಧ 4647

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಅನುಕೂಲ ಸಂದರ್ಭವಿದು (4)
5.ದಡಿ ಹಿಡಿದುಕೊಂಡಿರುವವ ಶಕ್ತಿಶಾಲಿ (3)
6.ರಥವನ್ನೇರಿದಾತನ ಮನಸ್ಸಿನ ಬಯಕೆ (4)
8.ಮನೆಯೊಡೆಯನು ಕುಳಿತಿರುವ ಪಡಸಾಲೆ (4)
11.ಮಂದಿ ಸೇರಿ ಸ್ವತಂತ್ರವಾಗಿ ರಚಿಸಿರುವ ಪ್ರಜಾಪ್ರಭುತ್ವ (4)
14.ಇದು ಬೇರೆಯವರ ದುಡ್ಡು (4)
15.ಹತ್ತನೆಯ ಭಾಗ (3)
16.ಗಣಿಯೊಳಗೇ ಅಡಗಿದ್ದಾಳೆ ಈ ಗಟ್ಟಿಗಿತ್ತಿ! (4)

ಮೇಲಿಂದ ಕೆಳಕ್ಕೆ

1.ಕಂಬದ ಬೋದಿಗೆಯಮೇಲೆ ಕೆತ್ತಿರುವ ಸುಂದರ ಸ್ತ್ರೀವಿಗ್ರಹ (4)
2.ಯಜಮಾನನ ಹುಟ್ಟುಗುಣ! (4)
3.ನೆರೆಮನೆಯ ಹತ್ತಿರವೇ ರಾಜಗೃಹ ಇದೆಯಲ್ಲಾ? (4)
4.ಪಥದಲ್ಲಿ ಸಾಗುತ್ತಲೇ ಕೈಗೊಂಡ ಪ್ರತಿಜ್ಞೆ (3)
7.ಸಾಮರಸ್ಯವಿದ್ದಾಗ ಬಯಲಾಗದ ಗುಟ್ಟು! (3)
9.ಮನದೊಳಗೇ ವಿಚಾರಮಾಡುವಿಕೆ (3)
10.ಕೊರತೆ ಈ ತರ ಬಂದಿದೆ (3)
11.ಮಂದಿ ಆಡುವ ಮಾತು (4)
12.ಪಕ್ಷದ ಹದಿಮೂರನೆಯ ದಿನ (4)
13.ಒಪ್ಪವಾಗಿ ಬುದ್ಧಿಯಿಟ್ಟುಕೊಂಡು ನೀಡಿದ ಒಪ್ಪಿಗೆ (4)
14.ಲಂಗ ಧರಿಸಿದವಳು ಏರಿರುವ ಮಂಚ! (3)



4646ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಸಾಹತು 3.ಓತಪ್ರೋತ 5.ಗದ್ದುಗೆ 6.ಧಮನಿ 8.ಕುಮಾರ 9.ವಿನೋದ 11.ಮಧುರ 13.ಪ್ರಗತಿ 15.ನೆಲಸಮ 16.ಸುಖಾಸನ

ಮೇಲಿಂದ ಕೆಳಕ್ಕೆ: 1.ವಜ್ರಾಯುಧ 2.ಹುಡುಗ 3.ಓರಗೆ 4.ತಳವಾರ 7.ನಿನಾದ 8.ಕುಗ್ರಾಮ 9.ವಿಮೋಚನೆ 12.ರಸಾಯನ 13.ಪ್ರಥಮ 14.ತಿನಿಸು

ಸುಡೊಕು 5033

4			9		1		3	2
	9			8			7	4
8			4		5	9		
7								8
	8		1	6	2		9	
		9	7			2		
		8		1				
9		4	8		7		2	5
	1			9			8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5032 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸೆಪ್ಟೆಂಬರ್ ವೇಳೆಗೆ ಕನಿಷ್ಠ ಶೇ 10ರಷ್ಟು ಜನರಿಗೆ ಲಸಿಕೆ: ಡಬ್ಲ್ಯುಎಚ್‌ಒ ಸಲಹೆ

‘ಡೆಲ್ಟಾ ಹೆಚ್ಚು ಅಪಾಯಕಾರಿ’

ವಿಶ್ವಸಂಸ್ಥೆ/ಜಿನೆವಾ (ಪಿಟಿಐ): ಡೆಲ್ಟಾ ರೂಪಾಂತರಿ ಸೋಂಕು, ನಿರಂತರವಾಗಿ ರೂಪಾಂತರಗೊಳ್ಳುತ್ತಿದ್ದು, ತ್ವರಿತಗತಿಯಲ್ಲಿ ಹರಡುತ್ತಿರುವ ಕಾರಣ, ಜಗತ್ತು ಕೋವಿಡ್ ಪಿಡುಗಿನ ಅಪಾಯಕಾರಿ ಸನ್ನಿವೇಶದಲ್ಲಿದೆ ಎಂದು ವಿಶ್ವ ಆರೋಗ್ಯ ಸಂಘಟನೆಯು (ಡಬ್ಲ್ಯುಎಚ್‌ಒ) ಎಚ್ಚರಿಸಿದೆ.

ಟೆಡ್ರೋಸ್ ಗೆಬ್ರೇಷಿಯಸ್

ಈ ಕುರಿತು ಪ್ರತಿಕ್ರಿಯಿಸಿರುವ ಡಬ್ಲ್ಯುಎಚ್‌ಒ ಪ್ರಧಾನ ನಿರ್ದೇಶಕ ಟೆಡ್ರೋಸ್ ಘೆಬ್ರೆಸಸ್ ಅವರು, ಲಸಿಕೆ ಅಭಿಯಾನ ಮಂದಗತಿಯಲ್ಲಿರುವ ದೇಶಗಳ ಆಸ್ಪತ್ರೆಗಳಲ್ಲಿ ರೋಗಿಗಳ ದಟ್ಟಣೆ ಹೆಚ್ಚುವ ಆತಂಕಕಾರಿ ದೃಶ್ಯಗಳು ಬರುವ ದಿನಗಳಲ್ಲಿ ಸಾಮಾನ್ಯ ಎನಿಸಬಹುದು ಎಂದು ಹೇಳಿದ್ದಾರೆ.

‘ತ್ವರಿತವಾಗಿ ಹರಡುವ ಡೆಲ್ಟಾ ಸೇರಿದಂತೆ ರೂಪಾಂತರ ಸೋಂಕುಗಳು ಹಲವು ದೇಶಗಳಲ್ಲಿ ಹೆಚ್ಚಿನ ಪರಿಣಾಮ ಬೀರಲಿವೆ. ನಾವು ಕೋವಿಡ್ ಪಿಡುಗಿನ ಸಂಕಷ್ಟದ ಕಾಲದಲ್ಲಿದ್ದೇವೆ’ ಎಂದು ಘೆಬ್ರೆಸಸ್ ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಯಾವುದೇ ದೇಶವು ಡೆಲ್ಟಾ ತಳಿಯ ಪರಿಣಾಮದಿಂದ ಸದ್ಯ ಪಾರಾಗಿಲ್ಲ. ನಿರಂತರವಾಗಿ ಈ ಸೋಂಕು ರೂಪಾಂತರಗೊಳ್ಳುತ್ತಿರುವ ಕಾರಣ, ಸತತವಾಗಿ ಅದರ ಪರಿಣಾಮಗಳತ್ತಲೂ ಕಣ್ಗಾವಲು ಇಡುತ್ತಾ, ಪೂರಕವಾಗಿ ಸಾರ್ವಜನಿಕ ಆರೋಗ್ಯ ಸ್ಪಂದಿಸುವಂತೆಯೂ ಸಜ್ಜುಗೊಳಿಸಬೇಕಿದೆ’ ಎಂದರು.

ಪ್ರಸ್ತುತ ಡೆಲ್ಟಾ ಸೋಂಕು 98 ದೇಶಗಳಲ್ಲಿ ಕಾಣಿಸಿಕೊಂಡಿದೆ. ಕಡಿಮೆ ಅಥವಾ ಅಧಿಕ ಲಸಿಕೆ ಅಭಿಯಾನ ನಡೆದಿರುವ ಉಳಿದ ದೇಶಗಳಿಗೂ ವೇಗವಾಗಿ ಹರಡುತ್ತಿದೆ. ಸೋಂಕಿನ ವಿರುದ್ಧ ಬಿಗಿಯಾದ ಕಣ್ಗಾವಲು, ಆರಂಭದಲ್ಲಿಯೇ ಸೋಂಕು ಪತ್ತೆ, ನಿಯಂತ್ರಣ ಕ್ರಮಗಳಷ್ಟೇ ಇದಕ್ಕಿರುವ ಪರಿಹಾರ‘ ಎಂದಿದ್ದಾರೆ.

ಸೋಂಕು ತಡೆ ಕ್ರಮವಾಗಿ ಮಾಸ್ಕ್ ಧರಿಸುವುದು, ಪರಸ್ಪರ ಅಂತರ ಕಾಯ್ದುಕೊಳ್ಳುವುದು, ಸಮೂಹದಿಂದ ದೂರ ಇರುವ ಕ್ರಮಗಳಿಗೆ ಆದ್ಯತೆ ನೀಡಬೇಕು. ಜೊತೆಗೆ ಸುರಕ್ಷತಾ ಪರಿಕರಗಳು, ಆಮ್ಲಜನಕ, ಪರೀಕ್ಷೆಗೆ, ಚಿಕಿತ್ಸೆಗೆ ಸಿದ್ಧತೆಯೂ ಅಗತ್ಯ ಎಂದಿರುವ ಅವರು, ಮುಂದಿನ ವರ್ಷದ ಈ ವೇಳೆಯವರೆಗೂ ಕನಿಷ್ಠ ಶೇ 70ರಷ್ಟು ಜನರಿಗೆ ಲಸಿಕೆ ನೀಡಬೇಕಾದ್ದು ಅಗತ್ಯ ಎಂದೂ ತಿಳಿಸಿದರು.

ಸೋಂಕು ಹರಡುವಿಕೆ ತಡೆಯಲು, ಜನರನ್ನು ರಕ್ಷಿಸಲು, ಇನ್ನಷ್ಟು ಅಪಾಯಕಾರಿಯಾಗಿ ಸೋಂಕು ರೂಪಾಂತರಗೊಳ್ಳುವುದನ್ನು ತಡೆಯಲು ಇದೊಂದೇ ಉತ್ತಮ ಮಾರ್ಗ. ಈ ವರ್ಷದ ಸೆಪ್ಟೆಂಬರ್ ವೇಳೆಗೆ ಎಲ್ಲ ರಾಷ್ಟ್ರಗಳು ಕನಿಷ್ಠ ಶೇ 10ರಷ್ಟು ಜನರಿಗೆ ಲಸಿಕೆ ನೀಡಲು ನಾವು ಕೋರುತ್ತೇವೆ ಎಂದರು.

ಮುಖ್ಯವಾಗಿ ಬಯೋಟೆಕ್, ಫೈಝರ್, ಮೊಡೆರ್ನಾ ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಲು ಮಾಹಿತಿ ವಿನಿಮಯ ಮಾಡಿಕೊಳ್ಳಬೇಕು. ವಿಶ್ವದಾದ್ಯಂತ ಲಸಿಕೆ ಸಾಮರ್ಥ್ಯವನ್ನು ಹೆಚ್ಚಿಸಿದರೆ ಸೋಂಕು ಹತ್ತಿಕ್ಕುವುದು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಭಾರತದಲ್ಲಿ ಮೊದಲು ಪತ್ತೆಯಾಗಿದ್ದ ಡೆಲ್ಟಾ ಸೋಂಕು ಬಹುತೇಕ 100 ದೇಶಗಳಲ್ಲಿ ವರದಿಯಾಗಿದೆ.

ಆಮ್ಲಜನಕ ಕೊರತೆ: ಇಂಡೊನೇಷ್ಯಾ ತತ್ತರ

ಜಕಾರ್ತ (ಎಪಿ): ಇಂಡೊನೇಷ್ಯಾದಲ್ಲಿ ಕೋವಿಡ್ ಸೋಂಕು ತೀವ್ರವಾಗಿ ಹರಡುತ್ತಿದೆ. ಈ ನಡುವೆ ಆಸ್ಪತ್ರೆಗಳಲ್ಲಿ ಆಮ್ಲಜನಕ ಕೊರತೆಯಿಂದಾಗಿ ಹಲವರು ಪ್ರಾಣ ಕಳೆದುಕೊಂಡಿದ್ದಾರೆ.

ಒಂದೆಡೆ ಲಸಿಕೆ ನೀಡುವ ಕಾರ್ಯಕ್ರಮ ನಿಧಾನಗತಿಯಲ್ಲಿ ಸಾಗಿದೆ. ಇನ್ನೊಂದೆಡೆ ಪ್ರಕರಣಗಳು ಹೆಚ್ಚುತ್ತಿದ್ದು, ಆಮ್ಲಜನಕ ಕೊರತೆಯೂ ಉಂಟಾಗಿದೆ. ಆಮ್ಲಜನಕ ಸಿಲಿಂಡರ್‌ಗಳನ್ನು ರೋಗಿಗಳ ಕುಟುಂಬಗಳೇ ತರಬೇಕು ಎಂದು ಕೆಲವು ಆಸ್ಪತ್ರೆಗಳು ತಾಕೀತು ಮಾಡುತ್ತಿವೆ ಎಂದು ಮೂಲಗಳು ಹೇಳಿವೆ.

ಥಾಯ್ಲೆಂಡ್: ಹೆಚ್ಚಿದ ಕೋವಿಡ್ ಪ್ರಕರಣ

ಬ್ಯಾಂಕಾಕ್ (ಎಪಿ): ಥಾಯ್ಲೆಂಡ್‌ನಲ್ಲಿ ಐಸಿಯು, ವೆಂಟಿಲೇಟರ್‌ನಂತಹ ಸೌಲಭ್ಯಗಳ ಕೊರತೆಯಿಂದಾಗಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ಭಾರಿ ಸಮಸ್ಯೆ ಉಂಟಾಗಿದೆ. ಇನ್ನೊಂದೆಡೆ, ಲಸಿಕೆ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಕಾರಣ, ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ.

ಹೊಸದಾಗಿ 6,200 ಪ್ರಕರಣಗಳು ವರದಿಯಾಗಿದ್ದು, ಸತತ ಮೂರನೆಯ ದಿನವೂ ದಾಖಲೆ ಪ್ರಮಾಣದಲ್ಲಿ ಸೋಂಕಿನ ಪ್ರಕರಣಗಳು ಕಂಡುಬಂದಿವೆ.

‘ಕೋವ್ಯಾಕ್ಸಿನ್: ಡೆಲ್ಟಾ ತಳಿ ವಿರುದ್ಧ ಶೇ.65ರಷ್ಟು ಪರಿಣಾಮಕಾರಿ’

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕೊರೊನಾ ವೈರಸ್‌ನ ಡೆಲ್ಟಾ ರೂಪಾಂತರ ತಳಿಯ ವಿರುದ್ಧ ಕೋವ್ಯಾಕ್ಸಿನ್ ಲಸಿಕೆ ಶೇ 65ರಷ್ಟು ಪರಿಣಾಮಕಾರಿಯಾಗಿದೆ ಎಂದು ಭಾರತ್ ಬಯೋಟೆಕ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಸಂಸ್ಥೆ ಹಾಗೂ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಶನಿವಾರ ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಕೋವ್ಯಾಕ್ಸಿನ್, ಕೋವಿಡ್–19 ವಿರುದ್ಧ ಶೇ 77.8ರಷ್ಟು ಹಾಗೂ ತೀವ್ರ ಸ್ವರೂಪದ ಸೋಂಕಿನ ವಿರುದ್ಧ ಶೇ 93.4ರಷ್ಟು ಪರಿಣಾಮಕಾರಿಯಾಗಿದೆ. ಲಕ್ಷಣ ರಹಿತ ಸೋಂಕಿನ ವಿರುದ್ಧ ಶೇ 63.6ರಷ್ಟು ರಕ್ಷಣೆ ನೀಡುತ್ತದೆ ಎಂದು ಸಂಸ್ಥೆ ಹೇಳಿದೆ. ಮೂರನೇ ಹಂತದ ಪ್ರಯೋಗದ ಫಲಿತಾಂಶವನ್ನು ಉಲ್ಲೇಖಿಸಿ, ಸಂಸ್ಥೆಯು ಈ ಮಾಹಿತಿ ನೀಡಿದೆ.

ಕ್ಯುಪಿಸಿಆರ್ ಪರೀಕ್ಷೆ ಪ್ರಕಾರ, ಲಕ್ಷಣ ರಹಿತ ಕೊರೊನಾ ಸೋಂಕಿನ ವಿರುದ್ಧ ಉತ್ತಮ ಪರಿಣಾಮದ ಭರವಸೆ ನೀಡಿರುವ ಪ್ರಥಮ ಲಸಿಕೆ ಇದಾಗಿದೆ ಎಂದು ಸಂಸ್ಥೆ ಹೇಳಿದೆ.

ಕೊರೊನಾ ವೈರಸ್‌ನ ಎಲ್ಲಾ ತಳಿಗಳ ವಿರುದ್ಧ ಕೋವ್ಯಾಕ್ಸಿನ್ ಪರಿಣಾಮಕಾರಿಯಾಗಿದೆ. ಈ ಲಸಿಕೆಯ ಯಶಸ್ಸು, ‘ಸಂಶೋಧನೆ ಹಾಗೂ ಉದ್ಯಮ ವಲಯದಲ್ಲಿ ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಸ್ಥಾನ ಸಿಗುವಂತೆ ಮಾಡಿದೆ’ ಎಂದು ಐಸಿಎಂಆರ್‌ನ ಆರೋಗ್ಯ ಸಂಶೋಧನಾ ಕಾರ್ಯದರ್ಶಿ ಮತ್ತು ಮಹಾನಿರ್ದೇಶಕ ಪ್ರೊ. ಬಲರಾಮ್ ಭಾರ್ಗವ ಹೇಳಿದ್ದಾರೆ.

ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಕೋವ್ಯಾಕ್ಸಿನ್ ಲಸಿಕೆ ಅಭಿವೃದ್ಧಿಪಡಿಸಿದ 6 ತಿಂಗಳ ಬಳಿಕ, ಬಹು ನಿರೀಕ್ಷಿತ ಮೂರನೇ ಹಂತದ ಪ್ರಯೋಗದ ಫಲಿತಾಂಶ ಹೊರಬಿದ್ದಿದೆ. ಮೂರನೇ ಹಂತದ ವೈದ್ಯಕೀಯ ಪ್ರಯೋಗ 2020ರ ನವೆಂಬರ್‌ನಿಂದ 2021ರ ಫೆಬ್ರುವರಿ ವರಗೆ ನಡೆಸಲಾಗಿದೆ. ದೇಶದಾದ್ಯಂತ 25,800ಕ್ಕೂ ಹೆಚ್ಚು ಸ್ವಯಂಸೇವಕರ ಮೇಲೆ ಲಸಿಕೆ ಪ್ರಯೋಗ ಮಾಡಲಾಗಿದೆ. ಎರಡನೇ ಡೋಸ್ ಲಸಿಕೆ ಪಡೆದ ಬಳಿಕ ಕೊರೊನಾ ಸೋಂಕಿಗೆ ಒಳಗಾದ 130 ಜನರ ಮೇಲೂ ಪ್ರಯೋಗ ನಡೆಸಲಾಗಿದೆ. ಈ ಎಲ್ಲಾ ಪ್ರಯೋಗಗಳ ಆಧಾರದ ಮೇಲೆ ಲಸಿಕೆಯ ಪರಿಣಾಮದ ಕುರಿತು ಭರವಸೆ ನೀಡಲಾಗಿದೆ. ಭಾರತದಲ್ಲಿ ಬೇರೆ ಯಾವುದೇ ಲಸಿಕೆಯ ಮೂರನೇ ಹಂತದ ಪ್ರಯೋಗ ಇಷ್ಟು ದೊಡ್ಡ ಮಟ್ಟದಲ್ಲಿ ನಡೆದಿಲ್ಲ ಎಂದು ಹೇಳಿದೆ.

ಬೂಸ್ಟರ್ ಡೋಸ್ ಪ್ರಾಯೋಗಿಕ ಪರೀಕ್ಷೆ: ಕೋವ್ಯಾಕ್ಸಿನ್ ಬೂಸ್ಟರ್ ಡೋಸ್ ಎಷ್ಟು ಸುರಕ್ಷಿತ ಮತ್ತು ಎಷ್ಟು ಪ್ರಮಾಣದಲ್ಲಿ ರೋಗನಿರೋಧಕ ಗುಣ ಹೊಂದಿವೆ ಎಂಬುದರ ಕುರಿತು ಪ್ರಾಯೋಗಿಕ ಪರೀಕ್ಷೆ ಪ್ರಗತಿಯಲ್ಲಿರುವುದಾಗಿ ಭಾರತ್ ಬಯೋಟೆಕ್ ಸಂಸ್ಥೆ ಹೇಳಿದೆ.

ತೀವ್ರ ಆತಂಕಕ್ಕೀಡುಮಾಡುವ ಕೊರೊನಾ ವೈರಸ್ ತಳಿಗಳ ವಿರುದ್ಧ ಬೂಸ್ಟರ್ ಡೋಸ್ ಹೇಗೆ ಹೋರಾಡುತ್ತದೆ ಎಂಬ ಕುರಿತು ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಜೊತೆಗೆ, 2ರಿಂದ 18 ವರ್ಷ ವಯಸ್ಸಿನ ಮಕ್ಕಳು ಹಾಗೂ ಹದಿಹರೆಯದವರಿಗೆ ನೀಡಬೇಕಿರುವ ಲಸಿಕೆಯ ವೈದ್ಯಕೀಯ ಪ್ರಯೋಗ ಜೂನ್‌ನಿಂದ ಚಾಲ್ತಿಯಲ್ಲಿದ್ದು, 525 ಸ್ವಯಂಸೇವಕರ ಮೇಲೆ ಈ ಲಸಿಕೆ ಪ್ರಯೋಗಿಸಲಾಗಿದೆ ಎಂದು ಹೇಳಿದೆ.

ಕೋವಿಡ್‌ಗೆ ಆಯುರ್ವೇದ ಔಷಧಿ ಪ್ರಯೋಗ: ಅರ್ಜಿ ತಿರಸ್ಕರಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕ ರೋಗ ಚಿಕಿತ್ಸೆಗಾಗಿ ಅಭಿವೃದ್ಧಿಪಡಿಸಿದ ಆಯುರ್ವೇದ ಮೂಲದ ಔಷಧಿಯನ್ನು ಪ್ರಯೋಗಿಸಲು ಕೇಂದ್ರ ಸರ್ಕಾರ ಮತ್ತು ಆಯುಷ್ ಸಚಿವಾಲಯಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ನ್ಯಾಯಪೀಠವು, ‘ಅರ್ಜಿದಾರರು ಕೋರಿರುವ ಸಂಗತಿಯು ಸಾರ್ವಜನಿಕ ಆರೋಗ್ಯ ಕ್ಷೇತ್ರದ ನೀತಿಗೆ ಸಂಬಂಧಪಟ್ಟದ್ದೆ’ ಎಂದು ಹೇಳಿದೆ.

‘ಕೋವಿಡ್–19 ಚಿಕಿತ್ಸೆಗೆ ಅಭಿವೃದ್ಧಿಪಡಿಸಲಾದ ಎನ್ನಲಾದ ಆಯುರ್ವೇದ ಮೂಲದ ಔಷಧಿಯ ಪರಿಣಾಮಕಾರಿ ಗುಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ಹಕ್ಕನ್ನು ನಿರ್ಣಯಿಸುವ ಸ್ಥಾನದಲ್ಲಿ ನ್ಯಾಯಾಲಯವು ಇಲ್ಲ. ಹಾಗಾಗಿ, ನಾವು ಒಟ್ಟಾರೆ ಅರ್ಜಿಯನ್ನು ತಿರಸ್ಕರಿಸುತ್ತೇವೆ’ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಎಸ್. ಆರ್. ಭಟ್ ಅವರನ್ನೊಳಗೊಂಡ ನ್ಯಾಯಪೀಠವು ಜೂನ್ 28ರಂದು ನೀಡಿದ ಆದೇಶದಲ್ಲಿ ತಿಳಿಸಿದೆ.

ನೆಮ್ಮದಿ ಎಂದರೆ ಸಾವು: ಪಂಡಿತ್ ರಾಜೀವ್ ತಾರಾನಾಥ್

ಪ್ರಜಾವಾಣಿ ವಾರ್ತೆ


ಪಂ. ರಾಜೀವ್ ತಾರಾನಾಥ್

ಬೆಂಗಳೂರು: ‘ನೆಮ್ಮದಿ ಎಂದರೆ ಸಾವು. ನಿಮಗೆ ಬಾಳಿನಲ್ಲಿ ನೆಮ್ಮದಿ ಬಂತಾ? ಅಲ್ಲಿಂದ ಹದಿನೈದು ದಿವಸಕ್ಕೆ ಸತ್ತು ಹೋಗ್ತೀರಿ. ಮಾಡ್ಬೇಕ್ಕೆ ಕೆಲಸ ಇದ್ದರೆ ನೀವು ಸಾಯಲ್ಲ. ನೆಮ್ಮದಿ ಇರಬಾರದು ಕಣ್ರೀ. ಯಾವುದೋ ಒಂದು ಕೆಲಸ ನಾಳೆಗೆ ಬಾಕಿ ಇರಬೇಕು...’- ಇದು ಅಂತರರಾಷ್ಟ್ರೀಯ ಖ್ಯಾತಿಯ ಸರೋದ್ ಮಾಂತ್ರಿಕ ಪಂಡಿತ ರಾಜೀವ ತಾರಾನಾಥ್ ಅವರ ಸ್ಪಷ್ಟನುಡಿ.

‘ಪ್ರಜಾವಾಣಿ ಸೆಲೆಬ್ರಿಟಿ ಲೈವ್’ ಫೇಸ್‌ಬುಕ್ ಸಂವಾದದಲ್ಲಿ ಜುಲೈ 3ರ ಶನಿವಾರ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಅವರು ತಮ್ಮ ಬಾಲ್ಯ, ಯೌವನ, ಅಲೆಮಾರಿ ಬದುಕು, ಸಂಗೀತದ ಧ್ಯಾನ ಮತ್ತು ತಂದೆ ಪಂಡಿತ ತಾರಾನಾಥ ಹಾಗೂ ಗುರು ಉಸ್ತಾದ್ ಅಲಿ ಅಕ್ಬರ್ ಖಾನ್ ಕುರಿತು ಮಾತನಾಡಿದರು. ತಮ್ಮ ಸೂಫಿ ಬದುಕಿನ ಬವಣೆ, ಸಂಭ್ರಮ, ಸಾರ್ಥಕ ಕ್ಷಣಗಳನ್ನು ಅನಾವರಣಗೊಳಿಸಿದರು.

ಅಕ್ಟೋಬರ್‌ನಲ್ಲಿ 90 ವರ್ಷಕ್ಕೆ ಕಾಲಿಡಲಿರುವ ಪಂಡಿತ ರಾಜೀವ್ ತಾರಾನಾಥ್, ಉತ್ಸಾಹದಿಂದ ದೃಢ ಮಾತುಗಳಲ್ಲಿ ತಾವು ನಡೆದುಬಂದ ದಾರಿಯತ್ತ ಹಿನ್ನೋಟ ಬೀರಿದರು.

ಬಹುತ್ವ ಸಂಸ್ಕೃತಿಯ ತವರಾಗಿದ್ದ ಭರತವರ್ಷದಲ್ಲಿ, ಹಿಂದೂಸ್ತಾನಿ ಸಂಗೀತ ಹುಟ್ಟಿದ ನೆಲದಲ್ಲಿ ಇವತ್ತು ಹೊಡಿ ಬಡಿ ಸಂಸ್ಕೃತಿ ಬೆಳೆಯುತ್ತಿರುವುದರ ಕುರಿತು, ಎಲ್ಲವೂ ರಾಜಕೀಯಗೊಳ್ಳುತ್ತಿರುವ ಕುರಿತು ಅವರು ವಿಷಾದದ ಧ್ವನಿಯಲ್ಲಿ ಮರುಗಿದರು.

ಪಂಡಿತ್ ರಾಜೀವ್ ತಾರಾನಾಥ್ ಜತೆಗಿನ ಪ್ರಜಾವಾಣಿ ಸೆಲೆಬ್ರಿಟಿ ಕಾರ್ಯಕ್ರಮದ ಪೂರ್ಣ ವಿಡಿಯೊ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.. https://youtu.be/yxJcurO3_c0

ಪೂಂಚ್‌ನಲ್ಲಿ ಪಾಕ್ ನುಸುಳುಕೋರನ ಬಂಧನ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ ಶನಿವಾರ ಪಾಕಿಸ್ತಾನದ ನುಸುಳುಕೋರನನ್ನು ಭದ್ರತಾ ಪಡೆ ಸಿಬ್ಬಂದಿ ಬಂಧಿಸಿದ್ದಾರೆ.

ಗುಲ್ಪುರ ವ್ಯಾಪ್ತಿಯ ಪ್ರದೇಶದಲ್ಲಿ ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಕಣ್ಗಾವಲಿದ್ದ ಸೇನಾ ಪಡೆ, ಅನುಮಾನಸ್ಪದವಾಗಿ ಓಡಾಡಿಕೊಂಡು ಒಳನುಗ್ಗಲು ಯತ್ನಿಸುತ್ತಿದ್ದ ವ್ಯಕ್ತಿಯನ್ನು ತಡೆದು, ಬಂಧಿಸಿದೆ. ನುಸುಳುಕೋರನನ್ನು ವಿಚಾರಣೆಗೆ ಒಳಪಡಿಸಿದ್ದು, ಆತ ಪಾಕಿಸ್ತಾನದ ಚೋಟ್ರದ ಜಾವೆದ್ ಎಂದು ಗುರುತಿಸಲಾಗಿದೆ ಎಂದು ಭದ್ರತಾ ಪಡೆ ಅಧಿಕಾರಿಗಳು ತಿಳಿಸಿದ್ದಾರೆ.

25 ವರ್ಷಗಳ ಹಿಂದೆ — ಗುರುವಾರ, 4-7-1996

● ಪೆಟ್ರೋಲ್ ದರ ಏರಿಕೆ ದೇಶವ್ಯಾಪಿ ಖಂಡನೆ

ನವದೆಹಲಿ, ಜುಲೈ 3 (ಪಿಟಿಐ, ಯುಎನ್‌ಐ)– ಕೇಂದ್ರ ಸರ್ಕಾರವು ಹಠಾತ್ತಾಗಿ ನಿನ್ನೆ ರಾತ್ರಿಯಿಂದ ಜಾರಿಗೆ ಬರುವಂತೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಶೇ 25ರಷ್ಟು ಹೆಚ್ಚಿಸಿರುವುದಕ್ಕೆ ದೇಶದಾದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಸಂಯುಕ್ತ ರಂಗದ ಸಹ ಪಕ್ಷಗಳು, ಸಿಪಿಎಂ, ಕಾಂಗ್ರೆಸ್, ಭಾರತೀಯ ಜನತಾ ಪಕ್ಷ, ಹಲವಾರು ಕಾರ್ಮಿಕ ಸಂಘಟನೆಗಳು ಸರ್ಕಾರದ ಈ ಕ್ರಮವನ್ನು ಉಗ್ರವಾಗಿ ಖಂಡಿಸಿವೆ.

50 ವರ್ಷಗಳ ಹಿಂದೆ — ಭಾನುವಾರ, 4-7-1971

● ಕಾವೇರಿ ವಿವಾದ: ಪಂಚಾಯಿತಿಗೆ ಕೇರಳದ ಒತ್ತಾಯ

ತಿರುವನಂತಪುರ, ಜುಲೈ 3– ಅಂತರರಾಜ್ಯ ಜಲವಿವಾದ ಶಾಸನದ ಪ್ರಕಾರ, ಕೇರಳ, ಮೈಸೂರು ಮತ್ತು ತಮಿಳುನಾಡುಗಳ ಮಧ್ಯೆ ಇರುವ ಕಾವೇರಿ ಜಲ ವಿವಾದವನ್ನು ನ್ಯಾಯ ಮಂಡಲಿ ತತ್‌ಕ್ಷಣ ಒಪ್ಪಿಸಬೇಕೆಂದು ಕೇಂದ್ರ ಸರಕಾರವನ್ನು ಕೇರಳ ಅಗ್ರಹಪಡಿಸಲಿದೆಯೆಂದು ಕೇರಳದ ಕಾಮಗಾರಿ ಸಚಿವ ವಿ.ಕೆ. ದಿವಾಕರನ್ ಇಂದು ತಿಳಿಸಿದರು.

ಕೇಂದ್ರ ನೀರಾವರಿ ಹಾಗೂ ವಿದ್ಯುತ್ ಸಚಿವ ಡಾ. ಕೆ.ಎಲ್. ರಾವ್ ನೇತೃತ್ವದಲ್ಲಿ ನಡೆದ ಸಂಧಾನ ಯಶಸ್ವಿಯಾಗದೆ ಹೋಗಿರುವುದರಿಂದ, ನ್ಯಾಯ ಮಂಡಳಿಗೆ ವಿವಾದ ಸಲ್ಲಿಸುವುದೊಂದೇ ಈಗಿರುವ ಮಾರ್ಗವೆಂದು ಅವರು ನುಡಿದರು.

ಗುಂಡಣ್ಣ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಎ. ಮುನಿಸ್ವಾಮಿ ರೆಡ್ಡಿ
ಇವರು ದಿನಾಂಕ 23.06.2021 ರಂದು ವೈಕುಂಠವಾಸಿಗಳಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ 04.07.2021 ಭಾನುವಾರ ಮಧ್ಯಾಹ್ನ 12:00 ಗಂಟೆಗೆ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಶ್ರೀಮತಿ ಸುಜಾತ, ಎ. ಮಂಜುನಾಥ ಹಾಗೂ ಕುಟುಂಬಸ್ಥರು

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಿಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

WANTED
ITI Mechanical /related Stream with at least 2 years' Experience. Maintaince Supervisor job in Stone crusher in Gundlupet.
Contact No: 7582812345

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರತಿಷ್ಠಿತ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

ಬೆಂಗಳೂರಿನಲ್ಲಿರುವ ಆಯುರ್ವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಆಯುರ್ವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

Part-Time Jobs

ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಎಕ್ಸೆಲ್ ಶೀಟ್ ಡೇಟಾ ಎಂಟ್ರಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 12,000-15,000 ಕನ್ನಡ, ಇಂಗ್ಲೀಷ್ ಓದಲು ಬರೆಯಲು ಬಲ್ಲವರು ಎಲ್ಲರಿಗೂ ಮುಕ್ತ ಅವಕಾಶ. 9902603707, 9686114647

Wanted

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9916551457/ 9916544057/ 9900371597/ 6363957317

ಬೆಂಗಳೂರಿನಲ್ಲಿ ಉಳಿದುಕೊಂಡು ಮನೆಗೆಲಸ, ಅಡುಗೆ, ಮಕ್ಕಳು ನೋಡಿಕೊಳ್ಳಲು ಹಿಂದಿ/ ಕನ್ನಡಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಸಂಬಳ. ಸಂಪರ್ಕಿಸಿ: 7411548115.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

Industrial & Factory

Tumkur

NEWLY CONST Shed 6000 Sqft area Rent for Godown or Industry in Sathyamangala Industrial Area Tumkur Contact:- 9880201335

Sites

Tumkur

ನಿವೇಶನ ಮಾರಾಟಕ್ಕಿದೆ. ತುಮಕೂರಿನ ಯಲ್ಲಾಪುರದ ಸಿದ್ದೇಶ್ವರ ಬಡಾವಣೆಯ ಸೈಟ್ ನಂ.204 ಪೂರ್ವ ಪಶ್ಚಿಮ 40 ಅಡಿ, ಉತ್ತರ ದಕ್ಷಿಣ 47 ಅಡಿ ಅಳತೆಯ ಸೈಟು ಮಾರಾಟಕ್ಕಿದೆ.ಸಂಪರ್ಕಿಸಿ: 8884444622

ರಿಯಲ್ ಎಸ್ಟೇಟ್ ಬೈಯಿಂಗ್

Agricultural Land

General

ಲೀಸ್ (LEASE) 2/4ಎಕರೆ ತಂತಿಬೇಲಿ ಇರುವ(ಉತ್ತಮ ನೀರಿನ ಸೌಲಭ್ಯ/ಬೋರ್) ಒಂದಿರುವ ಎರಡು ರೂ(ವಾಟ್ ವ್ಯಾನ್ಸ್) ಬೆಂಗಳೂರಿನಿಂದ ಸುಮಾರು100km ಅಂತರದಲ್ಲಿ ಬೇಕಾಗಿದೆ:9880419865

CONNECT

Dealership Enquiries Solicited for Various Towns & Cities in Karnataka
Less Investments | Good Margins | Attractive Returns | Zero Risks

Self - Activating Fire Extinguisher Ball
Recommended for use in Residential, Industrial, Commercial, Retail, Hospitality, Automobiles, Public & Private Transport, Hospitals, Schools & Colleges, Places of Worship, etc
SCAN THIS QR CODE FOR COMPLETE INFO ABOUT FIREBALL
Authorized Super-Stockists for Karnataka
BHARATHWINSFRA RESOURCES
Nagarbhavi, Bengaluru
Vikas Kothari Jain : 98458 50155 / 75574 71111

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಟ್ಟಡದ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ, ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಪ್ರವಾಸ

Travel

9-7-2021 ಚಿಕ್ಕಮಗಳೂರು, ಕಮ್ಮಗುಂಡಿ, ಮುಳ್ಳಯ್ಯನಗಿರಿ, ಬಾಬಾಬುಡನ್‌ಗಿರಿ 23-7-2021 ಜಾತಕನೊಂಡ ಔಷಧಿ ಕೊಡುವಳ್ಳಿ, ಇಡಗುಂಜಿ, ಹ್ಯಾಂಗಿಂಗ್ ಬ್ರಿಡ್ಜ್, ಹೊನ್ನಾವರಬೋಟ್. ಅನುಗ್ರಹಯಾತ್ರೆ 9880079351

ಭವಿಷ್ಯ

Astrology

★||ಸಿಗಂದೂರು ಚೌಡೇಶ್ವರಿ||★ ವಶೀಕರಣ ಆಚಾರ್ಯ... ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀ/ಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★||ಶ್ರೀಚಾಮುಂಡೇಶ್ವರಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಪೂರ್ಣ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ|| ವಿಶ್ವನಾಥ ಜೋಶಿ 7899899949

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು, ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ಮಂತ್ರಮುಗ್ಧ ಮಾಂತ್ರಿಕರು★ ಕೇರಳ, ಕೊಳ್ಳೇಗಾಲದ ಮಂತ್ರಸಿದ್ಧ ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲಸ, ಗಂಡಗಳಿಗೆ ಫೋನಿನ ಮುಖಾಂತರ ಶಾಶ್ವತ ಪರಿಹಾರ. (ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಮೂರ್ತಿ.ಉಚಿತ ಭವಿಷ್ಯ ಉಚಿತ ಪರಿಹಾರ ಶ್ರೀಕೃತ ದರ್ಮಸ್ಥಳ. 7022443071

★||ಶ್ರೀಅಂಜನೇಯಸ್ವಾಮಿ||★ ಆರಾಧಕರಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾಧೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

ವ್ಯಾಪಾರ

Business to Business

Finance

ಮುದ್ರಾ ಯೋಜನೆಯಲ್ಲಿ ಕೃಷಿ ಸ್ವಂತ ವೈಯಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ ಲಭ್ಯ. 7057624634, 9767335494

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯಾಪಾರ, ಆಸ್ತಿ, ವಸತಿ, ಕೃಷಿ, ಸ್ಥಿರಾಸ್ತಿ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

Business Offers

Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ 09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ವೈವಾಹಿಕ

Brides Wanted

Brahmin

ವಧು ಬೇಕಾಗಿದೆ. ಹೆಬ್ಬಾರ್ ಐಯ್ಯಂಗಾರ್, 36 ವರ್ಷದ ಬಿಇಎಂ ಮಾಡಿರುವ ಸ್ವಂತ ಉದ್ಯಮ ಹೊಂದಿರುವ 5'6" ವರನಿಗೆ ಶ್ರೀಮತ್ತ ಬ್ರಾಹ್ಮಣರ ಕನ್ಯೆ ಬೇಕಾಗಿದೆ. ಮೊ. ಸಂಖ್ಯೆ 918310451399

Hindu

ವಿಚ್ಛೇದಿತ ೪೦ ವರ್ಷದ ವ್ಯಕ್ತಿಗೆ ವಧು ಬೇಕಿದೆ. ಮರಾಠ ಸಮುದಾಯಕ್ಕೆ ಸಿಂಧಿಗೆ ಸೇರಿದವರಾಗಿದ್ದು, ಸ್ವಂತ ವ್ಯಾಪಾರ ಮತ್ತು ಮನೆ ಇದೆ. ಸಂಪರ್ಕಿಸಿ: 9035773451, 080-25257598.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳ ವಿಶ್ವಾಸಾರ್ಹತೆಯನ್ನು ಆದರೆ, ಆದರಲ್ಲಿ ಪ್ರಕಟವಾಗುವ ವಸ್ತು, ವಿಷಯ, ವಿಚಾರಗಳ ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಜಾಹೀರಾತುಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 4 ಜುಲೈ 2021


ಆವಂತಿಸ್ವಾಮಿಯ ಸನ್ನಿಧಿಯಲ್ಲಿ... 9

ಪತ್ರಿಕೋದ್ಯಮಕ್ಕೆ ಒಬ್ಬರೇ ನಾಡಿಗ! 10

ಸ್ವಾಭಿಮಾನ ಬೆಸೆದ ಗ್ರಾಮಸೇತು 11

ಸಂಗೀತ ಲೋಕದಲ್ಲಿ 'ಸ್ತ್ರೀ ಪ್ರವೇಶ'ದ ಹೊರಳು ನೋಟ

ಮುಳ್ಳುಗಳನ್ನು ಹೆಕ್ಕಿ ಹೂವ ಹರಡಿದವರು

ರಾಜಾ ರವಿವರ್ಮನ 'ಲೇಡಿ ಇನ್ ಮೂನ್‌ಲೈಟ್' ಕಲಾಕೃತಿಗೆ ರೂಪದರ್ಶಿಯಾದ ಗಾಯಕಿ ಅಂಜನಿಬಾಯಿ ಮಾಲ್ಪೇಕರ್ ಚಿತ್ರ: ವಿಕಿ ಕಾಮನ್ಸ್

ಹಿಂದೆ, ಪುರುಷ ಆಧಿಪತ್ಯದ ಸಂಗೀತ ಕ್ಷೇತ್ರದಲ್ಲಿ ಮಹಿಳೆಯರ 'ಪ್ರವೇಶ' ಅಷ್ಟು ಸುಲಭದ್ದೇನೂ ಆಗಿರಲಿಲ್ಲ. ಸಾಂಸಾರಿಕ ಜೀವನದಲ್ಲಿ ಹಲವು ಬಗೆಯ ಕಷ್ಟ-ನಷ್ಟಗಳನ್ನು ಅನುಭವಿಸಿದ ಸಾಧಕಿಯರಿಗೆ ವೇದಿಕೆಯೇರಿ ಹಾಡುವ ಅವಕಾಶವನ್ನು ನಿರಾಕರಿಸಲಾಗುತ್ತಿತ್ತು. ಅವಕಾಶದ ಹೆಸರಿನಲ್ಲಿ ಶೋಷಣೆ ನಡೆಸಿದ ಘಟನೆಗಳಿಗೂ ಲೆಕ್ಕವಿಲ್ಲ. ಇಂತಹ ನವಾಲುಗಳನ್ನೆಲ್ಲ ಈ ಸಂಗೀತ ಸರಸ್ವತಿಯರು ಮೆಟ್ಟಿ ನಿಂತಿದ್ದಾದರೂ ಹೇಗೆ?

ಶ್ರೀಮತಿ ದೇವಿ

ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಬೆರಗನ್ನು ಮೂಡಿಸುವಷ್ಟು ದೊಡ್ಡ ಸಂಖ್ಯೆಯಲ್ಲಿ ಎದ್ದುಕಾಣುವ ಪ್ರತಿಭಾವಂತ ಗಾಯಕಿಯರ ಬಳಗವನ್ನು ನೋಡಿದಾಗಲೆಲ್ಲ ಅದರ ಹಿಂದಿನ ಹೋರಾಟ-ಹುಡುಕಾಟ ನಮ್ಮನ್ನು ಕಾಡುತ್ತದೆ. ಪುರುಷ ಪ್ರಧಾನವಾಗಿದ್ದ ಶಾಸ್ತ್ರೀಯ ಸಂಗೀತ ಲೋಕದೊಳಗೆ ಪ್ರವೇಶಿಸಿದ ಗಾಯಕಿಯರ ದಾರಿ ಕಲ್ಲು-ಮುಳ್ಳುಗಳಿಂದ ಕೂಡಿದ್ದಾಗಿತ್ತು. ಹಲವು ಬಗೆಯ ಸಾಮಾಜಿಕ, ಕೌಟುಂಬಿಕ, ಆರ್ಥಿಕ ಒತ್ತಡಗಳನ್ನು ಎದುರಿಸುತ್ತಾ-ಮೀರುತ್ತಾ ತಾವು ಸಾಗಿ, ಮುಂದಿನವರಿಗೆ ಸುಗಮವಾದ ದಾರಿಯನ್ನು ಆ ಗಾಯಕಿಯರು ಮಾಡಿಕೊಟ್ಟರು.

ಸಂಗೀತ ಕ್ಷೇತ್ರದಲ್ಲಿ ಮಹಿಳೆಯರ 'ಪ್ರವೇಶ' ಎಂಬುದು ಮಹತ್ವದ ಹೆಜ್ಜೆ ಎಂದೆನಿಸಿರುವುದಕ್ಕೆ ಹಲವಾರು ಕಾರಣಗಳಿವೆ. ಮೊದಲಿನಿಂದಲೂ ಸಮಾಜದಲ್ಲಿ ಗಾಯನ, ನೃತ್ಯ, ನಾಟಕ ಇವುಗಳಿಗೆ ಗೌರವದ ಸ್ಥಾನವಿರಲಿಲ್ಲ. ಇವುಗಳಲ್ಲಿ ಯಾವುದಾದರೊಂದರಲ್ಲಿ ತೊಡಗಿದರೆಂದರೆ ಅವರು ಹಾಳಾದಂತೆಯೇ ಎಂಬ ಭಾವನೆ ಆಳವಾಗಿತ್ತು. ಹೀಗೆ ಸ್ತ್ರೀಯರಿಗೆ ಇವುಗಳನ್ನು ಕಲಿಯುವ ಅವಕಾಶ ಇಲ್ಲದಿದ್ದ ಸಂದರ್ಭದಲ್ಲಿ ಅವರು ಸಂಗೀತ ಕ್ಷೇತ್ರವನ್ನು ಪ್ರವೇಶಿಸಲು ಬಹುತೇಕ ಸಾಧನಗಳಾಗಿದ್ದು ದೇವದಾಸಿ, ತವಾಯಿಫ್ ಹಾಗೂ ರಂಗಭೂಮಿಯಂತಹ ಪರಂಪರೆಗಳು.

ಸಂಗೀತ, ನೃತ್ಯಗಳ ಆಗರವಾಗಿದ್ದ ಅಂತಹ ಕುಟುಂಬಗಳು ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿದ್ದವು. ದೇವಸ್ಥಾನಗಳಲ್ಲಿ ಹಾಗೂ ತಮ್ಮ ಆಶ್ರಯದಾತರ ಮುಂದೆ ಹಾಡುತ್ತಿದ್ದ ಇವರ ಬದುಕಿನ ಮೂಲದ್ರವ್ಯವೇ ಕಲೆಯಾಗಿತ್ತು. ಆಧುನಿಕ ಕಾಲದಲ್ಲಿ ಈ ಆಚರಣೆಗಳನ್ನು ಅವಮಾನಕರವೆಂದು ಭಾವಿಸಲಾಯಿತು. ಇದರಿಂದಾಗಿ ಆಶ್ರಯ, ಸಾಮಾಜಿಕ ಗೌರವ ಎರಡನ್ನೂ ಕಳೆದುಕೊಂಡ ಅವರು ನಂತರದಲ್ಲಿ ಶಾಸ್ತ್ರೀಯ ಸಂಗೀತ, ರಂಗಭೂಮಿ ಹೀಗೆ ಬದುಕಿನ ಹೊಸ ಮಗ್ಗುಲಿಗೆ ತೆರೆದುಕೊಂಡರು.

ಪ್ರಮುಖ ಸಂಶೋಧಕರಾದ ಡಾ.ರಹಮತ್ ತರೀಕೆರೆಯವರು 'ಅಮೀರ್ಬಾಯಿ ಕರ್ನಾಟಕಿ' ಕೃತಿಯಲ್ಲಿ ಬರೆದಿರುವಂತೆ, ಕೆಲವರು ನಾಟಕದಿಂದ ಮುಂದುವರಿದು ಆಧುನಿಕ ಭಾರತದಲ್ಲಿ ಆಗಷ್ಟೇ ಜನ್ಮ ಪಡೆಯುತ್ತಿದ್ದ ಸಿನಿಮಾ ಕ್ಷೇತ್ರವನ್ನು ಪ್ರವೇಶಿಸಲು ಮುಂಬೈ ಸೇರಿದರು. ಅದೇ ಸಂದರ್ಭದಲ್ಲಿ ಭಾರತದಲ್ಲಿ ಪರಿಚಿತವಾದ 'ಗ್ರಾಮಾಫೋನ್' ಗಾನಮುದ್ರಿಕೆಗಳು, ಕಡೆಗಣಿಸಲ್ಪಟ್ಟಿದ್ದ ಹಲವು ಧ್ವನಿಗಳನ್ನು ಹೊರಜಗತ್ತಿಗೆ ಪರಿಚಯಿಸಿದವು. ಮೊತ್ತಮೊದಲ ಗ್ರಾಮಾಫೋನ್ ಗಾಯಕಿ ಎನಿಸಿದ ಕೋಲ್ಕತ್ತದ ಗೋಹರ್ಜಾನಳ ಬಗ್ಗೆ ವಿಕ್ರಂ ಸಂಪತ್ ಅವರು ಬರೆದ 'ಮೈ ನೇಮ್ ಈಸ್ ಗೋಹರ್ಜಾನ್' ಎಂಬ ಕೃತಿ, ಆ ಗಾಯಕಿಯ ಬದುಕಿನ ಹಲವು ಒಳನೋಟಗಳನ್ನು ಒಳಗೊಂಡಿದೆ. ಸಂಗೀತ ಕ್ಷೇತ್ರದಲ್ಲಿ ಮಹಿಳೆಯೊಬ್ಬಳು ಮುಂದೆ ಬರುವುದು ಆ ಕಾಲದಲ್ಲಿ ಎಷ್ಟು ಕಷ್ಟವಿತ್ತು ಎನ್ನುವುದನ್ನು ಅರಿವಿಗೆ ತರುತ್ತದೆ.

ಕಷ್ಟದ ಹಾದಿಯನ್ನು ಸವೆಸಿ ಪ್ರಸಿದ್ಧಿಗೆ ಬಂದ ಗಾಯಕಿಯರಲ್ಲಿ ಜೋಹರಾಬಾಯಿ ಆಗ್ರೇವಾಲಿ, ಮಲಕಾ ಜಾನ್, ಗೋಹರ್ಜಾನ್, ಜಾನಕಿಬಾಯಿ, ಸಿನೆಮಾ ನಟಿ ನರ್ಗಿಸ್‌ಳ ತಾಯಿ ಜದ್ದನ್ ಬಾಯಿ, ಗಝಲ್ ಗಾಯನವನ್ನು ಬೇರೊಂದು ಸ್ತರಕ್ಕೆ ಕೊಂಡೊಯ್ದ ಬೇಗಂ ಅಖ್ತರ್, ಕರ್ನಾಟಕದ ಮಧುರಕಂಠದ ಗಾಯಕಿ ಅಮೀರ್‌ಬಾಯಿ ಕರ್ನಾಟಕಿ, ಅತ್ಯುತ್ತಮ ಠುಮ್ರಿ ಗಾಯಕಿ ರಸೂಲನ್ ಬಾಯಿ, ಮತ್ತೊಬ್ಬ ಠುಮ್ರಿ ಗಾಯಕಿ ಶೋಭಾ ಗುರ್ಟು ಅವರ ತಾಯಿ ಮೇನಕಾಬಾಯಿ ಶಿರೋಡ್‌ಕರ್ ಇವರೆಲ್ಲ ಪ್ರಮುಖರು. ಸಿನೆಮಾ ಸಂಗೀತ ಕ್ಷೇತ್ರದ ಧ್ರುವತಾರೆ ಎನಿಸಿದ ಲತಾ ಮಂಗೇಶ್ಕರ್ ಹಾಗೂ ಅವರ ಸಹೋದರಿ ಆಶಾ ಭೋಂಸ್ಲೆ ಅವರ ಹೆಸರುಗಳೂ ಉಲ್ಲೇಖನೀಯ. ಈ ಗಾಯಕಿಯರು ಈಗ ಬೆಳೆದಿರುವ ಎತ್ತರವನ್ನು ನೋಡಿ ಚಪ್ಪಾಳೆ ತಟ್ಟುವವರು, ಅವರು ಸವೆಸಿದ ಮುಳ್ಳಿನ ಹಾದಿಯನ್ನೂ ಒಮ್ಮೆ ನೆನಪಿಸಿಕೊಳ್ಳಬೇಕು. 'ಸಾದಿರ್' ಎಂದು ಹೆಸರಾಗಿದ್ದು ನಂತರದಲ್ಲಿ ಭರತನಾಟ್ಯವಾಗಿ ರೂಪುಗೊಂಡ ನೃತ್ಯ ಪ್ರಕಾರದ ನಿಪುಣೆಯಾದ ದಿಟ್ಟ ಮಹಿಳೆ ನಮ್ಮ ಬೆಂಗಳೂರು ನಾಗರತ್ನಮ್ಮ ಅವರದು ಸಹ ಹೋರಾಟದ ಬದುಕಿನ ನಡುವೆಯೇ ಹೆಮ್ಮೆಪಡುವಂತಹ ಸಾಧನೆ.

ಈ ಎಲ್ಲ ಹೋರಾಟಗಳ ಹಿನ್ನೆಲೆಯಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರವನ್ನು ಹೊಕ್ಕು ಸ್ತ್ರೀ ಸಂಗೀತಗಾರರ ಹೊಸ ಪರಂಪರೆಗೆ ನಾಂದಿ ಹಾಡಿದ ಆದ್ಯ ಸಂಗೀತಗಾರ್ತಿಯರಲ್ಲಿ ಪ್ರಮುಖರಾದ ಕೆಲವರನ್ನು ತುಸು ಸಮೀಪದಿಂದ ನೋಡಬಹುದಾಗಿದೆ.

ಬಾಲ್ಯದಿಂದಲೂ ಮುಳ್ಳಿನ ದಾರಿಯಲ್ಲೇ ನಡೆದುಬಂದು, ಗೌರವಯುತ ಜೀವನವನ್ನು ಹೋರಾಡಿ ಪಡೆದ ಮೋಗುಬಾಯಿ ಕುರ್ಡೀಕರ್ ಅವರು ಅಲ್ಲಾದಿಯಾ ಖಾನರ ಶಿಷ್ಯರು. ಸಂಗೀತಕ್ಕಾಗಿ ಮುಂಬೈಗೆ ಬಂದು ನೆಲೆಸಿ 'ಗಾನ ತಪಸ್ವಿನಿ' ಎಂಬ ಹೆಸರು ಪಡೆದ ಇವರು ಮುಂದೆ ಪ್ರತಿಭಾನ್ವಿತ ಗಾಯಕಿಯರ ಬಳಗವನ್ನೇ ತಯಾರು ಮಾಡಿದರು. ಕಿಶೋರಿ ಅಮೋನಕರ್, ಕಮಲ್ ತಾಂಬೆ, ಕೌಸಲ್ಯಾ ಮಂಜೇಶ್ವರ್, ಸುಶೀಲಾರಾಣಿ ಪಟೇಲ್, ಕುಮುದಿನಿ ಕಾಟದರೆ, ಸುಲಭಾ ಐಶವೀಕರ್, ಮಾಣಿಕ್ ಭಿಡೆ, ಪದ್ಮಾ ತಲ್ವಾಲಕರ್ ಇವರೆಲ್ಲರೂ ಮೋಗುಬಾಯಿಯವರ ಶಿಷ್ಯರು ಮತ್ತು ಸಂಗೀತ ಲೋಕದಲ್ಲಿ ತಮ್ಮ ಛಾಪನ್ನು ಮೂಡಿಸಿದವರು. ಇವರ ಮಗಳಾದ ಕಿಶೋರಿ ಹಲವು ಬಾರಿ 'ಎಲ್ಲವನ್ನೂ ಸರಿಯಾಗಿ ಪಡೆದುಕೊಂಡು ಹುಟ್ಟಿದ ನಿಮಗೆ ನಾವುಗಳು ಬದುಕಿಗಾಗಿ ಪಟ್ಟ ಕಷ್ಟದ ಅರಿವು ಎಲ್ಲಿ ಆಗುತ್ತದೆ' ಎಂದು ಅಸಹನೆ ತೋರುತ್ತಿದ್ದರೆಂಬುದನ್ನು ಅವರ ಶಿಷ್ಯಂದಿರಿಂದ ಕೇಳಿದ್ದೇನೆ.

ತಮ್ಮ ಛಲ ಹಾಗೂ ಆತ್ಮವಿಶ್ವಾಸದಿಂದ ಸಂಗೀತ ಲೋಕದಲ್ಲಿ ಬೇರೆಯಾಗಿ ನಿಂತವರು ಕೇಸರಬಾಯಿ ಕೇರಕರ್. ಗೋವಾದ ಸಣ್ಣ ಊರಲ್ಲಿದ್ದ ಕೇಸರಬಾಯಿ ಸಂಗೀತ ಕಲಿಕೆಗಾಗಿ ಗುರುಗಳನ್ನು ಪಡೆಯಲು ಮುಂಬೈಗೆ ಬಂದು ಬಹು ಪ್ರಯಾಸಪಟ್ಟು, ಹಲವು ಷರತ್ತುಗಳೊಂದಿಗೆ ಅಲ್ಲಾದಿಯಾ ಖಾನರನ್ನು ಗುರುವಾಗಿ ಪಡೆದವರು. ಕಠಿಣ ಅಭ್ಯಾಸ ನಡೆಸಿ ಜೈಪುರ್ ಘರಾಣೆಯ ತಾಲೀಮನ್ನು ಪಡೆದು, ಶಿಸ್ತುಬದ್ಧ ಗಾಯನ, ಸತ್ವಪೂರ್ಣ ಆಕಾರಯುಕ್ತ ಆವಾಜ್‌ನಿಂದ ಚಿರಸ್ಮರಣೀಯರಾಗಿ ಉಳಿದವರು. ಇವರ ಏಕಮಾತ್ರ ಶಿಷ್ಯೆ ಡೋಂಧೂತಾಯಿ ಕುಲಕರ್ಣಿ.

ಬೆಂಡಿಬಝಾರ್ ಘರಾಣೆಯ ನಝೀರ್ ಖಾನರ ಬಳಿ ಗಾಯನವನ್ನು ಕಲಿತ, ಅಪೂರ್ವ ಸೌಂದರ್ಯವತಿಯಾಗಿದ್ದ ಅಂಜನಿಬಾಯಿ ಮಾಲ್ಪೇಕರ್ ಅವರನ್ನು ರೂಪದರ್ಶಿಯಾಗಿಸಿಕೊಂಡು ರಾಜಾ ರವಿವರ್ಮ 'ಲೇಡಿ ಇನ್ ಮೂನ್‌ಲೈಟ್', 'ಮೋಹಿನಿ', 'ದ ಹಾರ್ಟ್ ಬ್ರೋಕನ್' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಅವುಗಳು ಅಂತರ್ಜಾಲದಲ್ಲಿ ಲಭ್ಯವಿವೆ.

ಮುಂದಿನ ಪುಟಕ್ಕೆ...

ಮೊತ್ತಮೊದಲ ಗ್ರಾಮಾಫೋನ್ ಗಾಯಕಿ ಗೋಹರ್ಜಾನ್ ಕಲೆ: ಸುಜಾತಾ ಶೆಟ್ಟಿ

ಬೆಂಗಳೂರು ನಾಗರತ್ನಮ್ಮ


ಗಂಗೂಬಾಯಿ ಹಾನಗಲ್

ಕೇಸರಬಾಯಿ ಕೇರಕರ್ ಸಂಗೀತ ಕಛೇರಿ... ಚಿತ್ರ: ಅನೀಶ್ ಪ್ರಧಾನ್ ಅವರ 'ಹಿಂದೂಸ್ತಾನಿ ಮ್ಯೂಜಿಕ್ ಇನ್ ಕಲೊನಿಯಲ್ ಬಾಂಬೆ' ಕೃತಿ


ಎಂ.ಎಸ್. ಸುಬ್ಬುಲಕ್ಷ್ಮಿ
ಚಿತ್ರ: ಪ್ರಜಾವಾಣಿ ಆರ್ಕೈವ್


ಬಹುದೊಡ್ಡ ಗಾಯಕಿಯರ ಪಡೆಯನ್ನೇ ಕಟ್ಟಿದ ಮೋಗುಬಾಯಿ ಕುರ್ಡೀಕರ್

ತಕ್ಕಡಿಗೆ ಅಳತೆಯ ಬಟ್ಟೇಕೆ?

ಇಂತಹ ತಕ್ಕಡಿಗಳನ್ನು ತಯಾರಿಸುವವನೂ ಬಳಸುವವನೂ ಗಣಿತದಲ್ಲಿ ಗಟ್ಟಿಗನಾಗಿರಬೇಕಾದದ್ದು ಅನಿವಾರ್ಯ. ಏಕೆಂದರೆ ಎಲ್ಲವೂ ಬಾಯಿ ಲೆಕ್ಕಗಳು. ಈ ತಕ್ಕಡಿಗಳಲ್ಲಿ ಸರಕನ್ನು ತೂಗುವಾಗ ಕೊಳ್ಳುವವನು ಜಾಗ್ರತನಾಗಿರಬೇಕು. ಕೊಳ್ಳುವುದು ಬದನೆಕಾಯಿ ಆಗಿದ್ದರೆ ಒಂದು ಕಡಿಮೆಯಾದರೆ ಪರವಾಗಿಲ್ಲ. ಆದರೆ, ಖರೀದಿಸುವುದು ಚಿನ್ನ, ಬೆಳ್ಳಿ, ಮುತ್ತೇ ಆಗಿದ್ದರೆ?

ಬಿ.ಎಸ್.ಶೈಲಜಾ

ತುಲಾ ರಾಶಿಯ ಮೂಲವನ್ನು ಹುಡುಕುತ್ತಾ ಹೊರಟಾಗ ಅಡ್ಡಬಂದ ತಕ್ಕಡಿಗಳು ಹಲವಾರು. ವಿಶೇಷವಾದವು ಎಂದರೆ ಒಂದೇ ತಟ್ಟೆಯ ಒಂದೇ ಬಟ್ಟಿನ ತಕ್ಕಡಿ. ಅಲ್ಲದೆ ಬಟ್ಟೇ ಬೇಕಿಲ್ಲದ ತಕ್ಕಡಿಯೂ ಉಂಟು. ಇದನ್ನು ಯಾರು, ಹೇಗೆ ಬಳಸುತ್ತಿದ್ದಿರಬಹುದು?

ಪರಿಚಿತ ಹನ್ನೆರಡು ರಾಶಿಗಳ ಹೆಸರುಗಳ ಮೂಲವನ್ನು ಕೆದಕಿದ ಹಲವಾರು ವಿದ್ವಾಂಸರು, 'ಅವು ಬಹುಶಃ ಗ್ರೀಕರಿಂದ ಅಲೆಕ್ಸಾಂಡರನ ಕಾಲದಲ್ಲಿ ಬಂದಿರಬೇಕು. ಒಂಬತ್ತು - ಹತ್ತನೆಯ ಶತಮಾನದಲ್ಲಿ ಮೂಲ ಗ್ರೀಕ್ ಹೆಸರುಗಳಿಗೆ ಸಂಸ್ಕೃತ ಅನುವಾದಗಳೂ ಆಗಿ ಪುಸ್ತಕಗಳಲ್ಲಿ ಸ್ಥಾನವನ್ನು ಭದ್ರ ಮಾಡಿಕೊಂಡ ಮೇಲೆ ಅವು ನಮ್ಮವೇ ಆಗಿಬಿಟ್ಟವು' ಎಂದು ಅಭಿಪ್ರಾಯ ಪಡುತ್ತಾರೆ.

ಅವರಾದರೂ ಈ ಹೆಸರುಗಳನ್ನು ಹೇಗೆ ಹುಡುಕಿದರು ಎಂಬುದನ್ನು ಅರಸುತ್ತಾ ಹೊರಟಾಗ, ಅವು ಗ್ರೀಕ್ ಮೂಲದವಲ್ಲ, ಅದಕ್ಕೂ ಮುಂಚೆಯೇ ಬಳಕೆಯಲ್ಲಿದ್ದವು, ಬಹುಶಃ ಬ್ಯಾಬಿಲೋನಿಯಾದಲ್ಲಿಯೇ ಈ ನಾಮಕರಣ ನಡೆದಿರಬೇಕು ಎಂಬ ಅಂಶವೂ ಪತ್ತೆಯಾಯಿತು.

ಖಗೋಳ ವಿಜ್ಞಾನಿಗಳ ದಿಕ್ಕು ಯಾವಾಗಲೂ ಆಕಾಶದತ್ತವೇ. ಆದ್ದರಿಂದ ಈ ಹೆಸರುಗಳಿಗೆ ಹೊಂದುವ ಕಾಲ್ಪನಿಕ ಚಿತ್ರಗಳನ್ನು ಆಕಾಶದಲ್ಲಿ ಹುಡುಕತೊಡಗಿದರು. ವೃಶ್ಚಿಕಕ್ಕೆ ಚೇಳಿನ ಆಕಾರ ಹೊಂದುವಷ್ಟು ಸುಲಭವಾಗಿ ಇತರ ಹೆಸರುಗಳು ಹೊಂದುವುದೇ ಇಲ್ಲ. ವೃಷಭಕ್ಕೆ ಹಾಗೂ ಹೀಗೂ ಗೂಳಿಯನ್ನು ಹೊಂದಿಸಬಹುದಷ್ಟೆ. ಪರಂಪರಾಗತವಾಗಿ ಬಂದಿರುವ ಹೆಸರುಗಳೂ ಇಲ್ಲಿ ಸುಳಿವನ್ನು ಕೊಡುವುವು. ಹೀಗೆ ತುಲಾ ಹೆಸರಿನ ಸಮಸ್ಯೆ ಆರಂಭವಾಯಿತು. ಈ ಭಾಗದಲ್ಲಿರುವ ನಕ್ಷತ್ರಗಳೆಲ್ಲ ಕ್ಷೀಣವಾದವು. ಆಲ್ಫಾ, ಬೀಟಾ, ಗಾಮಾ - ಹೀಗೆ ಗ್ರೀಕ್ ಅಕ್ಷರಗಳಿಂದ ಗುರುತಿಸುವುದು ಪದ್ಧತಿ. ಅವುಗಳಲ್ಲೇ ನಾಲ್ಕನ್ನು ಆರಿಸಿ ಒಂದು ಚೌಕಾಕಾರವನ್ನು ಕಲ್ಪಿಸಿಕೊಂಡು ಯಾವುದೇ ಕಲಾವಿದ ಅವುಗಳ ಮೂಲಕ ಗೆರೆಗಳನ್ನು ಎಳೆದು ತಕ್ಕಡಿಯ ಚಿತ್ರವನ್ನು ಬರೆಯಬಹುದು.

ಬ್ರಿಟಿಷ್ ಮ್ಯೂಸಿಯಂನಲ್ಲಿರುವ ಶಿಲ್ಪ. ತಕ್ಕಡಿಯನ್ನು ಸೂಕ್ಷ್ಮವಾಗಿ ಗಮನಿಸಿ

ಸಾಧಾರಣವಾಗಿ ಎರಡು ತಟ್ಟೆಗಳಲ್ಲಿ ಒಂದೊಂದು ನಕ್ಷತ್ರ; ಎರಡು ಹಿಡಿಗಳಲ್ಲಿ ಒಂದೊಂದು ನಕ್ಷತ್ರ ಬರೆದಿರುತ್ತಾರೆ. ಇಲ್ಲಿರುವ ನಕ್ಷತ್ರದ ಹೆಸರುಗಳಲ್ಲಿ ವಿಶಾಖಾ ಎಂಬುದು ನಮಗೆ ಪರಿಚಿತವಷ್ಟೆ. ಅದರ ಅರ್ಥ ಕೊಂಬೆಗಳು ಎಂದಾಗುತ್ತದೆ. ಹಾಗಾದರೆ ಇಲ್ಲೊಂದು ಮರವನ್ನೂ ಅದರ ಕೊಂಬೆಗಳನ್ನೂ ಊಹಿಸಿಕೊಳ್ಳಬಹುದು. ಆದರೆ ವಿಶಾಖಾ ಎಂಬುದು ಒಂದೇ ನಕ್ಷತ್ರ. ಅದರ ಅರ್ಥದ ಬಗ್ಗೆ ಅಥವಾ ಆಕಾಶದಲ್ಲಿ ಅದು ಹೇಗೆ ಹೊಂದುತ್ತದೆ ಎಂಬುದರ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಂತೆ ಕಾಣುವುದಿಲ್ಲ.

ನಕ್ಷತ್ರಗಳ ಹೆಸರನ್ನು ಪಟ್ಟಿ ಮಾಡಿರುವ ಸುಮಾರು 500 - 600 ವರ್ಷ ಹಳೆಯ ಸಂಸ್ಕೃತ ಗ್ರಂಥಗಳನ್ನು ಪರಿಶೀಲಿಸಿದಾಗ ಒಂದು ವಿಚಿತ್ರ ಬಗೆಯ ಹೊಂದಾಣಿಕೆ ಮಾಡಿಕೊಂಡಿರುವುದು ತಿಳಿಯಿತು. ಯಾವುದೇ ಹೆಸರನ್ನು ಬರೆಯದೆ ತುಲೈಕಸಿಕ್ಕಾ ಅಂದರೆ ತುಲಾದ ಮೊದಲನೆಯ ಚುಕ್ಕೆ ಮತ್ತು ತುಲಾನ್ಯಸಿಕ್ಕಾ ಅಂದರೆ ತುಲಾದ ಇನ್ನೊಂದು ಚುಕ್ಕೆ ಎಂದು ಹೆಸರು ಕೊಟ್ಟಿದ್ದಾರೆ. ಅದಕ್ಕೆ ಪೂರಕವಾಗಿ ಸ್ಥಾನ ನಿರ್ದೇಶಕಗಳೂ ಇರುವುದರಿಂದ ಮೊದಲನೆಯದು ವಿಶಾಖಾ ಎಂದು ಗುರುತಿಸುವುದು ಸಾಧ್ಯ. ಎರಡನೆಯದು ಸ್ವಾತಿ ಅಲ್ಲ; ಆದ್ದರಿಂದ ಅದರ ಹೆಸರನ್ನು ತುಲಾನ್ಯಸಿಕ್ಕಾ ಎಂದೇ ಇಟ್ಟುಕೊಳ್ಳಬೇಕಾಗುತ್ತದೆ.

ನಕ್ಷತ್ರಗಳ ನಕ್ಷೆಯನ್ನು ಬರೆಯುವ ಪದ್ಧತಿ ನಮ್ಮಲ್ಲಿಲ್ಲದಿದ್ದರೂ ಯುರೋಪ್ ಮತ್ತು ಚೀನಾ ಅಲ್ಲದೆ ಅರಬ್ ದೇಶಗಳಲ್ಲಿಯೂ ಪ್ರಚಲಿತವಿರುವುದರಿಂದ ಅತಿ ಹಳೆಯ ತುಲಾ ಚಿತ್ರವನ್ನು ಹುಡುಕಿದಾಗ ಆಶ್ಚರ್ಯ ಕಾದಿತ್ತು. ಅರಬ್ ದೇಶಗಳಲ್ಲಿ ಅದಕ್ಕೆ ತುಲಾ ಎಂಬ ಹೆಸರೇ ಇರಲಿಲ್ಲ. ಆ ನಕ್ಷತ್ರಗಳು ವೃಶ್ಚಿಕದ ಒಂದು ಭಾಗವಾಗಿದ್ದವು. ಆ ನಕ್ಷತ್ರಗಳನ್ನು ಚೇಳಿನ ಕೊಂಡಿ ಎಂದು ಹೆಸರಿಸಲಾಗಿತ್ತು. ಅದಕ್ಕೂ ಹಿಂದಿನದು ಎನ್ನಲಾದ ಒಂದು ಬ್ಯಾಬಿಲೋನಿಯ ಚಿತ್ರದಲ್ಲಿ ಇದ್ದುದು ಒಂದೇ ತಟ್ಟೆ.

ತಕ್ಕಡಿಗಳ ಇತಿಹಾಸವನ್ನು ಕೆದಕಿರುವ ವಿದ್ವಾಂಸರು ಅತಿ ಹಳೆಯ ಭಿತ್ತಿಚಿತ್ರಗಳಲ್ಲಿ ಒಂದೇ ತಟ್ಟೆಯ ತಕ್ಕಡಿಗಳನ್ನು ಹುಡುಕಿದ್ದಾರೆ. ಅಜಂತಾದ ಒಂದು ಚಿತ್ರದಲ್ಲಿಯೂ ಒಂದೇ ತಟ್ಟೆಯ ತಕ್ಕಡಿ ಇದೆ. ಅಫ್ಘಾನಿಸ್ತಾನದಲ್ಲಿ ಮತ್ತು ಆಂಧ್ರದ ಅಮರಾವತಿಯ ಕೆತ್ತನೆಗಳಲ್ಲಿ ಈ ಚಿತ್ರಗಳಿವೆ. ಮಥುರಾದಲ್ಲಿರುವ ವಸ್ತುಸಂಗ್ರಹಾಲಯದಲ್ಲಿಯೂ ಕೆತ್ತನೆಯ ಶಿಲ್ಪ ಇದೆ.

ಸಂದರ್ಭ - ತನಗೆ ಶರಣಾಗಿ ಬಂದ ಪಾರಿವಾಳವನ್ನು ಕಾಪಾಡಲು ತನ್ನ ಮಾಂಸವನ್ನೇ ಗಿಡುಗನಿಗೆ ಕೊಟ್ಟ ಶಿಬಿ ಚಕ್ರವರ್ತಿಯ ಕತೆ. ಈ ಎಲ್ಲಾ ಚಿತ್ರಗಳಲ್ಲೂ ಚಕ್ರವರ್ತಿಯ ತೊಡೆಯ ಮೇಲೆ ಪಾರಿವಾಳ ಇದೆ. ಮಾಂಸವನ್ನು ಕೊಯ್ದು ತೆಗೆಯುತ್ತಿರುವ ದೃಶ್ಯವಿದೆ. ಒಂದರಲ್ಲಿ ಚಕ್ರವರ್ತಿಯೇ ತಕ್ಕಡಿ ಹಿಡಿದಿದ್ದರೆ, ಇನ್ನೊಂದರಲ್ಲಿ ಸೇವಕ ಹಿಡಿದು ನಿಂತಿದ್ದಾನೆ. 10ನೇ ಪುಟಕ್ಕೆ...

ವಾಹ್... ಕಾಫಿ!

ಕಾಫಿ ದೇವನೆ ದೇಹಪಾಲನೆ ತೇ ನಮೋಸ್ತು ನಮೋಸ್ತುತೇ... ಎಂದು ಕಾಫಿಯನ್ನು ಸ್ತುತಿಸುತ್ತಾ ಕುಳಿತರೆ ಕಾಫಿಪ್ರಿಯರ ಪಾಲಿಗೆ ಆ ಧ್ಯಾನ ಕೂಡ ಭಗವಂತನನ್ನೇ ತಲುಪುತ್ತದೆ!

ಶುಭಶ್ರೀ ಪ್ರಸಾದ್

ಮಾಗಿಯ ಚುಮುಚುಮು ಚಳಿ ಮೈನಡುಗಿಸುವಾಗ ಬಿಸಿಬಿಸಿ ಫಿಲ್ಟರ್ ಕಾಫಿ, ಜೊತೆಗೊಂದಿಷ್ಟು ಬಿಸಿ ಬಜ್ಜಿ ಇದ್ದರೆ... ವಾಹ್! ಸ್ವರ್ಗ ಕೈಗೆ ಎಟುಕಿದಂತೆಯೇ ನನ್ನಂತಹ ಕಾಫಿ ಪ್ರಿಯರಿಗೆ. ಒಂದೊಂದೇ ಗುಟುಕು ಗಂಟಲೊಳಗೆ ಇಳಿದಹಾಗೆಯೇ ಚಳಿ ಗಂಟುಮೂಟೆ ಕಟ್ಟುತ್ತದೆ.

ಕಾಫಿ ಮಾಡುವುದೆಂದರೆ ಹುಡುಗಾಟವೇ? ಅದೊಂದು ತಪಸ್ಸೇ ಸರಿ. ಹದವರಿತ ನುರಿತ ಕೈಗಳು ಮಾತ್ರವೇ ಸ್ವಾದಿಷ್ಟ ಕಾಫಿ ಮಾಡಲು ಸಾಧ್ಯ. ಕಾಫಿ ಬೀಜಗಳನ್ನು ಹುರಿದು ಮಾಡಿದ ಪುಡಿಯನ್ನು ಕೊತಕೊತ ಕುದಿವ ಪಾತ್ರೆಯ ನೀರಿಗೆ ಹಾಕಿ, ಅಮ್ಮ ಅದಕ್ಕೆಂದೇ ಮೀಸಲಿಟ್ಟ ಕೋರಾ ಬಟ್ಟೆಯಿಂದ ಬಸಿಯುತ್ತಿದ್ದುದು ಇನ್ನೂ ನೆನಪಿನಲ್ಲಿ ಹಸಿರಾಗಿದೆ. ಮಾಸಲು ಬಿಳಿಯ ಆ ಕೋರಾ ಬಟ್ಟೆ ಕಾಲಕ್ರಮೇಣ ಕಾಫಿಯ ಬಣ್ಣಕ್ಕೇ ತಿರುಗಿರುತ್ತಿತ್ತು. ಆ ಬಟ್ಟೆಯೇ ಒಂದು ಸುವಾಸನೆ. ಇನ್ನು ಕಾಫಿಯನ್ನು ಕೇಳಬೇಕೇ?

ಮನೆಯಲ್ಲೇ ಕರೆದ ಹಸುವಿನ ಗಟ್ಟಿ ಹಾಲನ್ನು ಹಿತ್ತಾಳೆ ಪಾತ್ರೆಯಲ್ಲಿ ಕಾಯಿಸಿ, ಕೆನೆಗಟ್ಟುವಾಗ ಸಕ್ಕರೆ ಬೆರೆಸಿ, ಡಿಕಾಕ್ಷನ್ ಬಸಿದ ಪಾತ್ರೆಯೊಳಗೆ ಕುದಿವ ಹಾಲನ್ನು ಹಾಕಿ ಆ ಪಾತ್ರೆಯಿಂದ ಈ ಪಾತ್ರೆಗೆ ಮತ್ತೆ ಈ ಪಾತ್ರೆಯಿಂದ ಆ ಪಾತ್ರೆಗೆ ಮೊಳದೆತ್ತರದಿಂದ ತೂಗಿ ಬೆರೆಸಿ, ಪಾವಿನಷ್ಟು ದೊಡ್ಡ ಲೋಟಗಳಿಗೆ ನೊರೆನೊರೆಯಾದ ಗಟ್ಟಿ ಕಾಫಿಯನ್ನು ತುಂಬಿಕೊಟ್ಟರೆ ಅದು ವಾತ್ಸಲ್ಯದ ಮಡುವೇನೋ ಎಂಬಂತಿರುತ್ತದೆ. ನಾವೆಲ್ಲ ಖುಷಿಯಿಂದ ಗುಟುಕು ಗುಟುಕಾಗಿ ಹೀರುವಾಗ ಮುಖದಲ್ಲಿ ಕಾಣುವ ಧನ್ಯತೆ... ಓಹ್!

ಕಾಫಿಯಿರದ ನಮ್ಮ ದಿನಚರಿಯನ್ನು ಊಹಿಸಲೂ ಅಸಾಧ್ಯ ಎನಿಸುವಷ್ಟರ ಮಟ್ಟಿಗೆ ನಮ್ಮನ್ನು ಕಾಫಿ ಆವರಿಸಿಕೊಂಡಿದೆ. ಮನೆಗೆ ಬಂದ ಅತಿಥಿಗಳಿಗೆ ಮೊದಲಿಗೆ ಕಾಫಿಯನ್ನು ಕೇಳುವುದು ದಕ್ಷಿಣ ಭಾರತದ ಸಂಸ್ಕೃತಿಯ ಮತ್ತು ಆತಿಥ್ಯದ ಒಂದು ಭಾಗವೇ ಆಗಿಬಿಟ್ಟಿದೆ. ನಾನೊಂದು ಕಾಫಿ ಕಡಾಯಿ ಅಂತ ಹೇಳಿದೆನೇ? ಇಲ್ಲ ಅಲ್ಲವಾ? ಕಾಫಿ ಕುಡಿಯದೇ ಹೋದರೆ ತಲೆನೋವು ಬರುತ್ತದೆ ಎಂದು ಬಹುತೇಕ ಕಾಫಿ ಕುಡುಕರು ಹೇಳುವುದನ್ನು ಕೇಳಿದ್ದೇವೆ. ಆದರೆ ನನಗೆ ಕಾಫಿ ಪೆಟ್ರೋಲ್ ಇದ್ದ ಹಾಗೆ. ಪೆಟ್ರೋಲ್ ಅಥವಾ ಡೀಸೆಲ್ ಇಲ್ಲದೆ ಗಾಡಿ ಓಡುವುದು ಹೇಗೆ?

ನಿತ್ಯವೂ ಎದ್ದು ದೇವರ ದರ್ಶನ ಮಾಡಿ, ನಿತ್ಯಕರ್ಮ ಮುಗಿದ ತಕ್ಷಣವೇ ಮೊದಲು ಕೈ ಕಾಲು, ಮನಸು ಕಾಫಿಯ ಕಡೆ ದಾಂಗುಡಿ ಇಡುತ್ತವೆ. ಏಳಕ್ಕೆ ಕಾಫಿ ಲೋಟ ಹಿಡಿದು ಆಂಡಾಳಮ್ಮನ ಥರ ಚಕ್ಕಳಮಕ್ಕಳ ಹಾಕಿ ಕುಳಿತರೆ ಮುಕ್ಕಾಲು ಗಂಟೆ ಏಳುವುದಿಲ್ಲ. ಜೊತೆಗೆ ನೆಂಚಿಕೆಗೆ ಮುಂದೆ ನೆಲದ ಮೇಲೆ ಹರಡಿದ ನ್ಯೂಸ್‌ಪೇಪರ್, ಎದುರಿನಲ್ಲಿ ಟಿ.ವಿ ನ್ಯೂಸ್, ಮತ್ತೊಂದು ಕೈಯಲ್ಲಿ ಮೊಬೈಲ್ ತಿವಿಯುತ್ತ, ಅವರಿವರ ಗುಡ್ ಮಾರ್ನಿಂಗ್ ಮೆಸೇಜ್ ನೋಡ್ತಾ ನಾನೂ ಕಳಿಸ್ತಾ ಇಡೀ ಪ್ರಪಂಚ ನನ್ನ ಸುತ್ತಲೇ ಸುತ್ತಿಕೊಂಡಂತೆ ಕುಳಿತು ಒಂದು ಸಿಪ್ ಕಾಫಿ, ಒಂದು ಮಾತು, ಒಂದು ಸಿಪ್ಪು, ಒಂದು ಮಾತು... ಆಗಾಗ ಒಂದೊಂದು 'ಕಾಫಿ ಕವಿತೆ' ನನ್ನ ಲೇಖನಿಯಿಂದ ಜಾರುತ್ತದೆ.



11ನೇ ಪುಟಕ್ಕೆ...

ಆವಂತಿಸ್ವಾಮಿಯ ಸನ್ನಿಧಿಯಲ್ಲಿ...

ಪ್ರವಾಸ

ಲಿಂಗರಾಜು ಡಿ.ಎಸ್.

ಕಾಶ್ಮೀರದ ಪುಲ್ವಾಮಾ ಎಂದೊಡನೆ ನಮ್ಮೆಲ್ಲರ ಮನಸ್ಸಿನಲ್ಲಿ ಥಟ್ಟನೆ ಸುಳಿದಾಡುವುದು ಉಗ್ರರ ದಾಳಿ, ಬಂದೂಕಿನ ಮೊರೆತ, ಶವಗಳ ಸಾಲು... ಬರೀ ಇಂತಹದ್ದೇ ನೋಟಗಳು. ಅಲ್ಲಿ ಜೀವನದಿಯಾಗಿ ಹರಿಯುವ ಜೀಲಂನ ವಯ್ಯಾರ (ಇದು ನಮ್ಮ ದಕ್ಷಿಣದ ನದಿಗಳಂತಲ್ಲ. ನೀರು ಈ ನದಿಯಲ್ಲಿ ಮಂದವಾಗಿ ಹರಿಯುತ್ತದೆ!), ವರ್ಣಿಸಲು ಅಸಾಧ್ಯವಾದ ಸ್ವರ್ಗಸದೃಶ ಪ್ರಾಕೃತಿಕ ಸೊಬಗು, ಹತ್ತಿರದ ಆವಂತಿಪುರದಲ್ಲಿರುವ ಸಾವಿರಾರು ವರ್ಷಗಳಷ್ಟು ಪುರಾತನವಾದ ದೇವಾಲಯಗಳ ಅವಶೇಷ ಯಾವುದೂ ನೆನಪಾಗದಂತೆ ಈಗಿನ ರಕ್ತಸಿಕ್ತ ಅಧ್ಯಾಯ ಉಳಿದ ಸಂಗತಿಗಳನ್ನೆಲ್ಲ ಮಸುಕಾಗಿಸಿಬಿಟ್ಟಿದೆ.

ಪುಲ್ವಾಮಾದಿಂದ ಸುಮಾರು 16 ಕಿಲೊಮೀಟರ್ ದೂರದಲ್ಲಿ ಜೀಲಂ ನದಿಯ ದಡದಲ್ಲಿರುವ ಆವಂತಿಪುರದ ಪ್ರಾಕೃತಿಕ ಸೊಬಗಿಗೆ ಸರಿಸಾಟಿಯಾದ ಮತ್ತೊಂದು ತಾಣ ಸಿಗುವುದು ಕಷ್ಟ. ಈ ಕಣಿವೆ ನಗರದಲ್ಲಿ ಹೆಜ್ಜೆ ಹೆಜ್ಜೆಗೆ ಹಾಕಲಾದ ಮಿಲಿಟರಿ ಬ್ಯಾರಿಕೇಡ್, ಪಟಾಕಿ ಸಿಡಿಸಿದಂತೆ ಆಗಾಗ ಕೇಳುವ ಬಂದೂಕಿನ ಶಬ್ದ ಮತ್ತು ಭಯದ ವಾತಾವರಣ ಆವಂತಿಪುರವನ್ನು ದೇಶದ ಉಳಿದ ಭಾಗಗಳ ಜನರಿಂದ ದೂರವೇ ಇಟ್ಟುಬಿಟ್ಟಿವೆ. ಆದರೆ, ಒಮ್ಮೆ ಆವಂತಿಪುರಕ್ಕೆ ಹೋದವರು ಅಲ್ಲಿನ ಸೊಬಗನ್ನು ಜೀವನದಲ್ಲಿ ಮರೆಯಲು ಸಾಧ್ಯವೇ ಇಲ್ಲ.

ಆವಂತಿಪುರದ ಆವಂತಿಸ್ವಾಮಿನ್ ದೇವಾಲಯವು ಒಂದಾನೊಂದು ಕಾಲದಲ್ಲಿ ಪ್ರಖ್ಯಾತ ದೇಗುಲವಾಗಿದ್ದು ಇದನ್ನು ಉತ್ಪಲ ವಂಶದ ರಾಜಾ ಆವಂತಿವರ್ಮನ್ ನಿರ್ಮಿಸಿದ್ದ. ಕಾಶ್ಮೀರದಲ್ಲಿ ಆಳಿದ್ದ ಹಿಂದೂ ಅರಸರಲ್ಲಿ ಪ್ರಮುಖನೆಂದರೆ ಲಲಿತಾದಿತ್ಯ ಮುಕ್ತಪೀಡ (ಕ್ರಿ.ಶ.724- 781). ಈತನ ಸಾಮ್ರಾಜ್ಯ ಮಧ್ಯ ಏಷ್ಯಾ ಮತ್ತು ಗಂಗಾ ನದಿಯ ತಟದವರೆಗೂ ಹಬ್ಬಿತ್ತು ಎನ್ನುತ್ತದೆ ಇತಿಹಾಸ. ಈತ ಇಂದಿನ ಅನಂತನಾಗ್ ಬಳಿ ಮಾರ್ತಾಂಡ ಸೂರ್ಯ ದೇವಾಲಯ ಹಾಗೂ ಶಾರದಾ ಪೀಠವನ್ನು ನಿರ್ಮಿಸಿದ್ದ. ದುರದೃಷ್ಟವಶಾತ್ ಇವೆರಡೂ ದೇವಾಲಯಗಳು ಈಗ ವಿನಾಶದ ಅಂಚಿನಲ್ಲಿವೆ.

> ಕಾಶ್ಮೀರದಲ್ಲಿ ದೇವಾಲಯಗಳ ಸಂಖ್ಯೆಗೆ ಏನೂ ಕಡಿಮೆ ಇಲ್ಲ. ಆದರೆ, ಹಲವು ದೇವಾಲಯಗಳು ಈಗ ಕೇವಲ ಭಗ್ನಾವಶೇಷಗಳಾಗಿ ಉಳಿದಿವೆ. ಭವ್ಯ ಇತಿಹಾಸವನ್ನು ಹೊಂದಿರುವ ಆವಂತಿಪುರದ ದೇವಾಲಯಗಳು ಕೂಡ ಅಂಥವುಗಳಲ್ಲಿ ಕೆಲವು. ಈ ಸ್ಮಾರಕಗಳನ್ನು ನೋಡುವ ಬೆಚ್ಚನೆ ಅನುಭವ ಪಡೆಯಬೇಕಾದರೆ ಪುಲ್ವಾಮಾ ತಣ್ಣಗಿರಬೇಕು...

ಆವಂತಿಸ್ವಾಮಿನ್ ದೇವಾಲಯದ ಭಗ್ನಾವಶೇಷಗಳು

ಲಲಿತಾದಿತ್ಯನ ವಂಶದ ಕೊನೆಯ ಅರಸ ಚಿಪ್ಪಟ ಜಯಪೀಡ ಬಾಲಕನಾಗಿದ್ದ. ತನ್ನ ಚಿಕ್ಕಪ್ಪ ಉತ್ಪಲನ ಅಧೀನದಲ್ಲಿ ಆತ ಕಾರ್ಯ ನಿರ್ವಹಿಸಬೇಕಾಗಿತ್ತು. ಉತ್ಪಲ ಅರಸನಾಗುವ ಆಸೆಯಿಂದ ಜಯಪೀಡನನ್ನು ಕೊಂದು ಪಟ್ಟಕ್ಕೆ ಬಂದ. ಉತ್ಪಲನ ಮೊಮ್ಮಗನೇ ರಾಜಾ ಆವಂತಿವರ್ಮನ್. ಈ ವಿವರಣೆಯು ಕಲ್ಹಣನ ರಾಜತರಂಗಿಣಿ ಗ್ರಂಥದಲ್ಲಿದೆ. ಈತನ ಕಾಲದಲ್ಲಿ ಕಾಶ್ಮೀರ ಪ್ರಾಂತ್ಯ ಅತ್ಯಂತ ಉನ್ನತಿಯನ್ನು ಪಡೆದಿತ್ತು ಎಂದು ಉಲ್ಲೇಖವಾಗಿದೆ. ಈತ ಉಳಿದ ಅರಸರಂತೆ ಸಾಮ್ರಾಜ್ಯ ವಿಸ್ತರಣೆಗೆ ಕೈ ಹಾಕಲಿಲ್ಲ. ಬದಲಾಗಿ ತನ್ನ ಪ್ರಜೆಗಳ ಬದುಕಿನ ಮಟ್ಟ ಹೆಚ್ಚಿಸುವತ್ತ ಗಮನ ನೀಡಿದ್ದ. ತನ್ನ ಕಾಲದಲ್ಲಿ ಜನರನ್ನು ಶೋಷಣೆ ಮಾಡುತ್ತಿದ್ದ ದಮಾರಸ್ ಜಮೀನುದಾರರ ಪಾರುಪತ್ಯವನ್ನು ಹತೋಟಿಗೆ ತಂದ. ವ್ಯಾಪಾರ-ವಹಿವಾಟಿಗೆ ಪ್ರೋತ್ಸಾಹ ನೀಡಿದ್ದ ಈತ ತನ್ನ ಕಾಲದಲ್ಲಿ ಅನೇಕ ಕಟ್ಟಡಗಳು ಮತ್ತು ಅದ್ಭುತ ದೇವಾಲಯಗಳನ್ನು ನಿರ್ಮಿಸಿದ್ದ.

ಆವಂತಿವರ್ಮನ ಕಾಲದ ಅವಿಸ್ಮರಣೀಯ ದೇವಾಲಯಗಳೆಂದರೆ ಆವಂತಿಸ್ವಾಮಿನ್ ಮತ್ತು ಆವಂತೀಶ್ವರ ದೇವಾಲಯ. ಒಂದು ವಿಷ್ಣು, ಮತ್ತೊಂದು ಶಿವನ ದೇವಾಲಯ. ಆವಂತಿಸ್ವಾಮಿನ್ ದೇವಾಲಯವನ್ನು ಕ್ರಿ.ಶ. 853-855ರಲ್ಲಿ ನಿರ್ಮಿಸಲಾಯಿತು.

ಆವಂತಿವರ್ಮನ ಆಸ್ಥಾನಕ್ಕೆ ಅನೇಕ ಪಂಡಿತ-ಪ್ರಾಜ್ಞರು ಬಂದು ತಮ್ಮ ಪ್ರತಿಭಾ ಪ್ರದರ್ಶನ ಮಾಡುತ್ತಿದ್ದರು. ಅಂತಹ ವಿದ್ವಾಂಸರಲ್ಲಿ ಒಬ್ಬ ಆನಂದವರ್ಧನ ಎಂಬಾತ. ಈತ ತನ್ನ ಅತ್ಯಂತ ಮಹತ್ವದ ಕೃತಿ, ಶಬ್ದಗಳಿಗೆ ಸಂಬಂಧಿಸಿದ ಧ್ವನ್ಯಲೋಕವನ್ನು ಇಲ್ಲಿಯೇ ರಚಿಸಿದ ಎನ್ನಲಾಗುತ್ತದೆ. ಆವಂತಿಸ್ವಾಮಿನ್ ಮತ್ತು ಆವಂತೀಶ್ವರ ದೇವಾಲಯಗಳನ್ನು ಕ್ರಿ.ಶ. 1389ರಲ್ಲಿ ದೇವಾಲಯದ ತುಂಬಾ ಮದ್ದಿನ ಪುಡಿಯನ್ನು ತುಂಬಿಸಿ ಸ್ಫೋಟಿಸಿ ನೆಲಸಮ ಮಾಡಲಾಯಿತಂತೆ. ಆವಂತಿಪುರದಲ್ಲಿ ಈಗ ಅವುಗಳ ಅವಶೇಷಗಳನ್ನು ಮಾತ್ರ ಕಾಣಲು ಸಾಧ್ಯ. ಅಳಿದುಳಿದ ಅವಶೇಷಗಳನ್ನು ಕಂಡವರಿಗೆ ಗತಕಾಲದ ಭವ್ಯ ಚರಿತ್ರೆಯನ್ನೂ ನಂತರ ಎದುರಾದ ಕರಾಳ ದಿನಗಳನ್ನೂ ಅವುಗಳು ಒಟ್ಟಿಗೆ ಉಸುರುತ್ತಿರುವಂತೆ ಭಾಸವಾಗುತ್ತದೆ.


ಮಾರ್ತಾಂಡ ಸೂರ್ಯ ದೇವಾಲಯದ ಈಗಿನ ನೋಟ

ಆವಂತಿಪುರಕ್ಕೆ ಸುಮಾರು 78 ಕಿಲೊಮೀಟರ್ ದೂರದಲ್ಲಿ ಬಾರಮುಲ್ಲಾ ಜಿಲ್ಲೆಯಲ್ಲಿರುವ ಸೋಪೋರ್ ಗ್ರಾಮ ಉಗ್ರರ ಅಟಾಟೋಪಕ್ಕೆ ತುತ್ತಾಗಿದೆ. ಈ ಸ್ಥಳವನ್ನು ಹಿಂದೆ ಸುಯ್ಯಾಪುರ ಎಂದು ಕರೆಯಲಾಗುತ್ತಿತ್ತು. ಆವಂತಿವರ್ಮನ ಕಾಲದಲ್ಲಿದ್ದ ವಿದ್ವಾಂಸ ಸುಯ್ಯನ ಸ್ಮರಣೆಗಾಗಿ ನಿರ್ಮಿಸಿದ ಊರು ಇದು. ಕಲ್ಹಣ ಕೂಡಾ ತನ್ನ ಗ್ರಂಥದಲ್ಲಿ ಸುಯ್ಯನ ಹೆಸರನ್ನು ಉಲ್ಲೇಖಿಸಿರುವುದು ವಿಶೇಷ.

ಅನಾಮಧೇಯನಾಗಿ ಹುಟ್ಟಿದ ಸುಯ್ಯ ಸಿಕ್ಕಿದ ಕೆಲಸಗಳನ್ನು ಮಾಡುತ್ತಾ ಕಡು ಬಡತನದ ಜೀವನ ನಡೆಸುತ್ತಿದ್ದ. ಅಸಾಧಾರಣ ಬುದ್ಧಿವಂತಿಕೆ ಮತ್ತು ಚುರುಕುತನ ಈತನಲ್ಲಿತ್ತು. ಕಾಶ್ಮೀರದಲ್ಲಿ ಪ್ರವಾಹ ಬರಲಾಗಿ ಜನ-ಜಾನುವಾರುಗಳು ಕೊಚ್ಚಿ ಹೋಗುತ್ತಿದ್ದ ಘಟನೆ ಸಾಮಾನ್ಯವಾಗಿತ್ತು. ಸುಯ್ಯ, ರಾಜನ ಬಳಿಗೆ ಹೋಗಿ 'ನಾನು ಪ್ರವಾಹದ ನಿವಾರಣೆ ಮಾಡಬಲ್ಲೆ. ಆದರೆ ನನಗೆ ಒಂದು ಕೊಡ ತುಂಬುವಷ್ಟು ಚಿನ್ನದ ನಾಣ್ಯಗಳನ್ನು ಕೊಡಬೇಕು' ಎಂಬ ಷರತ್ತನ್ನಿಟ್ಟ.

ಸುಯ್ಯ ಕೋರಿದಂತೆ ಒಂದು ಕೊಡ ಚಿನ್ನದ ನಾಣ್ಯಗಳನ್ನು ಆತನಿಗೆ ಕೊಡಲಾಯಿತು. ಸುಯ್ಯ ಚಿನ್ನದ ನಾಣ್ಯಗಳ ಕೊಡವನ್ನು ಹಿಡಿದು ಪ್ರವಾಹದಿಂದ ಉಕ್ಕಿ ಹರಿಯುತ್ತಿದ್ದ ನದಿಯ ದಡ ತಲುಪಿದ. ರಾಜ ಮತ್ತು ಆತನ ಸಹಚರರು ಸುಯ್ಯನ ಹಿಂದೆ ಹೋದರು. ಸುಯ್ಯ ಚಿನ್ನದ ನಾಣ್ಯಗಳ ಕೊಡವನ್ನು ನೀರಿನ ಮಧ್ಯಕ್ಕೆ ಬಿಸಾಡಿದ. ಇದನ್ನು ನೋಡಿದ ಜನ ಚಿನ್ನವನ್ನು ಪಡೆಯುವ ಆಸೆಯಿಂದ ಪ್ರಾಣದ ಹಂಗನ್ನು ತೊರೆದು ನೀರಿಗೆ ಬಿದ್ದು ನಾಣ್ಯಗಳಿಗಾಗಿ ನದಿಯ ತಳದಲ್ಲಿ ಜಾಲಾಡಿದರು. ಇದರಿಂದ ನೀರಿನ ಹರಿವಿಗೆ ಅಡ್ಡಿಯಾಗಿದ್ದ ಅಡೆ-ತಡೆಗಳು ಕೊಚ್ಚಿಹೋಗಿ ನೀರು ಸರಾಗವಾಗಿ ಹರಿಯಲಾರಂಭಿಸಿ ಪ್ರವಾಹ ತಗ್ಗಿತು ಎಂಬ ಸುಯ್ಯನ ಕಥೆ ಬಲು ಜನಪ್ರಿಯ.

ಅರಸ ನೀರನ್ನು ಅಲ್ಲಲ್ಲಿ ತಡೆದು ನಿಲ್ಲಿಸಲು ಅಣೆಕಟ್ಟೆಗಳನ್ನು, ಕೆರೆ-ಕಟ್ಟೆಗಳನ್ನು ನಿರ್ಮಾಣ ಮಾಡಿಸಿದ. ಪ್ರತೀ ಊರಿಗೂ ಕುಂಡಗಳನ್ನು (ಕಟ್ಟೆ) ನಿರ್ಮಿಸಲಾಯಿತು. ಈ ಹಿನ್ನೆಲೆಯಲ್ಲಿಯೇ ಕಾಶ್ಮೀರದ ಅನೇಕ ಊರುಗಳ ಹೆಸರುಗಳು ಮಾರ್ ಕುಂಡಲ್, ಉತ್ರಾ ಕುಂಡಲ್, ಅಮ್ಚಾ ಕುಂಡಲ್ ಎಂದೇ ಇವೆ.

ಕಾಶ್ಮೀರದ ಗುಲ್ಮಾರ್ಗ್ ಮತ್ತು ಸೋನ್‌ಮಾರ್ಗಕ್ಕೆ ತೆರಳಿದ್ದಾಗ ಭದ್ರತಾ ಕಾರಣಗಳಿಂದ ಆವಂತಿಪುರದ ಹತ್ತಿರದವರೆಗೆ ಹೋದರೂ ದೇವಾಲಯ ಹಾಗೂ ಸೋಪೋರ್ ನೋಡಲಾಗದಿದ್ದ ಬೇಸರ ಮಾತ್ರ ಇನ್ನೂ ಕಾಡುತ್ತಿದೆ. ಆದರೆ, ಅಲ್ಲಿಂದ ಹೆಕ್ಕಿ ತರಲಾಗಿದ್ದ ವಿಡಿಯೊ ತುಣುಕುಗಳನ್ನು ನೋಡಿ ತುಸು ಸಮಾಧಾನ ಪಟ್ಟಿದ್ದೆ. ಆ ದೇವಾಲಯಗಳನ್ನು ನೋಡುವ ಉಮೇದಿಯಲ್ಲಿ ಅವುಗಳ ಕುರಿತು ಮಾಡಿಕೊಂಡ ಟಿಪ್ಪಣಿಗಳು ಮನದಂಗಳದಲ್ಲಿ ಹಸಿರಾಗಿವೆ. ಅವಂತಿಪುರವು ಶ್ರೀನಗರದಿಂದ ಕೇವಲ 32 ಕಿಲೊಮೀಟರ್ ದೂರದಲ್ಲಿದೆ. ಕಾಶ್ಮೀರಕ್ಕೆ ಹೋದವರು ತಪ್ಪದೇ ನೋಡಬೇಕಾದ ಜಾಗವಿದು. ಆದರೆ, ಗುಂಡಿನ ಚಕಮಕಿ ಇಲ್ಲದೆ ಶಾಂತ ವಾತಾವರಣವಿದ್ದರೆ ಮಾತ್ರ ನಿಮಗೆ ಅಲ್ಲಿಗೆ ಹೋಗಲು ಅನುಮತಿ ಸಿಗುತ್ತದೆ.


ಕಾಶ್ಮೀರದ ಶಾರದಾ ಪೀಠದಲ್ಲಿ ಈಗ ಅಳಿದುಳಿದಿರುವ ಅವಶೇಷಗಳು

ಹೂವ ಹರಡಿದವರು

8ನೇ ಪುಟದಿಂದ...

16 ವರ್ಷಕ್ಕೆ ಅತ್ಯದ್ಭುತವಾಗಿ ಹಾಡಿ ಕಾರ್ಯಕ್ರಮ ನೀಡುತ್ತಿದ್ದ ಅಂಜನಿಬಾಯಿ ತಮ್ಮ ಸೌಂದರ್ಯದ ಕಾರಣದಿಂದ ಶೋಷಿತರಾದವರು. ಪುರುಷ ಪ್ರಾಧಾನ್ಯವಿದ್ದ ಶ್ರೋತೃವರ್ಗದ ಮುಂದೆ ಕುಳಿತು ಹಾಡುವುದಕ್ಕೆ ಅವರು ಭಯಪಡುತ್ತಿದ್ದರು. 40 ವರ್ಷಕ್ಕೇ ಕಾರ್ಯಕ್ರಮ ಕೊಡುವುದನ್ನು ನಿಲ್ಲಿಸಿಬಿಟ್ಟರು ಎನ್ನುವುದು ಅವರ ಜೀವನ ಚಿತ್ರಣಗಳಲ್ಲಿ ದಾಖಲಾಗಿದೆ. ಪ್ರಖ್ಯಾತ ಸಂಗೀತಗಾರರಾದ ಕುಮಾರ ಗಂಧರ್ವ, ಕಿಶೋರಿ ಅಮೋನಕರ್ ಅವರೂ ಅಂಜನಿಬಾಯಿ ಅವರಿಂದ ಮಾರ್ಗದರ್ಶನ ಪಡೆದಿದ್ದಾರೆ.

ಮೇಲೆ ಚರ್ಚಿಸಲಾದ ಗಾಯಕಿಯರಿಗಿಂತ ಹೊರತಾಗಿ ರಂಗಭೂಮಿಯಿಂದ ಶಾಸ್ತ್ರೀಯ ಸಂಗೀತದೊಳಗೆ ಪ್ರವೇಶಿಸಿ ಮಹಾರಾಷ್ಟ್ರದ ಭಾವಸಂಗೀತ ಪರಂಪರೆಗೆ ಹೊಸಭಾಷ್ಯ ಬರೆದವರು ಹೀರಾಬಾಯಿ ಬಡೋದೆಕರ್. ಮಹಾರಾಷ್ಟ್ರದಲ್ಲಿ ಸ್ತ್ರೀಯರು ಇಂದಿಗೂ ಹೆಚ್ಚಿನ ಸಂಖ್ಯೆಯಲ್ಲಿ ಸಂಗೀತ, ನಾಟಕ ಕ್ಷೇತ್ರದಲ್ಲಿ ತೊಡಗಿರುವುದಕ್ಕೆ ಬಹುಮುಖ್ಯ ಕಾರಣ ಹೀರಾಬಾಯಿಯಿಂದ ಪಡೆದ ಪ್ರಚೋದನೆ-ಸ್ಫೂರ್ತಿ ಎನ್ನಲಾಗುತ್ತದೆ. ಸಾಂಸಾರಿಕ ಜೀವನದಲ್ಲಿ ಹಲವು ಬಗೆಯ ಕಷ್ಟ-ನಷ್ಟಗಳನ್ನು ಅನುಭವಿಸಿದ ಹೀರಾಬಾಯಿಯ ಜೀವನವಿಡೀ ಹೋರಾಟ. ಇವರ ಶಿಷ್ಯಂದಿರಲ್ಲಿ ಪ್ರಮುಖರಾದವರು ಡಾ.ಪ್ರಭಾ ಅತ್ರೆ.

ಕರ್ನಾಟಕದ ಮೊದಲ ಹಿಂದೂಸ್ತಾನಿ ಗಾಯಕಿಯೆನಿಸಿದ ಗಂಗೂಬಾಯಿ ಹಾನಗಲ್ ಅವರು ಜೀವನದುದ್ದಕ್ಕೂ ಅನುಭವಿಸಿದ ಕಷ್ಟ ಸಣ್ಣದೇನಲ್ಲ. ಸಂಗೀತದಿಂದ ಗಳಿಸಿದ ಆದಾಯದಿಂದ ಕುಟುಂಬ ಪೋಷಣೆ ಮಾಡಿದ ಸಾಹಸಿ ಮಹಿಳೆ ಅವರಾಗಿದ್ದರು. 16 ವರ್ಷದವರಿದ್ದಾಗ ವಕೀಲರಾದ ಗುರುರಾವ್ ಕೌಲಗಿ ಅವರನ್ನು ಗಂಗೂಬಾಯಿ ವಿವಾಹವಾಗಿದ್ದರು. ಸಂಗೀತ ಕಲಿಕೆಗಾಗಿ-ನಂತರ ಹಾಡುವ ಅವಕಾಶಕ್ಕಾಗಿ ಮಾತ್ರವಲ್ಲದೆ ಜೀವನಕ್ಕಾಗಿ ಹಾಗೂ ಸಮಾಜದಲ್ಲಿ ಗೌರವಯುತ ಸ್ಥಾನಮಾನ ಪಡೆಯಲೂ ಗಂಗೂಬಾಯಿಯವರು ದೊಡ್ಡ ಹೋರಾಟವನ್ನೇ ನಡೆಸಬೇಕಾಯ್ತು.

ಆಗಿನ ಕಾಲದ ಸಮಾಜ ಸ್ತ್ರೀಯರು ಧೈರ್ಯದಿಂದ ಪುರುಷರಿಗೆ ಸಮಾನರಾಗಿ ವೇದಿಕೆಯೇರಿ ಹಾಡುವುದನ್ನು ಸ್ವಾಗತಿಸುವ ಮನಃಸ್ಥಿತಿಯದ್ದಾಗಿರಲಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಎಷ್ಟೋ ಬಾರಿ ಸರಣಿ ಕಾರ್ಯಕ್ರಮಗಳಲ್ಲಿ ಯಾರಾದರೂ ಗಾಯಕಿಯರ ಹೆಸರು ಸೇರ್ಪಡೆಯಾಗಿದ್ದರೆ, ಆ ಸರಣಿಯಲ್ಲಿ ಹಾಡಲು ತಾನು ಬರಲಾರೆ ಎಂದು ಗಾಯಕರು ನಿರ್ದಾಕ್ಷಿಣ್ಯವಾಗಿ ಹೇಳಿದ ಉದಾಹರಣೆಗಳು ಸಿಗುತ್ತವೆ. ಹೆಂಗಸರಿಗೆ ಪಕ್ಕವಾದ್ಯ ನುಡಿಸಲು ಕಲಾವಿದರುಗಳು ಹಿಂದೇಟು ಹಾಕುತ್ತಿದ್ದರು. ಅದರಲ್ಲೂ ನುರಿತ ಕಲಾವಿದರು ಯಾರೂ ಸ್ತ್ರೀಯರಿಗೆ ಸಹವಾದನಕ್ಕೆ ದೊರಕುತ್ತಿರಲಿಲ್ಲ.

ಬುದ್ಧಿಪ್ರಧಾನವೆನಿಸಿದ ಕರ್ನಾಟಕಿ ಸಂಗೀತದಲ್ಲಿ ಸ್ತ್ರೀಯರಿಗೆ ಬರಿ ಕೀರ್ತನೆ, ದೇವರನಾಮ, ಜಾವಳಿಗಳು ಸಾಕು, ತಾಳದ ಲೆಕ್ಕಾಚಾರದಿಂದ ಕೂಡಿದ ಪಲ್ಲವಿ ಗಾಯನ, ಆಲಾಪನೆ-ಕಲ್ಪನಾ ಸ್ವರಗಳಿಂದ ಕೂಡಿದ ಮನೋಧರ್ಮದ ಸಂಗೀತಕ್ಕೆ ಸ್ತ್ರೀಯರು ಬರಕೂಡದು ಎನ್ನುವ ಅಘೋಷಿತ ಕಾನೂನು ಜಾರಿಯಿದ್ದ ಕಾಲವೊಂದಿತ್ತು. ಆ ಕಾಲದಲ್ಲೇ ಶ್ರೇಷ್ಠ ಗಾಯಕಿಯರಾದ ಎಂ.ಎಸ್. ಸುಬ್ಬುಲಕ್ಷ್ಮಿ, ಡಿ.ಕೆ.ಪಟ್ಟಮ್ಮಾಳ್ ಹಾಗೂ ಎಂ.ಎಲ್.ವಸಂತಕುಮಾರಿ ಅವರು ಮೊದಲ ಬಾರಿಗೆ ಸಂಗೀತದಲ್ಲಿನ ಪುರುಷ ನಿರ್ಮಿತ ಕೋಟೆಯನ್ನು ಪ್ರವೇಶಿಸಿ ಭಾವಯುಕ್ತ ಸಂಗೀತದೊಂದಿಗೆ ಬುದ್ಧಿಪ್ರಧಾನವಾದ ಸಂಗೀತ ಪ್ರಕಾರಗಳಲ್ಲೂ ಕೈಯಾಡಿಸಿದರು.

ಗಂಗೂಬಾಯಿ ಹಾನಗಲ್ ಅವರ ಜೀವನದಲ್ಲೂ ಇಂಥ ಕೆಲವು ಘಟನೆಗಳು ದಾಖಲಾಗಿವೆ. ಒಮ್ಮೆ ಗಯಾದಲ್ಲಿ ನಡೆದ ಸಂಗೀತ ಸಭಾದಲ್ಲಿ ಇವರನ್ನು ನೋಡಿ ಉಪೇಕ್ಷೆಯಿಂದ ಕೇವಲ 15 ನಿಮಿಷಗಳ ಕಾಲಾವಧಿ ನೀಡಿದಾಗ, ಅಷ್ಟು ದೂರದ ಕರ್ನಾಟಕದಿಂದ ಬಂದು ಈ ಪರಿಸ್ಥಿತಿಯೇ ಎಂದು ದುಃಖಪಟ್ಟು ನಂತರ ಅಷ್ಟೇ ಅವಕಾಶದಲ್ಲಿ ಅವರು ಹಾಡಿದ ಶುದ್ಧಕಲ್ಯಾಣ್ ಕೇಳಿ ಅಲ್ಲಿ ನೆರೆದಿದ್ದ ಬಡೆ ಗುಲಾಂ ಅಲಿ ಖಾನ್, ಬಿಸ್ಮಿಲ್ಲಾ ಖಾನ್, ಓಂಕಾರನಾಥ ಠಾಕೂರ್ ಮೊದಲಾದವರೆಲ್ಲಾ ಬೆರಗಾದರಂತೆ. ಇನ್ನೊಮ್ಮೆ 1938ರಲ್ಲಿ ಕೋಲ್ಕತ್ತದಲ್ಲಿ ನಡೆದ ಸಂಗೀತ ಸಮ್ಮೇಳನಕ್ಕೆ ಹೋದ ಗಂಗೂಬಾಯಿಯವರ ಸಂಗೀತದ ಬಗ್ಗೆ ಅನುಮಾನ ಪಟ್ಟು, ಒಮ್ಮೆ ರಿಹರ್ಸಲ್ ತೆಗೆದುಕೊಳ್ಳೋಣ ಎಂದಿದ್ದರಂತೆ.

ಸ್ತ್ರೀಯರಿಗೆ ಮನೆಯಿಂದ ಹೊರಗೆ ಬಂದು, ಯೋಗ್ಯ ಗುರುವನ್ನು ಪಡೆದು ಸಂಗೀತದ ಕಲಿಕೆ, ಕಾರ್ಯಕ್ರಮಕ್ಕಾಗಿ ಪ್ರಯಾಣ, ಮನೆಯ ಜವಾಬ್ದಾರಿ, ಮಕ್ಕಳ ಪೋಷಣೆ, ತಮ್ಮ ಅಭ್ಯಾಸ ಇವುಗಳ ಜೊತೆಗೆ ಎಲ್ಲೂ ಶೋಷಣೆಗೆ ಒಳಗಾಗದಂತೆ ತಮ್ಮನ್ನು ಕಾಪಾಡಿಕೊಂಡು, ವೇದಿಕೆಯನ್ನು ಪಡೆದು ತಮ್ಮ ಶ್ರೋತೃ ವರ್ಗವನ್ನು ರೂಪಿಸಿಕೊಳ್ಳುವುದು, ತಮ್ಮ ಇರುವಿಕೆಯನ್ನು ಪ್ರಕಟಪಡಿಸಿಕೊಳ್ಳುವುದು ಇವೆಲ್ಲವೂ ಮಹತ್ವದ್ದೇ ಆಗಿರುತ್ತವೆ.

ಹಳೆಯ ಗಾಯಕಿಯರಲ್ಲಿ ತವಾಯಫ್‌ನಂತಹ ಹಿನ್ನೆಲೆ ಹೊಂದಿದವರಲ್ಲಿ ಹಲವರಿಗೆ ಹುಟ್ಟಿನೊಂದಿಗೆ ತಮಗೆ ಅಂಟಿದ ಗುರುತಿನ ಬಗ್ಗೆ (ಮಾರ್ಕಿಂಗ್) ಆಕ್ರೋಶವಿದ್ದು, ಅದನ್ನು ಮರೆಯಲೂ ಆಗದೆ ಅದೇ ಬೇಗೆಯೊಂದಿಗೆ ಮುನ್ನುಗ್ಗುವ ಸ್ವಭಾವ ಇದ್ದದ್ದು ಕಾಣಿಸುತ್ತದೆ. ಇನ್ನೊಂದೆಡೆ, ನೆನಪಿಸಿಕೊಳ್ಳಲೂ ಇಚ್ಛಿಸದ ತಮ್ಮ ಹಿಂದನ್ನು ಇನ್ನೂ ಹಿಂದಕ್ಕೆ ಸರಿಸುತ್ತಾ, ಹಲವು ಬಾರಿ ಮರೆಮಾಚುತ್ತಾ ತಮ್ಮ ರಿವಾಜು, ನಡೆನುಡಿಗಳನ್ನು ಪರಿಷ್ಕರಿಸಿಕೊಳ್ಳಲು ಹೆಣಗಾಡಿದ ಗಾಯಕಿಯರು ಕಾಣಿಸುತ್ತಾರೆ.

ದೇಶ್ ಕೀ ದೀದಿ... ಲತಾ ದೀದಿಯೂ ಆರಂಭಿಕ ದಿನಗಳಲ್ಲಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ

ಆಧುನಿಕ ಕಾಲದಲ್ಲಿ ಸಂಗೀತಕ್ಕೊಂದು ಶಿಸ್ತನ್ನು, ಅಕಾಡೆಮಿಕ್ ಚೌಕಟ್ಟನ್ನು ಕೊಡಲು ಹೊರಟ ವಿಷ್ಣು ದಿಗಂಬರ ಪಲುಸ್ಕರ್ ಹಾಗೂ ವಿಷ್ಣು ನಾರಾಯಣ ಭಾತಖಂಡೆ ಇವರುಗಳ ಮೂಲಕವೂ ಸಂಗೀತದ ಸ್ಥಾನಮಾನ ಬದಲಾಯಿತು. ಎಲ್ಲ ವರ್ಗಗಳ ಸ್ತ್ರೀಯರು ಸಂಗೀತ ಕಲಿಯುವಂತಾಗಲು ಅವರು ಸಂಗೀತ ಪಾಠಶಾಲೆಗಳನ್ನು ಆರಂಭಿಸಿದರು. ಅಲ್ಲಿಯವರೆಗೆ ಗುರು-ಶಿಷ್ಯ ಪರಂಪರೆಯಲ್ಲಿ ಉಸ್ತಾದರುಗಳ ಬಳಿ ಹೋಗಿ ಕಲಿಯಬೇಕಾಗಿದ್ದ ವಿಷಯವನ್ನು ಶಾಲಾ ಕಾಲೇಜುಗಳಲ್ಲಿ ಪರಿಚಯಿಸಿದರು. ಆಧುನಿಕ ಭಾರತದಲ್ಲಿ ಸ್ತ್ರೀಯರಿಗೆ ಔಪಚಾರಿಕ ಶಿಕ್ಷಣವನ್ನು ಪಡೆಯುವ ಅವಕಾಶವೂ ದೊರೆತದ್ದರಿಂದ ಸಂಗೀತ ಕ್ಷೇತ್ರದಲ್ಲಿ ಗಾಯಕಿಯರ ಸಂಖ್ಯೆ ಹೆಚ್ಚಿತು.

ಕಳೆದ ನಾಲ್ಕೈದು ದಶಕಗಳಿಂದ ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಹಲವಾರು ಮಹತ್ವದ ಗಾಯಕಿಯರು ಹಿಂದಿನವರು ಕಟ್ಟಿದ ಹೋರಾಟದ ದಾರಿಯಲ್ಲಿ ತಮ್ಮ ಹೆಜ್ಜೆಯನ್ನು ಮೂಡಿಸಿದ್ದಾರೆ. ಉತ್ತಮ ಗಾಯಕಿಯರಾಗಿ ಮಾತ್ರವಲ್ಲದೆ ವಾದಕಿಯರಾಗಿ, ಗುರುಗಳಾಗಿ, ಉಪನ್ಯಾಸಕಿಯರಾಗಿ, ಸಂಶೋಧಕಿಯರಾಗಿ, ವಾಗ್ಗೇಯಕಾರ್ತಿಯರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಕಿಶೋರಿ ಅಮೋನಕರ್, ವೀಣಾ ಸಹಸ್ರಬುದ್ಧೆ, ಮಾಣಿಕ್ ವರ್ಮಾ, ಸುಚೇತಾ ಭಿಡಕರ್, ಸುಹಾಸಿನಿ ಕೋರಟಕರ್ ಇವರ ಪಾತ್ರ ಮರೆಯುವಂಥದ್ದಲ್ಲ. ನಮ್ಮ ನಡುವಿನ ಮಹತ್ವದ ಗಾಯಕಿಯರಲ್ಲಿ ಪ್ರಭಾ ಅತ್ರೆ, ಪದ್ಮಾ ತಲವಾಲಕರ್, ಶ್ರುತಿ ಸಡೋಲಿಕರ್, ಅಶ್ವಿನಿ ಭಿಡೆ, ಆರತಿ ಅಂಕ್ಲಿಕರ್, ಅಲಕಾ ದೇವ್ ಮಾರುಲ್‌ಕರ್, ಶುಭ್ರಾ ಗುಹಾ ಹಾಗೂ ಮುಂದಿನ ಪೀಳಿಗೆಯ ದೇವಕಿ ಪಂಡಿತ್, ಕಲ್ಪನಾ ಜೋಗರ್ಕರ್, ಅಪೂರ್ವಾ ಗೋಖಲೆ, ಗೌರಿ ಪಾಠಾರೆ, ಅನುರಾಧಾ ಕುಬೇರ್, ಮಂಜೂಶಾ ಪಾಟೀಲ್, ಕೌಶಿಕಿ ಚಕ್ರವರ್ತಿ ಇವರೆಲ್ಲರೂ ಸಂಗೀತ ಕ್ಷೇತ್ರದಲ್ಲಿ ಮುಂದುವರಿಯಲು ಬಯಸುವವರಿಗೆ ಭರವಸೆಯ ದೀಪವಾಗಿದ್ದಾರೆ. ಸಿದ್ಧವಾಗಿರುವ ಭೂಮಿಕೆಯನ್ನು ಪ್ರವೇಶಿಸುವವರಿಗೆ ಅದನ್ನು ನಿರ್ಮಿಸಿದವರಿಗೆ ಎದುರಾದ ಸವಾಲುಗಳು ಬರಲಾರವು. ಮಾತ್ರವಲ್ಲ ಇತಿಹಾಸದ ಅನುಸಂಧಾನವು ಎದುರಾಗುವ ಹಲವು ಸವಾಲುಗಳಿಗೆ ಪರಿಹಾರವನ್ನೂ ನೀಡಬಲ್ಲುದು.

ನಾನೇನು ಕಡಿಮೆ ಅಲ್ಲ... ಆಶಾ ಭೋಂಸ್ಲೆ ಹಾಡಿನ ವೈಖರಿ

ಮುನ್ನೋಟ 04-07-2021 ರಿಂದ 10-07-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಮನೆಮಂದಿಯೆಲ್ಲಾ ಸಂಭ್ರಮದಲ್ಲಿದ್ದರೂ ನಿಮಗೆ ದಿನವಿಡೀ ದೇಹಾಲಸ್ಯ ತಲೆದೋರುವುದು. ಕೆಲಸಕಾರ್ಯಗಳಲ್ಲಿ ಸ್ವಲ್ಪ ನಿರಾಸಕ್ತಿ ಇರಲಿದೆ. ನಿಮ್ಮ ಕಾರ್ಯಚಟುವಟಿಕೆಗಳನ್ನು ಇತರರು ಅಡಿಕೊಳ್ಳುವ ಸಾಧ್ಯತೆಗಳಿವೆ. ಕ್ರಮೇಣ ಎಲ್ಲವೂ ಸರಿಯಾಗುವುದು. ಆಸ್ತಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಸ್ಪಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವಿರಿ. ವೃತ್ತಿ ಕ್ಷೇತ್ರದಲ್ಲಿ ನಿರಾಯಾಸವಾಗಿ ನಿಮ್ಮ ಗುರಿಯನ್ನು ತಲುಪುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಷೇರುಪೇಟೆ ವ್ಯವಹಾರದಲ್ಲಿ ಹಿನ್ನಡೆ ಇರುತ್ತದೆ, ಆದ್ದರಿಂದ ಅತಿಯಾದ ಬಂಡವಾಳ ಹೂಡಿಕೆ ಬೇಡ. ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಅಭಿವೃದ್ಧಿ ಇರುತ್ತದೆ. ಹೊಸ ಆದಾಯದ ದಾರಿ ಕಾಣಿಸಿ ಮನಸ್ಸಿಗೆ ನೆಮ್ಮದಿ ಇರುತ್ತದೆ. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ಮುನ್ನಡೆ ಇರುತ್ತದೆ. ಸರ್ಕಾರದ ಕಡೆಯಿಂದ ಬರಬೇಕಿದ್ದ ಹಣಕಾಸು ಬರುತ್ತದೆ. ಕುಟುಂಬದಲ್ಲಿ ಹೆಚ್ಚಿನ ಸಾಮರಸ್ಯ ಏರ್ಪಡುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಅತಿಯಾದ ಆತ್ಮಗೌರವ ನಿಮ್ಮನ್ನು ಕಾಡಬಹುದು. ಕ್ರೀಡಾಪಟುಗಳಿಗೆ ಉತ್ತಮ ಭವಿಷ್ಯ ದೊರೆಯುವ ಲಕ್ಷಣಗಳಿವೆ. ನಿಮ್ಮ ಕಠಿಣ ಮಾತಿನಿಂದ ಕೈಕೆಳಗಿನ ಕೆಲಸಗಾರರು ತಿರುಗಿಬೀಳಬಹುದು. ನಿಮ್ಮ ಗುರಿಸಾಧನೆಗಾಗಿ ತಾಳ್ಮೆವಹಿಸುವುದು ಅತಿ ಅಗತ್ಯ. ಹಣದ ಪರಿಸ್ಥಿತಿಯು ಸಾಮಾನ್ಯವಾಗಿರುತ್ತದೆ, ಹೊಸ ಆದಾಯದ ಮೂಲಗಳನ್ನು ಹುಡುಕುವಿರಿ. ಮಕ್ಕಳಿಂದ ನಿಮಗೆ ಧನಸಹಾಯವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಸಾಮಾಜಿಕ ಕಾರ್ಯಕ್ರಮಗಳಲ್ಲಿ ಒರಟಾಗಿ ಮಾತನಾಡಿ ಇತರರ ತಿರಸ್ಕಾರಕ್ಕೆ ಗುರಿಯಾಗುವಿರಿ. ಕೌಟುಂಬಿಕ ವಿಚಾರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ. ಕುಟುಂಬದವರನ್ನು ಸೇರಿಸಿ ದೈವಕಾರ್ಯವನ್ನು ನಡೆಸುವ ಬಗ್ಗೆ ಚರ್ಚೆಮಾಡುವಿರಿ. ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಬರಬೇಕಿದ್ದ ಪ್ರೋತ್ಸಾಹ ಧನ ದೊರೆಯುತ್ತದೆ. ಹಣದ ಹರಿವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ.

ಸಿಂಹ — ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ರಾಜಕಾರಣಿಗಳಿಗೆ ಉತ್ತಮ ದಿನ. ಅವರ ಬಹು ದಿನಗಳ ಆಸೆಯೊಂದು ಈಡೇರುವ ಸಂದರ್ಭವಿದೆ. ಗೃಹಿಣಿಯರಿಗೆ ಕೆಲಸದ ಒತ್ತಡ ಹೆಚ್ಚಾಗುವುದು. ಪತ್ರಿಕೋದ್ಯಮ ನಡೆಸುವವರ ಮೇಲೆ ಕೆಲವೊಂದು ಇಲಾಖಾ ತನಿಖೆಗಳು ಬರಬಹುದು. ಪ್ರೀತಿ ವಾತ್ಸಲ್ಯ ತುಂಬಿದ ಮಾತುಗಳಿಂದಾಗಿ ದಂಪತಿಗಳ ನಡುವೆ ಅನುಬಂಧ ಹೆಚ್ಚುತ್ತದೆ. ವಯಸ್ಕರಿಗೆ ಸಂಬಂಧಗಳು ಕೂಡಿಬರಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ಜಾಣ್ಮೆಯಿಂದ ನಿಮ್ಮ ಕುಟುಂಬಕ್ಕೆ ಹೆಚ್ಚು ಅನುಕೂಲವಾಗುವುದು. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಆದಾಯ ಇರುತ್ತದೆ. ವಾಹನ ಚಾಲನೆಯಲ್ಲಿ ಸ್ವಲ್ಪ ಹಣ ಗಳಿಸಬಹುದು. ವ್ಯವಹಾರಗಳಲ್ಲಿ ಮುಲಾಜಿಗೆ ಒಳಗಾಗದೆ ಕಟ್ಟುನಿಟ್ಟಿನ ವ್ಯವಹಾರಗಳನ್ನು ನಡೆಸಿರಿ, ಇದರಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗುವಿರಿ. ಮಕ್ಕಳಿಂದ ಹಣದ ವಿಚಾರದಲ್ಲಿ ಗೊಂದಲಗಳು ಆಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖ 1,2,3
ಬಂಧುಗಳೊಡನೆ ಸಂಬಂಧಗಳನ್ನು ಸುಧಾರಿಸಿಕೊಳ್ಳುವುದು ನಿಮಗೆ ಉತ್ತಮ. ಮಹಿಳೆಯರ ಬಹುದಿನದ ಆಸೆಯೊಂದು ಪೂರೈಸುತ್ತದೆ. ಸಂಗಾತಿಯ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಅತಿಯಾದ ಆತ್ಮವಿಶ್ವಾಸದಿಂದ ವ್ಯವಹಾರಗಳಲ್ಲಿ ಹಿನ್ನಡೆಯಾಗಬಹುದು. ಹಣದ ಒಳಹರಿವಿನಲ್ಲಿ ಮಂದಗತಿ ಇರುತ್ತದೆ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಶುಭ ವಾರ್ತೆಗಳನ್ನು ಕೇಳುವಿರಿ.

ವೃಶ್ಚಿಕ — ವಿಶಾಖ 4 ಅನೂರಾಧ, ಜ್ಯೇಷ್ಠ
ಒಂದು ರೀತಿಯ ಆಲಸ್ಯ ಮನೆಮಾಡಿರುತ್ತದೆ. ಬಂಧುಗಳೊಡನೆ ವ್ಯವಹರಿಸುವಾಗ ನಿಷ್ಕಲ್ಮಶ ಮನಸ್ಸಿನಿಂದ ವ್ಯವಹರಿಸಿರಿ, ಆಗ ಉತ್ತಮ ಬಾಂಧವ್ಯ ಮೂಡುತ್ತದೆ. ಕೃಷಿ ಕೆಲಸಗಳಲ್ಲಿ ಪ್ರಗತಿಯನ್ನು ಕಾಣಬಹುದು. ಯಾವುದೇ ಕೆಲಸಗಳಲ್ಲೂ ಆತುರದ ನಿರ್ಧಾರ ಬೇಡ. ಕಷ್ಟದಲ್ಲಿರುವವರಿಗೆ ಸಹಾಯ ಮಾಡಿ ಸಂತಸ ಪಡುವಿರಿ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಸ್ವಯಂ ಉದ್ಯೋಗ ನಡೆಸುತ್ತಿರುವವರಿಗೆ ಸಾಕಷ್ಟು ಅಭಿವೃದ್ಧಿ ಇದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುವುದರಿಂದ ಖರ್ಚನ್ನು ಕಡಿಮೆ ಮಾಡಿ. ಲೇವಾದೇವಿ ವ್ಯವಹಾರ ಖಂಡಿತಾ ಬೇಡವೇ ಬೇಡ. ಬಂಧುಬಾಂಧವರಿಂದ ನಿಮಗೆ ಎಲ್ಲಾ ರೀತಿಯ ಸಹಕಾರ ದೊರೆಯುತ್ತದೆ. ಅಪರಿಚಿತ ವ್ಯಕ್ತಿಗಳಿಂದ ಹಣದ ವಿಚಾರದಲ್ಲಿ ಮೋಸ ಹೋಗಬಹುದು, ಆದ್ದರಿಂದ ಎಚ್ಚರವಾಗಿರುವುದು ಒಳ್ಳೆಯದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಕೃಷಿಕರಿಗೆ ತಮ್ಮ ಸೌಲಭ್ಯದ ಜೊತೆಗೆ ಅನುದಾನ ದೊರೆಯುತ್ತದೆ. ನಿರೀಕ್ಷಿತ ಮಟ್ಟದಲ್ಲಿ ಹಣದ ಹರಿವು ಇರುತ್ತದೆ. ಕೆಲವರಿಗೆ ವ್ಯವಹಾರ ನಿಮಿತ್ತ ದೂರ ಪ್ರಯಾಣದ ಸಾಧ್ಯತೆಗಳಿವೆ. ಸಂಗೀತಗಾರರಿಗೆ ಮಾನ್ಯತೆ ದೊರಕುತ್ತದೆ, ಗೌರವಧನವೂ ದೊರೆಯುವ ಸಾಧ್ಯತೆ ಇದೆ. ಆಕರ್ಷಕ ಮಾತಿನಿಂದ ವ್ಯವಹಾರದಲ್ಲಿ ಮೇಲುಗೈ ಸಾಧಿಸುವಿರಿ. ಸಂಗಾತಿಯ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ನಿಮ್ಮ ಯೋಜನೆಗಳನ್ನು ಕೈಬಿಡದೆ ಹಟ ಹಿಡಿದು ಮುನ್ನಡೆಸಿದಲ್ಲಿ ಉತ್ತಮ ಫಲಿತಾಂಶ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಪ್ರಗತಿ ಇರುತ್ತದೆ. ವ್ಯವಹಾರದ ವಿಚಾರದಲ್ಲಿ ಸಾಕಷ್ಟು ಬಾರಿ ಪರಿಶೀಲನೆ ಮಾಡಿ ಮುಂದುವರಿಯಿರಿ. ಯುವಕರು ವಾಮಮಾರ್ಗದ ದುಡಿಮೆಗೆ ಮುಂದಾಗದಿರುವುದು ಒಳ್ಳೆಯದು. ಪ್ರೀತಿ-ಪ್ರೇಮದ ಆಸೆಯಲ್ಲಿದ್ದವರಿಗೆ ನಿರಾಶಾಭಾವ ಮೂಡಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಗಾಜಿನ ಅಲಂಕಾರಿಕ ವಸ್ತುಗಳನ್ನು ತಯಾರಿಸುವವರಿಗೆ ಉತ್ತಮ ಬೇಡಿಕೆ ಬರುತ್ತದೆ. ಸ್ತ್ರೀಯರ ಕೇಶಾಲಂಕಾರ ಮಾಡುವವರಿಗೆ ಉತ್ತಮ ಧನ ಸಂಪಾದನೆ ಇರುತ್ತದೆ. ಲೋಹದ ಎರಕಗಳನ್ನು ತಯಾರು ಮಾಡುವವರಿಗೆ ಬಿಡುವಿಲ್ಲದಷ್ಟು ಕೆಲಸ ಇರುತ್ತದೆ. ಸೂಕ್ಷ್ಮ ಕುಸುರಿ ಕೆಲಸ ಮಾಡುವ ಶಿಲ್ಪಿಗಳಿಗೆ ಕೆಲಸಗಳು ದೊರೆಯುತ್ತವೆ. ಮಹತ್ವದ ವಿಷಯಗಳಲ್ಲಿ ನೀವು ತೆಗೆದುಕೊಳ್ಳುವ ನಿರ್ಣಯವು ನಿಮ್ಮ ಗೌರವವನ್ನು ಕಾಪಾಡುತ್ತದೆ.

ಪದಬಂಧ 2694



ಮೇಲಿನಿಂದ ಕೆಳಕ್ಕೆ
1. ಕಣ್ಣಿಗೆ ದಿವ್ಯ ಕಾಡಿಗೆ ಹಚ್ಚಿದ ಹನುಮನ ತಾಯಿ 3
2. ಏನೂ ತಿಳಿಯದ ಹಳ್ಳಿ ಮುಗ್ಧ 3
3. ಹಣೆಯ ಕಪ್ಪು ಮಂಗಳ ತಿಲಕ 3
4. ಕಂದರದಲ್ಲಿ ಸಿಲುಕಿದ ಬಡವ 3
6. ಆರು ಪಾದದ ಕಾವ್ಯ ಸುಂದರಿ 3
7. ತೇಜಸ್ವಿಯವರ ಕತೆಯಲ್ಲಿ ಪಿಂಚಣಿ ತೆಗೆದುಕೊಳ್ಳಲು ಹೋರಾಡಿದ ಪ್ರಾಮಾಣಿಕ 3
8. ಕಲಿಯುಗದ ಹಿಂದಿನ ಕೃಷ್ಣ ಯುಗ 3
9. ಸಾಗಿಸುವ ಸಾಮಾನು 3
11. ಹಣೆಗೆ ಅಂಟಿದ ಪಾಪದ ಗುರುತು 3
12. ನಮ್ಮ ನಾಡಿನ ಅಭಿಮಾನದ ನುಡಿ 3
14. ಕೈ ಬೀಸಿ ನೀಡುವ ಬೀಳ್ಕೊಡುಗೆ 3
15. ಹಿಂದಿಯವನಿಗೆ ಆಸರೆಯಾಗುವ ಮರದ ಕೋಲು 3
17. ಮುಂಚಿತವಾಗಿ ಬೀಳುವ ಸುಂದರ ಮಳೆ 3
18. ವಿರಳವಾಗಿ ಬರುವ ಸಿರಿದೇವಿ 3
19. ಸಂಸ್ಕೃತದ ಹೊಸ ಒಂಭತ್ತು 3
20. ಕಳ್ಳತನದಿಂದ ತೂರಿಕೋ 3
22. ಚಿನ್ನದಂತಹ ಮಗುವನ್ನು ಮುದ್ದಾಗಿ ಹೀಗೆ ಕರೆಯುತ್ತಾರೆ 3
23. ಲಕ್ಷ್ಮಿಯಂತೆ ಕಂಗೊಳಿಸುವ ವಸು 3
25. ತಲೆಕೆಳಕಾದ ಬುದ್ಧಿವಂತ 3
26. ಪರೀಕ್ಷೆಯಲ್ಲಿ ಹೊಡೆಯುವ ಪಲ್ಟಿ 3

ಎಡದಿಂದ ಬಲಕ್ಕೆ
1. ಒಳಗೆ ಅಡಗಿರುವ ಹೃದಯದ ವೇದಿಕೆ 4
3. ಸುಂದರವಾದದ್ದು ಹೀಗೆ ಕಾಣುತ್ತದೆ 4
5. ಹೊಸತಿನ ಕಡೆ ಹೆಜ್ಜೆ ಹಾಕುತ್ತಿರುವ ನಮ್ಮ ದೇಶ 5
8. ಬಿಟ್ಟದೇವನ ಬಾಗಿಲಲ್ಲಿ ಹರಿದ ಸಾಗರ 5
10. ಕಪ್ಪು ಹಲಗೆಗೆ ಬೇಕಾಗುವ ಲೇಖನ ಸಾಧನ 3
11. ಕವರ್ಗದಿಂದ ಬಂದ ಅನುಕಂಪ 4
13. ಸೂರ್ಯನ ಜೊತೆ ಸೇರಿದ ಬಾಂಧವರು 4
16. ಋಷಿಯ ಕೈಯಲ್ಲಿರುವ ನೀರಿನ ಪಾತ್ರೆ 4
19. ನವಿರಾದ ಮಾತು 4
21. ಹಿಂದಿನ ಕಾಲದ ಒಂದು ಪಾವು ಅಳತೆ 3
22. ಮಳೆ ಬೆಳೆಯಿಲ್ಲದ ಬರಡು ನೆಲ 5
24. ಈ ಶುಷ್ಕ ಪ್ರದೇಶಕ್ಕೆ ಮತ್ತೆ ಬಂದು ಪೀಡಿಸು 5
27. ದಶರಥನ ಪೂರ್ವಿಕನ ಜೊತೆ ಸೇರಿದ ಲಕ್ಷ್ಮಣಾಗ್ರಜ 4
28. ಉಜ್ಜಿದಾಗ ಉಂಟಾಗುವ ಬೆಂಕಿಯ ಘರ್ಷಣೆ 4

ಪದಬಂಧ ಉತ್ತರ -2693

ಮೇಲಿಂದ ಕೆಳಕ್ಕೆ

1. ಕ್ಷಣಕಾಲ 3.ಮಹಾಭಾರತ 4.ಗರಿಗೆದರು 5.ಸರಾಸರಿ 7.ಆಕಾಶದೀಪ 8.ದಶಾವತಾರ 10.ಸೇವಾನಿರತ 11.ಸುಗಮರಾಗ 13.ವರುಣ 16.ಹಣೆಬರಹ 17.ತೆನಾಲಿರಾಮ 19.ಕ್ಷಯರೋಗ 21.ರಂಗವಲ್ಲಿ

ಎಡದಿಂದ ಬಲಕ್ಕೆ

1. ಅಕ್ಷರಧಾಮ 4.ಗಜಕೇಸರಿ 6. ಭಾಡಿಗೆ 7.ಆಲದಮರ 9.ದನಿಸೇರಿಸು 12.ತವರು 14.ಶರುವ 15.ನಿಗಮ 16.ಹಣತೆ 18.ಪಕ್ಷರಕ್ಷಣೆ 20.ನಾದತರಂಗ 22.ಬದಲಿ 23.ಖಗಸಮೂಹ 24.ಮನೆಮಲ್ಲಿಗೆ

ಪತ್ರಿಕೋದ್ಯಮಕ್ಕೆ ಒಬ್ಬರೇ ನಾಡಿಗ!

ಎ.ಎಸ್. ಬಾಲಸುಬ್ರಹ್ಮಣ್ಯ

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಶಿಕ್ಷಣಕ್ಷೇತ್ರ ವಿದ್ಯಾರ್ಥಿಗಳಲ್ಲಿ ಇಂದು ಅತ್ಯಂತ ಜನಪ್ರಿಯ. ಹುಟ್ಟಿನಿಂದಲೇ ಪತ್ರಕರ್ತರು, ಅವರನ್ನು ನಿರ್ಮಿಸಲಾಗದು ಎಂಬ ನಂಬಿಕೆ ಬಹುಕಾಲ ರೂಢಿಯಲ್ಲಿತ್ತು. ಇದರ ವಿರುದ್ಧ ಸೆಣಸಿದ ಕಟಿಬದ್ಧ ಶಿಕ್ಷಕ ಡಾ. ನಾಡಿಗ ಕೃಷ್ಣಮೂರ್ತಿ. ಉತ್ತಮ ಶೈಕ್ಷಣಿಕ ಹಿನ್ನೆಲೆ ಮತ್ತು ಶಾಸ್ತ್ರೀಯ ತರಬೇತಿಯಿಂದ ಸಮರ್ಥ ಪತ್ರಕರ್ತರನ್ನು ನಿರ್ಮಿಸಲು ಸಾಧ್ಯ ಎಂಬುದನ್ನು ಸಾಬೀತುಪಡಿಸಿದ ಮೇಧಾವಿ ಹಾಗೂ ಸಮರ್ಪಣಾಭಾವದ ಶಿಕ್ಷಕ.

> ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಕಾಲಘಟ್ಟದಲ್ಲಿ ಅಮೆರಿಕದಿಂದ ಪತ್ರಿಕೋದ್ಯಮ ಪದವಿ ಪಡೆದು ಬಂದ ನಾಡಿಗ ಕೃಷ್ಣಮೂರ್ತಿ ಅವರು ಪತ್ರಕರ್ತರನ್ನು ರೂಪಿಸಿದ 'ಮಹಾಗುರು' ಎಂದೇ ಹೆಸರಾದವರು. ದೇಶದ ಮೊದಲ ಸಾಲಿನ ಪತ್ರಿಕೋದ್ಯಮದ ಮೇಷ್ಟ್ರು. ಅವರ ಜನ್ಮ ಶತಾಬ್ದಿಯ ಈ ಸಂದರ್ಭದಲ್ಲಿ ಅವರ ಸಾಧನೆಯ ಹೊನಲಿನಲ್ಲಿ ಹೀಗೊಂದು ಯಾನ

ದೇಶ ಕಟ್ಟುವಲ್ಲಿ ಸಮೂಹ ಮಾಧ್ಯಮಗಳು ನಿರ್ಣಾಯಕ ಎಂಬುದನ್ನು ಅಂದೇ ಮನಗಂಡ ನಾಡಿಗರು 1947ರಲ್ಲೇ ಅಮೆರಿಕೆಯ ಮಿಸ್ಸೌರಿ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪತ್ರಿಕೋದ್ಯಮ ಶಿಕ್ಷಣಕ್ಕೆ ಪ್ರವೇಶ ಪಡೆದ ಉತ್ಸಾಹಿ. ಶಿಕ್ಷಣ ಹಾಗೂ ಹಡಗಿನ ಪ್ರಯಾಣ ವೆಚ್ಚ ಹತ್ತುಸಾವಿರ ರೂಪಾಯಿ ಹೊಂದಿಸಲು ಅವರು ಪಡಬಾರದ ಕಷ್ಟಪಟ್ಟರು. ರಸ್ತೆಯಲ್ಲಿ ನಿಂತು ಪುಸ್ತಕಗಳನ್ನು ಮಾರಿ ಹಣ ಕೂಡಿಸಿದರು. ಹಿರಿಯ ಸಾಹಿತಿಗಳು, ಧನಿಕರಲ್ಲಿ ಸಾಲ ನೀಡಲು ವಿನಂತಿಸಿದರು. ವಾಪಸ್ಸು ನೀಡುವ ಗ್ಯಾರಂಟಿ ನೀಡಿದರು. ಒಂಬತ್ತು ಸಾವಿರ ಸಂಗ್ರಹಿಸಿ ಇನ್ನೊಂದೇ ಸಾವಿರ ಬೇಕಾಗಿದ್ದಾಗ ಉದ್ಯಮಿಯೊಬ್ಬರು ಈ ಯುವಕನ ಉತ್ಸಾಹ ನೋಡಿ ಅಮೆರಿಕಕ್ಕೆ ಹೊರಡಲು ನೆರವಾದರು.

ಸ್ವಯಂನಿರ್ಮಿತ ನಾಡಿಗರು ಶಿವಮೊಗ್ಗ ಜಿಲ್ಲೆಯ ಆನವಟ್ಟಿಯವರು. 1921ರಲ್ಲಿ ಜನನ. ತಂದೆ ನಾಡಿಗ ನರಸಿಂಗ ರಾವ್ ಶಾನುಭೋಗರು. ತಾಯಿ ರಮಾಬಾಯಿ. ಕಾಲೇಜು ಶಿಕ್ಷಣಕ್ಕಾಗಿ ನಾಡಿಗರು 1937ರಲ್ಲಿ ವಿದ್ಯಾಕಾಶಿ ಮೈಸೂರಿಗೆ ಬಂದರು. 1941ರಲ್ಲಿ ಬಿ.ಎ. ಪದವಿ ಪಡೆದು ಪ್ರೌಢಶಾಲೆ ಶಿಕ್ಷಕರಾಗಿ ಆಯ್ಕೆಯಾದರು. 1941ರಲ್ಲಿ ವಾರ್ಧಾ ಯಾತ್ರೆಮಾಡಿ ಗಾಂಧೀಜಿಯ ದರ್ಶನ ಮಾಡಿ ಬಂದರು. ಸ್ವಾತಂತ್ರ್ಯ ಚಳವಳಿಯ ಅದಮ್ಯ ತುಡಿತ ನಾಡಿಗರನ್ನು ಹೋರಾಟಕ್ಕೆ ಇಳಿಯಲು ಪ್ರೇರೇಪಿಸಿತು. ಸ್ವಾತಂತ್ರ್ಯ ಹೋರಾಟಗಾರರ ಸಾಹಸ ಮತ್ತು ತ್ಯಾಗಗಳ ಕುರಿತು ಬರೆಯುವ ಉತ್ಸಾಹ ಅವರಲ್ಲಿತ್ತು. ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವನ್ನು ನೀಡಲು, ಜನರನ್ನು ಪ್ರೇರೇಪಿಸಲು ಹಲವಾರು ಲೇಖನಗಳು, ಪುಸ್ತಕಗಳನ್ನು ಪ್ರಕಟಿಸಿದರು. ಸ್ವಾತಂತ್ರ್ಯ ಚಳವಳಿಗೆ ಎಷ್ಟು ಬದ್ಧರಾಗಿದ್ದರು ಎಂದರೆ ಗಾಂಧೀಜಿ ಮತ್ತು ಇತರ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಕುರಿತ ಒಂಬತ್ತು ಪುಸ್ತಕಗಳು ಅವರಿಂದ ಹೊರಬಂದವು. ಅವುಗಳನ್ನು ಚೀಲದಲ್ಲಿ ಹೊತ್ತು, ಜನರಿಗೆ ಖರೀದಿಸಲು ಮನವಿ ಮಾಡುತ್ತಿದ್ದರು. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಅವರ ಸಕ್ರಿಯ ಭಾಗವಹಿಸುವಿಕೆ ಅಧಿಕಾರಿಗಳ ಕೋಪಕ್ಕೆ ಕಾರಣವಾಯಿತು. ಅವರನ್ನು ಒಂದು ವರ್ಷದವರೆಗೆ ಜೈಲಿಗೆ ಕಳುಹಿಸಲಾಯಿತು.

ಸ್ವಾತಂತ್ರ್ಯ ಹೋರಾಟಗಾರರಿಗೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಗಳಲ್ಲದೆ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಲ್ಲಿ ಅವರು ನಿಯಮಿತವಾಗಿ ಬರೆದು ಜನರನ್ನು ಹುರಿದುಂಬಿಸಿದರು. ಈ ಬರಹಗಳು ಪತ್ರಿಕೋದ್ಯಮವನ್ನು ಪ್ರವೇಶಿಸಲು ನಾಡಿಗರನ್ನು ಪ್ರೇರೇಪಿಸಿದವು. ಸಕ್ರಿಯ ಪತ್ರಿಕಾ ಬರವಣಿಗೆ ಪತ್ರಿಕೋದ್ಯಮದಲ್ಲಿ ಉನ್ನತ ಶಿಕ್ಷಣ ಪಡೆಯಲು ಅವರನ್ನು ಉತ್ತೇಜಿಸಿತು.

1947ರ ಜನವರಿ 26ರಂದು ಅಮೆರಿಕೆಗೆ ತೆರಳಿದ ನಾಡಿಗರು, ತಮ್ಮ ವಿದ್ಯಾಭ್ಯಾಸದ ಜತೆಗೆ ಅಲ್ಲಿಯೂ ಗಾಂಧೀಜಿ ಮತ್ತು ಅವರ ಅಹಿಂಸೆಯ ತತ್ವಗಳ ಕುರಿತು ಉಪನ್ಯಾಸಗಳನ್ನು ನೀಡಿ, ದೇಶದ ಹೋರಾಟವನ್ನು ಅಮೆರಿಕೆಯ ವಿದ್ಯಾರ್ಥಿ ಸಮುದಾಯಕ್ಕೆ ಪರಿಚಯಿಸಿದರು. ಪ್ರತಿಷ್ಠಿತ ಅಮೆರಿಕನ್ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಹಿಂತಿರುಗಿದ ನಂತರ, ನಾಡಿಗರು ದೆಹಲಿ ಮತ್ತು ಮದರಾಸಿನಲ್ಲಿ ಅಮೆರಿಕದ ರಾಯಭಾರ ಕಚೇರಿಯಲ್ಲಿ ಕನ್ನಡ ಪ್ರಕಟಣೆಗಳ ಮುಖ್ಯಸ್ಥರಾಗಿದ್ದರು. ಆದರೆ ಶಿಕ್ಷಕ ವೃತ್ತಿಯ ಸೆಳೆತ ಅವರನ್ನು ಮೈಸೂರಿನ ಮಹಾರಾಜ ಕಾಲೇಜಿಗೆ ಕರೆತಂದಿತು. ಪ್ರೊ. ನಂಬಿಯಾರ್ ಅವರ ಮುತುವರ್ಜಿಯಿಂದ ಮಹಾರಾಜ ಕಾಲೇಜಿನಲ್ಲಿ 1951ರಲ್ಲಿ ಆರಂಭವಾಗಿದ್ದ ಪತ್ರಿಕೋದ್ಯಮ ವಿಭಾಗಕ್ಕೆ ತರಬೇತಿ ಪಡೆದ ಶಿಕ್ಷಕನ ಅವಶ್ಯಕತೆ ಇತ್ತು. ಆ ಪದವಿ ನಾಡಿಗರಿಗೆ ಒಲಿಯಿತು. ಮುಂದೆ ಘಟಿಸಿದುದೆಲ್ಲ ಪತ್ರಿಕೋದ್ಯಮ ಶಿಕ್ಷಣದ ಮಹತ್ತರ ಹೆಜ್ಜೆಗುರುತುಗಳ ನಿರ್ಮಾಣ.

ನಾಡಿಗರ ಶೈಕ್ಷಣಿಕ ನಾಯಕತ್ವ ಮತ್ತು ಸಮರ್ಥ ಮಾರ್ಗದರ್ಶನದಲ್ಲಿ ಮಹಾರಾಜ ಕಾಲೇಜು ಪದವಿ ಕೋರ್ಸ್ ಯಶಸ್ವಿಯಾಗಿ ಮುನ್ನಡೆಯಿತು. ವಿದೇಶದಲ್ಲಿ ತರಬೇತಿ ಪಡೆದುಬಂದಿದ್ದ ನಾಡಿಗರು ಪತ್ರಿಕೋದ್ಯಮ ಶಿಕ್ಷಣ ಮತ್ತು ತರಬೇತಿಯನ್ನು ಸಮರ್ಥವಾಗಿ ಸಮ್ಮಿಳಿಸಿದರು. ಏಷ್ಯಾ ಮತ್ತು ಆಫ್ರಿಕಾದ ಅನೇಕ ಭಾಗಗಳಿಂದ ವಿದ್ಯಾರ್ಥಿಗಳನ್ನು ಮಹಾರಾಜ ಕಾಲೇಜು ಆಕರ್ಷಿಸಿತು. ಕೋರ್ಸ್ ಅನ್ನು ಅತ್ಯಂತ ಕ್ಷೇತ್ರ-ಆಧಾರಿತವಾಗಿಸಿದರು. 'ಪತ್ರಿಕೋದ್ಯಮಿ' ಎಂಬ ಕನ್ನಡ-ಇಂಗ್ಲಿಷ್ ಪ್ರಾಯೋಗಿಕ ಪತ್ರಿಕೆಯನ್ನು ನಿಯಮಿತವಾಗಿ ಪ್ರಕಟಿಸಿದರು. 1966ರಲ್ಲಿ ನಾಡಿಗರು ಅಮೆರಿಕೆಯ ಸದರ್ನ್ ಇಲಿನಾಯ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಜರ್ನಲಿಸಂನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಬದಲಾಗುತ್ತಿರುವ ಸಮೂಹ ಮಾಧ್ಯಮ ಶಿಕ್ಷಣ ಮತ್ತು ತರಬೇತಿ ಕೌಶಲಗಳನ್ನು ವಿಸ್ತೃತವಾಗಿ ಅರಿಯಲು ಈ ಅವಕಾಶ ಅವರಿಗೆ ನೆರವಾಯಿತು.

ನಾಡಿಗರು ತಮ್ಮ ಪ್ರಭಾವ ಮತ್ತು ಸಂಪರ್ಕಗಳನ್ನು ಜಾಣ್ಮೆಯಿಂದ ಬಳಸಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ವಿಭಾಗವನ್ನು ತೆರೆಯುವಂತೆ ಕುಲಪತಿ ದೇ.ಜವರೇಗೌಡರ ಮನ ಒಲಿಸಿದರು. 1971ರಲ್ಲಿ ಆ ವಿಭಾಗ ಮಾನಸಗಂಗೋತ್ರಿ ಆವರಣದಲ್ಲಿ ಆರಂಭವಾಯಿತು. ಸಹೋದ್ಯೋಗಿಗಳಾದ ಸೈಯದ್ ಇಕ್ಬಾಲ್ ಖಾದ್ರಿ ಮತ್ತು ಶ್ರೀಕರ್ ಎಲ್. ಭಂಡಾರ್ಕರ್ ಅವರು ಇಲಾಖೆಯನ್ನು ಮುನ್ನಡೆಸಲು ನೆರವಾದರು. ಇಡೀ ಆಗ್ನೇಯ ಏಷ್ಯಾದಲ್ಲಿ ಮೊದಲ ಸ್ನಾತಕೋತ್ತರ ಪತ್ರಿಕೋದ್ಯಮ ಕೋರ್ಸ್ ಸ್ಥಾಪಿಸಿದ ಕೀರ್ತಿ ಮೈಸೂರು ವಿಶ್ವವಿದ್ಯಾಲಯಕ್ಕೆ ದಕ್ಕಿತು.

'ಮಾನಸಗಂಗೋತ್ರಿ' ಎಂಬ ಪ್ರಾಯೋಗಿಕ ಪತ್ರಿಕೆ ಪ್ರಕಟಣೆ, ಹಿರಿಯ ಮಾಧ್ಯಮ ವ್ಯಕ್ತಿಗಳ ಉಪನ್ಯಾಸ, ಕಡ್ಡಾಯ ಅಧ್ಯಯನ ಪ್ರವಾಸ ಮತ್ತು ಮಾದರಿ ಪತ್ರಿಕಾಗೋಷ್ಠಿಗಳು ವಿದ್ಯಾರ್ಥಿಗಳಲ್ಲಿ ಮಾಧ್ಯಮ ಲೋಕದ ಅಗತ್ಯಗಳನ್ನು ಪರಿಚಯಿಸಿದವು. ವಿಶೇಷವಾಗಿ, ಅಧ್ಯಯನ ಪ್ರವಾಸ ವಿದ್ಯಾರ್ಥಿಗಳಿಗೆ ಪ್ರಮುಖ ಪತ್ರಿಕಾ ಕಚೇರಿಗಳಿಗೆ ಭೇಟಿ ನೀಡಲು ಮತ್ತು ಹಿರಿಯ ಸಂಪಾದಕರು ಮತ್ತು ಪತ್ರಕರ್ತರನ್ನು ಭೇಟಿಯಾಗಲು ಸಹಾಯ ಮಾಡಿತು. ಕೋರ್ಸ್ ಯಶಸ್ವಿಯಾಯಿತು ಮತ್ತು ಇಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಕ್ರಮೇಣ ಪ್ರಮುಖ ಪತ್ರಿಕೆಗಳಲ್ಲಿ ಕೆಲಸ ಸಿಗಲಾರಂಭಿಸಿತು.

ಸ್ಮರಣೆ

ನಾಡಿಗರು ಪತ್ರಿಕೋದ್ಯಮ ವಿಭಾಗವನ್ನು ಸ್ಥಾಪಿಸಲು ಮತ್ತು ವಿದ್ಯಾರ್ಥಿಗಳಿಗೆ ವೃತ್ತಿಪರ ಮಾರ್ಗದಲ್ಲಿ ತರಬೇತಿ ನೀಡಲು ಹೆಣಗಾಡುತ್ತಿರುವಾಗ, ಹಲವಾರು ಸಂಪಾದಕರು ಮತ್ತು ಪ್ರಕಾಶಕರು ಅವರನ್ನು ಗೇಲಿ ಮಾಡಿದರು. ಆದರೆ, ಇದರಿಂದ ನಾಡಿಗರು ಧೃತಿಗೆಡಲಿಲ್ಲ.

ನಾಡಿಗರು ತಮ್ಮ ಧುರೀಣತ್ವದಲ್ಲಿ ದೇಶದಾದ್ಯಂತ ಹಲವಾರು ವಿಭಾಗಗಳನ್ನು ಸ್ಥಾಪಿಸಲು ಶೈಕ್ಷಣಿಕ ಮಾರ್ಗದರ್ಶನ ಮಾಡಿ ದೇಶದ ಪ್ರತಿಷ್ಠಿತ ಪತ್ರಿಕೋದ್ಯಮ ಶಿಕ್ಷಕರಾಗಿ ಹೊರಹೊಮ್ಮಿದರು. ಅವರ ನಿರ್ದೇಶನದಲ್ಲಿ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ, ಪದವಿ ಮತ್ತು ಡಿಪ್ಲೊಮಾ ಮಟ್ಟದಲ್ಲಿ ಪತ್ರಿಕೋದ್ಯಮ ಕಲಿಕೆ ಆರಂಭವಾಯಿತು. ಮೈಸೂರು ವಿಶ್ವವಿದ್ಯಾಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಮೂಲಕ ನಾಡಿಗರು ಸರ್ಟಿಫಿಕೇಟ್ ಕೋರ್ಸ್, ನಂತರ ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಿದರು. ಈ ಕೋರ್ಸ್‌ಗಳು ಇಡೀ ದೇಶದಲ್ಲಿಯೇ ಹೆಸರು ಪಡೆದವು.

ನಾಡಿಗ ಅವರ ಪ್ರಮುಖ ಕೊಡುಗೆಗಳಲ್ಲಿ ಬಹುಮುಖ್ಯವಾದುದು ಎಂದರೆ ಅವರು ರಚಿಸಿದ 'ಭಾರತೀಯ ಪತ್ರಿಕೋದ್ಯಮ' ಕೃತಿ. ಇದು ಅವರ ಪಿಎಚ್.ಡಿ ಪ್ರಬಂಧವಾಗಿದ್ದು ನಂತರ 1966ರಲ್ಲಿ ಪುಸ್ತಕವಾಗಿ ಪ್ರಕಟವಾಯಿತು. ಇದು ಮೊದಲ ಬಾರಿಗೆ ಪ್ರಮುಖ ಭಾರತೀಯ ಭಾಷೆಗಳ ಸಮಗ್ರ ಪತ್ರಿಕಾ ಇತಿಹಾಸ ಮತ್ತು ಬೆಳವಣಿಗೆಗಳನ್ನು ದಾಖಲಿಸಿದೆ. ಈ ಕೃತಿಯನ್ನು ಕನ್ನಡಕ್ಕೆ ನಾಡಿಗರೇ ಅನುವಾದಿಸಿದ್ದಾರೆ. ಈ ಪುಸ್ತಕವು ಮೈಸೂರು ವಿಶ್ವವಿದ್ಯಾಲಯದಿಂದ ಪ್ರಶಸ್ತಿಯನ್ನು ಸಹ ಪಡೆದಿದೆ. ಭಾರತೀಯ ವಿಶ್ವವಿದ್ಯಾಲಯವೊಂದು ಪತ್ರಿಕೋದ್ಯಮದಲ್ಲಿ ನೀಡಿದ ಪ್ರಥಮ ಡಾಕ್ಟರೇಟ್ ಪದವಿ ಪಡೆದ ಕೀರ್ತಿಗೆ 1964ರಲ್ಲಿ ನಾಡಿಗರು ಭಾಜನರಾದರು.

ಲಂಡನ್‌ನ ಇಂಡಿಯಾ ಆಫೀಸ್ ಲೈಬ್ರರಿ ಮತ್ತು ಬ್ರಿಟಿಷ್ ಮ್ಯೂಸಿಯಂನಲ್ಲಿ ಹಳೆಯ ದಾಖಲೆಗಳನ್ನು ಉಲ್ಲೇಖಿಸಲು ಬ್ರಿಟಿಷ್ ಸರ್ಕಾರದ ಆಹ್ವಾನವು ಅವರಿಗೆ ನೆರವಾಯಿತು. ಯುನೆಸ್ಕೊ ಫೆಲೋ ಆಗಿ, ಸೋವಿಯತ್ ಒಕ್ಕೂಟ ಮಾತ್ರವಲ್ಲದೆ ಯುರೋಪಿನ ದೇಶಗಳಿಗೆ ಭೇಟಿ ನೀಡುವ ಅವಕಾಶವನ್ನು ಅವರು ಪಡೆದರು. ಇದು ಆ ದೇಶಗಳಲ್ಲಿನ ಪತ್ರಿಕೋದ್ಯಮದ ಸ್ಥಿತಿಗತಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು ನೆರವಾಯಿತು.

ನಾಡಿಗರು ಕನ್ನಡಕ್ಕೆ ಇನ್ನೂ ಎರಡು ಪುಸ್ತಕಗಳನ್ನು ಅನುವಾದಿಸಿದ್ದಾರೆ; ಮಿಸ್ಸೌರಿಯಲ್ಲಿ ಅವರ ಶಿಕ್ಷಕರಾಗಿದ್ದ ಡಾ. ಫ್ರ್ಯಾಂಕ್ ಲೂಥರ್ ಮಾಟ್ ಬರೆದ 'ಅಮೆರಿಕನ್ ಜರ್ನಲಿಸಂ' ಮತ್ತು ಇನ್ನೊಂದು ಆಂಗ್ಲಕೃತಿ 'ಬ್ರಿಟಿಷ್ ಜರ್ನಲಿಸಂ'ಅನ್ನು ಕನ್ನಡೀಕರಿಸಿದ್ದಾರೆ. ನಾಡಿಗರು 18 ಪುಸ್ತಕಗಳ ಲೇಖಕರು ಮತ್ತು 30 ಕೃತಿಗಳ ಅನುವಾದಕರು. ಜತೆಗೆ ನೂರಾರು ಲೇಖನಗಳನ್ನು ಪ್ರಕಟಿಸಿದ್ದಾರೆ.

ನಾಡಿಗರು ಸ್ಫೂರ್ತಿದಾಯಕ ಶಿಕ್ಷಕರಾಗಿದ್ದರು ಮತ್ತು ವಿದ್ಯಾರ್ಥಿಗಳಿಗೆ ಯಾವಾಗಲೂ ಬೆಂಬಲ ನೀಡಿದರು. ವಿದ್ಯಾರ್ಥಿ ದಿನಗಳಲ್ಲಿ ಅವರು ಅನುಭವಿಸಿದ ಸಮಸ್ಯೆಗಳನ್ನು ಮರೆಯಲಿಲ್ಲ. ಸದಾ ಖಾದಿಧಾರಿ ನಾಡಿಗರು ಸರಳ ಹಾಗೂ ವಿನಮ್ರತೆಗೆ ಸಾಕ್ಷಿಪ್ರಜ್ಞೆಯಂತಿದ್ದರು. ನಾಡಿಗರ ಮತ್ತೊಂದು ಗಮನಾರ್ಹ ಕೊಡುಗೆ ಕರ್ನಾಟಕ ಪತ್ರಿಕಾ ಅಕಾಡೆಮಿಯನ್ನು ಸ್ಥಾಪಿಸುವುದರಲ್ಲಿ ಅವರು ವಹಿಸಿದ ಮುತುವರ್ಜಿ. ಕೇರಳ ಪತ್ರಿಕಾ ಅಕಾಡೆಮಿ ನಂತರ ಇದು ದೇಶದ ಎರಡನೇ ಅಂತಹ ಸಂಸ್ಥೆಯಾಗಿತ್ತು. ಪತ್ರಕರ್ತರ ವೃತ್ತಿಪರ ಕೌಶಲವರ್ಧನೆ ಮತ್ತು ಉಪಯುಕ್ತ ಪ್ರಕಟಣೆಗಳನ್ನು ಹೊರತರುವುದು ಅಕಾಡೆಮಿಯ ಮುಖ್ಯ ಉದ್ದೇಶಗಳಾಗಿದ್ದವು. 1981ರಲ್ಲಿ ಅವರು ಕರ್ನಾಟಕ ಪತ್ರಿಕಾ ಅಕಾಡೆಮಿಯ ಮೊದಲ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಅನೇಕ ಕಾರಣಗಳಿಂದ ಅವರು ಸಕ್ರಿಯರಾಗಿ ಕಾರ್ಯನಿರ್ವಹಿಸಲಾಗಲಿಲ್ಲ.

1980ರಲ್ಲಿ ನಾಡಿಗರು ನಿವೃತ್ತಿಗೊಂಡರು. ಪತ್ರಿಕೋದ್ಯಮ ಶಿಕ್ಷಣದ ಪ್ರವರ್ತಕರಾಗಿ ಮತ್ತು ಪತ್ರಿಕೋದ್ಯಮದಲ್ಲಿ ಮೊದಲ ಸ್ನಾತಕೋತ್ತರ ವಿಭಾಗವನ್ನು ಸ್ಥಾಪಿಸಿದ ಅವರ ನಾಯಕತ್ವ, ಪತ್ರಿಕಾ ಅಕಾಡೆಮಿಯ ಸ್ಥಾಪನೆ ಮತ್ತು ದೇಶದಲ್ಲಿ ಪತ್ರಿಕೋದ್ಯಮ ಶಿಕ್ಷಣದ ಬೇರುಗಳು ಗಟ್ಟಿಗೊಳ್ಳಲು ಕಾರಣರಾದ ಅವರನ್ನು ಭಾರತೀಯ ಪತ್ರಿಕೋದ್ಯಮ ಶಿಕ್ಷಣದ ಪಿತಾಮಹ ಎಂದು ಬಣ್ಣಿಸಲಾಗುತ್ತದೆ. ಅವರು 1983ರಲ್ಲಿ ವಿಧಿವಶರಾದಾಗ ಪತ್ರಿಕೋದ್ಯಮ ಒಬ್ಬ ಮಹಾನ್ ಶಿಕ್ಷಕನನ್ನು ಕಳೆದುಕೊಂಡಿತು.

2021 – ನಾಡಿಗರ ಜನ್ಮ ಶತಮಾನೋತ್ಸವ ವರ್ಷ. ಇದೇ ವರ್ಷ ಮೈಸೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ಪತ್ರಿಕೋದ್ಯಮ ವಿಭಾಗದ ಸುವರ್ಣ ಮಹೋತ್ಸವ ವರ್ಷ ಕೂಡ. 1971ನೇ ಸಾಲಿನಲ್ಲಿ ಆರಂಭವಾದ ಈ ವಿಭಾಗ ನಾಡಿಗೆ ಸಾವಿರಕ್ಕೂ ಹೆಚ್ಚು ಪ್ರತಿಷ್ಠಿತ ಮಾಧ್ಯಮ ವೃತ್ತಿಪರರನ್ನು ನೀಡಿದ ಕೀರ್ತಿ ಹೊಂದಿದೆ. ಮೈಸೂರಿನ ಮಹಾರಾಜ ಕಾಲೇಜಿನ ಪತ್ರಿಕೋದ್ಯಮ ವಿಭಾಗಕ್ಕೆ 70 ವರ್ಷಗಳ ಸಂಭ್ರಮಾಚರಣೆ. ಇದೆಲ್ಲ ಒಂದು ಯೋಗಾಯೋಗವೇ ಸರಿ.

ಅಂಬೇಡ್ಕರ್ ಮಣ್ಣಿನಲ್ಲಿ ಹೊಸ ಬಿತ್ತ

ರಘುನಾಥ ಚ.ಹ.

ಚಿತ್ರದುರ್ಗ ಜಿಲ್ಲೆಯ ಆರನಕಟ್ಟೆ ಗ್ರಾಮದ ರಂಗನಾಥ್ ತಮ್ಮ ಹೆಸರಿನೊಂದಿಗೆ ಊರಿನ ಹೆಸರನ್ನಷ್ಟೇ ಕಸಿ ಮಾಡಿಕೊಂಡಿಲ್ಲ, ಊರುಕೇರಿಯ ಸಂಕಟಗಳನ್ನು ಕಾವ್ಯದ ಶ್ರುತಿಯನ್ನಾಗಿಸಿಕೊಂಡಿದ್ದಾರೆ. ಸಹಜವಾಗಿಯೇ ಅವರ ಕಾವ್ಯದ ಭೂಮಿಕೆಯಲ್ಲಿ ಅಂಬೇಡ್ಕರ್ ಪ್ರತಿಮೆ ಎದ್ದುಕಾಣಿಸುತ್ತದೆ. ಆದರೆ, ಈ ಅರಿವು ಆಕ್ರೋಶದಲ್ಲಿ ತೆಳುವಾಗದೆ ಅಥವಾ ಕಳೆದುಹೋಗದೆ ಜೀವನದ್ರವ್ಯವಾಗಿ ಒದಗಿಬಂದಿದೆ.

'ಅವ್ವನೆದೆಯ ಅಜ್ಜನ ಅರಿವು' ಕವಿತೆಯನ್ನು ರಂಗನಾಥರ ಕಾವ್ಯದ ಪ್ರಣಾಳಿಕೆಯಂತೆ ನೋಡಬಹುದು. ಒಲೆಯ ಉರಿಯ ಜೊತೆಗೆ ತಾನೂ ಉರಿದು ಹಸಿದ ಕರುಳುಗಳಿಗೆ ತಂಪಾಗುವ ಅವ್ವನ ಮೂಲಕ ಲೋಕವನ್ನು ಕಾಣುವ ದೃಷ್ಟಿ ಇಲ್ಲಿನದು. ಹೆಣ್ಣಿನ ಕಣ್ಣೋಟ ಹಾಗೂ ಮಾತೃ ಮಮತೆಯ ಮೂಲಕ ಲೋಕವನ್ನು ನೋಡುವ ಕ್ರಮ ಕವಿಗಷ್ಟೇ ಅಲ್ಲ, ವರ್ತಮಾನದ ಸಮಾಜಕ್ಕೂ ಅಗತ್ಯವಾದುದು. ಈ ಅವ್ವ ಅಂತಿಂಥವಳಲ್ಲ. ಸದಾ ಪುಸ್ತಕ ಹೊತ್ತಿರುವ ಅಂಬೇಡ್ಕರಜ್ಜನೊಂದಿಗೆ ಒಂದೊಂದೆ ಪದವ ಎದೆಗಿಟ್ಟವಳು. ಅಜ್ಜನಂತಾಗುವ ಹಂಬಲ ಮೂಡಿಸಿದವಳು.

ಕವಿತೆಯ ಅವ್ವ ಹೆಣ್ಣಿನ ಕಣ್ಣೋಟವಾದರೆ, ಅಜ್ಜ ದಲಿತರ ಪಾಲಿಗೆ ಎಲ್ಲವೂ ಆದ ಅಂಬೇಡ್ಕರ್. ಅರಿವಿನೊಂದಿಗೆ ಲೋಕಕಾರುಣ್ಯ ಮತ್ತು ಉಳಿವಿಗಾಗಿ ಅಗತ್ಯವಾದ ಕಾಠಿಣ್ಯದ ವಿಶಿಷ್ಟ ಸಮೀಕರಣವೊಂದನ್ನು ಈ ಕವಿತೆ ನಮಗೆ ಕಾಣಿಸುವಂತಿದೆ. ಅವ್ವನ ಬೆವರು ಪದಗಳ ನಾಡಿ ಹಿಡಿದು ಅನ್ನಕ್ಕಿಂತ ಅಕ್ಷರ ಲೇಸು ಎನ್ನುವುದನ್ನು ಮನಗಾಣಿಸುತ್ತದೆ. ಇಲ್ಲಿನ 'ಬೆವರು ಪದಗಳ' ಪ್ರಯೋಗ ಗಮನಿಸಿ. ರಾಣಿಯ ಚೆಲುವು ಹಾಗೂ ಶ್ರೀಗಂಧದ ಕಂಪಿನ ವಿಶೇಷಣವನ್ನು ಭಾಷಾ ಅಭಿಮಾನಕ್ಕೆ ಸಂಬಂಧಿಸಿದಂತೆ ಬಳಸುತ್ತೇವೆ. ರಂಗನಾಥ್ ನಮ್ಮ ಮುಂದಿರಿಸಿರುವುದು ಬೆವರಿನ ಸ್ಪರ್ಶದ ಪದಗಳನ್ನು. ಈ ಬೆವರು ಕವಿಯದೂ ಹೌದು, ಓದುವ ಸಹೃದಯರದೂ ಹೌದು ಎನ್ನುವುದಕ್ಕೆ ಸಂಕಲನದ ಬಹುತೇಕ ಕವಿತೆಗಳು ಉದಾಹರಣೆಯಾಗಿವೆ.



ಕಾರುಣ್ಯದ ಮೋಹಕ ನವಿಲುಗಳೆ
ಲೇ: ಆರನಕಟ್ಟೆ ರಂಗನಾಥ
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ.
ಫೋನ್: 88800 87235
ಪು: 98 ₹80

'ಅವ್ವನೆದೆಯ ಅಜ್ಜನ ಅರಿವು' ಕವಿತೆಯೊಂದಿಗೆ 'ಅಕ್ಷರಕ್ಕೆ ಅಂಜಬೇಡಿ' ಕವಿತೆಯನ್ನು ಒಟ್ಟಿಗಿಟ್ಟು ನೋಡಬೇಕು. 'ನಿಮ್ಮೆದೆಯ ಅಳತೆಯಲ್ಲೀಗ ಇಂಚುಗಳ ಲೆಕ್ಕ ಕ್ಲೀಷೆಯೆನಿಸಿ' ಎಂದು ವರ್ತಮಾನದ ರಾಜಕಾರಣದೊಂದಿಗೆ ನೇರ ಸಂವಾದಕ್ಕಿಳಿಯುವ ಕವಿತೆ, ಮಾತಿನ ಅರ್ಥಹೀನತೆಯನ್ನು ಹೇಳುತ್ತ, 'ಮಾತಿಗೆ ದಣಿವಾರಿಸಲು ಬಿಡಿ' ಎಂದು ಕೋರುತ್ತದೆ. 'ಮಾತು ಕಟ್ಟಿದ ಭಾರತ'ಕ್ಕೆ ಪರ್ಯಾಯವಾಗಿ ಕವಿತೆ ಸೂಚಿಸುವುದು ಬಾಬಾಸಾಹೇಬರ ಬಿತ್ತನೆಗಳನ್ನು. ಕುಲಾಂತರಿಗಳಲ್ಲದ ಈ ಬಿತ್ತನೆಗಳನ್ನು 'ಈ ನಾಡ ಮಣ್ಣಿನಲ್ಲಿ ಬಿತ್ತಲಾಗಿದೆ' ಎನ್ನುವ ಕವಿತೆ, ಇಂದಲ್ಲಾ ನಾಳೆ ಈ ನಾಡು ಅಂಬೇಡ್ಕರ್ ವಿಚಾರಗಳ ತಳಹದಿಯಲ್ಲಿ ತನ್ನನ್ನು ರೂಪಿಸಿಕೊಳ್ಳಲಿದೆ ಎನ್ನುವ ಜೀವಪರ ಕನಸಾಗಿದೆ.

'ಧರೆ ಧೂಪದ ಕುಂಡ' ಕವಿತೆ ಭೂಮಿ ಅಗ್ನಿಕುಂಡವಾಗಿರುವ ಪರಿಸರ ವೈಪರೀತ್ಯದ ಬಗ್ಗೆ ಮಾತನಾಡಿದರೂ, ಆ ಮಾತುಗಳು ವರ್ತಮಾನದ ಸಾಮಾಜಿಕ ಬಿಕ್ಕಟ್ಟುಗಳ ಕುರಿತ ಪ್ರತಿಕ್ರಿಯೆಯೂ ಆಗಿವೆ. ಧರೆಯಾಳದ ಜಲಮೂಲದ ಅಣುವಿಗೂ ಬಾಯಾರಿರುವ ಸಂದರ್ಭವನ್ನು ಚಿತ್ರಿಸುತ್ತ, ಈ ಪರಿಸ್ಥಿತಿಗೆ ಯಾರು ಕಾರಣರು ಎನ್ನುವ ಪ್ರಶ್ನೆಯನ್ನು ಕವಿತೆ ಎತ್ತುತ್ತದೆ. ಆದರೆ, ಪ್ರಶ್ನೆಗಳಿಗಿದು ಕಾಲವಲ್ಲವಷ್ಟೆ? 'ಹವಾನಿಯಂತ್ರಿತ ಕೊಠಡಿಗಳಲ್ಲಿ ಬೆವೆತವರ ಹೆಸರು ಕೂಗಿದರೆ ಕೂಗುಮಾರಿಯ ಪಟ್ಟ ತಪ್ಪದು' ಎನ್ನುವ ಮಾತು, ಈ ಹೊತ್ತಿನ ಪ್ರಭುತ್ವವನ್ನು ಪ್ರಶ್ನಿಸುವವರು ಅನುಭವಿಸುತ್ತಿರುವ ಆತಂಕವನ್ನು ಧ್ವನಿಸುತ್ತದೆ. ಅಳಬಹುದೆ ಅರೆಗಂಜಿಗೆ ಎನ್ನುವುದು ಕವಿಯ ಪ್ರಶ್ನೆ. 'ಅಳಕೂಡದು, ಆಳುವ ಮಂದಿಗೆ ಅಳುವೂ ಆನಂದ' ಎನ್ನುವುದು ಕವಿಯೇ ನೀಡುವ ಉತ್ತರ. ಜನಸಾಮಾನ್ಯರ ಸಂಕಟಗಳು ತೀವ್ರವಾದಾಗಲೆಲ್ಲ, ಕಾಮನಬಿಲ್ಲೊಂದನ್ನು ತೋರುವ ಪ್ರಭುತ್ವದ ಜಾಣತನವನ್ನು ಕವಿ, 'ಮುಗಿಲೆಲ್ಲ ಬರಡಾಗಿ ಹೊಗೆಯೆದ್ದು ಕುಣಿದಿರಲು / ಆಡಿಸಿ ನೋಡಲೆಂದು ಹಬ್ಬಗಳ ತಂದಾರು!' ಎಂದು ವ್ಯಂಗ್ಯವಾಡುತ್ತಾರೆ.

ವಿಮರ್ಶೆ

'ದಲಿತರಾಗುವುದೆಂದರೆ ಎಷ್ಟು ಸಡಗರ!' ರಾಜಕೀಯ ಪ್ರಜ್ಞೆಯ ಮತ್ತೊಂದು ಕವಿತೆ. ದಲಿತರೆಂದು ಗುರ್ತಿಸಿಕೊಂಡು ಸಡಗರಿಸುತ್ತಿರುವವರನ್ನು ಲೇವಡಿ ಮಾಡುವ ಕವಿತೆ, ದಲಿತಲೋಕದಲ್ಲಿ ದಲಿತರೇ ಇಲ್ಲವೆಂದು ಶಾಸನ ಹೊರಡಿಸುವವರನ್ನು ತರಾಟೆಗೆ ತೆಗೆದುಕೊಳ್ಳುತ್ತದೆ. ಅಂತರಂಗ ಬಹಿರಂಗ ಶುದ್ಧಿಗೆ ಒತ್ತಾಯಿಸುವ ಈ ಕವಿತೆ, 'ಕೇಡಿನ ಕಿನ್ನರಿ ನುಡಿಸುವ ಕೈಗಳಿಗು / ಆರ್ತನಾದಕ್ಕೆ ಮಿಡಿಯುವ ಹೃದಯವಿರಲೆಂದು' ಪ್ರಾರ್ಥಿಸುತ್ತದೆ.

'ಬೆವರಿನ ಗಂಜಿ' ವಿಷಾದದೊಳಗೆ ತೋಯ್ದು, ಓದುಗರನ್ನು ಆರ್ದ್ರವಾಗಿಸುವ ಕವಿತೆ. ರಂಗನಾಥರ ಕವಿತೆಗಳ ಭಾಷೆಯನ್ನು ತೋಯಿಸಿರುವ ಬೆವರು ಈ ಕವಿತೆಯಲ್ಲಿ ಬೇರೊಂದು ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ನೆಲಕ್ಕೆ ಬಿದ್ದ ಬೆವರು ಅನ್ನವಾಗುತ್ತದೆ. ಆದರೆ, ಇಲ್ಲಿನ ಬೆವರು ಗಂಜಿಯಾಗುವುದು ದೇಹವ್ಯಾಪಾರದಲ್ಲಿ. 'ಬೆವರ ಹಿಂಜಿಕೊಡುವ ತೊಗಲ ಮೆತ್ತೆಯ ಚೀಪುವ ಕಾರಿರುಳ ತೆವಲಿನಲ್ಲಿ' ಮೈಮನಗಳು ಮುರಿಯುತ್ತವೆ, ಕಣ್ಣೀರ ಕಥನ ಸವುಳುಮಣ್ಣಾಗುತ್ತದೆ. ಅಂಗೈಯ ರೇಖೆಯಲ್ಲಿ ಸವೆದ ಆರ್‌ಬಿಐನ ಮುದ್ರೆಯನ್ನು ಕಾಣಿಸುವ ಕವಿತೆ, 'ಈಗ ಬೆವರಿನ ಗಂಜಿಗೂ / ಜನನಾಂಗವೆ ಅನ್ನಾಂಗವಾದ ಪರಿ ಬಯಲೊಳಗೆ' ಎನ್ನುವ ಉದ್ಗಾರದೊಂದಿಗೆ ಕೊನೆಗೊಳ್ಳುತ್ತದೆ. ವಿವರಿಸಲಾಗದ, ವಿವರಣೆಗೆ ದಕ್ಕದ, ಇಲ್ಲಿನ ನೋವು ಸಹೃದಯನೊಳಗೆ ಬೆಳೆಯುತ್ತ ಹೋಗುವಂತಹದ್ದು.

'ಈ ಸುದ್ದಿ ಇಂದಿನ ವರದಿಯಾಗಿಯೇ ಉಳಿಯಬೇಕಾಗಿಲ್ಲ' ಕವಿತೆ ವರ್ತಮಾನದ ಅನೇಕ ದುರಂತಗಳನ್ನು ನೆನಪಿಸುತ್ತ, ಆ ಘಟನೆಗಳಿಗೆ ನಮ್ಮ ವೈಚಾರಿಕ ಜಗತ್ತು ಮಾತು ಕಳೆದುಕೊಂಡಿರುವ ವೈರುಧ್ಯವನ್ನು ಚಿತ್ರಿಸುತ್ತದೆ. 'ಕಾರುಣ್ಯದ ಮೋಹಕ ನವಿಲುಗಳೇ, ನಟನೆಯಲಿ ಪಳಗಿ ನಾಟ್ಯವ ಮರೆತಿರೇನು?' ಎನ್ನುವ ಪ್ರಶ್ನೆಯನ್ನು ಮುಂದಿಡುತ್ತದೆ.

ರಂಗನಾಥ್ ತಮ್ಮದೇ ಆದ ಕಾವ್ಯಭಾಷೆಯೊಂದನ್ನು ರೂಪಿಸಿಕೊಳ್ಳುವ ಹಾದಿಯಲ್ಲಿರುವ ಉತ್ಸಾಹಿ. ಆಶಯ ಮತ್ತು ಕವಿತೆ ಬೇರೆ ಬೇರೆಯಾಗಿ ಕಾಣದಂತೆ ಕಾವ್ಯಶಿಲ್ಪ ಕಟೆಯುವ ಹಂಬಲ ಮತ್ತು ಪ್ರಯತ್ನ ಎರಡನ್ನೂ ಅವರ ರಚನೆಗಳಲ್ಲಿ ಕಾಣಬಹುದು. ಅಂಬೇಡ್ಕರ್ ಒದಗಬೇಕಾದುದು ಸಾಹಿತ್ಯಕ್ಕಲ್ಲ, ಬದುಕಿಗೆ ಎನ್ನುವ ಅರಿವಿನೊಂದಿಗೆ ತಾಯಮಮತೆಯೂ ಕಾವ್ಯದ ದಾರಿಯಲ್ಲಿ ಅವರಿಗೆ ಊರುಗೋಲಾಗಿ ಒದಗಿದೆ. ಅವರ ಕವಿತೆಗಳುದ್ದಕ್ಕೂ ಪ್ರತಿಮೆಗಳು ಕಿಕ್ಕಿರಿದಿವೆ ಹಾಗೂ ಕಾವ್ಯ ಘೋಷಣೆಯಾಗದಂತೆ ಪೊರೆದಿವೆ. ಚೊಚ್ಚಿಲ ಸಂಕಲನದಲ್ಲೇ ಸಾಧಿಸಿರುವ ಈ ಕಸುಬುದಾರಿಕೆ ರಂಗನಾಥ್‌ರ ಕಾವ್ಯದ ನಾಳೆಗಳ ಬಗ್ಗೆ ಆಸೆ ಹುಟ್ಟಿಸುವಂತಹದ್ದು.

ಕಥೆ

ಜ್ಯೋತಿ
ಅವರು ಬರೆದ ಕಥೆ
ನನ್ನ ಪ್ರೀತಿಯ ಭೀಮ...
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕಲೆ: ಸುಜಾತಾ ಶೆಟ್ಟಿ

ನಿನ್ನ ಪ್ರೀತಿಯ ಮಗ ಸುತಸೋಮನನ್ನು ಕಳೆದುಕೊಂಡು ಬಹಳ ದುಃಖದಲ್ಲಿರುವೆಯೆಂದು ತಿಳಿಯಿತು. ಛೇ... ಹೀಗಾಗಬಾರದಿತ್ತು. ನಿನಗೆ ಮತ್ತು ಪಾಂಚಾಲಿಗೆ, ನನ್ನ ತೀವ್ರ ಸಂತಾಪಗಳು. ಬಹುಶಃ ಪುತ್ರಶೋಕ ನಿನಗೆ ಹೊಸ ಅನುಭವ. ಆದರೆ, ನನಗೆ ಅದರ ಅನುಭವ ಇನ್ನೂ ದುಃಸ್ವಪ್ನವಾಗಿ ಕಾಡುತ್ತಿದೆ. ನನ್ನ ಮುದ್ದು ಮಗನ ರಕ್ತದಲ್ಲಿ ತೋಯ್ದ ದೇಹದ ದೃಶ್ಯ ಇನ್ನೂ ಕಣ್ಣಲ್ಲಿ ಉಳಿದುಕೊಂಡಿದೆ.

ಅಂದು, ಯುದ್ಧದ ಮೂರನೇ ದಿನ ಸಂಜೆ. ಘಟೋತ್ಕಚನ ಹೆಣ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಅನಾಥವಾಗಿ ಬಿದ್ದಿದ್ದಾಗ, ಗಮನಿಸುವವರೂ ಇರಲಿಲ್ಲ. ತಮ್ಮ ಅರ್ಜುನನ ಪ್ರಾಣ ಉಳಿಯಿತು ಎನ್ನುವ ಸಮಾಧಾನವಷ್ಟೇ ನಿನಗೆ ಸಾಕಿತ್ತು. ಮಗನ ಕಳೇಬರಕ್ಕೆ ಗೌರವ ಸಲ್ಲಿಸಬೇಕೆನ್ನುವ ಸೌಜನ್ಯವೂ ಇರಲಿಲ್ಲ. ಅಭಿಮನ್ಯು ಸತ್ತಾಗ ಅವನಪ್ಪ ಅರ್ಜುನ ಆಕ್ರೋಶದಿಂದ ಸೇಡಿನ ಮಾತಾಡಿದ. ಸುಭದ್ರೆಯ ಬಿಗಿದಪ್ಪಿ ಸಂತೈಸಿದ. ಆದರೆ, ನನ್ನ ಮಗ ನಿಮಗಾಗಿ ಸತ್ತ. ನಿನ್ನ ತಮ್ಮನ ಜೀವ ಉಳಿಸಲು ಸತ್ತ. ನೀನು ಒಂದು ಹನಿ ಕಣ್ಣೀರೂ ಹಾಕಲಿಲ್ಲ. ಕುರು ವಂಶದ ಹಿರಿಮೊಮ್ಮಗ, ಯಾವುದೇ ರಾಜಮರ್ಯಾದೆ ಸಿಗದೇ, ಅನಾಥ ಹೆಣವಾದ...

ಕವಿತೆ

ವಸುಂಧರಾ ಕದಲೂರು
ಅವರು ಬರೆದ ಕವಿತೆ
ಕಾಡು
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಮಲೆನಾಡಿನ ಜಡಿಮಳೆಯೂ ಕೆಂಚಣ್ಣನ ಕಂಬಳಿಯೂ
(ಮಳೆಗಾಲದ ದೃಶ್ಯ ರೂಪಕಗಳು)
ನೋಡಿ: www.prajavani.net

ತಕ್ಕಡಿಗೆ ಅಳತೆಯ ಬಟ್ಟೇಕೆ?

8ನೇ ಪುಟದಿಂದ...

ಅಮರಾವತಿಯ ಇನ್ನೊಂದು ಚಿತ್ರದಲ್ಲಿ ಈಗ ನಾವು ಬಳಸುತ್ತಿರುವ ಎರಡು ತಟ್ಟೆಗಳ ತಕ್ಕಡಿ ಇದೆ. ದೊಡ್ಡದು - ತುಲಾಭಾರಕ್ಕೆ ಬಳಸುವಂತಹುದು. ಅದರ ಒಂದು ತಟ್ಟೆಯಲ್ಲಿ ರಾಜನೇ ಕಾಲಿಟ್ಟು ಹತ್ತುತ್ತಿರುವ ದೃಶ್ಯವಿದೆ.

ಒಂಟಿ ತಕ್ಕಡಿಯನ್ನು ಬಳಸುತ್ತಿದ್ದುದಾದರೂ ಹೇಗೆ? ನೀವೊಂದು ಆಟದ ಮೈದಾನಕ್ಕೆ ಹೋಗಿದ್ದೀರಿ ಎಂದುಕೊಳ್ಳಿ. ಅಲ್ಲಿ ಯಾರೂ ಇಲ್ಲ. ನಿಮ್ಮ ಜೊತೆಗೂ ಯಾರೂ ಇಲ್ಲ. ಏತ-ಏತ (ಸೀ-ಸಾ) ನೋಡಿ ನಿಮಗೆ ಆಡಬೇಕೆನ್ನಿಸುತ್ತದೆ. ಇದನ್ನು ಒಂಟಿಯಾಗಿ ಆಡುವುದು ಹೇಗೆ? ಪ್ರೌಢಶಾಲೆಯಲ್ಲಿ ಕಲಿತ ಭೌತವಿಜ್ಞಾನದ ಪಾಠಗಳನ್ನು ನೆನಪು ಮಾಡಿಕೊಳ್ಳಿ. ಒಂದು ಬದಿಗೆ ಕಲ್ಲು ಇಟ್ಟು ಇನ್ನೊಂದು ಕಡೆ ನೀವು ಕುಳಿತು ಆಡಲು ಪ್ರಯತ್ನಿಸಿ. ಕಲ್ಲನ್ನು ಹಿಂದೆ ಮುಂದೆ ಸರಿಸಿ ಒಂದೆರಡು ಬಾರಿ ಪ್ರಯತ್ನಿಸಿದ ಮೇಲೆ ಸಫಲರಾಗುತ್ತೀರಿ.

ಇದರ ತತ್ವವೇ ಒಂದು ತಟ್ಟೆಯ ತಕ್ಕಡಿಯಲ್ಲೂ ಬಳಕೆಯಾಗುತ್ತದೆ. ಒಂದೇ ಬಟ್ಟನ್ನು ಹಿಂದೆ ಮುಂದೆ ಸರಿಸಿ ಸಮತೋಲನ ಪಡೆಯಬಹುದು. ಈ ಬಗೆಯ ತಕ್ಕಡಿಯ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿವರಣೆ ಇದೆ. ಸಮಕರಣ ಎಂದಿದರ ಹೆಸರು. 72 ಅಂಗುಲ ಉದ್ದದ 35 ಪಲ (ತೂಕದ ಅಳತೆ) ತೂಗುವ ಲೋಹದ ಪಟ್ಟಿ. ಐದು ಪಲ ತೂಗುವ ಬಟ್ಟನ್ನು ಅಂಚಿನಲ್ಲಿರಿಸಿ ಸಮತೋಲನದ ಆಧಾರ ಬಿಂದುವನ್ನು ಗುರುತಿಸಿ ಅದನ್ನು ಸೊನ್ನೆ ಎಂದು ಪರಿಗಣಿಸಬೇಕು. ಆಮೇಲೆ ಬೇರೆ ಬೇರೆ ತೂಕಗಳಿಗೆ ಪಟ್ಟಿಯ ಮೇಲೆ ಗುರುತು ಮಾಡಿಕೊಳ್ಳಬೇಕು. ಇದರಿಂದ ನೂರು ಪಲಗಳವರೆಗೂ ಅಳತೆ ಮಾಡಬಹುದು. ಈ ಬಗೆಯ 25 ಗೆರೆಗಳಿರುತ್ತವೆ. ಇದರ ಸಂಪೂರ್ಣ ವಿವರಗಳು, ಅಂದರೆ ಅಳತೆಗಳ ಉಪವಿಭಾಗಗಳು, ಅವುಗಳನ್ನು ಸೂಚಿಸುವ ಬಗೆ, ಪ್ರತೀ ಐದು ಏಕಮಾನಕ್ಕೆ ಬಳಸಬೇಕಾದ ವಿಶೇಷ ಚಿಹ್ನೆ ಇವೆಲ್ಲವೂ ನಿಗದಿಯಾಗಿವೆ. ಇದಕ್ಕೆ 'ನಾಂದಿಪಿನಾದ್ಧ' ಮಾಡಬೇಕು ಎಂಬ ಸೂಚನೆ ಇದೆ. ನಾಂದಿಪಿನಾದ್ಧ ಎಂದರೆ ಏನು? ಅದರ ಬಗ್ಗೆ ಚಿಂತಿಸಿದವರು ಪಟ್ಟಿಯ ಮೇಲೆ ಗೆರೆಗಳನ್ನು ಮತ್ತು ಐದು ದಳದ ಹೂವಿನಾಕೃತಿಯ ಗುರುತನ್ನು ಮಾಡುವ ಪ್ರಕ್ರಿಯೆ ಎಂದು ಗುರುತಿಸಿದ್ದಾರೆ. ಅರ್ಥಶಾಸ್ತ್ರದಲ್ಲಿ ಈ ಪಟ್ಟಿಗಳ ತಯಾರಿಕೆಯ ಜೊತೆಗೇ ಗೆರೆಗಳನ್ನು ಗುರುತು ಮಾಡುವ ವಿಧಾನವನ್ನೂ ಕೊಡಲಾಗಿದೆ. ಶಾಸನಗಳಲ್ಲಿ ಕಂಡುಬರುವ ಅಳತೆಗೋಲುಗಳಲ್ಲಿ ಕೂಡ ವಿಶೇಷ ಗುರುತುಗಳಿರುತ್ತವೆ, ಅವುಗಳನ್ನು ಪುಷ್ಪಿಕಾ ಎಂದು ಗುರುತಿಸುತ್ತಾರೆ. ಇಲ್ಲಿ ನಾಂದಿ ಎಂಬ ಪದ ಐದು ದಳದ ನಂದಿ ಬಟ್ಟಲು ಹೂವಿನದು ಎಂಬುದು ಕೆಲವು ವಿದ್ವಾಂಸರ ತರ್ಕ. ಒಟ್ಟಿನಲ್ಲಿ ಈ ಬಗೆಯ ತಕ್ಕಡಿ ಬಹಳ ಜನಪ್ರಿಯವೇ ಆಗಿದ್ದಿರಬೇಕು.

ತುಲಾರಾಶಿ ಮತ್ತದರ ನಕ್ಷತ್ರಗಳ ನಕ್ಷೆ

ಇನ್ನೂ ದೊಡ್ಡ ಸಮಕರಣವೂ ಇದೆ. ಅದು 70 ಪಲ ತೂಗುವ ಲೋಹದ ಪಟ್ಟಿ. ಅದರಲ್ಲಿ 200 ಪಲಗಳವರೆಗೂ ಅಳತೆ ಮಾಡಬಹುದು. ಇದರಲ್ಲಿ ಬಳಸುವ ಅಳತೆಯ ಬಟ್ಟಿಗೆ ಮಂಡಲ ಎಂದು ಹೆಸರು. ಧರಣಗ ಎಂಬ ಹೆಸರೂ ಇದೆ. ಇದೇ ಬಗೆಯ ತಕ್ಕಡಿಗಳು ಮಲೇಷ್ಯಾ, ಮ್ಯಾನ್ಮಾರ್, ಥಾಯ್ಲೆಂಡ್‌ಗಳಲ್ಲಿಯೂ ಕಂಡುಬರುತ್ತವೆ.

ಇದನ್ನು ತಯಾರಿಸುವವನೂ, ಬಳಸುವವನೂ ಗಣಿತದಲ್ಲಿ ಗಟ್ಟಿಗನಾಗಿರಬೇಕಾದದ್ದು ಅನಿವಾರ್ಯ. ಆಗ ಗಣಿತದ ಸಾಮಾನ್ಯ ಜ್ಞಾನದಮಟ್ಟ ಸಾಕಷ್ಟು ಎತ್ತರದಲ್ಲಿತ್ತು ಎನ್ನಿಸುತ್ತದೆ. ಏಕೆಂದರೆ ಎಲ್ಲ ಬಾಯಿ ಲೆಕ್ಕಗಳು. ಯಾವ ದೇಶದ ತಕ್ಕಡಿಗಳಲ್ಲಿಯೂ ಅಕ್ಷರಗಳಾಗಲೀ ಅಂಕಿಗಳಾಗಲೀ ಕಂಡುಬರುವುದಿಲ್ಲ. ನಂದಿಬಟ್ಟಲಿನ ಆಕೃತಿ ಐದು ಭಾಗಗಳಿಗೊಂದು ಸೂಚಿಮಾತ್ರ. ದಿನಸಿ ಇತ್ಯಾದಿ ಮಾರುವವನು ಎರಡನೆಯ ಗೆರೆ ಮೂರನೆಯ ಗೆರೆಗೆ ಇಂತಿಷ್ಟು ಎಂದು ನೆನಪಿಟ್ಟುಕೊಂಡರೆ ಸಾಕು. ಕೊಳ್ಳುವವನು ಜಾಗೃತನಾಗಿರಬೇಕು. ಕೊಳ್ಳುವುದಾದರೂ ಎಂಥ ವಸ್ತುಗಳಿರಬಹುದು? ತರಕಾರಿ? ಒಂದು ಬದನೆಕಾಯಿ ಕಡಿಮೆಯಾದರೆ ಪರವಾಗಿಲ್ಲ, ಆದರೆ, ಚಿನ್ನ ಬೆಳ್ಳಿ, ಮುತ್ತು... ನಷ್ಟ ಮಾಡಿಕೊಳ್ಳಲುಂಟೇ?

ಅಳತೆಯ ಬಟ್ಟೇ ಇಲ್ಲದ ತಕ್ಕಡಿ?

ಈ ಬಗೆಯ ಒಂಟಿ ತಟ್ಟೆಯ ತಕ್ಕಡಿಗಳಲ್ಲಿ ಎರಡು ವಿಧ. ಒಂದರಲ್ಲಿ ಬಟ್ಟನ್ನು ಹಿಂದೆ ಮುಂದೆ ಸರಿಸಬಹುದು. ಇನ್ನೊಂದು ಬಗೆಯಲ್ಲಿ ಬಟ್ಟಿಗೆ ಆಸ್ಪದವೇ ಇಲ್ಲ. ಹಿಡಿಕೆಯನ್ನೇ ಹಿಂದೆ ಮುಂದೆ ಸರಿಸಬಹುದು. ಇಂತಹ ಏತ ಏತ ಆಟಗಳೂ ಇವೆ (ತಾರಾಲಯದ ವಿಜ್ಞಾನ ವನದಲ್ಲಿದೆ). ಇದು ಬಹಳ ಜನಪ್ರಿಯವಾಗಿತ್ತು ಎಂದು ತೋರುತ್ತದೆ. ಇದಕ್ಕೆ ಬಳಕೆಯಾಗುವ ಕೋಲಿನ ಆಕಾರವೂ ವಿಚಿತ್ರ. ಒಂದು ಕಡೆ ದಪ್ಪ; ಇನ್ನೊಂದು ಕಡೆ ಸಣ್ಣ (ಮೀನಖಂಡದ ಹಾಗೆ). ಅದರ ಒಂದು ತುದಿಗೆ ತಟ್ಟೆ ಕಟ್ಟಿ, ಸಮಕರಣದ ಹಿಡಿಕೆಯನ್ನು ಹಿಂದೆ ಮುಂದೆ ಸರಿಸಿ ಸಮತೋಲನ ಮಾಡಿಕೊಳ್ಳಬೇಕು. ಇದೇ ಆಧಾರಬಿಂದು. ಆಮೇಲೆ ತಟ್ಟೆಯ ಮೇಲೆ ಬೇರೆ ಬೇರೆ ಬಟ್ಟುಗಳನ್ನು ನೇತು ಹಾಕಿ ಹಿಡಿಕೆಯ ಹಗ್ಗವನ್ನು ಹಿಂದೆ ಮುಂದೆ ಸರಿಸಿ ಆಯಾ ತೂಕಕ್ಕೆ ಸರಿಯಾಗಿ ಸಮತೋಲನವಾಗುವಂತೆ ಗೆರೆಗಳನ್ನು ಕೋಲಿನ ಮೇಲೆ ಕಚ್ಚು ಮಾಡಿಕೊಳ್ಳಬೇಕು. ಹೀಗೆ 10, 15, 20 ಗೆರೆಗಳನ್ನು ಗುರುತುಮಾಡಿಕೊಳ್ಳಬೇಕು. ಈಗ ತಕ್ಕಡಿ ಬಳಕೆಗೆ ಸಿದ್ಧ. ಆದ್ದರಿಂದ ಮೀನಖಂಡ ಆಕಾರದ ಕೋಲಿನ ಮೇಲೆ ಗೆರೆಗಳನ್ನು ಕೊರೆದಿರುವುದು ಕಂಡುಬಂದರೆ ಅದು ಒಂಟಿ ತಕ್ಕಡಿಯ ಕೋಲು ಎಂದು ಗುರುತಿಸಬಹುದು. ಇವುಗಳನ್ನು ತರಕಾರಿ ಮುಂತಾದ ದಿನಬಳಕೆಯ ವಸ್ತುಗಳಿಗಾಗಿ ಬಳಸುತ್ತಿದ್ದರು. ಈಗಲೂ ಬಳಸುತ್ತಿದ್ದಾರೆ.

ಈಶಾನ್ಯ ಭಾರತದ ಹಳ್ಳಿಗಳಲ್ಲಿ ಮಾತ್ರವಲ್ಲ, ದಕ್ಷಿಣ ಭಾರತದ ಹಳ್ಳಿಯ ತರಕಾರಿ ವ್ಯಾಪಾರದ ದೃಶ್ಯಗಳಲ್ಲಿ ಕೂಡ ಈ ಎರಡೂ ಬಗೆಯ ತಕ್ಕಡಿಗಳು (ಬಟ್ಟು ಬೇಕಾದದ್ದು; ಬಟ್ಟು ಇಲ್ಲದ್ದು) ಯುಟ್ಯೂಬ್‌ಗಳಲ್ಲಿ ಕಂಡುಬರುತ್ತವೆ. ಸ್ಟೀಲ್ ಯಾರ್ಡ್ ಬ್ಯಾಲೆನ್ಸ್ ಎಂದು ಕೊಟ್ಟು ಗೂಗಲಿಸಿ. ಯಾವುದೇ ಲಿಪಿ, ಅಕ್ಷರಗಳಿಲ್ಲದೆ ತಯಾರಾದ ಈ ಎರಡೂ ತಕ್ಕಡಿಗಳು ಭಾಷಾತೀತವಾದವು. ಆದ್ದರಿಂದಲೇ ವಿದೇಶಗಳಲ್ಲಿಯೂ ವ್ಯಾಪಾರಿಗಳನ್ನು ಸುಲಭವಾಗಿ ಕೈವಶಮಾಡಿಕೊಂಡವು. ಜೊತೆಗೆ ಕೃತಿಸ್ವಾಮ್ಯವನ್ನೂ ಕಳೆದುಕೊಂಡವು. ಸುಮಾರು 500 ವರ್ಷಗಳ ಹಿಂದೆ ಯುರೋಪಿನ ತರಕಾರಿ ಮಾರುಕಟ್ಟೆಗಳಿಗೂ ಲಗ್ಗೆ ಇಟ್ಟು, ಅಲ್ಲಿಯ ಮ್ಯೂಸಿಯಂಗಳಲ್ಲಿ ಪ್ರತಿಷ್ಠಿತ ಸ್ಥಾನ ಗಿಟ್ಟಿಸಿಕೊಂಡವು. ಕೆಲವಕ್ಕೆ ಆಗಲೇ 'ಮೇಡ್ ಇನ್ ಚೀನಾ' ಠಸ್ಸೆಯೂ ಸಿಕ್ಕಿದೆ.

ಒಂದು ತಟ್ಟೆಯ ತಕ್ಕಡಿ ಅಕ್ಕಸಾಲಿಗರಲ್ಲಿ ಬಳಕೆಯಲ್ಲಿತ್ತು ಎಂದು ಕೆಲವು ಹಿರಿಯರು ಹೇಳುತ್ತಾರೆ. ಸುಮಾರು ನೂರು ವರ್ಷಗಳ ಹಿಂದೆಯೂ ಇವು ಬಳಕೆಯಲ್ಲಿದ್ದುವಂತೆ. ಕೊಳ್ಳಲು ಒಂದು ತಟ್ಟೆಯ ತಕ್ಕಡಿ, ಮಾರಲು ಎರಡು ತಟ್ಟೆಯ ತಕ್ಕಡಿ ಉಪಯೋಗಿಸುತ್ತಿದ್ದರಂತೆ. ಸ್ವಾತಂತ್ರ್ಯ ಪೂರ್ವದವರೆಗೂ ಬಳಕೆಯಲ್ಲಿದ್ದ ಸೇರು, ಪಾವು, ಮಣ, ವೀಸಾ, ನಾಕಾಣೆಗಳು ಗಾದೆಗಳಲ್ಲಿ ಮಾತ್ರ ಉಳಿದುಕೊಂಡ ಹಾಗೆ ಈ ತಕ್ಕಡಿಗಳು ಆಯುಧ ಪೂಜೆಗೆ ಮಾತ್ರ ಉಳಿದುಕೊಂಡಿರುವುದು ಸಾಧ್ಯ. ಅದೇನೇ ಇರಲಿ; ಆಕಾಶದಲ್ಲಿ ಇರುವುದು ಚುಕ್ಕೆಗಳು ಮಾತ್ರ. ನಿಮ್ಮಿಷ್ಟ ಬಂದ ಹೆಸರನ್ನು ಇಟ್ಟುಕೊಂಡು ಗುರುತುಮಾಡಿಕೊಳ್ಳಿ.

ವಿಶಾಲ ಹರವಿನ 'ಅಕ್ಷರ ದಾಹ'

ಡಾ.ಗೀತಾ ವಸಂತ ಅವರ 'ಅಕ್ಷರ ದಾಹ' ಎಂಬ ವಿಮರ್ಶಾ ಸಂಕಲನದಲ್ಲಿ ಒಟ್ಟು 16 ಲೇಖನಗಳಿವೆ. ಹಳೆಗನ್ನಡ, ಹೊಸಗನ್ನಡ ಸಾಹಿತ್ಯದ ಕೆಲವು ಕೃತಿಗಳನ್ನು ಇಲ್ಲಿ ಸಮೀಕ್ಷೆ ಮಾಡಲಾಗಿದೆ. ಜೊತೆಗೆ ಕರ್ನಾಟಕ 'ಅವಧೂತ ಪರಂಪರೆ', 'ಬುದ್ಧ: ನೈತಿಕ ವಿಕಾಸದ ಮಹಾ ಮಾರ್ಗ', 'ಕೈವಾರ ತಾತಯ್ಯ: ಆಧ್ಯಾತ್ಮಿಕ -ಸಾಂಸ್ಕೃತಿಕ ನೆಲೆ' ಎಂಬ ಗಮನ ಸೆಳೆಯುವ ಲೇಖನಗಳು ಇವೆ.

'ಹಳೆಗನ್ನಡ ಕಾವ್ಯದ ಮರುಸೃಷ್ಟಿಯ ಸವಾಲುಗಳು: ನಾಗಚಂದ್ರ' ಎಂಬ ಲೇಖನದಲ್ಲಿ ಜೈನಪುರಾಣಗಳ ಸ್ವರೂಪ, ವಿನ್ಯಾಸ, ರಾಮಾಯಣ ಪರಂಪರೆ, ಜೈನ ರಾಮಾಯಣ ಪರಂಪರೆ, ನಾಗಚಂದ್ರ ಉದಾತ್ತ ರಾವಣ ಎಂಬ ಉಪಶೀರ್ಷಿಕೆಗಳಡಿಯಲ್ಲಿ ಕೆಲವು ಮಾಹಿತಿ ಸ್ವರೂಪದ ಒಳನೋಟಗಳನ್ನು ಲೇಖಕಿ ಕೊಟ್ಟಿದ್ದಾರೆ. 'ಜನ್ನನ ಕಾವ್ಯ: ಚಿತ್ತವೃತ್ತಿಗಳ ನಿಬಿಡಲೋಕ' ಈ ಸಂಕಲನದ ಬಹುಮುಖ್ಯ ಲೇಖನವಾಗಿದ್ದು ಯಶೋಧರ ಚರಿತೆಯ ತಾತ್ವಿಕ ನೆಲೆಗಳ ಚರ್ಚೆ ಅಮೃತಮತಿಯ ಪಾತ್ರದ ಚೌಕಟ್ಟಿನಲ್ಲಿಯೇ ನಡೆಯುತ್ತದೆ. ಕುವೆಂಪು ಅವರಿಂದ ಮೊದಲುಗೊಂಡು ಜಿ. ರಾಜಶೇಖರ್, ಗಿರಡ್ಡಿ ಗೋವಿಂದರಾಜು ಒಳಗೊಂಡಂತೆ ಹಿರಿಯ ಕಿರಿಯ ವಿಮರ್ಶಕರು ಈ ಕೃತಿಯ ಕುರಿತು ಚರ್ಚಿಸಿದ್ದಾರೆ. ಅವುಗಳಲ್ಲಿರುವ ಚರ್ಚೆ, ವಾದಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಲೇಖನದ ಚರ್ಚೆಯನ್ನು ಮುಂದುವರಿಸಿದ್ದರೆ ಇನ್ನೂ ಹೆಚ್ಚಿನ ಒಳನೋಟಗಳನ್ನು ಕೊಡಲು ಸಾಧ್ಯವಾಗುತ್ತಿತ್ತು.

'ಕನ್ನಡ ಕೀರ್ತನಸಾಹಿತ್ಯ ಸಂಪಾದನೆಯ ತಾತ್ವಿಕತೆ', 'ಸತ್ಯವಂತರ ಸಂಗವಿರಲು' ಲೇಖನಗಳು ಕೀರ್ತನ ಸಾಹಿತ್ಯದ ಸಾಂಸ್ಕೃತಿಕ ಮಹತ್ವ, ತಾತ್ವಿಕ ಒಳನೋಟಗಳನ್ನು ವಿಶ್ಲೇಷಣೆಗೆ ಒಳಪಡಿಸಿರುವ ಕ್ರಮದಲ್ಲಿ ಯಶಸ್ವಿಯಾಗಿವೆ. 'ಗ್ರಾಮಾಯಣ ಕಾದಂಬರಿಯಲ್ಲಿ ಕುಟುಂಬ ಮತ್ತು ಮಹಿಳೆ', 'ಜ್ಯೋತಿ ಸ್ಪರ್ಶಿಸಿದ ಜ್ಯೋತಿ: ಕೆಳದಿ', 'ಹೋರಾಟದ ಮೌನ ಝರಿ: ಶಬರಿ', 'ಸಮಗಾರ ಭೀಮವ್ವ', 'ಮಹಿಳಾ ಸಾಹಿತ್ಯ: ಬಹುಮುಖಿ ನೆಲೆಗಳು' ಈ ಲೇಖನಗಳು ಸ್ತ್ರೀವಾದಿ ಅಧ್ಯಯನದ ನೆಲೆಗಳನ್ನೊಳಗೊಂಡಿವೆ.

ಅಕ್ಷರ ದಾಹ
ಲೇ: ಡಾ.ಗೀತಾ ವಸಂತ
ಪ್ರ: ಸ್ಟೂಡೆಂಟ್ ಬುಕ್ ಕಂಪನಿ, ತುಮಕೂರು
ಸಂ: 9449307011
ಪು: 156 ₹120

ಮೊದಲ ಓದು

'ಕನ್ನಡ ಕಾವ್ಯ ಪರಂಪರೆಯ ಆರಂಭವು ಜೈನ ಕವಿಗಳಿಂದ ಆಯಿತು' ಎನ್ನುತ್ತದೆ ಈ ಕೃತಿಯ ಮೊದಲ ಲೇಖನದ ಮೊದಲ ಸಾಲು. ಕೃತಿಕಾರರ ಧರ್ಮ, ಜಾತಿಯನ್ನು ಗುರುತಿಸಿ ಅಧ್ಯಯನ ಮಾಡಿರುವುದು ಕೃತಿಯ ಉದ್ದಕ್ಕೂ ಕಂಡುಬರುತ್ತದೆ. ಇಂದು ಈ ಬಗೆಯಲ್ಲಿಯೇ ಸಾಹಿತ್ಯ ಕೃತಿಗಳನ್ನು ಪರಿಶೀಲಿಸುವ ಕ್ರಮವೊಂದು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಕನ್ನಡ ಭಾಷೆಯಲ್ಲಿ ಬರೆಯುವ ಕೃತಿಕಾರ ಕನ್ನಡ ಲೇಖಕನಲ್ಲವೇ, ಕನ್ನಡ ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ ಅವನನ್ನು ಅಧ್ಯಯನ ಮಾಡಬೇಕಲ್ಲವೇ ಎಂಬ ಪ್ರಶ್ನೆ ಕಾಡುತ್ತದೆ.

ಡಿಎಚ್

ಸ್ವಾಭಿಮಾನದ ಸೇತು

ನಾ. ಕಾರಂತ ಪೆರಾಜೆ

ಹಳ್ಳಿಯ ಸ್ವಾಭಿಮಾನದ ಸೇತುವೆ ಈ 'ಗ್ರಾಮಸೇತು'! ಮನಸ್ಸುಗಳನ್ನು ಬೆಸೆದ ಸೇತು. ಸಮ್ಮನಸಿಗರನ್ನು ಒಂದು ಮಾಡಿದ ಸೇತು. ಊರವರ ಹದಿನೈದು ವರುಷಗಳ ಹರಕೆಯನ್ನು ಈಡೇರಿಸಿದ ಸೇತು. ಗ್ರಾಮದೊಳಗಿನ ಊರುಗಳು ಇನ್ನು ದ್ವೀಪವಾಗುವುದಿಲ್ಲ. ಮಳೆಗಾಲದಲ್ಲಿ ಮೌನಕ್ಕೆ ಜಾರುತ್ತಿದ್ದ ದಿನಮಾನಗಳು ಭೂತಕಾಲಕ್ಕೆ ಸೇರಿದುವು. ಮೊಗ್ರದಲ್ಲೀಗ ಮಂದಹಾಸದ ಮಂದಾನಿಲ.

ಅದು ಸುಳ್ಯ ತಾಲ್ಲೂಕಿನ (ದ.ಕ.) ಗುತ್ತಿಗಾರು ಗ್ರಾಮದ ಹಳ್ಳಿ 'ಮೊಗ್ರ'. ಸರ್ಕಾರಿ ಆಸ್ಪತ್ರೆ, ಶಾಲೆ, ಅಂಗನವಾಡಿ, ಭಜನಾ ಮಂದಿರ, ದೈವಸ್ಥಾನವಿರುವ ಊರು. ಇಲ್ಲಿನ ಶಾಲೆಯು ಮತದಾನದ ಕೇಂದ್ರ. ಸುತ್ತಲಿನ ಕಮಿಲ, ಏರಣಗುಡ್ಡೆ, ಮಲ್ಕಜೆ, ಬಳ್ಳಕ್ಕ ಊರುಗಳಿಂದ ಮೊಗ್ರ ಸೇರಲು ಬೇಸಿಗೆಯಲ್ಲಿ ಕಷ್ಟವಿಲ್ಲ. ಮಳೆಗಾಲದಲ್ಲಿ ಹಳ್ಳ ದಾಟುವುದು ತ್ರಾಸ. ಇಲ್ಲಿನದು ಸುಮಾರು ಸಾವಿರದ ಮುನ್ನೂರು ಜನಸಂಖ್ಯೆ.

ಹಳ್ಳದ ಸಣ್ಣ ಹರಿವು. ಚಿಣ್ಣರಿಗೆ ಖುಷಿ... ಆದರೆ, ಹಳ್ಳ ಉಕ್ಕಿ ಹರಿದಾಗ?

ಹೆಚ್ಚು ಮಳೆ ಬೀಳುವ ಪ್ರದೇಶವಾದ್ದರಿಂದ ಹಳ್ಳವು ತುಂಬಿ ಹರಿಯುತ್ತದೆ. ದಾಟಲು ಕಷ್ಟ. ವಾಹನ ಚಲಾಯಿಸಲು ಅಸಾಧ್ಯ. ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುವ ರೋಗಿಗಳು, ಶಾಲಾ ವಿದ್ಯಾರ್ಥಿಗಳು, ಶ್ರಮಿಕರ ಪಾಡು ವಿಷಾದದ ಗೂಡು. ಪ್ರತಿವರುಷವೂ ಪಂಚಾಯತ್ ನಿರ್ಮಿಸುವ ಅಡಿಕೆ ಮರದ ಸಂಕ ಯಾ ಪಾಲದಲ್ಲಿ ಉಸಿರು ಬಿಗಿ ಹಿಡಿದು ದಾಟಬೇಕಿತ್ತು. ದಾಟುವಾಗ ಸಮತೋಲನ ತಪ್ಪಿದರೆ ಕಣ್ಣೀರಿನ ದುರಂತ. ಬೆಳಿಗ್ಗೆ ಸಲೀಸಾಗಿ ದಾಟಲು ಮೊಣಕಾಲಿನ ತನಕ ನೀರಿದ್ದರೆ, ಬಳಿಕ ಮಳೆಬಂದು ನೀರು ಏರಿದಾಗ ಸಂಜೆ ಆಚೆ ದಡದವರು ಆಚೆ, ಈಚೆ ದಡದವರು ಈಚೆ! ತ್ರಿಶಂಕು ಸ್ಥಿತಿ.

ಶಾಶ್ವತವಾದ ಸೇತುವೆಯ ನಿರ್ಮಾಣಕ್ಕೆ ಊರವರು ಮನವಿಯ ಮೇಲೆ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತಾ ಬಂದರು. ಅದೂ ನಿರಂತರ ಹದಿನೈದು ವರುಷ. ಪ್ರಧಾನಿ ಕಾರ್ಯಾಲಯದವರೆಗೂ ಊರಿನ ಸಮಸ್ಯೆ ಚಿತ್ರಿತ ವಿಡಿಯೊ ತಲಪಿತು. ಅಲ್ಲಿಂದ ಸಂಬಂಧಪಟ್ಟ ಇಲಾಖೆಗೆ 'ಸಮಸ್ಯೆ ಪರಿಹರಿಸಲು' ಹಿಮ್ಮಾಹಿತಿ ಬಂದಿತ್ತು. ಎಷ್ಟು ವೇಗದಲ್ಲಿ ಹಿಮ್ಮಾಹಿತಿ ಬಂದಿತ್ತೋ ಅಷ್ಟೇ ವೇಗದಲ್ಲದು ಕಡತದೊಳಗೆ ಮಲಗಿತು! ಎಲ್ಲವೂ ಗೋರ್ಕಲ್ಲ ಮೇಲಿನ ನೀರಾದಾಗ ಮಳೆಗಾಲ ಬೆನ್ನಟ್ಟುತ್ತಾ ಬಂತು. ಈ ವರುಷವೂ ಅಡಿಕೆ ಮರದ ಸಂಕವೇ ಗತಿ!

'ಪಂಚಾಯತ್ ಯಾಕೆ, ಊರವರೇ ಸೇರಿ ತಾತ್ಕಾಲಿಕ ಕಬ್ಬಿಣದ ಸೇತುವೆ ಮಾಡಿದರೆ ಹೇಗೆ?', ಗ್ರಾಮದ ಮಧ್ಯೆಯೇ ಗ್ರಾಮಸ್ಥರಿಂದ ಕೇಳಿಬಂದ ದನಿ. ಹೇಳಿದಷ್ಟು ಸುಲಭವಾಗಿರಲಿಲ್ಲ. ಜವಾಬ್ದಾರಿ ಹೊರುವ ಹೆಗಲುಗಳು, ಲಕ್ಷ ಮೀರುವ ಆರ್ಥಿಕತೆ ಮತ್ತು ಎಲ್ಲವನ್ನೂ ಸಮಚಿತ್ತದಲ್ಲಿ ಗ್ರಹಿಸುವ ನಾಯಕತ್ವ ಬೇಕಾಗಿತ್ತು. ಮುಖ್ಯವಾಗಿ ಕೊರೊನಾ ಸಂಕಟಗಳಿಂದ ಮುದುಡಿದ್ದ ಹಳ್ಳಿ ಮನಸ್ಸುಗಳಿಗೆ ಚೇತನ ತುಂಬುವ ಕೆಲಸವೂ ಜತೆಜತೆಯಲ್ಲಿ ಆಗಬೇಕಿತ್ತು.

ಆಗಲೇ ನಾಲ್ವರು ಪಂಚಾಯತ್ ಸದಸ್ಯರನ್ನು ಹೊಂದಿದ್ದ 'ಗ್ರಾಮ ಭಾರತ' ಎನ್ನುವ ಪಕ್ಷೇತರ ತಂಡದ ರೂವಾರಿ ಮಹೇಶ್ ಪುಚ್ಚಪ್ಪಾಡಿಯವರ ಕಿವಿ ಅರಳಿತು. ಯುವ ತಂತ್ರಜ್ಞ ಪತಂಜಲಿ ಭಾರದ್ವಾಜ್ ಅವರೊಂದಿಗೆ ಮಾತುಕತೆ ನಡೆಯಿತು. ಇವರು ತೂಗುಸೇತುವೆಯ ಸರದಾರ ಗಿರೀಶ್ ಭಾರದ್ವಾಜರ ಚಿರಂಜೀವಿ. ಒಂದೂವರೆ ಲಕ್ಷ ರೂಪಾಯಿಯ ವೆಚ್ಚದ ಯೋಜನಾ ನೀಲನಕ್ಷೆ ಸಿದ್ಧವಾಯಿತು. ಇನ್ನು ಹಣ ಕ್ರೋಡೀಕರಣ. ಅಬ್ಬಬ್ಬಾ ಅಂದರೆ ಊರಿಂದ ಅರ್ಧಾಂಶದಷ್ಟು ಭರಿಸಬಹುದು. ಮಿಕ್ಕುಳಿದ ಮೊತ್ತ?

ಊರವರ ಆಶ್ವಾಸನೆಗಳು ಬಾಯ್ಮಾತಿನಲ್ಲಿ ನಿಲ್ಲಲಿಲ್ಲ. ನಿಧಾನಕ್ಕೆ ಬೊಗಸೆಗೆ ಹರಿದು ಬರಲು ಆರಂಭವಾಯಿತು. ಐನೂರು ರೂಪಾಯಿಯಿಂದ ಐದು, ಹತ್ತು ಸಾವಿರದ ತನಕ! ಗ್ರಾಮಾಭಿವೃದ್ಧಿಯ ಒಂದು ಎಸಳಾದ ಸೇತುವೆ ನಿರ್ಮಾಣದ ಆಶಯವನ್ನು ಫೇಸ್‌ಬುಕ್ಕಿನಲ್ಲಿ ಹರಿಯಬಿಟ್ಟ ಮಹೇಶ್ ಹೇಳುತ್ತಾರೆ, 'ಮಂಗಳೂರಿನ ಬ್ರಿವೆರಾ ಟೆಕ್ನಾಲಜೀಸ್ ಪ್ರೈವೇಟ್ ಲಿ., ಮಯೋರಾ ಐಟಿ ಸರ್ವಿಸ್ ಅಂಡ್ ಕನ್ಸಲ್ಟಿಂಗ್ ಪ್ರೈ ಲಿ., ರೈಟ್ ಟು ಲಿವ್, ಕೆನಡಾದಿಂದ ಸೂರಜ್ ಮುತ್ಲಾಜೆ, ಫಾ. ಆದರ್ಶ ಜೋಸೆಫ್, ಗುತ್ತಿಗಾರಿನ ಆಶಾಭಾರತಿ ಎಸೋಸಿಯೇಟ್ಸ್, ಸುಳ್ಯದ ಚಂದ್ರಶೇಖರ ದಾಮ್ಲೆ, ಮುಳಿಯ ಜ್ಯುವೆಲ್ಸ್, ಯಶ್ಚಿತ್ ಕಾಳಮ್ಮನೆ, ಎಚ್.ವಿ.ನೀಲಾವತಿ ಕತ್ಲಡ್ಕ, ಪುಚ್ಚಪ್ಪಾಡಿಯ ಹರಿಸುಬ್ರಹ್ಮಣ್ಯ ಪಿ.ವಿ., ರಘುರಾಮ ಎಂ. ಇವರೆಲ್ಲಾ ಸೇತುವೆಗೆ ಬೆನ್ನು ನೀಡಿದ ಮಹನೀಯರು. ಸಮಸ್ಯೆಯು ಹತ್ತಿಯಂತೆ ಹಗುರವಾಯಿತು.'

ತಂತ್ರಜ್ಞರಿಂದ ಜೂನ್ 5ಕ್ಕೆ ನೀಲನಕ್ಷೆ ಸಿದ್ಧವಾಗಿತ್ತು. ಜೂನ್ 12ಕ್ಕೆ ಶ್ರೀಕಾರ. ಜೂನ್ 24ಕ್ಕೆ ಸೇತುವೆ ಪೂರ್ಣ. 30ಕ್ಕೆ ಗೂಗಲ್‌ಮೀಟ್ ಮೂಲಕ ಶುಭಚಾಲನೆಗೊಂಡು ಸಾರ್ವಜನಿಕರ ಪ್ರಯಾಣಕ್ಕೆ ಮುಕ್ತ! ಒಂದೆರಡು ವಾಕ್ಯದಲ್ಲಿ ಹೇಳಿ ಮುಗಿಸುವ ಸೇತು ಬಂಧದ ಹಿಂದೆ ಹಣಕ್ಕಿಂತಲೂ ಶ್ರಮ, ಊರವರ ಪ್ರೀತಿ, ಯುವಕರ ಹುಮ್ಮಸ್ಸುಗಳ ಆಧಿಕ್ಯ ಕಣ್ಣಿಗೆ ಕಾಣಿಸದು. ಊರಿನ ಹಿರಿಯರು, ಕಿರಿಯರು, ಧಾರ್ಮಿಕ ಮುಖಂಡರು, ವಿದ್ಯಾರ್ಥಿಗಳು ಶ್ರಮದಾನಕ್ಕೆ ಟೊಂಕ ಕಟ್ಟಿದರು. 'ಇದು ನಮ್ಮ ಸೇತುವೆ' ಎನ್ನುವ ಆಭಿಮಾನದ ಹೊನಲು ಸಂಚಲನ ಮೂಡಿಸಿತು.

ಏನಿಲ್ಲವೆಂದರೂ ನೂರ ಅರುವತ್ತು ಮಾನವ ದಿವಸಗಳ ಶ್ರಮದ ದಾನವು ಸೇತುವೆಯ ಅಡಿಪಾಯದಲ್ಲಿದೆ. ಸಿಮೆಂಟಿನ ಕಾಂಕ್ರೀಟ್ ಕೆಲಸ, ಪಿಲ್ಲರಿನ ಅಡಿಪಾಯದ ರಚನೆ, ಸಂಪರ್ಕಿಸುವ ಸೇತುವೆ ನಿರ್ಮಾಣ, ತಂತ್ರಜ್ಞರೊಂದಿಗಿನ ಕೆಲಸಗಳು. ಆಯಾಯ ಕೆಲಸಗಳಲ್ಲಿ ಹಿಡಿತವಿರುವ ಜ್ಞಾನಿಗಳು ಮುಂದಾಳತ್ವ ವಹಿಸಿದ್ದರು. ಈ ಶ್ರಮ ಬೇಡುವ ಕೆಲಸಗಳೆಲ್ಲಾ ನಗದಾದರೆ ಲಕ್ಷ ರೂಪಾಯಿಗೂ ಮೀರಬಹುದು. ಸೇತುವೆಯ ಉದ್ದ 20 ಮೀಟರ್, ಅಗಲ 1.2 ಮೀಟರ್.

'ತಂತಮ್ಮ ಮಕ್ಕಳು ಹಳ್ಳ ದಾಟಿ ಆಚೆ ದಡ ಸೇರುವ ಮತ್ತು ಸಂಜೆ ಈಚೆ ತಲುಪುವಾಗಲೆಲ್ಲಾ ಹೆತ್ತವರ ಕಾವಲು ಬೇಕಾಗಿತ್ತು. ಬಹುತೇಕ ಮಂದಿ ಕೂಲಿ ಕೆಲಸವನ್ನು ಅವಲಂಬಿಸಿರುವುದರಿಂದ ಮಗುವಿನ ತಂದೆ ಅಥವಾ ತಾಯಿ ಕೂಲಿ ಕೆಲಸಕ್ಕೆ ರಜೆ ಮಾಡಬೇಕಾಗುತ್ತಿತ್ತು. ಇದರಿಂದಾಗಿ ಗಳಿಕೆಯಲ್ಲಿ ನಷ್ಟವಾಗುತ್ತಿತ್ತು. ಇನ್ನು ದ್ವಿಚಕ್ರಿಗಳ ಪಾಡು. ಹಳ್ಳವನ್ನು ದಾಟುವಾಗ ಸ್ಕೂಟರ್, ಬೈಕ್ ಆಫ್ ಆಗುವುದು; ಅದರ ಬಿಡಿ ಭಾಗಗಳು ಹಾಳಾಗುವುದು ಮಾಮೂಲಿ. ಒಂದು ಮಳೆ ಋತುವಿನಲ್ಲಿ ಕನಿಷ್ಠ ನಾಲ್ಕೈದು ಸಾವಿರ ರೂಪಾಯಿ ದುರಸ್ತಿಗಾಗಿ ವ್ಯಯವಾಗುತ್ತಿತ್ತು. ಇನ್ನು ಆ ಭಯವಿಲ್ಲ' ಎನ್ನುವ ಖುಷಿಯನ್ನು ಹಂಚಿಕೊಂಡರು ಸ್ಥಳೀಯ ಬಾಬು ಕಮಿಲ.

'ಸೇತುವೆಗೆ ಕಬ್ಬಿಣದ ಚೌಕಟ್ಟುಗಳನ್ನು ಮಾತ್ರ ಬಳಸುವುದು ಆರಂಭದ ಯೋಜನೆಯಾಗಿತ್ತು. ಮಿಕ್ಕುಳಿದಂತೆ ಅಡಿಕೆ ಮರದ ಸಲಕೆಗಳ ಹಾಸು. ಹಣಕಾಸು ಹಗುರವಾದಾಗ ಸಲಕೆಯನ್ನು ಕೈಬಿಟ್ಟು ವಾಟರ್‌ಪ್ರೂಫ್ ಶೀಟನ್ನು ಹಾಸಿದೆವು. ಇದರಲ್ಲಿ ಪಾದಚಾರಿಗಳಲ್ಲದೆ, ದ್ವಿಚಕ್ರ ವಾಹನವನ್ನೂ ಚಲಾಯಿಸಬಹುದು', ಸೇತುವಿನ ಕ್ಷಮತೆಯನ್ನು ಮಹೇಶ್ ಹೇಳುತ್ತಾ, 'ಹಳ್ಳಿಯ ಅಭಿವೃದ್ಧಿಯು ಹಳ್ಳಿಯಿಂದಲೇ ಸಾಧ್ಯ ಎಂಬುದು ಮನದಟ್ಟಾಗಿದೆ. ಮುಖ್ಯವಾಗಿ ಊರಿನ ಯುವಕರ ಇಚ್ಛಾಶಕ್ತಿಯನ್ನು ನೋಡಿ ದಂಗಾದೆ' ಎಂದು ಯುವ ಮನಸ್ಸುಗಳನ್ನು ಶ್ಲಾಘಿಸುತ್ತಾರೆ.

ಸಂಗ್ರಹವಾದ ಪ್ರತೀ ಪೈಸೆಗೂ ಲೆಕ್ಕವಿದೆ. ಯಾರೆಲ್ಲಾ ಹಣ ನೀಡಿದ್ದಾರೆಂದು ಸೇತುವೆ ಪಕ್ಕದಲ್ಲಿ ಫ್ಲೆಕ್ಸಿನಲ್ಲಿ ಹಾಕಿದ್ದಾರೆ. ಅದನ್ನು ಜಾಲತಾಣದಲ್ಲೂ ಮಹೇಶ್ ಅಂಟಿಸಲಿದ್ದಾರೆ. ಇಲ್ಲಿನ ಪ್ರೇರಣೆಯಿಂದ ಸನಿಹದ ಕಿನ್ನಿಕುಮೇರಿ ಹಳ್ಳಕ್ಕೂ ಸೇತುಭಾಗ್ಯ ಬರಲಿದೆ. ಜನರ ಚಿತ್ತವೀಗ ಮೊಗ್ರದತ್ತ. ಸೇತುವೆ ಕೆಲಸಗಳು ಪೂರ್ತಿಯಾಗಿ ಎಲ್ಲರೂ ಸಂತಸದಲ್ಲಿರುವಾಗ ತಂತ್ರಜ್ಞ ಪತಂಜಲಿ ಭಾರದ್ವಾಜ್ ಕಿವಿಮಾತು ಹೇಳಿದರು. 'ಈ ಸೇತುವೆ ನಿಮ್ಮದೇ. ಅರೆ ಶಾಶ್ವತ ಸೇತುವಾದ್ದರಿಂದ ಕ್ಷಮತೆಗೂ ಮಿತಿಯಿದೆ. ಹಾಗಾಗಿ ಏಕಕಾಲಕ್ಕೆ ಹಿಂದೆ-ಮುಂದೆ ಚದುರಿದಂತೆ ನಾಲ್ಕೈದು ಮಂದಿ ದಾಟಬಹುದು. ದ್ವಿಚಕ್ರದಲ್ಲಾದರೆ ಡಬ್ಬಲ್‌ರೈಡ್ ಬೇಡ. ಈ ಎಚ್ಚರವು ಎಲ್ಲರಲ್ಲೂ ಇದ್ದರೆ ನಿರ್ವಹಣೆ ಬೇಕಾಗದು.' ಕಣ್ಣಿಗೆ ಕಾಣದ 'ಹಳ್ಳಿ ರಾಜಕೀಯ'ಗಳನ್ನು ಎದುರಿಸುವುದು ಸವಾಲಿನ ಕೆಲಸ. ಇವೆಲ್ಲವನ್ನೂ ಮೀರಿ ನಿಂತ ಮಹೇಶ್ ನೇತೃತ್ವದ ತಂಡವು ಹಳ್ಳಿಗರ ಮೊಗದಲ್ಲಿ ಮುಗುಳ್ನಗೆಯನ್ನು ತಂದಿರುವುದು ನಿಜಾರ್ಥದ ಗ್ರಾಮಾಭಿವೃದ್ಧಿ. ನಿರ್ಮಾಣವಾದ ಸೇತುವೆ ಚಿಕ್ಕದಾಗಿರಬಹುದು. ಅದು ಕಟ್ಟಿಕೊಟ್ಟ ಸ್ವಾಭಿಮಾನ ಮಾತ್ರ ದೊಡ್ಡದು.

(ಲೇಖನದ ವಿಸ್ತೃತ ರೂಪಕ್ಕೆ ನೋಡಿ: www.prajavani.net)

ವಾಹ್... ಕಾಫಿ!

8ನೇ ಪುಟದಿಂದ

'ಬನ್ನಿ ನಮ್ಮನೆಗೆ, ಒಂದು ಕಪ್ ಕಾಫಿ ಕುಡಿಯುತ್ತ ಮಾತಾಡೋಣ' ಅಥವಾ ಮನೆಯ ಎದುರಿಗೆ ಸಿಕ್ಕವರಿಗೆ 'ಬನ್ನಿ ಒಳಗೆ ಕಾಫಿ ಕುಡಿದು ಹೋಗುವಿರಂತೆ' ಎಂಬ ಮಾತುಗಳು ಸರ್ವೇಸಾಮಾನ್ಯ. ಒಂದೊಂದು ಹನಿ ಕಾಫಿ ಗಂಟಲೊಳಗೆ ಇಳಿಯುತ್ತಿದ್ದಂತೆ ಒಳಗಿನ ಬೆಚ್ಚನೆಯ ಭಾವಗಳು ಒಂದೊಂದಾಗಿ ಹೊರಬರತೊಡಗುತ್ತವೆ. ಭಾವನೆಗಳನ್ನು ಹೊರಹಾಕಲು, ಸಂಬಂಧ ಬೆಸೆಯಲು ಕಾಫಿ ಒಂದು ನೆಪವಷ್ಟೆ. ನೇರವಾಗಿ ಹೇಳಲಾಗದ ಯುವಮನಸ್ಸುಗಳ ಪಿಸುಗುಡುವ ಹೃದಯದ ಮಾತನ್ನು ಗುಟುಕರಿಸುವ ಕಾಫಿ ಕೆಲವೊಮ್ಮೆ ಬಸಿಯುತ್ತದೆ.

'ನಲ್ಲೆ ತೋಳಿನಲಿ ನೀನು/ ಹಿಡಿಯಲ್ಲಿ ಬಿಸಿ ಕಾಫಿ ಕಪ್ಪು/ ಸ್ವರ್ಗಕ್ಕೆ ಒಂದೇ ಗೇಣು'

ಹೀಗೆ ಚುಟುಕು ಬರೆಯುತ್ತ, ಕಾಫಿ ಹೀರುತ್ತಲೇ, ಅಸಿಡಿಟಿ ಜಾಸ್ತಿ ಆದಾಗ 'ಇನ್ನುಮುಂದೆ ಹೆಚ್ಚು ಕಾಫಿ ಕುಡಿಯಬಾರದು' ಎಂದು ಶಪಥ ಮಾಡಿಕೊಂಡಿರುತ್ತೇನೆ. ಪ್ರಿಯತಮೆಯ ಮೇಲೆ ಮುನಿಸಿಕೊಂಡ ಪ್ರಿಯಕರ ಆಕೆಯ ಆರ್ದ್ರಭಾವ ಮತ್ತು ನಗುಮುಖ ನೋಡಿದಾಗ ಹೇಗೆ ಮುನಿಸು ಮರೆತು ರಮಿಸುತ್ತಾನೋ ಹಾಗೇ ಕಾಫಿಯನ್ನು ನೋಡಿದಾಗ ಶಪಥವೆಲ್ಲ ಮರೆತು, ಅರಣ್ಯಕಾಂಡ ಮುಗಿದು ಸುಂದರಕಾಂಡ ಆರಂಭವಾಗುತ್ತದೆ. ಮುಗಿಲ ತುಂಬ ಮೇಘರಾಜ ಗರಿಗೆದರುತ್ತ ಇನ್ನೇನು ಧರೆಯನಪ್ಪುವ ಸೂಚನೆಯೆಂಬಂತೆ ತುಂತುರು ಮಳೆ ಬೀಳುವುದೂ ಫಿಲ್ಟರ್‌ನಿಂದ ಒಂದೊಂದೇ ಹನಿ ಡಿಕಾಕ್ಷನ್ ಬೀಳುವುದೂ ನನಗೆ ಒಂದೇ ಬಗೆಯ ಹರ್ಷ ತರುತ್ತವೆ. ಕಾಫಿ ಒಂದು ಕಾಂತಾ ಸಂಹಿತೆಯಂತೆ. ಕಾಫಿ ಕೊಟ್ಟು ಮಧುರವಾಗಿ ಹೇಳುವುದು, ಕಾಫಿ ಹೀರುತ್ತಾ ನಿಧಾನವಾಗಿ ಕೇಳುವುದು. ಒಂದು ಲೆಸ್ಸು, ಒಂದು ಪ್ಲಸ್ಸು... ಎನ್ನುವ ಶಬ್ದಗಳಿಗೂ ಏನೋ ಒಂದು ಮಧುರತೆ ಇದೆ. ಕಾಫಿ ಶಾಪ್‌ಗಳು ಕಾಫಿ ಕೊಡುವ, ಕುಡಿಯುವ ಜಾಗಗಳಷ್ಟೇ ಆಗಿ ಉಳಿದಿಲ್ಲ. ತನ್ನತನವ ವಿಸ್ತರಿಸಿ ವ್ಯಾಪಾರ ವಹಿವಾಟಿನ ಒಪ್ಪಂದದ ಸ್ಥಳಗಳಾಗಿ, ಪ್ರೇಮಿಗಳ ಸರಸದ ತಾಣಗಳಾಗಿ, ಪುರುಸೊತ್ತಿರುವವರ ಹರಟೆಕಟ್ಟೆಯಾಗಿ, ಕಷ್ಟ ಸುಖಗಳ ಹಂಚಿಕೆಯ ತಾವುಗಳಾಗಿವೆ. 'A lot can happen over coffee'!

ಎಂಡ್ಕುಡುಕರ ಬಗ್ಗೆ ನನಗೆ ಸಹಾನುಭೂತಿ ಇದೆ. ಯಾಕಂದ್ರೆ ನನಗೆ ಕಾಫಿಯನ್ನೇ ಬಿಡಲಾಗುತ್ತಿಲ್ಲ. ಅಂಥಾದ್ರಲ್ಲಿ... ಅದ್ಸರಿ ನಾ ಕಾಫಿಯನ್ನು ಯಾಕೆ ಬಿಡಬೇಕಾಗಿ ಬರುತ್ತೆ ಹೇಳಿ? ಕಾರಣ ಇದೆ. ಅದು ಚಾತುರ್ಮಾಸದಲ್ಲಿ. ಚಾತುರ್ಮಾಸದಲ್ಲಿ ನಾಲ್ಕು ಭಾಗ. ಅದರಲ್ಲಿ ಕ್ಷೀರವ್ರತ ಎನ್ನುವ ತಿಂಗಳು ನನಗೆ ನಿಜಕ್ಕೂ ವನವಾಸ. ಕಾಫಿ/ಟೀ ಕುಡಿಯುವಂತಿಲ್ಲ. ಊಟವನ್ನಾದರೂ ಬಿಡಬಹುದು. ಹಾಲು/ಕಾಫಿಯನ್ನು ಬಿಟ್ಟಿರುವುದು ಹೇಗೆ? ವಿರಹ ವೇದನೆಯೆನ್ನುವುದು ಬಹು ಚೆನ್ನಾಗಿ ಅರ್ಥವಾಗುವುದು ಕ್ಷೀರವ್ರತದಲ್ಲಿಯೇ. ಕಾಫಿ ಲೋಟ, ಆ ನೊರೆ ಹಾಲಿಲ್ಲದೆ ಮಂಕಾಗುತ್ತದೆ. ನನ್ನ ಹಳೆಯ ಶಾಖೆಯಲ್ಲಿ ಕಾಫಿ ಟೀಂ ಒಂದಿತ್ತು. ಸುಚೇತಾ, ಚೆಲುವರಾಜು, ಮಂಜುಳಾ ಮತ್ತು ನಾನು ಹುಚ್ಚಿಗೆ ಬಿದ್ದವರಂತೆ ಕಾಫಿ ತರಿಸುವುದು, ಕುಡಿಯುವುದು... ಕಾಫಿ ಪಾರ್ಲರ್ ಹುಡುಗರೇ ಇಡೀ ಸಿಬ್ಬಂದಿಗೆ ಕಾಫಿ ತಂದು ಕೊಡುತ್ತಿದ್ದರು. ನಮಗೆ ಬೇಕೆನಿಸಿದಾಗ ಎಕ್ಸ್‌ಟ್ರಾ ತರಿಸುವುದು. ನಮ್ಮ ಕಾಫಿ ಹುಚ್ಚು ಅದೆಷ್ಟರಮಟ್ಟಿಗೆ ಫೇಮಸ್ ಆಗಿತ್ತೆಂದರೆ, ಬ್ಯಾಂಕಿನ ಕೆಲಸಕ್ಕೆಂದು 'ಶಿವಮ್ಮಾ' ಅಂತ ನಮ್ಮ ಸಬ್‌ಸ್ಟಾಫ್‌ನ ಕರೆದರೂ ಆಕೆ 'ಕಲೆ ಬಂತಾ' ಅನ್ನುತ್ತಿದ್ದರು. ಮೊದಮೊದಲು ಆ ಪದದ ಅರ್ಥ ಆಗಿರಲಿಲ್ಲ. ಆಮೇಲೆಂದೋ ತಿಳಿಯಿತು ಕಲೆ ಎಂದರೆ ಹುಚ್ಚು ಎಂದು!

ಹುಚ್ಚು ಎಂದಾಕ್ಷಣ ನೆನಪಿಗೆ ಬಂತು. ಕೆಲವು ಹೆಂಗಸರಿಗೆ ಅಡುಗೆಮನೆಯಲ್ಲಿ ಎಣ್ಣೆಯಲ್ಲಿ ಸಾಸಿವೆ ಚಟಪಟ ಸಿಡಿಯುವಾಗ ಸಂಗೀತದ ಸ್ವರಗಳನ್ನು ಆಲಿಸಿದಷ್ಟು ಆನಂದ ಲಭಿಸುತ್ತದೆಯಂತೆ. ನನಗೇನೋ ಡಿಕಾಕ್ಷನ್ನು ಫಿಲ್ಟರಿನಿಂದ ಇಳಿಯುವಾಗ ಮಾಡುವ ಪಟ್-ಟಪ್ ಸದ್ದು, ಕಾಫಿ ಬೆರೆಸಲು ಒಂದು ಲೋಟದಿಂದ ಇನ್ನೊಂದು ಲೋಟಕ್ಕೆ ಅಳೆದು ಸುರಿದು ಮಾಡುವಾಗ ಸ್ಫುರಿಸುವ ಶಬ್ದ, ಸೊರ್ರ್ ಎಂದು ಕಾಫಿ ಹೀರುವಾಗಿನ ತನ್ಮಯತೆಯ ಸ್ವರ ಎಲ್ಲವೂ ಸಂಗೀತದ ವಿವಿಧ ಮಜಲುಗಳಂತೆ ಮೈಮರೆಸುತ್ತವೆ.

ನನಗೆ ಕಾಫಿ ಎಂದರೆ ಇಷ್ಟ ಎಂದು ತಿಳಿದ ಅನೇಕರು ಅವರ ಮನೆಗೆ ಹೋದಾಗ ಕಾಫಿ ಕುಡಿಯಲು ಬಲವಂತ ಮಾಡುವುದೂ ಇದೆ. ಕೆಲವರ ಮನೆಯ ಕಾಫಿ ಆತಿಥ್ಯವನ್ನು ನಿಮಗೆ ನಾ ಹೇಳಲೇಬೇಕು. ನನ್ನೆದುರಿಗೇ ಹಾಲಿನ ಪ್ಯಾಕೆಟ್ ಓಪನ್ ಮಾಡಿ, ಅದಕ್ಕೆ ಒಂದು ಲೋಟ ನೀರು ಹಾಕಿ ಒಲೆಯ ಮೇಲಿಟ್ಟು, ಆ ಕುದಿವ ಹಾಲಿಗೇ ಕಾಫಿಪುಡಿ ಹಾಕಿ ಸಕ್ಕರೆಯನ್ನೂ ಸುರಿದು, ಟೀ ಸೋಸುವ ಸಾಧನದಲ್ಲಿ ಸೋಸಿ ದೊಡ್ಡ ಲೋಟದ ತುಂಬ ತಂದು ಕೊಡುತ್ತಾರೆ. ದೇವದೇವನೇ ನನ್ನ ಕಾಪಾಡಬೇಕು. ಈಚೆಗೆ ನಾನೂ ಬುದ್ಧಿವಂತಳಾಗುತ್ತಿದ್ದೇನೆ. ಹಾಗೆ ಮಾಡುವವರ ಮನೆಯಲ್ಲಿ ಏನೋ ಒಂದು ಸಬೂಬು ಹೇಳಿ ಕಾಫಿಯನ್ನು ತಪ್ಪಿಸಿಕೊಳ್ಳುವುದು, ಸಜೆಯನ್ನು ತಪ್ಪಿಸಿಕೊಂಡಂತೆಯೇ.

ನಮ್ಮಂಥ ಕಾಫಿಪ್ರಿಯರು ಕಾಫಿ ಚಟದ ಪರ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳಲು ಒಂದು ಸದವಕಾಶ ಸಿಕ್ಕೇಬಿಟ್ಟಿತು. ಅದೇ ಕಾಫಿ ಆರಾಮಕ್ಕಾಗಿ ಮಾತ್ರವಲ್ಲ ಆರೋಗ್ಯಕ್ಕಾಗಿ ಕೂಡ ಎಂಬ ಡಾ. ಲೀ ವೆನ್ಲಿಯಾಂಗ್ ಎಂಬ ವಿಜ್ಞಾನಿಯ ಸಂಶೋಧನೆ. ಕೊರೊನಾ ವೈರಸ್ ವಿರುದ್ಧ ಮನುಷ್ಯನಲ್ಲಿ ಪ್ರತಿರಕ್ಷಣಾ ಶಕ್ತಿಯನ್ನು ಉತ್ತೇಜಿಸುವ ಗುಣವನ್ನು ಕಾಫಿ ಹೊಂದಿದೆ ಎಂಬುದನ್ನು ಓದಿ, ಆಹಾ ಸಂದೇಶವೇ... ಕಾಫಿಗೆ ಜೈ ಎಂದೆ. ದೇವಸ್ಥಾನಗಳು ಅಧ್ಯಾತ್ಮದ ಮೊದಲ ಮೆಟ್ಟಿಲುಗಳು. ಹಾಗೆಯೇ ಕಾಫಿಯು ಉಪಚಾರದ ಮೊದಲ ಮೆಟ್ಟಿಲು. ಕಾಫಿ ಧ್ಯಾನವೂ ಭಗವಂತನನ್ನೇ ತಲುಪುತ್ತದೆ ಎಂದು ನಾ ವಾದಿಸಿದರೆ ಕಾಫಿ ಕುಡಿಯದವರು ನನ್ನನ್ನು ಥಳಿಸದಿದ್ದಾರೆಯೇ? ಕಾಫಿ ದೇವನೆ ದೇಹಪಾಲನೆ ತೇ ನಮೋಸ್ತು ನಮೋಸ್ತುತೇ...

ಓದಿ ತಲೆನೋವು ಬಂತೇ? ಬನ್ನಿ ಡೋಸ್ ಕಾಫಿ ಕುಡಿಯೋಣ... ಎಲ್ಲ ಸರಿಯಾಗುತ್ತೆ!

(ಲೇಖನದ ವಿಸ್ತೃತ ರೂಪಕ್ಕೆ ನೋಡಿ: www.prajavani.net)

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ದಶ್ಯ ಚಿಕ್ಕು ಕೇಶ್ರಸ್ಸು ಕಥೆಯ — ಸರಗೋಲು ಆಟ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಗ್ರಾಮೀಣ ಆಟ 'ಸರಗೋಲು'. ಈ ಆಟದಲ್ಲಿ ಪಾಲ್ಗೊಳ್ಳುವ ಪ್ರತೀ ಆಟಗಾರನಿಗೂ ಮಾರುದ್ದದ ಒಂದು ಕೋಲಿದ್ದರೆ ಸಾಕು. ಅದನ್ನು ಹಳ್ಳಿಗಳಲ್ಲಿ ಬೇಲಿಯಿಂದ ಹುಡುಕಿ ತರುತ್ತಾರೆ. ಪಟ್ಟಣಗಳಲ್ಲಿ ಬಿದಿರು ಮಾರುವವರಿಂದ ತರಬಹುದು



ಮೈದಾನದಲ್ಲಿ ಕೋಲಿನಿಂದ ಒಂದು ಗೆರೆ ಹಾಕುತ್ತಾರೆ, ಅದೇ 'ಕಂಚೆ'. ಸರದಿಯಾಗಿ ಕಂಚೆ ಮೇಲೆ ನಿಂತು ಬಗ್ಗಿ ಕೋಲನ್ನು ಜೋರಾಗಿ ತೂರಬೇಕು. ಹೆಚ್ಚು ದೂರ ಎಸೆದವರು ಪಾರು. ಸಮೀಪ ಎಸೆದವನು ಚೋರ



ಚೋರ ಆದವನ ಕೋಲನ್ನು ಇತರರು ತಮ್ಮ ಕೋಲಿನಿಂದ ಸರಿಸುತ್ತಾ ಹೋಗಬೇಕು. ಆತ ಮುಟ್ಟಲು ಬಂದರೆ ತಕ್ಷಣ ತಮ್ಮ ಕೋಲನ್ನು ಕಲ್ಲಿನಮೇಲೆ ಇಡಬೇಕು. ಹೀಗೆ ಇಡುವಷ್ಟರಲ್ಲೇ ಚೋರ ಮುಟ್ಟಿದರೆ ಕೋಲು ಸರಿಸುವವ ಔಟ್



ಚೋರ ಬಂದು ಮುಟ್ಟುವುದರೊಳಗೆ ಕೋಲನ್ನು ಸರಿಸುತ್ತಾ ಕಲ್ಲಿನ ಮೇಲೆ ಕೋಲನ್ನು ಇಡುತ್ತಾ ಸಾಗಬೇಕು. ಚೋರ ಯಾರಾದರೂ ಒಬ್ಬ ಕೋಲು ಸರಿಸುವವನನ್ನು ಮುಟ್ಟುವವರೆಗೆ ಕೋಲು ಸರಿಸುವ ಆಟ ಮುಂದುವರಿಯುತ್ತದೆ



ಚೋರ ಆದವನು ಕೋಲು ಸರಿಸುವವನನ್ನು ಮುಟ್ಟಿದಾಗ ಅಲ್ಲಿಂದ ಕಂಚೆ ಜಾಗದವರೆಗೂ ಆ ಚೋರ ಕುಂಟುತ್ತಾ ತಲುಪಬೇಕು. ಒಂದುವೇಳೆ ಕಾಲನ್ನು ನೆಲಕ್ಕೆ ಊರಿದರೆ ಮತ್ತೆ ಅವನ ಕೋಲನ್ನೇ ಸರಿಸುವುದು ಮುಂದುವರೆಯುತ್ತದೆ



ಕುಂಟುವವನು ಕಾಲೂರದೆ ಕಂಚೆ ತಲುಪಿದರೆ ಆಟದ ಒಂದು ಸುತ್ತು ಮುಗಿದಂತೆ. ಮತ್ತೆ ಹೊಸ ಆಟ ಮೊದಲಿನಿಂದ ಶುರು. ಇದು ಹೀಗೇ ಮುಂದುವರಿಯುತ್ತದೆ. ಚೋರ ಕುಂಟುವಾಗ ಇತರರು ಆತನನ್ನು ಕಾಡಿಸುವುದು ರೂಢಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಹಳ್ಳಿಗರ ಹರಳಿನ ಆಟ

13ನ್ನು 12 ಮಾಡಿ



ಇಲ್ಲಿರುವ ಐದು ಚೌಕಗಳ ಪೈಕಿ ABCD ಚೌಕಗಳಲ್ಲಿ ನಾಲ್ಕು ಹರಳುಗಳಿವೆ. E ಚೌಕದಲ್ಲಿ ಐದು ಹರಳುಗಳಿವೆ. ಎಡದಿಂದ ಬಲಕ್ಕೆ BED ಚೌಕಗಳ ಹರಳುಗಳ ಮೊತ್ತ 13. ಹಾಗೆಯೇ ಮೇಲಿನಿಂದ ಕೆಳಕ್ಕೆ AEC ಚೌಕಗಳ ಮೊತ್ತವು 13. ಈಗ ನೀವು ಯಾವುದೇ ಚೌಕದಲ್ಲಿನ ಹರಳು ಎತ್ತಿ ಇಟ್ಟು ಯಾವುದೇ ಚೌಕಕ್ಕೆ ವರ್ಗಾಯಿಸಿ. ಆ ಎಣಿಕೆಯನ್ನು 13ರಿಂದ 12 ಮಾಡಬೇಕು ನಿಮ್ಮಿಂದ ಸಾಧ್ಯವೇ?

ಸೂಚನೆ: ಯಾವುದೇ ಹರಳನ್ನು ಚೌಕ ಬಿಟ್ಟು ಹೊರಗೆ ಉಳಿಸುವಂತಿಲ್ಲ. ಯಾವ ಚೌಕವೂ ಖಾಲಿ ಇರುವಂತಿಲ್ಲ.

ಶಬ್ದಗಳಲ್ಲಿ ಸರಸ...

ವಾಕ್ಯ ವಿನೋದ

ಇಲ್ಲಿ ಕೊಟ್ಟಿರುವ ವಾಕ್ಯಗಳಲ್ಲಿ ಕೆಲವು ಅಕ್ಷರಗಳು ಕ್ರಮವಾಗಿ ಮೂರು ಬಾರಿ ಬಂದಿರುವುದು ವಿಶೇಷ.

1. ಭೀಮ ಮಮತೆಯಿಂದ ತನ್ನ ತಾಯಿಯನ್ನು ನೋಡಿಕೊಂಡನು
2. ಕವಿ ವಿವಿಧ ಭಾವನೆಗಳಿಗೆ ಕಾವ್ಯರೂಪ ಕೊಡುತ್ತಾನೆ
3. ರಾಜು ಜುಜುಬಿ ಐದೇ ರೂಪಾಯಿ ಕೊಟ್ಟನು
4. ಸತತ ತಯಾರಿಯಲ್ಲಿ ತೊಡಗಿಕೊಂಡಿದ್ದರು
5. ಕಾನನ ನಮ್ಮ ಅಮೂಲ್ಯ ಸಂಪತ್ತು
6. ರಂಗ ಗಗನದಲ್ಲಿ ಮೂಡಿರುವ ಕಾಮನಬಿಲ್ಲು ನೋಡಿ ಖುಷಿಪಟ್ಟನು
7. ಎಡಬಲ ಲಲನೆಯರೇ ತುಂಬಿದ್ದರು
8. ಶಶಿ ಶಿಶಿರ ಋತುವಿನಲ್ಲಿ ಉಣ್ಣೆ ಬಟ್ಟೆ ಧರಿಸುತ್ತಾನೆ

ಪದ ಬದಲಾಟ

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಅಷ್ಟೇ ಅಕ್ಷರಗಳ **ಪದ ರಚಿಸಬಲ್ಲಿರಾ?**

1. ಕೆತ್ತಿಬರೆದ = ________
2. ಹಾಡಿಗೆಸಿಹಿ = ________
3. ಪಾಚಕವಟಿ = ________
4. ರಾಜನಮನ = ________

ಟ್ವೆಂಟಿ – 20 ಮ್ಯಾಚ್

ಪದಗಳಿಗೂ ಒತ್ತಕ್ಷರದ ಸಂಕೇತಗಳಿಗೂ ಹೊಂದಿಸಿದರೆ ಬೇರೊಂದು ಪದವಾಗುತ್ತದೆ ಹೊಂದಿಸಿ.

1.	ಸಂಸಾರ	A.	[illegible]
2.	ಮಗ	B.	[illegible]
3.	ಧೀರ	C.	[illegible]
4.	ದಿಟ	D.	[illegible]
5.	ಬಡಿ	E.	[illegible]
6.	ಸುತ	F.	[illegible]
7.	ಕದ	G.	[illegible]
8.	ಕೆನೆ	H.	[illegible]
9.	ಅಜ	I.	[illegible]
10.	ಕಲ	J.	[illegible]
11.	ಮರ	K.	[illegible]
12.	ಮಾತೆ	L.	[illegible]
13.	ಅರ	M.	[illegible]
14.	ಬಲ	N.	[illegible]
15.	ಸರ	O.	[illegible]
16.	ವರ	P.	[illegible]
17.	ಹಳಿ	Q.	[illegible]
18.	ಪಾವತಿ	R.	[illegible]
19.	ವಜೆ	S.	[illegible]
20.	ಮಾನ	T.	[illegible]

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಟೊ ತು ಲು ಬೆ ಸ
ಬೆ ಗೆ ನಿ ಗಿ ತೆ

◯	ಂ	◯	ಕಾಳುಕಡಿ ಕಾಯಿಪಲ್ಲೆ ಮಾರಲು ವಾರಕ್ಕೊಮ್ಮೆ ಸೇರುವ ಸ್ಥಳ
◯	ಂ	◯	ಒಂದು ಹುಳಿ ಜಾತಿಯ ಹಣ್ಣು
◯	ಂ	◯	ಲಪಾಟಿ
◯	ಂ	◯	ಶಿವನಿಗೆ ಪ್ರಿಯವಾದ ಹೂವು
◯	ಂ	◯	ಗಿಡದ ರೆಂಬೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಜೂನ್ 27ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪುಟಾಣಿ ಪದಬಂಧ
1. ಗಂಗೆ 2. ಕಾಂತ 3. ಅಂಗ 4. ಗೋಂದು 5. ತಂತ್ರ

ಪದ-ಬದಲಾಟ
1. ಮಾತನಾಡು 2. ಕನ್ನಡಿಗ
3. ದೂರವಿರು 4. ಮಹಾಗುರು

ಶಬ್ದಗಳಲ್ಲಿ ಸರಸ
1. ಕಾಕಿ 2. ಖೊಖೋ 3. ಗೂಗೆ 4. ಜಾಜಿ 5. ಲಾಲಿ

ಗಣಿತದಲ್ಲಿ ಗರ್ದಿ ಗಮ್ಮತ್ತು

4	1	3	1	2	4	3	2

ಟ್ವೆಂಟಿ - 20 ಮ್ಯಾಚ್
1-H, 2-G, 3-R, 4-F, 5-I, 6-E, 7-J, 8-D, 9-K, 10-K, 11-A, 12-L, 13-C, 14-O, 15-N, 16-T, 17-S, 18-P, 19-B, 20-Q

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಆರ್. ಅಪೇಕ್ಷ, ತಿ.ನರಸೀಪುರ (ಮೈಸೂರು)

ಹರ್ಷಿತಾ ಎಂ., ಬೆಳಗಾವಿ

ಪಾಂಡುರಂಗ ಸಿದ್ದಾಪುರ, ಮುಂಡರಗಿ (ಗದಗ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ದೇಶಿ ಕ್ರಿಕೆಟ್ ವೇಳಾಪಟ್ಟಿ: ಅಕ್ಟೋಬರ್‌ನಲ್ಲಿ ಟಿ20, ಮುಂದಿನ ಫೆಬ್ರುವರಿಯಲ್ಲಿ ಏಕದಿನ ಟೂರ್ನಿ

ನವೆಂಬರ್ 16ರಿಂದ ರಣಜಿ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾಲಘಟ್ಟದ ಸವಾಲುಗಳ ನಡುವೆಯೂ ದೇಶಿ ಕ್ರಿಕೆಟ್‌ನ 'ರಾಜ' ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಆಯೋಜಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ನಿರ್ಧರಿಸಿದೆ.

ನವೆಂಬರ್ 16 ರಿಂದ 2022ರಿಂದ ಫೆಬ್ರುವರಿ 19ರವರೆಗೆ ರಣಜಿ ಟ್ರೋಫಿ ಆಯೋಜಿಸಲಿದೆ. ಒಟ್ಟು 38 ತಂಡಗಳು ಸ್ಪರ್ಧಿಸಲಿವೆ. 177 ಪಂದ್ಯಗಳು ಆಯೋಜನೆಗೊಳ್ಳಲಿವೆ.

ಕೋವಿಡ್ ಕಾರಣದಿಂದಾಗಿ ಹೋದ ವರ್ಷದ ರಣಜಿ ಋತು ರದ್ದಾಗಿತ್ತು. 87 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ರಣಜಿ ಟೂರ್ನಿ ರದ್ದಾಗಿತ್ತು.

ಶನಿವಾರ ಬಿಸಿಸಿಐ ಪ್ರಕಟಿಸಿರುವ ವೇಳಾಪಟ್ಟಿಯಲ್ಲಿ 2021–22ರ ದೇಶಿ ಕ್ರಿಕೆಟ್ ಚಟುವಟಿಕೆಗಳನ್ನು ಉಲ್ಲೇಖಿಸಿದೆ.

'ಸೆಪ್ಟೆಂಬರ್ 21 ರಿಂದ ಸೀನಿಯರ್ ಮಹಿಳಾ ಏಕದಿನ ಲೀಗ್ ಟೂರ್ನಿಯೊಂದಿಗೆ ದೇಶಿ ಋತುವಿಗೆ ಚಾಲನೆ ದೊರೆಯಲಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಅಕ್ಟೋಬರ್ 20 ರಿಂದ ನವೆಂಬರ್ 12ರವರೆಗೆ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯ ಮೂಲಕ ದೇಶಿ ಋತುವಿಗೆ ಚಾಲನೆ ದೊರೆಯಲಿದೆ.

ರಣಜಿ ಟ್ರೋಫಿ

ಮುಖ್ಯಾಂಶಗಳು

- ಫೆಬ್ರುವರಿ 19ರವರೆಗೆ ದೇಶಿ ಕ್ರಿಕೆಟ್‌ನ 'ರಾಜ' ಟೂರ್ನಿ ಮುಂದುವರಿಯಲಿದೆ
- ಸೆಪ್ಟೆಂಬರ್ 21 ರಿಂದ ಸೀನಿಯರ್ ಮಹಿಳಾ ಏಕದಿನ ಲೀಗ್ ಟೂರ್ನಿ
- ರಣಜಿ ಟೂರ್ನಿಯಲ್ಲಿ 2 ಎಲೀಟ್ ವಿಭಾಗಗಳು; ಗುಂಪಿನಲ್ಲಿ ಒಂಬತ್ತು ತಂಡಗಳು

2022ರ ಫೆಬ್ರುವರಿ 23ರಿಂದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿ ನಡೆಯಲಿದೆ. ಇಡೀ ಋತುವಿನಲ್ಲಿ ಸೀನಿಯರ್, ಜೂನಿಯರ್ ಟ್ರೋಫಿ ಟೂರ್ನಿಗಳಲ್ಲಿ 2127 ಪಂದ್ಯಗಳು ನಡೆಯಲಿವೆ.

'ಒಟ್ಟು ಮೂರು ತಿಂಗಳುಗಳ ಅವಧಿಯಲ್ಲಿ ರಣಜಿ ಟ್ರೋಫಿ ಟೂರ್ನಿಯು ಆಯೋಜನೆಗೊಳ್ಳಲಿದೆ. ಈ ಬಾರಿ ಯೋಜನೆಯಂತೆ ಈ ಎಲ್ಲ ಟೂರ್ನಿಗಳನ್ನೂ ಯಶಸ್ವಿಯಾಗಿ ಆಯೋಜಿಸುವ ವಿಶ್ವಾಸ ನಮಗಿದೆ' ಎಂದು ಶಾ ಹೇಳಿದ್ದಾರೆ.

ರಣಜಿ ಟೂರ್ನಿಯಲ್ಲಿ ಎರಡು ಎಲೀಟ್ ವಿಭಾಗಗಳಿವೆ. ಪ್ರತಿ ಗುಂಪಿನಲ್ಲಿ ಒಂಬತ್ತು ತಂಡಗಳು ಇರಲಿವೆ. ಸಿ ಗುಂಪು ಮತ್ತು ಪ್ಲೇಟ್ (ಈಶಾನ್ಯ ರಾಜ್ಯ ತಂಡಗಳು) ಗುಂಪುಗಳಲ್ಲಿ ತಲಾ 10 ತಂಡಗಳಿವೆ.

'ವಿನೂ ಮಂಕಡ್ ಟ್ರೋಫಿ ಟೂರ್ನಿಯಲ್ಲಿ ಉತ್ತಮವಾಗಿ ಆಡುವ ಕ್ರಿಕೆಟಿಗರನ್ನು 19 ವರ್ಷದೊಳಗಿನ ಭಾರತ ತಂಡದ ಆಯ್ಕೆಗೆ ಪರಿಗಣಿಸಲಾಗುವುದು' ಎಂದು ಶಾ ಹೇಳೀದ್ದಾರೆ.

ಪುರುಷರ ಕ್ರಿಕೆಟ್ ವೇಳಾಪಟ್ಟಿ

ಟೂರ್ನಿ	ಆರಂಭ	ಮುಕ್ತಾಯ	ಪಂದ್ಯಗಳ ಸಂಖ್ಯೆ
ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿ	20-10-2021	12-11-2021	149
ರಣಜಿ ಟ್ರೋಫಿ ಟೂರ್ನಿ	16-11-2021	19-02-2022	177
ವಿಜಯ್ ಹಜಾರೆ ಟ್ರೋಫಿ ಏಕದಿನ	23-02-2022	26-03-2022	169
ಸಿ.ಕೆ. ನಾಯ್ಡು ಟ್ರೋಫಿ ಲೀಗ್ (23 ವರ್ಷದೊಳಗಿನವರು)	18-11-2021	12-02-2022	160
ಸಿ.ಕೆ. ನಾಯ್ಡು ಟ್ರೋಫಿ ಏಕದಿನ	23-2-2022	26-3-2022	160
ವಿನೂ ಮಂಕಡ್ ಟ್ರೋಫಿ, ಏಕದಿನ (19ವರ್ಷದೊಳಗಿನವರು)	28-9-2021	29-10-2021	152
ವಿನೂ ಮಂಕಡ್ ಟ್ರೋಫಿ ಏಕದಿನ ಚಾಲೆಂಜರ್ (19ವರ್ಷದೊಳಗಿನವರು)	3-11-2021	9-11-2021	7
ಕೂಚ್ ಬಿಹಾರ್ ಟ್ರೋಫಿ	14-11-2021	7-2-2022	152
ವಿಜಯ್ ಮರ್ಚಂಟ್ ಟ್ರೋಫಿ (16 ವರ್ಷದೊಳಗೆ)	1-10-2021	6-12-2021	102
ಮಹಿಳೆಯರು			
ಸೀನಿಯರ್ ಏಕದಿನ ಲೀಗ್	21-9-2021	22-10-2021	160
ಸೀನಿಯರ್ ಚಾಲೆಂಜರ್ಸ್ ಟ್ರೋಫಿ	27-10-2021	31-10-2021	4
ಸೀನಿಯರ್ ಟಿ20 ಲೀಗ್	19-03-2022	11-04-2022	142
23 ವರ್ಷದೊಳಗಿನ ಟಿ20	17-1-2022	7-2-2022	142
23 ವರ್ಷದೊಳಗಿನ ಏಕದಿನ	11-02-2022	15-3-2022	160
19 ವರ್ಷದೊಳಗಿನ ಏಕದಿನ	1-10-2021	31-10-2021	152
19 ವರ್ಷದೊಳಗಿನ ಟಿ20	4-11-2021	27-11-2021	135
19 ವರ್ಷದೊಳಗಿನ ಚಾಲೆಂಜರ್ಸ್ ಟ್ರೋಫಿ	1-12-2021	5-12-2021	4

ಮೂಲ: ಬಿಸಿಸಿಐ

ಡೆನ್ಮಾರ್ಕ್ ತಂಡದ ಥಾಮಸ್ ಡೆಲಾನಿ ಮುನ್ನುಗ್ಗಿದ ಕ್ಷಣ (ಎಡ ತುದಿ) –ರಾಯಿಟರ್ಸ್ ಚಿತ್ರ

ಫುಟ್‌ಬಾಲ್: ಡೆನ್ಮಾರ್ಕ್ ಸೆಮಿಫೈನಲ್‌ಗೆ

ಬಾಕು (ಎಪಿ): ಡೆನ್ಮಾರ್ಕ್ ತಂಡ ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಹಂತ ಪ್ರವೇಶಿಸಿತು. ಶನಿವಾರ ರಾತ್ರಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜೆಕ್ ಗಣರಾಜ್ಯ ತಂಡವನ್ನು 2–1ರಲ್ಲಿ ಡೆನ್ಮಾರ್ಕ್ ಮಣಿಸಿತು.

ಥಾಮಸ್ ಡೆಲಾನಿ ಐದನೇ ನಿಮಿಷದಲ್ಲಿ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. 42ನೇ ನಿಮಿಷದಲ್ಲಿ ಡಾಲ್ಬರ್ಗ್ ಮುನ್ನಡೆ ಹೆಚ್ಚಿಸಿದರು.

49ನೇ ನಿಮಿಷದಲ್ಲಿ ಗೋಲು ಗಳಿಸಿದ ಶೀಕ್ ಅವರು ಜೆಕ್ ಗಣರಾಜ್ಯದಲ್ಲಿ ನಿರೀಕ್ಷೆ ಮೂಡಿಸಿದರು. ಆದರೆ ನಂತರ ಡೆನ್ಮಾರ್ಕ್‌ನ ಗೋಡೆ ಕೆಡವಲು ತಂಡಕ್ಕೆ ಸಾಧ್ಯವಾಗಲಿಲ್ಲ.

ಸ್ಪೇನ್–ಇಟಲಿ ಸೆಮಿ ಹಣಾಹಣಿ: ಸ್ಪೇನ್ ಮತ್ತು ಇಟಲಿ ತಂಡಗಳು ಚಾಂಪಿಯನ್‌ಷಿಪ್‌ನಲ್ಲಿ ಸತತ ನಾಲ್ಕನೇ ಬಾರಿ ಮುಖಾಮುಖಿಯಾಗಲು ವೇದಿಕೆ ಸಜ್ಜಾಗಿದೆ. ಈ ಬಾರಿ ಉಭಯ ತಂಡಗಳು ಮುಂದಿನ ಮಂಗಳವಾರ ಸೆಣಸಲಿದ್ದು ಲಂಡನ್‌ನ ವೆಂಬ್ಲಿ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಗೆದ್ದ ತಂಡ ಪ್ರಶಸ್ತಿ ಸುತ್ತು ಪ್ರವೇಶಿಸಲಿದೆ.

ಶುಕ್ರವಾರ ರಾತ್ರಿ ನಡೆದ ಮೊದಲ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ಪೇನ್ ಪೆನಾಲ್ಟಿ ಶೂಟ್‌ಔಟ್ ಮೂಲಕ ಸ್ವಿಟ್ಜರ್ಲೆಂಡ್ ವಿರುದ್ಧ 3–1ರ ಜಯ ಗಳಿಸಿತು. ತಡರಾತ್ರಿ ನಡೆದ ಮತ್ತೊಂದು ಪಂದ್ಯದಲ್ಲಿ ಅಗ್ರ ಕ್ರಮಾಂಕದ ಬೆಲ್ಜಿಯಂ ಎದುರು ಇಟಲಿ 2–1ರ ಗೆಲುವು ಸಾಧಿಸಿತು.

ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ನಡೆದಿದ್ದ ಪಂದ್ಯದ ನಿಗದಿತ ಅವಧಿಯಲ್ಲಿ ಸ್ಪೇನ್ ಮತ್ತು ಸ್ವಿಟ್ಜರ್ಲೆಂಡ್ 1–1ರ ಸಮಬಲ ಸಾಧಿಸಿದ್ದವು. ಹೆಚ್ಚುವರಿ ಅರ್ಧ ತಾಸಿನಲ್ಲಿ ಮುನ್ನಡೆ ಗಳಿಸಲು ಯಾವ ತಂಡಕ್ಕೂ ಸಾಧ್ಯವಾಗಲಿಲ್ಲ. ಹೀಗಾಗಿ ಪೆನಾಲ್ಟಿ ಮೊರೆಹೋಲಾಯಿತು.

ಎಂಟನೇ ನಿಮಿಷದಲ್ಲಿ ಜಕಾರಿಯಾ ನೀಡಿದ 'ಉಡುಗೊರೆ'ಯ ಮೂಲಕ ಸ್ಪೇನ್ ಮುನ್ನಡೆ ಸಾಧಿಸಿತ್ತು. ಶಾಕಿರಿ 68ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿ ಸ್ವಿಟ್ಜರ್ಲೆಂಡ್ ಪಾಳಯ ನಿಟ್ಟುಸಿರು ಬಿಡುವಂತೆ ಮಾಡಿದ್ದರು. ಆದರೆ 77ನೇ ನಿಮಿಷದಲ್ಲಿ ರೆಡ್ ಕಾರ್ಡ್ ಪಡೆದು ಫ್ರೂಲರ್ ಹೊರಹೋದದ್ದರಿಂದ ಸ್ವಿಟ್ಜರ್ಲೆಂಡ್‌ಗೆ ಪೆಟ್ಟು ಬಿತ್ತು.

ಮ್ಯೂನಿಚ್‌ನಲ್ಲಿ ನಡೆದ ಪಂದ್ಯದ 31ನೇ ನಿಮಿಷದಲ್ಲಿ ಬರೆಲ್ಲ ಮತ್ತು 44ನೇ ನಿಮಿಷದಲ್ಲಿ ಇನ್‌ಸಿನ್ ಗಳಿಸಿದ ಗೋಲುಗಳ ಮೂಲಕ ಇಟಲಿ ಮುನ್ನಡೆ ಸಾಧಿಸಿತು. ಮೊದಲಾರ್ಧದ ಇಂಜುರಿ ಅವಧಿಯಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಬೆಲ್ಜಿಯಂ ಪರವಾಗಿ ಲುಕಾಕು ಗೋಲು ಗಳಿಸಿದರು. ದ್ವಿತೀಯಾರ್ಧದಲ್ಲಿ ಮುನ್ನಡೆ ಉಳಿಸಿಕೊಂಡು ಕಾದಾಡಿದ ಇಟಲಿ ಜಯದ ನಗೆ ಸೂಸಿತು.

ಈ ಗೆಲುವಿನೊಂದಿಗೆ ತಂಡ ಸತತ 32 ಪಂದ್ಯಗಳಲ್ಲಿ ಅಜೇಯವಾಗಿ ಉಳಿಯಿತು.

ಒಲಿಂಪಿಕ್ಸ್: ಭಾರತದ ಮೊದಲ ತಂಡದ ಪ್ರಯಾಣ 14ರಂದು

ಚೆನ್ನೈ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಕ್ರೀಡಾಪಟುಗಳ ಮೊದಲ ತಂಡ ಇದೇ 14ರಂದು ಟೋಕಿಯೊಗೆ ತೆರಳಲಿದೆ ಎಂದು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಶನಿವಾರ ತಿಳಿಸಿದ್ದಾರೆ. ಏರ್ ಇಂಡಿಯಾದ ವಿಶೇಷ ವಿಮಾನದಲ್ಲಿ ಅಥ್ಲೀಟ್‌ಗಳು ಪ್ರಯಾಣಿಸಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಟೋಕಿಯೊಗೆ ತಲುಪಿದ ನಂತರ ತಂಡದ ಎಲ್ಲರೂ ಮೂರು ದಿನಗಳ ಕ್ವಾರಂಟೈನ್‌ಗೆ ಒಳಗಾಗಲಿದ್ದಾರೆ. ಜುಲೈ 23ರಿಂದ ಆಗಸ್ಟ್ ಎಂಟರ ವರೆಗೆ ಒಲಿಂಪಿಕ್ಸ್ ನಡೆಯಲಿದೆ.

'ಟೋಕಿಯೊದಲ್ಲಿ ವಿಮಾನ ಇಳಿಯುವ ದಿನವನ್ನು ಶೂನ್ಯ ದಿನ ಎಂದು ಪರಿಗಣಿಸಲಾಗುತ್ತದೆ. ನಂತರದ ಮೂರು ದಿನ ಕ್ವಾರಂಟೈನ್ ಇರುತ್ತದೆ' ಎಂದು ಯೂತಿಂಕ್ ಫೌಂಡೇಷನ್ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮೆಹ್ತಾ ತಿಳಿಸಿದರು.

ಚಿನ್ನ ಗೆದ್ದರೆ ₹ ಎರಡು ಕೋಟಿ: ರಾಂಚಿಯ ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದರೆ ₹ ಎರಡು ಕೋಟಿ ಬಹುಮಾನ ನೀಡುವುದಾಗಿ

ಮುಖ್ಯಮಂತ್ರಿ ಹೇಮಂತ್ ಸೊರೇನ್ ಘೋಷಿಸಿದ್ದಾರೆ. ಪ್ಯಾರಿಸ್‌ನಲ್ಲಿ ಈಚೆಗೆ ನಡೆದ ವಿಶ್ವಕಪ್ ಮೂರನೇ ಸುತ್ತಿನ ಟೂರ್ನಿಯಲ್ಲಿ ಹ್ಯಾಟ್ರಿಕ್ ಚಿನ್ನ ಗೆದ್ದ ರಾಜ್ಯದ ದೀಪಿಕಾ ಕುಮಾರಿ ಅವರಿಗೆ ₹ 50 ಲಕ್ಷ ನೀಡುವುದಾಗಿಯೂ ಭರವಸೆ ನೀಡಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದರೆ ₹ ಒಂದು ಕೋಟಿ, ಕಂಚಿನ ಪದಕ ಗಳಿಸಿದರೆ ₹ 75 ಲಕ್ಷ ನೀಡುವುದಾಗಿಯೂ ಸೊರೇನ್ ತಿಳಿಸಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಆಡಲಿರುವ ಭಾರತ ಹಾಕಿ ತಂಡಕ್ಕೆ ಆಯ್ಕೆಯಾಗಿರುವ ನಿಕ್ಕಿ ಪ್ರಧಾನ್ ಮತ್ತು ಸಲಿಮಾ ಟೆಟೆ ಅವರಿಗೆ ತಲಾ ₹ ಐದು ಲಕ್ಷ ನೀಡುವುದಾಗಿ ತಿಳಿಸಿದರು.

ಅಂಕಿತಾ ಭಕತ್ ಮತ್ತು ಕೋಮಲಿಕಾ ಬಾರಿ ಅವರಿಗೆ ₹ ತಲಾ 20 ಲಕ್ಷ, ಕೋಚ್ ಪೂರ್ಣಿಮಾ ಮಹತೊ ಅವರಿಗೆ ₹ 12 ಲಕ್ಷ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ವಿಂಬಲ್ಡನ್: ಕೆರ್ಬರ್‌ಗೆ ಗೆಲುವು

ಲಂಡನ್ (ರಾಯಿಟರ್ಸ್): ಮಾಜಿ ಚಾಂಪಿಯನ್ ಜರ್ಮನಿಯ ಏಂಜಲಿಕ್ ಕೆರ್ಬರ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಜಯ ಗಳಿಸಿದರು. ಶನಿವಾರ ಮಳೆ ಅಡ್ಡಿಪಡಿಸಿದ ಪಂದ್ಯದಲ್ಲಿ ಅವರು 2-6, 6-0, 6-1ರಲ್ಲಿ ಶ್ರೇಯಾಂಕ ರಹಿತ ಆಟಗಾರ್ತಿ ಅಲೆಕ್ಸಾಂಡ್ರ ಸಸ್ನೊವಿಚ್ ಎದುರು ಗೆದ್ದರು.

ಮೊದಲ ಸೆಟ್‌ನಲ್ಲಿ ಎರಡು ಬಾರಿ ಸರ್ವ್ ಕಳೆದುಕೊಂಡು ಸ್ವಲ್ಪ ಹಿನ್ನಡೆ ಅನುಭವಿಸಿದರೂ ನಂತರ ಚೇತರಿಸಿಕೊಂಡರು.

ರಾತ್ರಿ ನಡೆದ ಪುರುಷರ ವಿಭಾಗದ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ 6-4 6-4 5-7 6-4ರಲ್ಲಿ ಕ್ಯಾಮರಾನ್ ನೋರಿ ವಿರುದ್ಧ ಜಯ ಗಳಿಸಿದರು.

ಎರಡು ಬಾರಿಯ ಚಾಂಪಿಯನ್ ಬ್ರಿಟನ್‌ನ ಆ್ಯಂಡಿ ಮರ್ರೆ ಶುಕ್ರವಾರ

ಕೆರ್ಬರ್ –ರಾಯಿಟರ್ಸ್ ಚಿತ್ರ

ರಾತ್ರಿ ನಡೆದ ಪಂದ್ಯದಲ್ಲಿ ನಿರಾಸೆ ಅನುಭವಿಸಿದರು. ಅವರನ್ನು ಕೆನಡಾದ ಡೆನಿಸ್ ಶಪೊವಲೊವ್ 6-4, 6-2, 6-2ರಲ್ಲಿ ಮಣಿಸಿದರು. ನಾಲ್ಕು ವರ್ಷಗಳ ನಂತರ ವಿಂಬಲ್ಡನ್ ಅಂಗಣಕ್ಕೆ ಮರಳಿದ ಮರ್ರೆ ಮೊದಲ ಮೂರು ಸೆಟ್‌ಗಳಲ್ಲಿ ನಿರಾಯಾಸವಾಗಿ ಗೆದ್ದಿದ್ದರು. ಆದರೆ ಶನಿವಾರ ಶಪೊವಲೊವ್ ಎದುರು ನೀರಸ ಆಟವಾಡಿದರು.

ಮಹಿಳೆಯರ ವಿಭಾಗದಲ್ಲಿ ಅಮೆರಿಕದ ಕೊಕೊ ಗಫ್ 6-3, 6-3ರಲ್ಲಿ ಕಾಜಾ ಜುವಾನ್ ವಿರುದ್ಧ ಗೆದ್ದು ನಾಲ್ಕನೇ ಸುತ್ತು ಪ್ರವೇಶಿಸಿದರು. 23ನೇ ಶ್ರೇಯಾಂಕದ ಗಫ್ ಮೊದಲ ಸೆಟ್‌ನ ಆರಂಭದಲ್ಲೇ ಆಕ್ರಮಣಕಾರಿ ಆಟದ ಮೂಲಕ ವಿಶ್ವ ಕ್ರಮಾಂಕದಲ್ಲಿ 102ನೇ ಸ್ಥಾನದಲ್ಲಿರುವ ಎದುರಾಳಿಯನ್ನು ಕಂಗೆಡಿಸಿದರು.

ಸಾನಿಯಾ–ಮಟೆಕ್ ಜೋಡಿಗೆ ಸೋಲು: ಭಾರತದ ಸಾನಿಯಾ ಮಿರ್ಜಾ ಮತ್ತು ಅಮೆರಿಕದ ಬೆಥಾನಿ ಮಟೆಕ್ ಸ್ಯಾಂಡ್ಸ್ ಜೋಡಿ ಮಹಿಳೆಯರ ಡಬಲ್ಸ್‌ನಲ್ಲಿ ಸೋತು ಹೊರಬಿದ್ದಿತು. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ರಷ್ಯಾದ ಎಲೆನಾ ವೆಸ್ನಿನಾ ಮತ್ತು ವೆರೋನಿಕಾ 6–4, 6–3ರಲ್ಲಿ ಭಾರತ–ಅಮೆರಿಕದ ಜೋಡಿಯನ್ನು ಮಣಿಸಿದರು.

ಕ್ರಿಕೆಟ್: ಭಾರತ ಮಹಿಳೆಯರಿಗೆ ಜಯ

ವೂಸ್ಟರ್ (ಪಿಟಿಐ): ನಾಯಕಿ ಮಿಥಾಲಿ ರಾಜ್ (ಔಟಾಗದೆ 75; 86 ಎಸೆತ, 8 ಬೌಂಡರಿ) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಭಾರತ ಮಹಿಳೆಯರ ತಂಡ ಇಂಗ್ಲೆಂಡ್ ಮಹಿಳೆಯರ ಎದುರಿನ ಏಕದಿನ ಸರಣಿಯ ಮೂರನೇ ಮತ್ತು ಕೊನೆಯ ಪಂದ್ಯದಲ್ಲಿ ನಾಲ್ಕು ವಿಕೆಟ್‌ಗಳಿಂದ ಜಯ ಗಳಿಸಿತು.

220 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತಕ್ಕೆ ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (49; 57 ಎ, 8 ಬೌಂ) ಉತ್ತಮ ಅಡಿಪಾಯ ಹಾಕಿಕೊಟ್ಟರು.

ಭಾರತ ತಂಡದ ಆಫ್‌ಸ್ಪಿನ್ನರ್ ದೀಪ್ತಿ ಶರ್ಮಾ (47ಕ್ಕೆ3) ಅಮೋಘ ಬೌಲಿಂಗ್ ನಿಂದಾಗಿ ಇಂಗ್ಲೆಂಡ್ ತಂಡ ಸಾಧಾರಣ ಮೊತ್ತ ಗಳಿಸಿತು.

ಮಳೆಯಿಂದಾಗಿ ಪಂದ್ಯವನ್ನು 47 ಓವರ್‌ಗಳಿಗೆ ಸೀಮಿತಗೊಳಿಸಲಾಗಿತ್ತು. ಇಂಗ್ಲೆಂಡ್ ಕೊನೆಯ ಎಸೆತದಲ್ಲಿ ಕೊನೆಯ ವಿಕೆಟ್ ಕಳೆದುಕೊಂಡು 219 ರನ್ ಗಳಿಸಿತು.

ನಾಯಕಿ ಹೀಥರ್ ನೈಟ್ (46 ರನ್) ಮತ್ತು ನಥಾಲಿ ಶಿವರ್ (49 ರನ್) ಅರ್ಧಶತಕದ ಅಂಚಿನಲ್ಲಿ ಎಡವಿದರು.

ದೀಪ್ತಿ ಶರ್ಮಾ ಮಧ್ಯಮಕ್ರಮಾಂಕಕ್ಕೆ ಪೆಟ್ಟು ಕೊಟ್ಟರು. ಜೂಲನ್ ಗೋಸ್ವಾಮಿ, ಶಿಖಾ ಪಾಂಡೆ, ಪೂನಂ ಯಾದವ್,

ಮಿಥಾಲಿ ರಾಜ್ –ಪಿಟಿಐ ಚಿತ್ರ

ಸ್ನೇಹ ರಾಣಾ ಮತ್ತು ಹರ್ಮನ್‌ಪ್ರೀತ್ ಕೌರ್ ಕೂಡ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 47 ಓವರ್‌ಗಳಲ್ಲಿ 219 (ವಿನ್‌ಫೀಲ್ಡ್ ಹಿಲ್ 36, ಹೀಥರ್ ನೈಟ್ 46, ನಥಾಲಿಯಾ ಶಿವರ್ 49, ಸೋಫಿಯಾ ಡಂಕ್ಲಿ 28, ದೀಪ್ತಿ ಶರ್ಮಾ 47ಕ್ಕೆ3); **ಭಾರತ:** 46.3 ಓವರ್‌ಗಳಲ್ಲಿ 6ಕ್ಕೆ 220 (ಸ್ಮೃತಿ ಮಂದಾನ 49, ಮಿಥಾಲಿ ರಾಜ್ ಔಟಾಗದೆ 75, ಸ್ನೇಹ್ ರಾಣಾ 25; ಸೋಫಿ ಎಕ್ಲೆಸ್ಟೋನ್ 36ಕ್ಕೆ2). **ಫಲಿತಾಂಶ:** ಭಾರತಕ್ಕೆ 4 ವಿಕೆಟ್‌ಗಳ ಜಯ; ಇಂಗ್ಲೆಂಡ್‌ಗೆ 2–1ರಲ್ಲಿ ಸರಣಿ ಗೆಲುವು.

ಉತ್ತರ ಪ್ರದೇಶ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಗೆಲುವು: ಬಿಜೆಪಿ

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ 75 ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 67 ಕಡೆ ಪಕ್ಷ ಬೆಂಬಲಿತ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಬಿಜೆಪಿಯ ಉತ್ತರ ಪ್ರದೇಶ ಘಟಕ ಪ್ರತಿಪಾದಿಸಿದೆ.

ರಾಜ್ಯ ಬಿಜೆಪಿ ಮುಖ್ಯಸ್ಥ ಸ್ವತಂತ್ರ ದೇವ್‌ಸಿಂಗ್, ರಾಜ್ಯ ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಪ್ರಧಾನಿ, ಮುಖ್ಯಮಂತ್ರಿಯವರ ಜನಪ್ರಿಯತೆ ಕಾರಣದಿಂದ ಈ ಗೆಲುವು ಲಭಿಸಿದೆ ಎಂದು ತಿಳಿಸಿದರು.

ಕಳೆದ ಮಂಗಳವಾರ 22 ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷ ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿತ್ತು. ಈ ಪೈಕಿ 21 ಕಡೆ ಪಕ್ಷ ಬೆಂಬಲಿತ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಬಿಜೆಪಿ ಹೇಳಿಕೊಂಡಿದೆ.

ಕುಂದುಕೊರತೆ ಅಧಿಕಾರಿ ನೇಮಕ ಅಂತಿಮ ಹಂತಕ್ಕೆ: ಟ್ವಿಟರ್

ನವದೆಹಲಿ: 'ಟ್ವಿಟರ್‌ನ ಭಾರತದ ಸ್ಥಳೀಯ ಕುಂದುಕೊರತೆ ಅಧಿಕಾರಿ ನೇಮಕವು ಅಂತಿಮ ಹಂತದಲ್ಲಿದೆ' ಎಂದು ಮೈಕ್ರೋ ಬ್ಲಾಗಿಂಗ್ ಜಾಲತಾಣ ಟ್ವಿಟರ್ ಇಂಡಿಯಾ ಶನಿವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

'ಐಟಿ ನಿಯಮಗಳಿಗೆ ಅನುಸಾರವಾಗಿ ಮಧ್ಯಂತರ ಅಹವಾಲು ಅಧಿಕಾರಿಯನ್ನು ನೇಮಿಸಲಾಗಿತ್ತು. ಆದರೆ, ಅವರ ನೇಮಕಾತಿಯ ಔಪಚಾರಿಕ ಕ್ರಮಗಳನ್ನು ಪೂರ್ಣಗೊಳಿಸುವ ಮುನ್ನವೇ ಅವರು ಜೂನ್ 21ರಂದು ತಮ್ಮ ಹುದ್ದೆಯಿಂದ ಹಿಂದೆ ಸರಿದರು' ಎಂದೂ ಹೈಕೋರ್ಟ್‌ಗೆ ಸಲ್ಲಿಸಿರುವ ಉತ್ತರದಲ್ಲಿ ಟ್ವಿಟರ್ ಮಾಹಿತಿ ನೀಡಿದೆ.

'ಟ್ವಿಟರ್ ಭಾರತದ ಸ್ಥಳೀಯ ಕುಂದುಕೊರತೆ ಅಧಿಕಾರಿಯ ನೇಮಕವು ಅಂತಿಮ ಹಂತದಲ್ಲಿದೆ. ಈ ಮಧ್ಯೆ ಭಾರತೀಯ ಬಳಕೆದಾರರ ಕುಂದುಕೊರತೆಗಳನ್ನು ಮತ್ತೊಬ್ಬ ಕುಂದುಕೊರತೆ ಅಧಿಕಾರಿ ಪರಿಹರಿಸುತ್ತಿದ್ದಾರೆ' ಎಂದೂ ಟ್ವಿಟರ್ ತಿಳಿಸಿದೆ.

ಟ್ವಿಟರ್ ಭಾರತದ ಹೊಸ ಐಟಿ ನಿಯಮಗಳ ಮಾರ್ಗಸೂಚಿಗಳನ್ನು ಪಾಲನೆ ಮಾಡುತ್ತಿಲ್ಲ ಎಂದು ಆರೋಪಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಇದನ್ನು ಆಧರಿಸಿ ಹೈಕೋರ್ಟ್ ಟ್ವಿಟರ್‌ಗೆ ನೋಟಿಸ್ ನೀಡಿತ್ತು. ಜುಲೈ 6ಕ್ಕೆ ವಿಚಾರಣೆಯನ್ನು ಮುಂದೂಡಲಾಗಿದೆ.

ಸುವೇಂದು ಅಧಿಕಾರಿ ಭೇಟಿ ಅಲ್ಲಗಳೆದ ಸಾಲಿಸಿಟರ್ ಜನರಲ್

ನವದೆಹಲಿ (ಪಿಟಿಐ): ಬಿಜೆಪಿ ಶಾಸಕ ಸುವೇಂದು ಅಧಿಕಾರಿಯನ್ನು ತಮ್ಮ ಅಧಿಕೃತ ನಿವಾಸದಲ್ಲಿ ಭೇಟಿ ಮಾಡಿರುವುದನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅಲ್ಲಗಳೆದಿದ್ದಾರೆ.

ಸುವೇಂದು ಅಧಿಕಾರಿಯನ್ನು ಭೇಟಿ ಮಾಡಿರುವುದರಿಂದ ತುಷಾರ್ ಮೆಹ್ತಾ ಅವರ ವಜಾಕ್ಕೆ ಆಗ್ರಹಿಸಿ ಟಿಎಂಸಿ ಸಂಸದರು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದ ನಂತರ ತುಷಾರ್ ಅವರು ಈ ಹೇಳಿಕೆ ನೀಡಿದ್ದಾರೆ.

'ಸುವೇಂದು ಅಧಿಕಾರಿ ಗುರುವಾರ ಮಧ್ಯಾಹ್ನ 3.30ಕ್ಕೆ ಮಾಹಿತಿ ನೀಡದೇ ನನ್ನ ಗೃಹ ಕಚೇರಿಗೆ ಆಗಮಿಸಿದ್ದರು. ನಾನು ಆ ವೇಳೆ ಪೂರ್ವ ನಿರ್ಧರಿತ ಬೇರೆ ಸಭೆಯಲ್ಲಿದ್ದ ಕಾರಣ ನನ್ನ ಕಚೇರಿಯ

ಸುವೇಂದು

ಸಿಬ್ಬಂದಿ ಅವರನ್ನು ನಿರೀಕ್ಷಣಾ ಕೊಠಡಿಯಲ್ಲಿ ಕಾಯುವುದಕ್ಕೆ ಹೇಳಿ, ಒಂದು ಕಪ್ ಚಹಾ ನೀಡಿದ್ದರು. ಸಭೆ ಮುಗಿದ ನಂತರ ನನ್ನ ಆಪ್ತ ಕಾರ್ಯದರ್ಶಿ ಸುವೇಂದು ಅವರು ಬಂದಿರುವ ಮಾಹಿತಿ ನೀಡಿದರು.

ಆಗ ನಾನು ಅವರನ್ನು ಭೇಟಿಯಾಗಲು ಆಗದಿರುವುದನ್ನು ಅವರ ಗಮನಕ್ಕೆ ತಂದು, ಅವರನ್ನು ಕಾಯಿಸಿದ್ದಕ್ಕಾಗಿ ಕ್ಷಮೆಯಾಚಿಸಿರುವುದಾಗಿ ತಿಳಿಸಲು ನನ್ನ ಆಪ್ತಕಾರ್ಯದರ್ಶಿಯಲ್ಲಿ ವಿನಂತಿಸಿದೆ. ಸುವೇಂದು ಅವರು ನನ್ನ ಆಪ್ತ ಕಾರ್ಯದರ್ಶಿಗೆ ಧನ್ಯವಾದ ಅರ್ಪಿಸಿ, ನನ್ನನ್ನು ಭೇಟಿಯಾಗಲು ಒತ್ತಾಯಿಸದೆ ಹೊರಟುಹೋದರು ಎಂದು ತುಷಾರ್ ಮೆಹ್ತಾ ಸ್ಪಷ್ಟನೆ ನೀಡಿದ್ದಾರೆ.

ಪ್ರಧಾನಿಗೆ ಬರೆದ ಪತ್ರದಲ್ಲಿ ಟಿಎಂಸಿ ಸಂಸದರಾದ ಡೆರೆಕ್ ಓ'ಬ್ರಿಯೆನ್, ಸುಖೇಂದು ಶೇಖರ್ ರಾಯ್ ಮತ್ತು ಮಾಹುವಾ ಮೈತ್ರಾ ಅವರು, ಬಿಜೆಪಿ ಶಾಸಕ ಸುವೇಂದು ನಾರದಾ ಮತ್ತು ಶಾರದಾ ಪ್ರಕರಣಗಳಲ್ಲಿ ಆರೋಪಿಯಾಗಿದ್ದು, ಈ ಪ್ರಕರಣಗಳ ತನಿಖೆ ನಡೆಯುತ್ತಿದೆ. ಈ ಹಂತದಲ್ಲಿ ಪ್ರಕರಣದ ತನಿಖೆಯ ಫಲಿತಾಂಶದ ಮೇಲೆ ಪ್ರಭಾವ ಬೀರುವುದಕ್ಕಾಗಿ ಸಾಲಿಸಿಟರ್ ಜನರಲ್ ಅವರನ್ನು ಭೇಟಿ ಮಾಡಿರುವುದು ಅನುಚಿತ ಕ್ರಮ ಎಂದು ಆರೋಪಿಸಿದ್ದಾರೆ.

'ವ್ಯಾಪಾರಿ ಸಮುದಾಯದ ಬಲವರ್ಧನೆಗೆ ಬದ್ಧ'

ನವದೆಹಲಿ (ಪಿಟಿಐ): ಚಿಲ್ಲರೆ ಮತ್ತು ಸಗಟು ವ್ಯಾಪಾರ ವಲಯವನ್ನು ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಂಎಸ್‌ಎಂಇ) ವ್ಯಾಪ್ತಿಗೆ ತರುವ ನಿರ್ಧಾರವು ಮಹತ್ವದ್ದಾಗಿದೆ ಎಂದು ಹೇಳಿದ ಪ್ರಧಾನಿ ನರೇಂದ್ರ ಮೋದಿ ಅವರು, ವ್ಯಾಪಾರಿ ಸಮುದಾಯದ ಬಲವರ್ಧನೆಗೆ ಸರ್ಕಾರವು ಬದ್ಧವಾಗಿದೆ ಎಂದೂ ಶನಿವಾರ ತಿಳಿಸಿದ್ದಾರೆ.

ಚಿಲ್ಲರೆ ಹಾಗೂ ಸಗಟು ವ್ಯಾಪಾರ ವಲಯವನ್ನು ಎಂಎಸ್‌ಎಂಇ ವ್ಯಾಪ್ತಿಗೆ ತಂದಿರುವ ಕುರಿತು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಶುಕ್ರವಾರ ತಿಳಿಸಿದ್ದರು. ಈ ಕುರಿತು ಟ್ವೀಟ್ ಮಾಡಿರುವ ಪ್ರಧಾನಿ ಮೋದಿ, 'ನಮ್ಮ ಸರ್ಕಾರವು ಮಹತ್ವದ ನಿರ್ಧಾರ ತೆಗೆದುಕೊಂಡಿದೆ. ಇದರಿಂದಾಗಿ ಕೋಟ್ಯಂತರ ವ್ಯಾಪಾರಿಗಳಿಗೆ ಸುಲಭವಾಗಿ ಸಾಲ ಪಡೆಯಲು ನೆರವಾಗಲಿದೆ. ಅನೇಕ ಪ್ರಯೋಜನಗಳನ್ನು ಪಡೆಯುವ ಮೂಲಕ ವಹಿವಾಟು ಹೆಚ್ಚಿಸಲು ನೆರವಾಗಲಿದೆ ಎಂದಿದ್ದಾರೆ.

ಮೋದಿ

ಸರ್ಕಾರದ ಈ ನಿರ್ಧಾರದಿಂದ ₹ 250 ಕೋಟಿಯವರೆಗೆ ವಾರ್ಷಿಕ ವಹಿವಾಟು ಹೊಂದಿರುವ ಚಿಲ್ಲರೆ ವ್ಯಾಪಾರಿಗಳು ಮತ್ತು ಸಗಟು ವ್ಯಾಪಾರಿಗಳಿಗೆ ಆತ್ಮನಿರ್ಭರ ಯೋಜನೆಯಡಿ ಘೋಷಿಸಿರುವ ವಿವಿಧ ಯೋಜನೆಗಳ ಭಾಗವಾಗಿ ತಕ್ಷಣವೇ ಹಣಕಾಸಿನ ನೆರವು ಪಡೆಯಲು ನೆರವಾಗಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಚಿಲ್ಲರೆ ಮತ್ತು ವ್ಯಾಪಾರಿ ಸಂಘವು ಸರ್ಕಾರದ ಕ್ರಮವನ್ನು ಸ್ವಾಗತಿಸಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಸಮಸ್ಯೆಗೆ ಸಿಲುಕಿರುವ ವ್ಯಾಪಾರಸ್ಥರಿಗೆ ಅಗತ್ಯ ಇರುವ ಬಂಡವಾಳ ಪಡೆಯಲು ಇದರಿಂದ ಸಾಧ್ಯವಾಗಲಿದೆ ಎಂದು ಅದು ಹೇಳಿದೆ.

ಜಿಯೊದಿಂದ 'ತುರ್ತು ಡೇಟಾ ಸಾಲ' ಯೋಜನೆ

ನವದೆಹಲಿ (ಪಿಟಿಐ): ರಿಲಯನ್ಸ್ ಜಿಯೊ ಕಂಪನಿಯು ತನ್ನ ಪ್ರಿಪೇಯ್ಡ್ ಗ್ರಾಹಕರಿಗೆ ಈಗ ರೀಚಾರ್ಜ್ ಮಾಡಿ ನಂತರ ಪಾವತಿಸುವ 'ತುರ್ತು ಡೇಟಾ ಸಾಲ' ಯೋಜನೆಯನ್ನು ಬಿಡುಗಡೆ ಮಾಡಿದೆ.

ಮೈ ಜಿಯೊ ಆ್ಯಪ್ ಮೂಲಕ ತುರ್ತು ಡೇಟಾ ಸಾಲ ಪಡೆಯಬಹುದಾಗಿದೆ. ₹ 11ರ ಮೌಲ್ಯಕ್ಕೆ 1ಜಿಬಿ ಡೇಟಾ ಸಿಗಲಿದೆ. ಈ ರೀತಿ ಒಟ್ಟಾರೆ ಐದು ಬಾರಿ ತುರ್ತು ಡೇಟಾ ಸಾಲ ಪಡೆಯಬಹುದು ಎಂದು ಮೂಲಗಳು ಹೇಳಿವೆ. ಹಲವು ಕಾರಣಗಳಿಂದಾಗಿ ಪ್ರತಿಯೊಬ್ಬ ಗ್ರಾಹಕರೂ ತಕ್ಷಣವೇ ಡೇಟಾ ಟಾಪ್ ಅಪ್ ಖರೀದಿಸುವ ಸ್ಥಿತಿಯಲ್ಲಿ ಇರುವುದಿಲ್ಲ ಎನ್ನುವುದನ್ನು

ದೂರಸಂಪರ್ಕ ಕಂಪನಿಯು ಅರಿತುಕೊಂಡಿದೆ ಎಂದು ಮೂಲಗಳು ತಿಳಿಸಿವೆ. ಗರಿಷ್ಠ ವೇಗದ ನಿತ್ಯದ ಡೇಟಾ ಮಿತಿಯು ಮುಗಿದ ತಕ್ಷಣವೇ ರಿಚಾರ್ಜ್ ಮಾಡಿಸಲು ಸಾಧ್ಯವಾಗದೇ ಇರುವವರಿಗೆ ಜಿಯೊದ ಹೊಸ ಯೋಜನೆಯಿಂದ ಹೆಚ್ಚಿನ ಪ್ರಯೋಜನ ಆಗಲಿದೆ ಎಂದಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹500
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1305 (1300)
ಸೂರ್ಯಕಾಂತಿ (ರಿಫೈನ್ಡ್)	₹1340(1330)
ಪಾಮೋಲಿನ್	₹1160(1155)

ಮುಂಬೈ ಧಾರಣೆ

ಶೇಂಗಾ

3-7-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	8700-8750
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1380 (1385)
ಸೋಯಾ ಕಚ್ಚಾ	1275 (1250)
ಪಾಮ್ ವಾರದ ಡೆಲಿವರಿ	1158 (1153)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,300 (47,500)

ಬೆಳ್ಳಿ ಕೆ.ಜಿ 69,450 (69,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	385

ಅಡಿಕೆ, ಬಂಟ್ವಾಳ

ಕೋಕ	10000-22500

ಹೊಸನಗರ

ಚಾಲಿ	33729-36289
ಕೆಂಪುಗೋಟು	30299-33499
ರಾಶಿ	38599-42300
ಹೊಸನಗರ	17199-19409

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11400	10900	10750	152.55 ಸೆಂಟ್ಸ್
ಎಸಿ	4510	4500	4250	
ಆರ್‌ಪಿ	5600	5500	5650	
ಆರ್‌ಸಿ	3300	3150	3350	1723 ಡಾಲರ್ಸ್

ಟೋಕಿಯೊ: ಮಣ್ಣು ಕುಸಿತದಿಂದ ಕನಿಷ್ಠ 19 ಮಂದಿ ನಾಪತ್ತೆ

ಟೋಕಿಯೊ (ಎಪಿ): 'ಟೋಕಿಯೊದ ಪಶ್ಚಿಮಕ್ಕಿರುವ ಪಟ್ಟಣವೊಂದರಲ್ಲಿ ಶನಿವಾರ ಸುರಿದ ಭಾರಿ ಮಳೆಯಿಂದಾಗಿ ಮಣ್ಣು ಕುಸಿದಿದೆ. ಈ ಘಟನೆಯಲ್ಲಿ ಕನಿಷ್ಠ 19 ಮಂದಿ ನಾಪತ್ತೆಯಾಗಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದರು.

'ಅಟಾಮಿ ಪಟ್ಟಣದ ಇಜುಸ್‌ನಲ್ಲಿ ಶನಿವಾರ ಬೆಳಿಗ್ಗೆ ಮಣ್ಣು ಕುಸಿತ ಸಂಭವಿಸಿದೆ. ಇದರಲ್ಲಿ ಕನಿಷ್ಠ 19 ಮಂದಿ ನಾಪತ್ತೆಯಾಗಿದ್ದು, ಅವರಿಗಾಗಿ ರಕ್ಷಣಾ ಪಡೆಗಳು ಶೋಧ ನಡೆಸುತ್ತಿವೆ' ಎಂದು ಮಧ್ಯ ಜಪಾನ್‌ನ ಶಿಜುವೊಕಾ ಪ್ರಾಂತ್ಯದ ವಿಪತ್ತು ನಿರ್ವಹಣಾ ಅಧಿಕಾರಿ ಟಕಾಮಿಚಿ ಸುಗಿಯಾಮಾ ಹೇಳಿದರು.

'ಈ ಪ್ರದೇಶದಿಂದ ಹಲವರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಈ ಸಂಬಂಧ ಹೆಚ್ಚಿನ ಮಾಹಿತಿ ಲಭ್ಯವಿಲ್ಲ' ಎಂದು ಸುಗಿಯಾಮಾ ಅವರು ತಿಳಿಸಿದರು.

ಮೊದಲ ಅನುಪಾಲನಾ ವರದಿ ಪ್ರಕಟಿಸಿದ ಗೂಗಲ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್

ಐ.ಟಿ ನಿಯಮ ಪಾಲನೆ: ಸಚಿವರ ಶ್ಲಾಘನೆ

ನವದೆಹಲಿ (ಪಿಟಿಐ): ಮೊದಲ ಅನುಪಾಲನಾ ವರದಿಯನ್ನು ಪ್ರಕಟಿಸುವ ಮೂಲಕ ಹೊಸ ಐ.ಟಿ. ನಿಯಮಗಳನ್ನು ಪಾಲಿಸಿದ ಗೂಗಲ್, ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್‌ನಂತಹ ಸಾಮಾಜಿಕ ಮಾಧ್ಯಮಗಳನ್ನು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಶ್ಲಾಘಿಸಿದ್ದಾರೆ. ಇದು ಪಾರದರ್ಶಕತೆಯತ್ತ ದೊಡ್ಡ ಹೆಜ್ಜೆಯಾಗಿದೆ ಎಂದು ಅವರು ಬಣ್ಣಿಸಿದ್ದಾರೆ.

ಹೊಸ ಐಟಿ ನಿಯಮಗಳ ಪ್ರಕಾರ, ಅನುಚಿತ ಪೋಸ್ಟ್‌ಗಳನ್ನು ತಮ್ಮ ವೇದಿಕೆಗಳಿಂದ ಸ್ವಯಂಪ್ರೇರಣೆಯಿಂದ ತೆಗೆದುಹಾಕುವ ಬಗ್ಗೆ ಮೊದಲ ಅನುಪಾಲನಾ ವರದಿ ಪ್ರಕಟಿಸಿದ ಸಂಸ್ಥೆಗಳ ನಿರ್ಧಾರವನ್ನು ಅವರು ಸ್ವಾಗತಿಸಿದ್ದಾರೆ. ಹೊಸ ಐ.ಟಿ ನಿಯಮಗಳ ಪ್ರಕಾರ, 50 ಲಕ್ಷಕ್ಕೂ ಹೆಚ್ಚಿನ ಬಳಕೆದಾರರನ್ನು ಹೊಂದಿರುವ ದೊಡ್ಡ

ಡಿಜಿಟಲ್ ವೇದಿಕೆಗಳು ಪ್ರತಿ ತಿಂಗಳು ಅನುಪಾಲನಾ ವರದಿ ಪ್ರಕಟಿಸಬೇಕು. ಸ್ವೀಕರಿಸಿದ ದೂರುಗಳ ವಿವರ ಮತ್ತು ಅವುಗಳ ಆಧಾರದಲ್ಲಿ ತೆಗೆದುಕೊಂಡ ಕ್ರಮಗಳ ಮಾಹಿತಿಯನ್ನು ವರದಿಯಲ್ಲಿ ಉಲ್ಲೇಖಿಸಬೇಕಿದೆ.

ಹೊಸ ನಿಯಮಗಳ ಜಾರಿ ಪ್ರಶ್ನಿಸಿ ಟ್ವಿಟರ್ ಸಂಸ್ಥೆಯು ಕೇಂದ್ರ ಸರ್ಕಾರದೊಂದಿಗೆ ಸಂಘರ್ಷಕ್ಕಿಳಿದಿರುವ ಮಧ್ಯೆಯೇ ಉಳಿದ ಸಂಸ್ಥೆಗಳು ವರದಿ ಪ್ರಕಟಿಸಿವೆ. ದೂರು ಸ್ವೀಕಾರ ಅಧಿಕಾರಿ ನೇಮಕ ಸೇರಿದಂತೆ ಹೊಸ ನೀತಿಗಳನ್ನು ಪಾಲಿಸಲು ವಿಫಲವಾಗಿರುವ ಟ್ವಿಟರ್ ಸಂಸ್ಥೆಯು ಭಾರತದಲ್ಲಿ ತನಗಿದ್ದ ಸುರಕ್ಷತಾ ಸೌಲಭ್ಯವನ್ನು ಕಳೆದುಕೊಂಡಿದೆ.

ಮೇ 15ರಿಂದ ಜೂನ್ 15ರ ಅವಧಿಯಲ್ಲಿ 10 ವಿಭಾಗಗಳಲ್ಲಿ 3 ಕೋಟಿಗೂ ಹೆಚ್ಚಿನ 'ಕಂಟೆಂಟ್'ಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಫೇಸ್‌ಬುಕ್ ಶುಕ್ರವಾರ ತಿಳಿಸಿತ್ತು. ಈ ಮೂಲಕ ತನ್ನ ಮೊದಲ ಮಾಸಿಕ ಅನುಪಾಲನಾ ವರದಿ ಪ್ರಕಟಿಸಿ, ಐಟಿ ನಿಯಮಗಳನ್ನು ಪಾಲಿಸಿತ್ತು. ಇದೇ ಅವಧಿಯಲ್ಲಿ ಒಂಬತ್ತು ವಿಭಾಗಗಳಲ್ಲಿ ಸುಮಾರು 20 ಲಕ್ಷ ಕಂಟೆಂಟ್‌ಗಳ ವಿರುದ್ಧ ಕ್ರಮ ಕೈಗೊಂಡಿದ್ದಾಗಿ ಇನ್‌ಸ್ಟಾಗ್ರಾಮ್ ತಿಳಿಸಿತ್ತು.

ಆಕ್ಷೇಪಾರ್ಹ ಪೋಸ್ಟ್‌ಗಳು, ಫೋಟೋಗಳು, ವಿಡಿಯೊಗಳು ಅಥವಾ ಕಾಮೆಂಟ್‌ಗಳನ್ನು ಕಂಪನಿಗಳು ತಮ್ಮ ವೇದಿಕೆಯಿಂದ ತೆಗೆದುಹಾಕಿವೆ. ಕೆಲವು ಕಂಟೆಂಟ್‌ಗಳ ಬಗ್ಗೆ ಬಳಕೆದಾರರಿಗೆ ಎಚ್ಚರಿಕೆ ನೀಡಿವೆ.

ಸ್ಥಳೀಯ ಕಾನೂನುಗಳು ಅಥವಾ ಹಕ್ಕುಗಳ ಉಲ್ಲಂಘನೆ ಆರೋಪದ ಮೇಲೆ ಭಾರತದ ಬಳಕೆದಾರರಿಂದ ಏಪ್ರಿಲ್‌ನಲ್ಲಿ 27,762 ದೂರುಗಳು ಬಂದಿವೆ ಎಂದು ಗೂಗಲ್ ಹೇಳಿದ್ದು, 59,350 ಕಂಟೆಂಟ್‌ಗಳನ್ನು ತೆಗೆದುಹಾಕಲಾಗಿದೆ.

ಜೂನ್‌ನಲ್ಲಿ 5,502 ಪೋಸ್ಟ್‌ಗಳ ಬಗ್ಗೆ ಬಳಕೆದಾರರು ವರದಿ ಮಾಡಿದ್ದು, 54,235 ಕಂಟೆಂಟ್‌ಗಳನ್ನು ಸುಧಾರಿತ ರೂಪಕ್ಕೆ ಪರಿವರ್ತಿಸಲಾಗಿದೆ ಎಂದು ಕೂ ಸಂಸ್ಥೆಯು ತನ್ನ ವರದಿಯಲ್ಲಿ ತಿಳಿಸಿದೆ. ಸ್ಫೂರ್ತಿ ಪ್ರಿಯಾ ಅವರನ್ನು ಭಾರತದಲ್ಲಿ ತನ್ನ ಕುಂದುಕೊರತೆ ಅಧಿಕಾರಿಯಾಗಿ ನೇಮಿಸಲಾಗಿದೆ ಎಂದು ಫೇಸ್‌ಬುಕ್ ಇತ್ತೀಚೆಗೆ ಮಾಹಿತಿ ನೀಡಿತ್ತು.

ಜೂನ್‌ನಲ್ಲಿ ರಫ್ತು ಶೇ47ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಜೂನ್‌ನಲ್ಲಿ ಶೇ 47 ರಷ್ಟು ಹೆಚ್ಚಾಗಿದ್ದು, ₹ 2.40 ಲಕ್ಷ ಕೋಟಿಗೆ ತಲುಪಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ ನೀಡಿದೆ.

ಕಳೆದ ವರ್ಷದ ಜೂನ್‌ನಲ್ಲಿ ₹ 1.62 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟು ನಡೆದಿತ್ತು. ಎಂಜಿನಿಯರಿಂಗ್, ಹರಳು ಮತ್ತು ಚಿನ್ನಾಭರಣ, ಪೆಟ್ರೋಲಿಯಂ ಉತ್ಪನ್ನಗಳ ವಲಯಗಳ ಉತ್ತಮ ಬೆಳವಣಿಗೆಯಿಂದ ಈ ಪ್ರಗತಿ ಸಾಧ್ಯವಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಆಮದು ವಹಿವಾಟು ಶೇ 96ರಷ್ಟು

ಹೆಚ್ಚಾಗಿ ₹ 3.09 ಲಕ್ಷ ಕೋಟಿಗಳಷ್ಟಾಗಿದೆ. ಕಳೆದ ವರ್ಷದ ಜೂನ್‌ನಲ್ಲಿ ₹ 1.57 ಲಕ್ಷ ಕೋಟಿಗಳಷ್ಟಿತ್ತು.

ಆಮದು ರಫ್ತು ವಹಿವಾಟು ಹೆಚ್ಚಾಗಿರುವುದರಿಂದ ವ್ಯಾಪಾರ ಕೊರತೆ ಅಂತರವು ₹ 69,560 ಕೋಟಿಗಳಿಗೆ ತಲುಪಿದೆ.

ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ರಫ್ತು ವಹಿವಾಟು ₹ 3.80 ಲಕ್ಷ ಕೋಟಿಗಳಿಂದ ₹ 7.05 ಲಕ್ಷ ಕೋಟಿಗಳಿಗೆ ಏರಿಕೆ ಕಂಡಿದೆ.

ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿನ ರಫ್ತು ವಹಿವಾಟು ಗರಿಷ್ಠ ಮಟ್ಟದ್ದಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 29.60 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟಿನ ಗುರಿ ಸಾಧಿಸಲು ಸಚಿವಾಲಯವು ಎಲ್ಲರೊಂದಿಗೆ ಕೆಲಸ ಮಾಡಲಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ. ಏಪ್ರಿಲ್–ಜೂನ್ ಅವಧಿಯಲ್ಲಿ ಆಮದು ವಹಿವಾಟು ₹ 4.48 ಲಕ್ಷ ಕೋಟಿಗಳಿಂದ ₹ 9.33 ಲಕ್ಷ ಕೋಟಿಗಳಿಗೆ ಏರಿಕೆ ಕಂಡಿದೆ.